ಶುಕ್ರವಾರ, ಫೆಬ್ರುವರಿ 9, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 40 | ಪುಟ 20
● www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಕೆ.ಎಂ.ರಘು ನಿರ್ದೇಶನದ 'ಜಸ್ಟ್ ಪಾಸ್' ಸಿನಿಮಾ ಮುಖಾಂತರ ಬೆಳ್ಳಿತೆರೆಗೆ ಹೆಜ್ಜೆ ಇಡುತ್ತಿದ್ದಾರೆ ಪ್ರಣತಿ



ಆಳ-ಅಗಲ
ನರೇಗಾ ವಿಸ್ತರಿಸದ ಕೇಂದ್ರ ಸರ್ಕಾರ
'ಇಳಿ ವಯಸ್ಸಿನಲ್ಲಿ ದೇವೇಗೌಡರಿಗೆ ಏನಾಯ್ತು?' 13
ಎರಡು ಲಕ್ಷ ನಕಲಿ ಕಾರ್ಡ್ ರದ್ದತಿಗೆ ಕ್ರಮ 12

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
71,428 ▼	21,717 ▼	₹64,480 (ಬೆಂಗಳೂರು) ▼	₹71,800 (ಬೆಂಗಳೂರು) ▼	82.96

ಯುಪಿಎ–ಎನ್‌ಡಿಎ ಕಪ್ಪು ಬಿಳುಪು ಪತ್ರ ಸಮರ

ಯುಪಿಎ ಆಡಳಿತಾವಧಿಯ ವೈಫಲ್ಯಗಳನ್ನು ಬಿಜೆಪಿ, ಎನ್‌ಡಿಎ ಅವಧಿಯ ವೈಫಲ್ಯಗಳನ್ನು ಕಾಂಗ್ರೆಸ್ ಎತ್ತಿ ತೋರಿಸಿವೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಎನ್‌ಡಿಎ ಸರ್ಕಾರದ ವೈಫಲ್ಯಗಳ ವಿವರ ಇರುವ 'ಕಪ್ಪುಪತ್ರ'ವನ್ನು ಗುರುವಾರ ಪ್ರಕಟಿಸಿದ್ದಾರೆ. ಅದರ ಬೆನ್ನಿಗೇ, ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಯುಪಿಎ ಆಡಳಿತಾವಧಿಯ ವೈಫಲ್ಯಗಳ ಕುರಿತು ಶ್ವೇತಪತ್ರವನ್ನು ಸಂಸತ್ತಿನಲ್ಲಿ ಮಂಡಿಸಿದ್ದಾರೆ. ಎರಡೂ ಪಕ್ಷಗಳ ನಡುವೆ, ಈ ಬಗೆಗಿನ ಜಟಾಪಟಿ ಮುಂದುವರಿದಿದೆ

ಮೋದಿ ಆಡಳಿತ 'ಅನ್ಯಾಯ ಕಾಲ'

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ನರೇಂದ್ರ ಮೋದಿ ನೇತೃತ್ವದ ಸರ್ಕಾರದ ವೈಫಲ್ಯಗಳನ್ನು ಎತ್ತಿ ತೋರಿಸುವ 'ಕಪ್ಪು ಪತ್ರ'ವನ್ನು ಕಾಂಗ್ರೆಸ್ ಗುರುವಾರ ಬಿಡುಗಡೆಗೊಳಿಸಿತು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು 54 ಪುಟಗಳ 'ಕಪ್ಪು ಪತ್ರ' ಬಿಡುಗಡೆ ಮಾಡಿದರು.


ಬೆಲೆ ಏರಿಕೆ, ನಿರುದ್ಯೋಗ ಸಮಸ್ಯೆ, ಸಾಂವಿಧಾನಿಕ ಸಂಸ್ಥೆಗಳನ್ನು ದುರ್ಬಲಗೊಳಿಸುವುದು ಮತ್ತು ಬಿಜೆಪಿಯೇತರ ಪಕ್ಷಗಳ ಆಡಳಿತವಿರುವ ರಾಜ್ಯಗಳ ಕಡೆಗಣನೆಯಂತಹ ಅಂಶಗಳತ್ತ 'ಕಪ್ಪು ಪತ್ರ' ಬೊಟ್ಟು ಮಾಡಿದೆ. ಮೋದಿ ಸರ್ಕಾರದ 10 ವರ್ಷಗಳ ಆಡಳಿತವನ್ನು 'ಅನ್ಯಾಯದ ಕಾಲ' ಎಂದು ಆರೋಪಿಸಿದೆ.

'ಪ್ರಧಾನಿ ಮೋದಿ ಅವರು ಸಂಸತ್ತಿನಲ್ಲಿ ಮಾತನಾಡುವಾಗ ತಮ್ಮ ವೈಫಲ್ಯಗಳನ್ನು ಮುಚ್ಚಿಡುವರು. ನಾವು ಸರ್ಕಾರದ ಲೋಪಗಳ ಬಗ್ಗೆ ಮಾತನಾಡುವಾಗ ಅದಕ್ಕೆ ಯಾವುದೇ ಪ್ರಾಮುಖ್ಯ ಕೊಡುವುದಿಲ್ಲ. ಸರ್ಕಾರದ ವೈಫಲ್ಯಗಳನ್ನು ಸಾರ್ವಜನಿಕರಿಗೆ ತಿಳಿಸುವ ಉದ್ದೇಶದಿಂದ 'ಕಪ್ಪು ಪತ್ರ' ಹೊರ ತಂದಿದ್ದೇವೆ' ಎಂದು ಖರ್ಗೆ ಹೇಳಿದರು.

'ಮೋದಿ ಸರ್ಕಾರದ 10 ವರ್ಷಗಳ ಆಡಳಿತವು ದೇಶದ ಆರ್ಥಿಕತೆಯನ್ನು ನುಚ್ಚುನೂರು ಮಾಡಿದೆ. ನಿರುದ್ಯೋಗ ಸಮಸ್ಯೆಯನ್ನು ಹೆಚ್ಚಿಸಿದೆ. ಕೃಷಿ ಕ್ಷೇತ್ರವನ್ನು ನಾಶಪಡಿಸಿದೆ. ಮಹಿಳೆಯರ ಮೇಲಿನ ಅಪರಾಧಗಳಿಗೆ ಕುಮ್ಮಕ್ಕು ನೀಡಿದೆ ಹಾಗೂ ಅಲ್ಪಸಂಖ್ಯಾತರಿಗೆ ಅನ್ಯಾಯ ಎಸಗಿದೆ' ಎಂದು ಆರೋಪಿಸಿದೆ. 'ಆರ್ಥಿಕತೆಯ ಮೇಲಿನ ಅನ್ಯಾಯ' ವಿಭಾಗದಲ್ಲಿ ನಿರುದ್ಯೋಗ ಬಿಕ್ಕಟ್ಟು ಮತ್ತು ಉದ್ಯೋಗ ಕೊರತೆ ಬಗ್ಗೆ ವಿವರಿಸಲಾಗಿದೆ.

ಪ್ರಧಾನಿ ಮೋದಿ ವಿರುದ್ಧ ವಾಗ್ದಾಳಿ ನಡೆಸಿದ ಖರ್ಗೆ, 'ಬೆಲೆ ಏರಿಕೆ ಬಗ್ಗೆ ಕೇಳಿದಾಗ ಪ್ರಧಾನಿಯವರು ಜವಾಹರಲಾಲ್ ನೆಹರೂ ಮತ್ತು ಇಂದಿರಾ ಗಾಂಧಿ ಬಗ್ಗೆ ಮಾತನಾಡುತ್ತಾರೆ. ನೆಹರೂ ಅವರನ್ನು ಟೀಕಿಸುವ ಬದಲು, ನೀವು ಪ್ರಸ್ತುತ ಏನು ಮಾಡುತ್ತಿದ್ದೀರಿ ಎಂಬುದರ ಕುರಿತು ಮಾತನಾಡುವುದು ಮುಖ್ಯ' ಎಂದರು.

> **ಕಾಂಗ್ರೆಸ್ ಹೊರಡಿಸಿರುವ 'ಕಪ್ಪು ಪತ್ರ'ವು ನಮ್ಮ ಸರ್ಕಾರದ ಸಾಧನೆಗಳಿಗೆ 'ದೃಷ್ಟಿ ಬೊಟ್ಟು' ಇಟ್ಟಂತೆ**
> **ನರೇಂದ್ರ ಮೋದಿ,** ಪ್ರಧಾನಿ



'ಕಪ್ಪು ಪತ್ರ'ದಲ್ಲಿ ಏನೇನಿದೆ?

- ಮೋದಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ಆಗಿರುವ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ 'ಅನ್ಯಾಯ'ಗಳನ್ನು ತೋರಿಸಲಾಗಿದೆ
- ಮೋದಿ ಸರ್ಕಾರ ಬೆಲೆ ಏರಿಕೆ ಬಗ್ಗೆ ಮೌನವಹಿಸಿದೆ. ಪೆಟ್ರೋಲ್, ಡೀಸೆಲ್ ಮತ್ತು ದಿನಬಳಕೆ ವಸ್ತುಗಳ ದರ ದಾಖಲೆ ಮಟ್ಟಕ್ಕೆ ತಲುಪಿದೆ
- 2016ರ ನೋಟು ರದ್ದತಿ ಕ್ರಮ ದೊಡ್ಡ ಪ್ರಮಾದವಾಗಿತ್ತು. ಅದರಿಂದಾಗಿ ಆರ್ಥಿಕತೆಯ ಮೇಲೆ ಆಗಿರುವ ದುಷ್ಪರಿಣಾಮಗಳು ದೇಶವನ್ನು ಇಂದಿಗೂ ಕಾಡುತ್ತಿವೆ
- 2012ರಲ್ಲಿ ಒಂದು ಕೋಟಿಯಷ್ಟಿದ್ದ ನಿರುದ್ಯೋಗಿಗಳ ಸಂಖ್ಯೆ 2022ರಲ್ಲಿ ನಾಲ್ಕು ಕೋಟಿಗಳಿಗೆ ಏರಿಕೆಯಾಗಿದೆ
- ನೋಟು ರದ್ದತಿ ಮತ್ತು ಜಿಎಸ್‌ಟಿಯಲ್ಲಿನ ಲೋಪಗಳಿಂದ ಶ್ರೀಮಂತ –ಬಡವರ ನಡುವಿನ ಅಂತರ ಇನ್ನಷ್ಟು ಹೆಚ್ಚಿದೆ. ರೈತರು ಮತ್ತು ಕೂಲಿ ಕಾರ್ಮಿಕರ ಭವಿಷ್ಯ ಹಾಳಾಗಿದೆ
- ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯು 'ಚುನಾಯಿತ ಸರ್ವಾಧಿಕಾರ'ವಾಗಿ ಬದಲಾಗಿದ್ದು, ಒಕ್ಕೂಟ ವ್ಯವಸ್ಥೆ ದುರ್ಬಲಗೊಂಡಿದೆ
- ಮಹಿಳೆಯರು, ದಲಿತರು, ಆದಿವಾಸಿಗಳು ಮತ್ತು ಅಲ್ಪಸಂಖ್ಯಾತರ ವಿರುದ್ಧ ತಾರತಮ್ಯ ಮತ್ತು ದಬ್ಬಾಳಿಕೆ ಹೆಚ್ಚಿದೆ

'ಹಿಡಿತ ತಪ್ಪಿದ್ದ ವೆಚ್ಚ, ದುರ್ಬಲ ನಾಯಕತ್ವ'


ನವದೆಹಲಿ (ಪಿಟಿಐ): ಕಾಂಗ್ರೆಸ್ ನೇತೃತ್ವದ ಯುಪಿಎ ಆಡಳಿತದ ಅವಧಿಯಲ್ಲಿ ಅರ್ಥ ವ್ಯವಸ್ಥೆಯನ್ನು ನಿರ್ವಹಿಸಿದ ಬಗೆಯ ಕುರಿತು ಕಟು ಟೀಕೆಗಳನ್ನು ಹೊಂದಿರುವ ಶ್ವೇತಪತ್ರವನ್ನು ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಸಂಸತ್ತಿನಲ್ಲಿ ಗುರುವಾರ ಮಂಡಿಸಿದೆ.

ರಾಜಸ್ವ ವೆಚ್ಚವನ್ನು (ರೆವಿನ್ಯೂ ಎಕ್ಸ್‌ಪೆಂಡಿಚರ್) ಯಾವ ನಿಯಂತ್ರಣವೂ ಇಲ್ಲದೆ ಮಾಡಿ, ಬಜೆಟ್‌ನಲ್ಲಿ ಅವಕಾಶ ಇಲ್ಲದಿದ್ದರೂ ಸಾಲ ಪಡೆದು ಯುಪಿಎ ಸರ್ಕಾರವು ದೇಶದ ಅರ್ಥವ್ಯವಸ್ಥೆಯನ್ನು ಹಾಳುಗೆಡವಿತ್ತು ಎಂದು ಶ್ವೇತಪತ್ರದಲ್ಲಿ ಆರೋಪಿಸಲಾಗಿದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು 54 ಪುಟಗಳ ಶ್ವೇತಪತ್ರವನ್ನು ಸಂಸತ್ತಿನಲ್ಲಿ ಮಂಡಿಸಿದರು. 'ಅತ್ಯಂತ ದುರ್ಬಲ'ವಾದ ಐದು ಅರ್ಥವ್ಯವಸ್ಥೆಗಳ ಪೈಕಿ ಒಂದು ಎಂದು ಪರಿಗಣಿತವಾಗಿದ್ದ ಭಾರತದ ಅರ್ಥ ವ್ಯವಸ್ಥೆಯನ್ನು ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಹಾಗೂ ಹೂಡಿಕೆಗೆ ಅತ್ಯಂತ ಆಕರ್ಷಕವಾದ ಅರ್ಥವ್ಯವಸ್ಥೆಯಾಗಿ ಪರಿವರ್ತಿಸಲು ಮೋದಿ ನೇತೃತ್ವದ ಸರ್ಕಾರವು ಕೈಗೊಂಡ ಕ್ರಮಗಳನ್ನು ಇದರಲ್ಲಿ ವಿವರಿಸಲಾಗಿದೆ.

ಸವಾಲುಗಳನ್ನು ಎದುರಿಸುವ, ಅರ್ಥ ವ್ಯವಸ್ಥೆಯಲ್ಲಿ ಆಶಾವಾದ ಹಾಗೂ ಚಲನಶೀಲತೆಯನ್ನು ತರುವ ಹೊಣೆಗಾರಿಕೆಯು ಮೋದಿ ನೇತೃತ್ವದ ಸರ್ಕಾರದ ಮೇಲೆ ಇತ್ತು ಎಂದು ಶ್ವೇತಪತ್ರವು ವಿವರಿಸಿದೆ.

> **ಈ ದೇಶಕ್ಕೆ ಸ್ವಾತಂತ್ರ್ಯವನ್ನು ಖಾತರಿಪಡಿಸಿದ್ದ ಕಾಂಗ್ರೆಸ್ ಪಕ್ಷವು, 2024 ರಲ್ಲಿ ದೇಶವನ್ನು ಬಿಜೆಪಿಯ 'ಅನ್ಯಾಯದ ಅಂಧಕಾರ'ದಿಂದ ಪಾರು ಮಾಡಲಿದೆ**
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ



ಪ್ರಮುಖ ಅಂಶಗಳು

- ಹಿಡಿತ ತಪ್ಪಿದ್ದ ವಿತ್ತೀಯ ಕೊರತೆ, ನಿರ್ಧಾರಗಳನ್ನೇ ಕೈಗೊಳ್ಳದಿದ್ದ ಸ್ಥಿತಿ, ಬ್ಯಾಂಕಿಂಗ್ ಬಿಕ್ಕಟ್ಟು, ಭ್ರಷ್ಟಾಚಾರ ಮತ್ತು ಹಗರಣಗಳ ಸಮಸ್ಯೆಯನ್ನು ಮೆಟ್ಟಿ ನಿಲ್ಲಲು ಮೋದಿ ನೇತೃತ್ವದ ಸರ್ಕಾರವು ಕಠಿಣ ತೀರ್ಮಾನಗಳನ್ನು ತೆಗೆದುಕೊಂಡಿತು
- 2008ರ ಜಾಗತಿಕ ಹಣಕಾಸಿನ ಬಿಕ್ಕಟ್ಟಿನ ನಂತರದಲ್ಲಿ ಹೇಗಾದರೂ ಮಾಡಿ ದೊಡ್ಡ ಮಟ್ಟದ ಆರ್ಥಿಕ ಬೆಳವಣಿಗೆ ಸಾಧಿಸಬೇಕು ಎಂಬ ಉದ್ದೇಶದಿಂದ ಯುಪಿಎ ಸರ್ಕಾರವು ಅರ್ಥವ್ಯವಸ್ಥೆಯ ನೆಲೆಗಟ್ಟನ್ನು ಬಹಳ ಹಾಳುಮಾಡಿತು
- ಯುಪಿಎ ಅವಧಿಯಲ್ಲಿ ನಡೆದ 15 ಹಗರಣಗಳನ್ನು ಉಲ್ಲೇಖಿಸಿರುವ ಶ್ವೇತಪತ್ರವು 'ಇವು ದೇಶದ ಜನರ ವಿಶ್ವಾಸವನ್ನು ಅಲುಗಾಡಿಸಿಬಿಟ್ಟಿದ್ದವು' ಎಂದು ಹೇಳಿದೆ
- 2014ರಲ್ಲಿ ಯುಪಿಎ ಸರ್ಕಾರವು ಬಿಟ್ಟುಹೋಗಿದ್ದು ಯಾರಿಗೂ ಬೇಡವಾಗಿದ್ದ, ರಾಚನಿಕವಾಗಿ ದುರ್ಬಲಗೊಂಡಿದ್ದ ಅರ್ಥವ್ಯವಸ್ಥೆ ಹಾಗೂ ಎಲ್ಲೆಡೆಯೂ ಕಂಡುಬರುತ್ತಿದ್ದ ನಿರಾಶೆಯನ್ನು
- ದುರ್ಬಲ ನಾಯಕತ್ವ ಮತ್ತು ಕ್ರಿಯಾಹೀನತೆಯ ಕಾರಣದಿಂದಾಗಿ ರಕ್ಷಣೆಯ ವಿಚಾರದಲ್ಲಿ ಸಿದ್ಧತೆಗಳೇ ನಡೆದಿರಲಿಲ್ಲ
- 2013ರಲ್ಲಿ ವಿದೇಶಿ ವಿನಿಮಯ ಮೀಸಲು ಕುಸಿತವನ್ನು ನಿಭಾಯಿಸಲು ಯುಪಿಎ ಸರ್ಕಾರ ಕೈಗೊಂಡ ಕ್ರಮಗಳು ದುಬಾರಿಯಾಗಿದ್ದವು, 1991ರ ಹಣಕಾಸಿನ ಬಿಕ್ಕಟ್ಟು ಮರುಕಳಿಸುವ ಸೂಚನೆಯನ್ನು ನೀಡಿದ್ದವು.
- ಆರ್ಥಿಕ ಚಟುವಟಿಕೆಗಳಿಗೆ ನೆರವು ನೀಡಲು ಯುಪಿಎ ಸೋತಿತು. ಬದಲಿಗೆ, ಅರ್ಥ ವ್ಯವಸ್ಥೆ ಮುಂದಕ್ಕೆ ಸಾಗುವುದನ್ನು ತಡೆಯುವ ಕ್ರಮಗಳನ್ನು ಯುಪಿಎ ಕೈಗೊಂಡಿತು
- ನಿಂತ ನೀರಾಗಿದ್ದ ಹಣಕಾಸಿನ ವಲಯಕ್ಕೆ ಹೊಸ ಚೈತನ್ಯವನ್ನು ತುಂಬಲಾಗಿದೆ, ಗಮನಾರ್ಹ ಪ್ರಮಾಣದಲ್ಲಿ ಸುಧಾರಣೆಗಳನ್ನು ತರಲಾಗಿದೆ. ಮೋದಿ ನೇತೃತ್ವದ ಸರ್ಕಾರ ಕೈಗೊಂಡ ಸುಧಾರಣೆಗಳ ಪರಿಣಾಮವಾಗಿ ದೇಶದ ಮಧ್ಯಮಾವಧಿಯ ಹೂಡಿಕೆ ನಿರೀಕ್ಷೆಗಳು ಹೆಚ್ಚಾಗಿವೆ

ವಿಧಾನಸೌಧದ ಎದುರು ಜನಸಾಗರ: ಸಮಸ್ಯೆಗಳ ದರ್ಶನ

ಜನರ ಬವಣೆಗೆ ಸಿದ್ದರಾಮಯ್ಯ 'ಸ್ಪಂದನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಆಡಳಿತದ ಶಕ್ತಿಕೇಂದ್ರ ಗುರುವಾರ ಜನರ ಸಮಸ್ಯೆಗಳನ್ನು ಆಲಿಸುವ ತಾಣವಾಗಿ ಬದಲಾಗಿತ್ತು. ಸಮಸ್ಯೆಗಳನ್ನು ಹೊತ್ತು ಬಸವಳಿದಿದ್ದ ಸಾವಿರಾರು ಜನರು ಅಲ್ಲಿಗೆ ದೌಡಾಯಿಸಿದ್ದರು. ಹಿರಿಯ ನಾಗರಿಕರು, ಅಂಗವಿಕಲರು, ಮಹಿಳೆಯರು, ಆರೋಗ್ಯ ಸಮಸ್ಯೆ ಹೊತ್ತು ಬಂದವರು ತಮ್ಮ ದೂರು ದುಮ್ಮಾನಗಳನ್ನು ಹೇಳಿಕೊಂಡರು. ಕೆಲವರು ಸ್ಥಳದಲ್ಲೇ ಪರಿಹಾರ ಪಡೆದು ಮರಳಿದರು.

ವಿಧಾನಸೌಧದ ಆವರಣದಲ್ಲಿ ಇದೇ ಮೊದಲ ಬಾರಿ ಆಯೋಜಿಸಿದ್ದ ಜನಸ್ಪಂದನ ಕಾರ್ಯಕ್ರಮಕ್ಕೆ 20 ಸಾವಿರಕ್ಕೂ ಹೆಚ್ಚು ಜನರು ಬಂದಿದ್ದರು. ಕೆಲವರು ರಾತ್ರಿಯಿಂದಲೇ ವಿಧಾನಸೌಧದ ಬಳಿ ಜಮಾಯಿಸಿದ್ದರು. ಬೆಳಿಗ್ಗೆ 8.30ರಿಂದ ನೋಂದಣಿ ಆರಂಭವಾಯಿತು.



ಜನಸ್ಪಂದನದಲ್ಲಿ ಅಹವಾಲು ಸಲ್ಲಿಸಲು ಸರದಿಯಲ್ಲಿ ನಿಂತಿದ್ದ ನಾಗರಿಕರು –ಪ್ರಜಾವಾಣಿ ಚಿತ್ರ

ಕಾರ್ಯಕ್ರಮಕ್ಕೆ 11.30ಕ್ಕೆ ಬಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂಜೆಯವರೆಗೂ ಸ್ಥಳದಲ್ಲೇ ಇದ್ದು, ಎಲ್ಲರ ಸಮಸ್ಯೆಗಳಿಗೂ ಕಿವಿಯಾದರು. ತಿಂಗಳ ಒಳಗೆ ಎಲ್ಲರಿಗೂ ಪರಿಹಾರ ಕೊಡಿಸುವಂತೆ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ಹಲವರ ಚಿಕಿತ್ಸೆಗೆ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ಒಟ್ಟು ₹10 ಲಕ್ಷ ನೆರವು ನೀಡಿದರು.

ಉದ್ಯೋಗ, ಆರ್ಥಿಕ ನೆರವು ಕೋರಿ ಬಂದಿದ್ದ ಅಂಗವಿಕಲರಿಗೆ ಆತ್ಮಸ್ಥೈರ್ಯ ತುಂಬಿದರು. ಸೂಕ್ತ ಸಹಕಾರ, ಅಗತ್ಯ ಸಹಾಯ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಜನಸ್ಪಂದನದಲ್ಲಿ ಸಲ್ಲಿಕೆಯಾದ ಎಲ್ಲ 12,372 ಅರ್ಜಿಗಳನ್ನೂ ಒಂದು ತಿಂಗಳ ಒಳಗೆ ಇತ್ಯರ್ಥಪಡಿಸಲು, ಕೋರ್ಟ್, ಕಾನೂನು ವ್ಯಾಪ್ತಿಯ ಒಳಗಿಲ್ಲದ ಬೇಡಿಕೆಗಳಿಗೆ ಸೂಕ್ತ ಹಿಂಬರಹ ನೀಡುವಂತೆ ಅಧಿಕಾರಿಗಳಿಗೆ ಸಿದ್ದರಾಮಯ್ಯ ನಿರ್ದೇಶನ ನೀಡಿದರು.


> **ಜನರ ಸಮಸ್ಯೆ, ಅಹವಾಲುಗಳಿಗೆ ಸ್ಪಂದಿಸದೆ, ಅಗೌರವ ತೋರಿಸುವ ಅಧಿಕಾರಿಗಳ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುವುದು**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಇನ್ನಷ್ಟು ಸುದ್ದಿಗಳು | 8

'ವಿಭಜನೆ ಹೇಳಿಕೆ: ಗುಂಡಿಕ್ಕಿ ಕೊಲ್ಲುವ ಕಾನೂನು ತನ್ನಿ'

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಸಂಸದ ಡಿ.ಕೆ.ಸುರೇಶ್ ಹಾಗೂ ಶಾಸಕ ವಿನಯ್ ಕುಲಕರ್ಣಿ ರಾಷ್ಟ್ರದ್ರೋಹಿಗಳು. ಇವರ ಹಾಗೆ ದೇಶ ವಿಭಜನೆಯ ಹೇಳಿಕೆ ನೀಡುವವರನ್ನು ಗುಂಡಿಕ್ಕಿ ಕೊಲ್ಲುವ ಕಾನೂನು ತರುವಂತೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಒತ್ತಾಯಿಸುತ್ತೇನೆ' ಎಂದು ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಹೇಳಿದರು.



ದಾವಣಗೆರೆಯಲ್ಲಿ ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷರ ಪದಗ್ರಹಣ ಸಮಾರಂಭದಲ್ಲಿ ಪಾಲ್ಗೊಂಡು ಗುರುವಾರ ಮಾತನಾಡಿದರು.

'ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಅಖಂಡ ಭಾರತದ ಕುರಿತು ಮಾತನಾಡಿದರೆ ಸಾಲದು. ತಾಕತ್ತಿದ್ದರೆ ಡಿ.ಕೆ.ಸುರೇಶ್ ಹಾಗೂ ವಿನಯ್ ಕುಲಕರ್ಣಿ ಅವರನ್ನು ಪಕ್ಷದಿಂದ ವಜಾಗೊಳಿಸಬೇಕು' ಎಂದು ಸವಾಲು ಹಾಕಿದರು.

'ಸುರೇಶ್ ಹಾಗೂ ವಿನಯ್ ಅವರ ಮಾತಿನಲ್ಲಿ ಜಿನ್ನಾ ಸಂಸ್ಕೃತಿ ಎದ್ದು ಕಾಣುತ್ತಿದೆ. ದೇಶ ವಿಭಜಿಸಲು ಯಾರಿಂದಲೂ ಸಾಧ್ಯವಿಲ್ಲ. ಅದಕ್ಕೆ ಬಿಜೆಪಿ ಅವಕಾಶವನ್ನೂ ನೀಡುವುದಿಲ್ಲ. ಬೇಕಿದ್ದರೆ ಪಾಕಿಸ್ತಾನವನ್ನೇ ಭಾರತಕ್ಕೆ ಸೇರ್ಪಡೆ ಮಾಡುತ್ತೇವೆ' ಎಂದು ಹೇಳಿದರು.

'ಮಾಗಡಿಯ ಕಾಂಗ್ರೆಸ್ ಶಾಸಕ ಬಾಲಕೃಷ್ಣ ಅವರು ಬಿಜೆಪಿ ಸಂಸದರು ಗಂಡಸರಲ್ಲ ಎಂದಿದ್ದಾರೆ. ನಮ್ಮ ಪಕ್ಷದಲ್ಲಿ ಗಂಡಸರು ಇದ್ದಾರೋ ಇಲ್ಲವೋ ಎಂಬುದನ್ನು ಎಲ್ಲಿ ತೋರಿಸಬೇಕು. ಅವರು ಆ ರೀತಿ ಮಾತನಾಡಬಾರದಿತ್ತು' ಎಂದರು.

ಒಳ ಪುಟಗಳು



ಚಿನಕುರಳಿ

ಪ್ರಕಾಶ್ ಶೆಟ್ಟಿ



AARTHI SCANS & LABS

In Association with GVR Social Services

36 ವರ್ಷಗಳ ನಂಬಿಕೆ

12 ರಾಜ್ಯಗಳು & 250 + ಶಾಖೆಗಳು

1 ಕುಟುಂಬದಿಂದ 7 ವೈದ್ಯರು ನಡೆಸಲಾಗುತ್ತಿದೆ

ಪ್ರಾಮಾಣಿಕ & ಪಾರದರ್ಶಕ ಶುಲ್ಕಗಳು



ಪೂರ್ಣ ದೇಹದ ಮಾಸ್ಟರ್ ಆರೋಗ್ಯ ತಪಾಸಣೆ

Amount upto Rs.5000/- eligible for claim as deduction u/s 80 D of income tax act

Offer valid from Feb 09 th - 14th

ISHWARYAM - EMERALD

~~₹3750~~ ₹1499

84 Tests

- Complete Blood Count
- Diabetic Profile- Sugar(F), HbA1c
- Kidney Function Tests (Urea, Creatinine, Uric Acid)
- Electrolytes (Sodium, Potassium, Chloride, Bicarbonate)
- Lipid Profile
- Liver Function Tests
- Thyroid Function Tests
- Infection Screen - ESR
- Calcium Phosphorus Iron
- Complete Urine Analysis

*Home Collection Available

ISHWARYAM - PLATINUM

~~₹6250~~ ₹2499

91 Tests

- Cancer Screening
  - -Male - Prostate - PSA -Total
  - -Female - Ovaries - CA-125
  - -Colon, Liver, Pancreas - CEA
- Vitamin B12
- Vitamin -D
- Iron Deficiency Profile (Iron,TIBC, Tranfarin Saturation)
- Complete Blood Count
- Diabetic Profile- Sugar(F), HbA1c
- Kidney Function Tests
- Electrolytes
- Lipid Profile
- Liver Function Tests
- Thyroid Function Tests
- Infection Screen - ESR
- Calcium
- Phosphorus
- Complete Urine Analysis

*Home Collection Available

ಕೈಗೆಟುಕುವ ರಕ್ತ ಪರೀಕ್ಷೆ ಮತ್ತು ಸ್ಕ್ಯಾನ್ ಬೆಲೆಗಳು - ವರ್ಷವಿಡೀ

MRI ಸ್ಕ್ಯಾನ್

ಮಾರುಕಟ್ಟೆ ದರ: ~~₹7500~~

MRI Brain/Each Spine

ದಿನ ₹3500 | ರಾತ್ರಿ ₹2750 (7pm - 12am)

ರಕ್ತ ಪರೀಕ್ಷಣೆಯಲ್ಲಿ

50% ರಿಯಾಯಿತಿ

ಮನೆಯಿಂದಲೇ ರಕ್ತ ಸಂಗ್ರಹ ಮಾಡಲಾಗುವುದು

CT ಸ್ಕ್ಯಾನ್

ಮಾರುಕಟ್ಟೆ ದರ: ~~₹3500~~

CT Brain/PNS

ದಿನ ₹1500 | ರಾತ್ರಿ ₹1000 (7pm - 12am)

Fully Automatic Robotic Lab

Internal & External Quality Control

Reports Within 6 Hours

ಜಯ ನಗರ ಇಂದಿರಾ ನಗರ ರಾಜಾಜಿನಗರ ಪದ್ಮನಾಭ ನಗರ ಕೋರಮಂಗಲ ಮಾರ್ತಹಳ್ಳಿ ಜೆಪಿ ನಗರ ಕೆ.ಆರ್. ಪುರಂ

Now @

ಹೆಬ್ಬಾಳ – ಹೆಬ್ಬಾಳ್ ಬಸ್ ನಿಲ್ದಾಣದ್ ಹತ್ತಿರ.

ಕಲ್ಯಾಣ್ ನಗರ – ಹೋಸ್ಮತ್ ಆಸ್ಪತ್ರೆಯ ಹತ್ತಿರ, ಕಲ್ಯಾಣ ನಗರ

ನಾಗರಭಾವಿ – ನಾಗರಬಾವಿ ಸರ್ಕಲ್ ಹತ್ತಿರ

70224 70224

aarthiscan.com

5% OFFER FOR SENIOR CITIZEN

Cashless Facility for CGHS & ECHS

For Franchise Enquiry - 99400 80508

ಬೆಂಗಳೂರು ಮುಂಬೈ ನವ ದೆಹಲಿ ಚೆನ್ನೈ ಹೈದರಾಬಾದ್ ಕೋಲ್ಕತ್ತಾ ಗುರ್ಗಾಂವ್ ವಿಶಾಖಪಟ್ಟಣಂ ಪುಣೆ ಅಹಮದಾಬಾದ್ ತಿರುವನಂತಪುರ ಪಾಂಡಿಚೇರಿ

ನಗರದಲ್ಲಿ ಇಂದು

2024ರ ಲೋಕಸಭೆ ಚುನಾವಣೆಗೆ ಪ್ರಣಾಳಿಕೆ ಮಂಡನೆ: ಅತಿಥಿಗಳು: 'ಮುಖ್ಯಮಂತ್ರಿ' ಚಂದ್ರು, ರಮೇಶ್ ಬಾಬು, ಕೆ.ವಿ. ನಾರಾಯಣಸ್ವಾಮಿ, ಸುರಭಿ ಹೊದಿಗೆರೆ, ಬಿ.ಎನ್. ಮಂಜುನಾಥ್ ಆನೇಕಲ್, ಬಿ. ಅಮ್ಜದ್, ಆಯೋಜನೆ: ನಾಗರಿಕ ಸಮಾಜ ವೇದಿಕೆ, ಸ್ಥಳ: ಗಾಂಧಿಭವನ, ಕುಮಾರಕೃಪಾ ರಸ್ತೆ, ಮಧ್ಯಾಹ್ನ 2ರಿಂದ

ಸಂಗೀತೋತ್ಸವ: ಹಿಂದೂಸ್ತಾನಿ ಗಾಯನ: ಸಂಜನಾ ರಾವ್, ತಬಲಾ: ಕಾರ್ತಿಕ್ ಭಟ್, ಹಾರ್ಮೋನಿಯಂ: ಪ್ರಬುದ್ಧಶ್ಯಾಮ್ ಅನೂರು, ಸರೋದ್: ಬಿಸ್ವಜೀತ್ ರಾಯ್ ಚೌಧರಿ, ತಬಲಾ: ಕಿರಣ್ ಗೋಡ್ಖಿಂಡಿ, ತಬಲಾ: ರಘುನಾಥ್ ನಾಕೋಡ್, ರವಿಕಿರಣ್ ನಾಕೋಡ್, ಹಾರ್ಮೋನಿಯಂ: ಸತೀಶ್ ಕೊಳ್ಳಿ, ಆಯೋಜನೆ: ಗೋಡ್ಖಿಂಡಿ ಸಂಜೋಗ್ ಚಾರಿಟಬಲ್ ಟ್ರಸ್ಟ್, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 5.30

ಮಾತಿನ ಮುತ್ತು–321 'ದ.ರಾ. ಬೇಂದ್ರೆ ಅವರ ಬದುಕು–ಬರಹ' ಕುರಿತ ಉಪನ್ಯಾಸ: ಬಿ. ಪಟೇಲಪ್ಪ, ಅಧ್ಯಕ್ಷತೆ: ಎಂ.ಸಿ. ಪೂಣಚ್ಚ, ಆಯೋಜನೆ ಮತ್ತು ಸ್ಥಳ: ವಿದ್ಯಾರಣ್ಯಪುರ ಹಿರಿಯ ನಾಗರಿಕರ ವೇದಿಕೆಯ ಸಭಾಂಗಣ, ವಿದ್ಯಾರಣ್ಯಪುರ, ಸಂಜೆ 6

ಬಾಳೆಹೊನ್ನೂರಿನ ರಂಭಾಪುರಿ ಸ್ವಾಮೀಜಿ ಅವರ ಇಷ್ಟಲಿಂಗ ಮಹಾಪೂಜೆ, ಸಂಸ್ಕೃತಿ ಸಂವರ್ಧನಾ ಸಮಾರಂಭ: ಸಾನ್ನಿಧ್ಯ: ರೇಣುಕಾ ವೀರಸೋಮೇಶ್ವರ ರಾಜದೇಶಿಕೇಂದ್ರ ಸ್ವಾಮೀಜಿ, ರೇಣುಕ ಶಿವಾಚಾರ್ಯ ಸ್ವಾಮೀಜಿ, ಶಿವಾನಂದ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ: ಜಗದೀಶ್ ಶೆಟ್ಟರ್, ಅತಿಥಿಗಳು: ಬಿ.ವೈ. ವಿಜಯೇಂದ್ರ, ಕೆ. ಗೋಪಾಲಯ್ಯ, ಸ್ಥಳ: ಎಸ್.ಜೆ.ಆರ್. ಕಾಲೇಜು, ಆನಂದರಾವ್ ವೃತ್ತ, ಸಂಜೆ 6.30

ಪ್ರವಚನ ವಾಹಿನಿ: 'ಪ್ರಹ್ಲಾದ ರಾಜರ ನರಸಿಂಹ ಸ್ತೋತ್ರ' ಕುರಿತು ಉಪನ್ಯಾಸ: ಖೇಡಾ ವೇದವ್ಯಾಸಾಚಾರ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

'ಮಾವ ಮಾವ ಕಥೆ ಕೇಳು' ನಾಟಕ ಪ್ರದರ್ಶನ: ನಿರ್ದೇಶನ: ವಿಜಯ್ ಕಶ್ಯಪ್, ಆಯೋಜನೆ: ರಂಗರಸಧಾರೆ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಬೆಂಗಳೂರು ಡ್ರಮ್ ಉತ್ಸವ: ಅತಿಥಿಗಳು: ರಂಜಿತ್ ಬರೋಟ್, ಲಿಡಿಯನ್ ನಾದಸ್ವರಂ, ಸಂಬಿತ್ ಚಟರ್ಜಿ, ಶ್ರವಣ್ ಸಂಸಿ, ಅರುಣ್ ಕುಮಾರ್, ಬಾನ್ಸುರಿ: ಅಶ್ವಿನ್ ಶ್ರೀನಿವಾಸನ್, ಗಿಟಾರ್: ಅಭಯ್ ನಯಂಪಲ್ಲಿ, ಜನಪದ ಮೇಳ: ಮಧುಸೂದನ, ಚಂದ್ರಶೇಖರ್, ಸತ್ಯಮೂರ್ತಿ, ಜೆರಾಲ್ಡ್ ಸಿ., ಪ್ರದ್ಯುಮ್ನ ಸೊರಬ, ಪ್ರವೀಣ್ ಷಣ್ಮುಗಂ, ಶಿವಮಲ್ಲು, ಮಧು ಸೋಹನ್, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಮಲ್ಲೇಶ್ವರ, ಸಂಜೆ 7

ಬೆಳ್ಳಂದೂರು ಕೆರೆ ಎಸ್‌ಟಿಪಿ ನಿರ್ಮಾಣ ವಿಳಂಬ: ಖಂಡ್ರೆ ಅತೃಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳ್ಳಂದೂರು ಕೆರೆಗೆ ಸಂಸ್ಕರಣೆಯಾಗದೆ ನೇರವಾಗಿ ತ್ಯಾಜ್ಯ ಜಲ ಹರಿಯುತ್ತಿರುವ ಹಿನ್ನೆಲೆಯಲ್ಲಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ದಂಡ ವಿಧಿಸಿದ್ದು, ಈ ವರ್ಷಾಂತ್ಯದೊಳಗೆ ಎಸ್‌ಟಿಪಿ ನಿರ್ಮಿಸಬೇಕಿದ್ದರೂ ವಿಳಂಬ ಆಗುತ್ತಿರುವುದಕ್ಕೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಜೌಗು ಭೂಮಿ ಪ್ರಾಧಿಕಾರದ ಅನೌಪಚಾರಿಕ ಸಭೆಯಲ್ಲಿ ಗುರುವಾರ ಮಾತನಾಡಿದ ಅವರು, ಈ ಸಂಬಂಧ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಪತ್ರ ಬರೆದು ಕಾಮಗಾರಿ ತ್ವರಿತಗೊಳಿಸುವಂತೆ ತಿಳಿಸಲು ಸೂಚಿಸಿದರು.

'ಬೆಂಗಳೂರು ನಗರದಲ್ಲಿ ಮುಂದಿನ ದಿನಗಳಲ್ಲಿ ನೀರಿನ ತೀವ್ರ ಸಮಸ್ಯೆ ಎದುರಾಡಗಲಿದ್ದು, ಜಲಮೂಲಗಳನ್ನು ಮತ್ತು ಕೆರೆ, ಕಟ್ಟೆಗಳನ್ನು ಸಂರಕ್ಷಣೆ ಮಾಡಬೇಕಾದ ಅನಿವಾರ್ಯ ಇದೆ. ನೇರವಾಗಿ ಸಂಸ್ಕರಣೆ ಮಾಡದೆ ತ್ಯಾಜ್ಯ ಹರಿಸುತ್ತಿರುವುದರಿಂದ ಕೆರೆಗಳ ನೀರು ಕಲುಷಿತವಾಗಿ ನೊರೆ ಹೊರಹೊಮ್ಮುವ ಸ್ಥಿತಿ ನಿರ್ಮಾಣವಾಗಿದೆ. ಅಂತರ್ಜಲವೂ ಕಲುಷಿತವಾಗುತ್ತಿದೆ. ಈ ಪ್ರಕರಣವನ್ನು ಎನ್‌ಜಿಟಿ ಗಂಭೀರವಾಗಿ ಪರಿಗಣಿಸಿ, ದಂಡ ವಿಧಿಸಿದ್ದರೂ ಸಂಸ್ಕರಣಾ ಘಟಕ ನಿರ್ಮಾಣದಲ್ಲಿ ವಿಳಂಬ ಆಗುತ್ತಿರುವುದು ಸರಿಯಲ್ಲ' ಎಂದರು.

ಸಭೆಯಲ್ಲಿ ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮಂಜುನಾಥ ಪ್ರಸಾದ್, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯ ಪಡೆ ಮುಖ್ಯಸ್ಥರಾದ ಬ್ರಿಜೇಶ್ ದೀಕ್ಷಿತ್, ಪರಿಸರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಬಿ.ಪಿ. ರವಿ ಇದ್ದರು.

ಮೂಲಸೌಕರ್ಯಕ್ಕೆ ಆಗ್ರಹ

ಕೆ.ಆರ್.ಪುರ: ಕಾಡುಗೋಡಿ ವಾರ್ಡಿನ ಸಿದ್ದಾರ್ಥ ಬಡಾವಣೆಗೆ ಕುಡಿಯುವ ನೀರು, ಚರಂಡಿ, ಶೌಚಾಲಯ, ಸಾರ್ವಜನಿಕ ರಸ್ತೆ ಒದಗಿಸುವಂತೆ ಬಡಾವಣೆಯ ನಿವಾಸಿಗಳು ಹಾಗೂ ಕರ್ನಾಟಕ ದಲಿತ ಕ್ರಿಯಾ ವೇದಿಕೆ ಸಂಘಟನೆಯ ಕಾರ್ಯಕರ್ತರು ಕಾಡುಗೋಡಿ ಬಿಬಿಎಂಪಿ ಕಚೇರಿ ಮುತ್ತಿಗೆ ಹಾಕಿ ಪ್ರತಿಭಟಿಸಿದರು.

'ಸಿದ್ದಾರ್ಥ ಬಡಾವಣೆಯಲ್ಲಿ 1500ಕ್ಕೂ ಹೆಚ್ಚು ವಸತಿ ಕಟ್ಟಡಗಳಿದ್ದು, 4 ಸಾವಿರಕ್ಕೂ ಹೆಚ್ಚು ಜನಸಂಖ್ಯೆ ಇದೆ. ಬಡಾವಣೆಗೆ ರಸ್ತೆಯಿಲ್ಲ. ಬಡಾವಣೆ ಪಕ್ಕದಲ್ಲಿನ ರೈಲ್ವೆ ಕೆಳ ಸೇತುವೆಯ ಮೂಲಕವೇ ಇತರ ಮಾರ್ಗಗಳಿಗೆ ತೆರಳಬೇಕು. ಈ ಸಂದರ್ಭದಲ್ಲಿ ರೈಲ್ವೆ ಅಪಘಾತಗಳಾಗಿ ತೊಂದರೆ ಅನುಭವಿಸುವಂತಾಗಿದೆ. ಮೂಲಸೌಕರ್ಯಗಳು ಬಡಾವಣೆಗೆ ಕನಸಿನ ಮಾತಾಗಿದೆ' ಎಂದು ನಿವಾಸಿಗಳು ದೂರಿದರು.

‘ಸಾಮ ಪುರಸ್ಕಾರ’ ಪ್ರದಾನ 26ರಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶ್ರೀ ಅಕಾಡೆಮಿ ಆಫ್ ಮ್ಯೂಸಿಕ್ ಆ್ಯಂಡ್ ಆರ್ಟ್ಸ್’ ಸಂಸ್ಥೆಯಿಂದ ಫೆ.26ರಂದು ‘ಸಾಮ: 2023-24’ ವಾರ್ಷಿಕೋತ್ಸವವನ್ನು ಆಯೋಜಿಸಲಾಗಿದೆ.

ಜಯನಗರ 8ನೇ ಬ್ಲಾಕ್‌ನಲ್ಲಿರುವ ಜಯರಾಮ ಸೇವಾ ಮಂಡಳಿಯ ಜಿ.ವಿ. ಸಭಾಂಗಣದಲ್ಲಿ ಸಮಾರಂಭ ನಡೆಯಲಿದ್ದು, ನ್ಯಾಯಮೂರ್ತಿ ಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ‘ವೀರನಾರಿಯರಿಗೆ’ ಸನ್ಮಾನ ನಡೆಯಲಿದ್ದು, ಕೊಳಲು ವಾದಕ ಕೆ.ಯು. ರಾಘವೇಂದ್ರ ರಾವ್, ಮೃದಂಗ ವಾದಕ ಎಂ. ವಾಸುದೇವರಾವ್ ಮೋಹಿತೆ, ತವಿಲ್ ವಾದಕ ಡೆಂಕಣಿಕೋಟೆ ಮಣಿ, ಅಯೋಧ್ಯ ರಾಮನ ಶಿಲ್ಪಿಗಳಲ್ಲಿ ಒಬ್ಬರಾದ ಇಡಗುಂಜಿ ಗಣೇಶ್ ಭಟ್ ಅವರಿಗೆ ‘ಸಾಮ ಪುರಸ್ಕಾರ’ವನ್ನು ಪ್ರದಾನ ಮಾಡಲಾಗುತ್ತದೆ.

ಸಂಸ್ಕೃತದಲ್ಲಿ ಸಾಧನೆ ಮಾಡಿರುವ ಅರ್ಜುನ್ ಭಾರದ್ವಾಜ್, ತಿಲಕ್ ರಾವ್, ಹಂದಲಸು ವಾಸುದೇವ ಭಟ್ ಮತ್ತು ಹಾಸ್ಯ ಕಲಾವಿದ ವೈ.ವಿ. ಗುಂಡೂರಾವ್ ಅವರಿಗೆ ವಿಶೇಷ ಸನ್ಮಾನ, ಘಟಂ ವಾದಕರಾದ ಸತ್ಯ ಕುಮಾರ್, ಟಿ.ಎನ್. ರಮೇಶ್ ಹಾಗೂ ಸಂಗೀತ ಉಪಾಧ್ಯಾಯನಿ ವಿದುಷಿ ಗೀತಾ, ರಂಗಭೂಮಿ ಕಲಾವಿದ ಸುಧೀಂದ್ರ ಶರ್ಮ ಅವರಿಗೆ ಸನ್ಮಾನ ಕಾರ್ಯಕ್ರಮ ನಡೆಯುತ್ತದೆ.

ರಕ್ಷಿತ್ ಶರ್ಮಾ ಹಾಗೂ ದತ್ತ ಪ್ರಸಾದ ಅವಧೂತ ಅವರಿಗೆ ‘ಸಾಮ ಯುವ ಪುರಸ್ಕಾರ’, ಪ್ರಣವಿ, ಸಮರ್ಥ, ವಿದ್ಯಾಶ್ರೀ, ತನ್ಮಯ ಸುಪ್ರಮೋದ, ವಿಸ್ಮಯ ಸುಪ್ರಮೋದ, ನಿಧಿ ಭಟ್ ಮತ್ತು ತುಷಾರ್ ವಸಿಷ್ಠ ಅವರಿಗೆ ‘ಸಾಮ ಬಾಲ ಪುರಸ್ಕಾರ’ವನ್ನು ನೀಡಲಾಗುತ್ತದೆ ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಬಾಲರಾಮ ಚಿತ್ರಕಲಾ ಸ್ಪರ್ಧೆ ಹಾಗೂ ಯುವಕರು ಹಾಗೂ 50 ವರ್ಷದವರಿಗೆ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ 97429 92993.

Wonderla Holidays Limited

Registered Office : 28th K.M., Mysore Road, Bengaluru 562 109; Ph: 080-22010311/322/333
Fax 080-22010324 Website: www.wonderla.com; E-mail: mail.blr@wonderla.com
CIN:L55101KA2002PLC031224

STATEMENT OF UNAUDITED FINANCIAL RESULTS FOR THE QUARTER AND NINE MONTHS ENDED 31st DECEMBER, 2023 (₹in lakhs except EPS data)

SL. No.	Particulars	Quarter ended			Nine months ended		Year ended
		31st December 2023	30th September 2023	31st December 2022	31st December 2023	31st December 2022	31st March 2023
		(Unaudited)	(Unaudited)	(Unaudited)	(Unaudited)	(Unaudited)	(Audited)
1	Total Income from Operations (net)	12,952.12	8,140.51	11,775.52	40,119.39	33,979.04	45,242.41
2	Net Profit for the period (before Tax, Exceptional and/or Extraordinary items)	5,032.76	1,848.83	5,239.00	18,103.25	15,188.97	19,911.42
3	Net Profit for the period before tax (after Exceptional and/or Extraordinary items)	5,032.76	1,848.83	5,239.00	18,103.25	15,188.97	19,911.42
4	Net Profit for the period after tax (after Exceptional and/or Extraordinary items)	3,735.76	1,352.14	3,894.45	13,535.26	11,385.35	14,890.37
5	Total Comprehensive Income for the period [Comprising Profit for the period (after tax) and Other Comprehensive Income / (Loss) (after tax)]	3,743.27	1,365.71	3,890.85	13,485.09	11,365.65	14,888.73
6	Equity Share Capital (Paid Up)	5,657.34	5,657.34	5,655.92	5,657.34	5,655.92	5,655.92
7	Earnings per share (face value of Rs.10/- each) (not annualised for the quarters)						
	Basic:	6.60	2.39	6.89	23.93	20.13	26.33
	Diluted:	6.60	2.39	6.88	23.93	20.12	26.33

Notes:
1. The above unaudited financial results for the quarter and nine months ended 31st December, 2023 have been reviewed by the Audit Committee and approved by the Board of Directors at their meeting held on 08th February 2024.
2. The Statement has been prepared in accordance with Indian Accounting Standards ('Ind AS') prescribed under section 133 of the Companies Act, 2013 read with the relevant rules thereunder and in terms of SEBI (Listing Obligations and Disclosure Requirements) Regulations, 2015, as amended.

Place: Bengaluru
Date: 08.02.2024

For Wonderla Holidays Limited
Sd/-
Managing Director

3M INDIA LIMITED

CIN:L31300KA1987PLC013543, Regd Office: 48-51, Electronics City, Hosur Road, Bengaluru - 560100, Website: www.3m.com/in

Extract of the Standalone and Consolidated Financial Results for the quarter and nine months ended 31 December 2023

(Rs. in Lakhs, except per share data, unless otherwise stated)

Particulars	Standalone				Consolidated			
	3 months ended 31 December 2023 (Unaudited)	9 months ended 31 December 2023 (Unaudited)	3 months ended 31 December 2022 (Unaudited)	12 months ended 31 March 2023 (Audited)	3 months ended 31 December 2023 (Unaudited)	9 months ended 31 December 2023 (Unaudited)	3 months ended 31 December 2022 (Unaudited)	12 months ended 31 March 2023 (Audited)
Total income from operations (including other income)	95,568.21	2,93,448.67	94,341.38	3,79,766.33	1,02,218.31	3,14,292.70	1,00,501.96	4,02,746.36
Net Profit for the period (before tax, Exceptional and / or Extraordinary items)	16,702.46	50,306.48	15,123.30	56,079.61	18,122.61	55,040.06	16,734.06	60,743.81
Net Profit for the period before tax (after Exceptional and / or Extraordinary items)	16,702.46	50,306.48	15,123.30	56,079.61	18,122.61	55,040.06	16,734.06	60,743.81
Net Profit for the period after tax	12,456.74	37,503.33	11,277.17	41,614.39	13,523.69	41,056.36	12,480.69	45,101.92
Total comprehensive income for the period [Comprising Profit / (Loss) for the period (after tax) and other comprehensive income (after tax)]	12,234.74	37,303.55	11,161.99	41,658.80	13,271.82	40,824.97	12,345.08	45,142.87
Equity share capital	1,126.51	1,126.51	1,126.51	1,126.51	1,126.51	1,126.51	1,126.51	1,126.51
Reserves (excluding revaluation reserves as per Ind AS)				1,93,657.31				1,66,620.54
Earnings per share (in Rs.) (of Rs. 10/- each)								
a) Basic (in Rs.)	110.58	332.92	100.11	369.41	120.05	364.46	110.79	400.37
b) Diluted (in Rs.)	110.58	332.92	100.11	369.41	120.05	364.46	110.79	400.37

Notes:
1. The above unaudited standalone and consolidated financial results of 3M India Limited and its subsidiary, 3M Electro & Communication India Private Limited (hereafter refer to as the 'Group') have been reviewed by the Audit Committee and thereafter approved by the Board of Directors at their meeting held on 08 February 2024.
2. The above is an extract of the detailed format for the unaudited financial results for the quarter and nine months ended 31 December 2023 filed with the Stock Exchanges under Regulation 33 of the SEBI (Listing and Other Disclosure Requirements) Regulations, 2015. The full format for the unaudited financial results for the quarter and nine months ended 31 December 2023 are available on the BSE Limited website (www.bseindia.com), the National Stock Exchange India Limited website (www.nseindia.com) and on the Company's website (https://www.3mindia.in/3M/en_IN/company-in/about-3m/financial-facts-local/).
3. The financial results of the Company have been prepared in accordance with Indian Accounting Standards (Ind AS) as notified by the Ministry of Corporate Affairs pursuant to Section 133 of the Companies Act, 2013 read with Rule 3 of the Companies (Indian Accounting Standard) Rules 2015, as amended and in terms of Regulation 33 of the SEBI (Listing Obligations and Disclosure Requirements) Regulations, 2015.

Place: Bengaluru
Date: 08 February 2024

By Order of the Board
For 3M India Limited
Ramesh Ramadurai
Managing Director

ಕೆ–100 ನಾಗರಿಕ ಜಲಮಾರ್ಗ: ಅಭಿವೃದ್ಧಿ ಆಯುಕ್ತೆ ಶಾಲಿನಿ ರಜನೀಶ್ ಪರಿಶೀಲನೆ

ಒತ್ತುವರಿ ತೆರವಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜಕಾಲುವೆಗಳಲ್ಲಿನ ಒತ್ತುವರಿ ತೆರವು ಮಾಡಬೇಕು, ಕಾಲುವೆಗಳಿಗೆ ಹರಿಯುತ್ತಿರುವ ತ್ಯಾಜ್ಯ ನೀರನ್ನು ಸಂಪೂರ್ಣ ನಿಲ್ಲಿಸಬೇಕು’ ಎಂದು ಜಿಲ್ಲಾಧಿಕಾರಿ ಹಾಗೂ ಜಲ ಮಂಡಳಿ ಅಧಿಕಾರಿಗಳಿಗೆ ಅಭಿವೃದ್ಧಿ ಆಯುಕ್ತೆ ಶಾಲಿನಿ ರಜನೀಶ್ ಸೂಚಿಸಿದರು.



ಕೆ100 ನಾಗರಿಕ ಜಲಮಾರ್ಗ ಯೋಜನೆ ಕಾಮಗಾರಿಯನ್ನು ಅಭಿವೃದ್ಧಿ ಆಯುಕ್ತೆ ಶಾಲಿನಿ ರಜನೀಶ್ ಅವರು ಬುಧವಾರ ಪರಿಶೀಲನೆ ನಡೆಸಿದರು. ಬಿಬಿಎಂಪಿ ಪ್ರಧಾನ ಎಂಜಿನಿಯರ್ ಬಿ.ಎಸ್ ಪ್ರಹ್ಲಾದ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹಾಜರಿದ್ದರು

ಬಿಬಿಎಂಪಿ ಕೈಗೆತ್ತಿಕೊಂಡಿರುವ ಕೆ-100 ನಾಗರಿಕ ಜಲಮಾರ್ಗ ಯೋಜನೆ ಕಾಮಗಾರಿಯನ್ನು ಬುಧವಾರ ಪರಿಶೀಲನೆ ನಡೆಸಿದ ಅವರು, ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತರು ಹಾಗೂ ಪ್ರಧಾನ ಎಂಜಿನಿಯರ್ ಅವರಿಗೆ ಆದೇಶಿಸಿದರು.

ಕುಂಬಾರಗುಂಡಿ ಬಳಿ ರಾಜಕಾಲುವೆಯಲ್ಲಿ ಹರಿಯುವ ನೀರನ್ನು ಶುದ್ಧೀಕರಿಸಲು ನಿರ್ಮಿಸಲಾಗುತ್ತಿರುವ 5 ಎಂಎಲ್‌ಡಿ ಎಸ್‌ಟಿಪಿ ಕಾಮಗಾರಿಯನ್ನು ಪೂರ್ಣಗೊಳಿಸಿ, ಕೂಡಲೇ ಕಾರ್ಯಾರಂಭಿಸುವಂತೆ ಜಲಮಂಡಳಿ ಅಧಿಕಾರಿಗಳಿಗೆ ಶಾಲಿನಿ ರಜನೀಶ್ ಸೂಚನೆ ನೀಡಿದರು.

ವಿಲ್ಸನ್ ಗಾರ್ಡನ್ ಸಮೀಪದ ಮಾರಪ್ಪ ಗಾರ್ಡನ್ ಬಳಿ ರಾಜಕಾಲುವೆ ಪಕ್ಕದ ಪ್ರದೇಶವನ್ನು ಸರ್ವೆ ಮಾಡಿ ಒತ್ತುವರಿಯಾಗಿರುವ ಜಾಗವನ್ನು ತೆರವುಗೊಳಿಸಲು ಬೆಂಗಳೂರು ನಗರ ಜಿಲ್ಲಾಧಿಕಾರಿ ದಯಾನಂದ್ ಅವರಿಗೆ ಆದೇಶಿಸಿದರು.

ಶಾಂತಿನಗರ ಬಸ್ ನಿಲ್ದಾಣದ ಬಳಿ ನಾಗರಿಕ ಜಲಮಾರ್ಗದಲ್ಲಿ ತ್ಯಾಜ್ಯ ನೀರು ಹರಿಯುತ್ತಿದ್ದು, ಈ ಕುರಿತು ಜಲಮಂಡಳಿಯು ಕೂಡಲೇ ಕ್ರಮ ಕೈಗೊಳ್ಳಲು ಸೂಚನೆ ನೀಡಿದರು.

ಜಲಮಂಡಳಿಯ ಮುಖ್ಯ ಎಂಜಿನಿಯರ್ ಗಂಗಾಧರ್ ಪ್ರತಿಕ್ರಿಯಿಸಿ, ‘ತ್ಯಾಜ್ಯ ನೀರು ಹರಿಯುವುದನ್ನು ತಪ್ಪಿಸಲು 15 ಎಂಎಲ್‌ಡಿ ಸಾಮರ್ಥ್ಯದ ಇಂಟರ್ ಮೀಡಿಯೆಟ್ ಸೀವೆಜ್ ಪಂಪಿಂಗ್ ಸ್ಟೇಷನ್ (ಐಎಸ್‌ಪಿಎಸ್) ನಿರ್ಮಿಸಬೇಕು. ಈ ಪ್ರಕ್ರಿಯೆ ನಡೆದಿದೆ’ ಎಂದರು.

ಯೋಜನಾ ವಿಭಾಗದ ವಿಶೇಷ ಆಯುಕ್ತ ಕೆ. ಹರೀಶ್ ಕುಮಾರ್, ಬೆಂಗಳೂರು ನಗರ ಜಿಲ್ಲಾಧಿಕಾರಿ ದಯಾನಂದ್, ಬಿಬಿಎಂಪಿ ಪ್ರಧಾನ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ಉಪಸ್ಥಿತರಿದ್ದರು.

ಕೆ-100 ಯೋಜನೆ ಪ್ರಗತಿ ವಿವರ

ಕೆ.ಆರ್.ಮಾರುಕಟ್ಟೆಯಿಂದ ಬೆಳ್ಳಂದೂರು ಕೆರೆಯವರೆಗಿನ 9.2 ಕಿ.ಮೀ ಉದ್ದದ ‘ಕೋರಮಂಗಲ ರಾಜಕಾಲುವೆ (ಕೆ-100) ಜಲ ಮಾರ್ಗ ಯೋಜನೆ’ಯ ಕಾಮಗಾರಿ ನಡೆಯುತ್ತಿದೆ.

ರಾಜಕಾಲುವೆಯ ತಳಭಾಗವನ್ನು ಸ್ವಚ್ಛಗೊಳಿಸಿ, ನೀರು ಇಂಗುವಂತೆ ವಿನ್ಯಾಸಗೊಳಿಸಿ ಅಭಿವೃದ್ಧಿಪಡಿಸಲಾಗಿದೆ. ಎರಡೂ ಬದಿಯ ತಡೆಗೋಡೆ, ತಳಮಟ್ಟದ ಸೇತುವೆಗಳನ್ನು ವಾಸ್ತುಶಿಲ್ಪದ ಮಾದರಿಯಲ್ಲಿ ವಿನ್ಯಾಸಗೊಳಿಸುವ ಕಾರ್ಯ ಬಹುತೇಕ ಪೂರ್ಣಗೊಂಡಿದೆ. ಹಸಿರೀಕರಣ, ರಾತ್ರಿ ಸಮಯದಲ್ಲಿ ಉದ್ಯಾನದ ರೀತಿಯಲ್ಲಿ ಆಲಂಕಾರಿಕ ದೀಪ, ಗ್ರಾನೈಟ್ ಅಳವಡಿಕೆ, ತೋಟಗಾರಿಕೆ, ಪಾದಚಾರಿ ಮಾರ್ಗ, ಗ್ರಿಲ್ ಅಳವಡಿಕೆ ಕಾಮಗಾರಿ ಪ್ರಗತಿಯಲ್ಲಿದೆ ಎಂದು ಬಿಬಿಎಂಪಿ ಅಧಿಕಾರಿಗಳು ಮಾಹಿತಿ ನೀಡಿದರು.

ವಾಹನ ಡಿಕ್ಕಿ: ಚಿರತೆ ಸಾವು

ಪ್ರಜಾವಾಣಿ ವಾರ್ತೆ

ಕುದೂರು: ರಾಷ್ಟ್ರೀಯ ಹೆದ್ದಾರಿ 75 ಮರೂರು ಹ್ಯಾಂಡ್ ಪೋಸ್ಟ್ ಸೂರಪ್ಪನಹಳ್ಳಿ ಬಳಿ ರಸ್ತೆ ದಾಟುತ್ತಿದ್ದ ವೇಳೆ ವಾಹನವೊಂದಕ್ಕೆ ಚಿರತೆ ಸಿಲುಕಿ ಸಾವನ್ನಪ್ಪಿರುವ ಘಟನೆ ಬುಧವಾರ ರಾತ್ರಿ ನಡೆದಿದೆ.

ಒಂದೂವರೆ ಎರಡು ವರ್ಷದ ಹೆಣ್ಣು ಚಿರತೆ ಅಪಘಾತಕ್ಕೆ ಬಲಿಯಾಗಿದೆ.

ಕಿಟಕಿ ಸರಳು ಕತ್ತರಿಸಿ ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಿಟಕಿಯ ಕಬ್ಬಿಣದ ಸರಳುಗಳನ್ನು ಕತ್ತರಿಸಿ ಮನೆಯೊಂದಕ್ಕೆ ನುಗ್ಗಿದ್ದ ಕಳ್ಳರು, 2 ಕೆ.ಜಿ. 250 ಗ್ರಾಂ ಚಿನ್ನಾಭರಣ ಕದ್ದೊಯ್ದಿದ್ದಾರೆ. ಈ ಕಳ್ಳತನ ಸಂಬಂಧ ಶೇಷಾದ್ರಿಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಶೇಷಾದ್ರಿಪುರ ನಿವಾಸಿ ಮಂಜುಳಾ ದೇವಿ ಅವರು ಕಳ್ಳತನ ಸಂಬಂಧ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಮಂಜುಳಾ ದೇವಿ ಹಾಗೂ ಕುಟುಂಬದವರು ಬ್ಯಾಂಕ್ ಲಾಕರ್‌ನಲ್ಲಿಟ್ಟಿದ್ದ ಚಿನ್ನಾಭರಣವನ್ನು ಇತ್ತೀಚೆಗೆ ಬಿಡಿಸಿಕೊಂಡು ಬಂದು ಮನೆಯಲ್ಲಿ ಇಟ್ಟಿದ್ದರು. ದೇವರ ಪೂಜೆ ಅಂಗವಾಗಿ ಜ. 17ರಂದು ರಾಜಸ್ಥಾನಕ್ಕೆ ಹೋಗಿದ್ದರು. ಫೆ. 4ರಂದು ವಾಪಸು ಮನೆಗೆ ಬಂದಾಗ, ಕಳ್ಳತನ ನಡೆದಿದ್ದು ಗಮನಕ್ಕೆ ಬಂದಿದೆ’ ಎಂದು ತಿಳಿಸಿದರು.

‘ಕಿಟಕಿಯ ಸರಳುಗಳು ಕತ್ತರಿಸಿ ಒಳಗೆ ನುಗ್ಗಿದ್ದ ಕಳ್ಳರು, ಮನೆಯಲ್ಲೆಲ್ಲ ಹುಡುಕಾಡಿದ್ದಾರೆ. ಲಾಕರ್‌ನಲ್ಲಿಟ್ಟಿದ್ದ 2 ಕೆ.ಜಿ. 250 ಗ್ರಾಂ ತೂಕದ ಚಿನ್ನಾಭರಣ, ಬೆಳ್ಳಿ ಸಾಮಗ್ರಿಗಳನ್ನು ಕದ್ದುಕೊಂಡು ಹೋಗಿದ್ದಾರೆ. ಕಳ್ಳತನದಲ್ಲಿ ಪರಿಚಯಸ್ಥರೂ ಭಾಗಿಯಾಗಿರುವ ಅನುಮಾನವಿದೆ’ ಎಂದು ಪೊಲೀಸರು ಹೇಳಿದರು.

ಶ್ರೀ ಎಂ.ಜಿ. ಹಿರೇಮಠ್, ನಿವೃತ್ತ ಜಿಲ್ಲಾ ಸತ್ರ ನ್ಯಾಯಾಧೀಶರು
ವಿಚಾರಣಾ ವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು

ಪ್ರಕರಣ ಸಂಖ್ಯೆ: ನಅಇ 236 ಎಂಎನ್‌ಯು 2010 ಬೆಂಗಳೂರು, ದಿನಾಂಕ : 22–10–2012

ದಿನಾಂಕ : 23.01.2024

ವಿಚಾರಣೆಗೆ ಹಾಜರಾಗಲು ಅಂತಿಮ ನೋಟೀಸ್

ಶ್ರೀ ಎಸ್. ಮೋಹನ್ ಸಹಾಯಕ ಕಾರ್ಯಪಾಲಕ ಅಭಿಯಂತರರು (ನಿವೃತ್ತ) ಈ ಹಿಂದೆ ಬಿಬಿಎಂಪಿಯಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸಿದ ಸಂದರ್ಭದಲ್ಲಿ ದಾಸಪ್ಪ ಹೆರಿಗೆ ಆಸ್ಪತ್ರೆ ಆವರಣದಲ್ಲಿ ಕೈಗೊಂಡಿರುವ ಕಾಮಗಾರಿಗಳು ಹಾಗೂ ವಾರ್ಡ್ ಸಂಖ್ಯೆ–102 ರಲ್ಲಿನ ಇತರೆ ಕಾಮಗಾರಿಗಳು ಪೂರ್ಣಗೊಳ್ಳುವ ಮೊದಲೇ ನಿಯಮಗಳನ್ನು ಪಾಲಿಸದೇ ಕಾಮಗಾರಿಗೆ ಸಂಬಂಧಿಸಿದ ಗುತ್ತಿಗೆ ಮೊತ್ತವನ್ನು ಗುತ್ತಿಗೆದಾರರಿಗೆ ಪಾವತಿ ಮಾಡುವ ಸಲುವಾಗಿ ಅಂತಿಮ ಬಿಲ್ಲನ್ನು ತಯಾರಿಸಿ ಪಾಲಿಕೆಗೆ ಆರ್ಥಿಕ ನಷ್ಟವನ್ನುಂಟು ಮಾಡಲು ಪ್ರಯತ್ನಿಸಿ ಕರ್ತವ್ಯಲೋಪ ಎಸಗಿರುತ್ತೀರಿ.

ಈ ಸಂಬಂಧ ಕರ್ನಾಟಕ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು ರವರು ನಿಮ್ಮ ವಿರುದ್ಧ ಇಲಾಖಾ ವಿಚಾರಣೆ ಕೈಗೊಳ್ಳಲು ಆದೇಶಿಸಿದ್ದು, ಅದರನ್ವಯ ವಿಚಾರಣಾಧಿಕಾರಿಗಳು ಇಲಾಖಾ ವಿಚಾರಣೆಯನ್ನು ದಿನಾಂಕ 12.03.2024 ರಂದು ಬೆಳಿಗ್ಗೆ 11.00 ಗಂಟೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಕಟ್ಟಡದ 1ನೇ ಮಹಡಿ, ರೂಂ ನಂ. 205, ಎನ್.ಆರ್. ಚೌಕ, ಬೆಂಗಳೂರು – 560 002 ಇಲ್ಲಿ ವಿಚಾರಣಾಧಿಕಾರಿಗಳ ಮುಂದೆ ಹಾಜರಾಗಲು ಸೂಚಿಸಿದೆ. ಒಂದು ವೇಳೆ ನಿವು ವಿಚಾರಣೆಗೆ ಗೈರುಹಾಜರಾದಲ್ಲಿ ನಿಮ್ಮ ವಿರುದ್ಧ ಇಲಾಖಾ ವಿಚಾರಣೆಯನ್ನು ಮುಂದುವರಿಸಿ ಕಾನೂನಿನ ಪ್ರಕಾರ ಕ್ರಮ ಜರುಗಿಸಲಾಗುವುದು.

ಸಹಿ/–
ಎಂ.ಜಿ. ಹಿರೇಮಠ್
ನಿವೃತ್ತ ಜಿಲ್ಲಾ ಸತ್ರ ನ್ಯಾಯಾಧೀಶರು,
ವಿಚಾರಣಾ ವಿಭಾಗ, ಬಿಬಿಎಂಪಿ, ಬೆಂಗಳೂರು.

ನಮಸ್ತೆ ಎಕ್ಸ್‌ಪೋರ್ಟ್ಸ್ ಲಿಮಿಟೆಡ್
CIN: U85110KA1988PLC008988
ನೊಂದಾಯಿತ ಕಚೇರಿ: ನಂ.63, ನ್ಯೂ ಟಿಂಬರ್‌ಯಾರ್ಡ್ ಲೇಔಟ್, ಮೈಸೂರ್ ರಸ್ತೆ, ಸರ್ಕಾರಿ ಎಲೆಕ್ಟ್ರಿಕ್ ಫ್ಯಾಕ್ಟರಿ, ಬೆಂಗಳೂರು – 560 0026, ಭಾರತ,
ದೂರವಾಣಿ: 080-2675 9525, 2674 9525 ಇಮೇಲ್: accounts@namasteexports.net info@namasteexports.net; ವೆಬ್‌ಸೈಟ್: www.namasteesports.net

ಸದಸ್ಯರಿಗೆ ಸೂಚನೆ

ಅಂಚೆ ಮತಪತ್ರ ಸೂಚನೆಯಲ್ಲಿ ಹೇಳಿರುವಂತಹ ವಿಶೇಷ ವ್ಯವಹಾರ / ಸಾಮಾನ್ಯ ನಿರ್ಣಯಕ್ಕೆ ಸಂಬಂಧಿಸಿದಂತೆ ಕಂಪನಿಗಳ ಕಾಯಿದೆ, 2013 ರ ಕಲಮು 110 ಮತ್ತು ಇತರ ಅನ್ವಯವಾಗುವ ನಿಬಂಧನೆಗಳ ಅಡಿಯಲ್ಲಿ ಇ–ಮತದಾನ/ಅಂಚೆ ಮತಪತ್ರಗಳ ಮೂಲಕ ಕಂಪನಿಯು ಷೇರುದಾರರ ಅನುಮೋದನೆ/ ಒಪ್ಪಿಗೆಯನ್ನು ಕೋರುತ್ತಾ ಷೇರುದಾರರಿಗೆ ಅಂಚೆ ಮತಪತ್ರ ನಮೂನೆಗಳು ಹಾಗೂ ಅಂಚೆಶುಲ್ಕವನ್ನು ಪಾವತಿಸಿರುವ ನಮ್ಮ ವಿಳಾಸವುಳ್ಳ ಲಕೋಟೆಗಳ ಸಹಿತವಾಗಿ ಅಂಚೆ ಮೂಲಕ ಅಂಚೆ ಮತದಾನದ ಸೂಚನೆಯನ್ನು ಕಳುಹಿಸುವುದನ್ನು ಕಂಪನಿಯು ಫೆಬ್ರವರಿ 08, 2024 ರಂದು ಪೂರ್ಣಗೊಳಿಸಿದೆ ಎಂದು ಕಂಪನಿಯ ಸದಸ್ಯರಿಗೆ ಈ ಮೂಲಕ ತಿಳಿಸಲಾಗಿದೆ. ಅಂಚೆ ಮತದಾನವನ್ನು ನ್ಯಾಯಯುತವಾಗಿ ಮತ್ತು ಪಾರದರ್ಶಕವಾಗಿ ನಡೆಸಲು ಮಂಡಳಿಯು ಸಿಎಸ್. ಶ್ರೀ ಜಿ.ಎಂ. ಗಣಪತಿ, ವೃತ್ತಿನಿರತ ಕಂಪನಿ ಕಾರ್ಯದರ್ಶಿ, (ಸಿಪಿ ಸಂ. 4520), ಇವರನ್ನು ಸೂಕ್ಷ್ಮ ಪರಿಶೀಲಕರಾಗಿ ನೇಮಿಸಿಕೊಂಡಿದೆ. ಕಂಪನಿಯ ಸದಸ್ಯರೆಲ್ಲರೂ ದಯವಿಟ್ಟು ಗಮನಿಸಬೇಕು: ಕಂಪನಿಯು ರಿಮೋಟ್ ಇ–ವೋಟಿಂಗ್‌ಗಾಗಿ ಸಿಡಿಎಸ್‌ಎಲ್‌ನ ಸೇವೆಗಳನ್ನು ನಿಯೋಜಿಸಿಕೊಂಡಿದೆ. ಶನಿವಾರ ಮಾರ್ಚ್ 09, 2024 ಸಂಜೆ 5.00 ಗಂಟೆ ಅಥವಾ ಅದಕ್ಕೂ ಮೊದಲು ವಿಧ್ಯುಕ್ತವಾಗಿ ಭರ್ತಿ ಮಾಡಿ ಸಹಿ ಮಾಡಿದ ಅಂಚೆ ಮತಪತ್ರವನ್ನು ಸೂಕ್ಷ್ಮ ಪರಿಶೀಲಕರಿಗೆ ಹಿಂದಿರುಗಿಸುವ ಮೂಲಕ ಸದಸ್ಯರು ತಮ್ಮ ಸಮ್ಮತಿ ಅಥವಾ ಅಸಮ್ಮತಿಯನ್ನು ತಿಳಿಸಬೇಕು ಎಂದು ಈ ಮೂಲಕ ವಿನಂತಿಸುತ್ತಿದ್ದೇವೆ. ಶನಿವಾರ ಮಾರ್ಚ್ 09, 2024 ರ ನಂತರ ಸದಸ್ಯರಿಂದ ಅಂಚೆ ಮತಪತ್ರ ನಮೂನೆಗಳು ಬಂದರೆ ಕಟ್ಟುನಿಟ್ಟಾಗಿ ಅಂತಹ ಸದಸ್ಯರಿಂದ ಯಾವುದೇ ಉತ್ತರ ಸ್ವೀಕಾರವಾಗಲಿಲ್ಲ ಎಂದು ಪರಿಗಣಿಸಲಾಗುತ್ತದೆ. ಫೆಬ್ರವರಿ 02, 2024 ರಂದು ಸದಸ್ಯರ ರಿಜಿಸ್ಟರ್/ಡಿಪಾಸಿಟರಿಗಳ ದಾಖಲಾತಿಯಲ್ಲಿ ಸದಸ್ಯರ ಹೆಸರಿನಲ್ಲಿ ನೋಂದಾಯಿಸಲಾದ ಷೇರುಗಳಿಗೆ ಪಾವತಿಸಿರುವ ಮೌಲ್ಯದ ಆಧಾರದ ಮೇಲೆ ಮತದಾನದ ಹಕ್ಕುಗಳನ್ನು ಲೆಕ್ಕಹಾಕಲಾಗುತ್ತದೆ. ಯಾವುದೇ ಸದಸ್ಯರಿಗೆ ಅಂಚೆ ಮತಪತ್ರ ನಮೂನೆಗಳು ಲಭಿಸಿರದಿದ್ದರೆ ಮತ್ತು ಅದರ ನಕಲುಗಳನ್ನು ಪಡೆಯಲು ಬಯಸುತ್ತಿದ್ದರೆ ಅಥವಾ ಅಂಚೆ ಮತಪತ್ರ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕುಂದುಕೊರತೆಗಳಿವೆ ಎಂದು ದೂರನ್ನು ನೀಡಲು ಬಯಸುತ್ತಿದ್ದರೆ ಅಂತಹವರು ದಯವಿಟ್ಟು ಸಂಪರ್ಕಿಸಿ: ಕಂಪನಿಯ ರಿಜಿಸ್ಟಾರ್ ಮೆ. ಬಿಜಿಎಸ್‌ಇ ಫೈನಾನ್ಷಿಯಲ್ ಲಿಮಿಟೆಡ್, ಸ್ಟಾಕ್ ಎಕ್ಸ್‌ಚೇಂಜ್ ಟವರ್ಸ್, ನಂ. 51, 1 ನೇ ಕ್ರಾಸ್, ಜೆ.ಸಿ. ರಸ್ತೆ, ಬೆಂಗಳೂರು – 560027, ಫೋನ್: 080–41329661, ಇಮೇಲ್: vp-rta@bfsl.co.in.
ಅಂಚೆ ಮತದಾನದ ಫಲಿತಾಂಶಗಳನ್ನು ಮಂಗಳವಾರ, ಮಾರ್ಚ್ 12, 2024 ರಂದು ಕಂಪನಿಯ ನೋಂದಾಯಿತ ಕಛೇರಿಯಲ್ಲಿ ಪ್ರಕಟಿಸಲಾಗುವುದು.
ಇ–ಮತದಾನ ಶುಕ್ರವಾರ, 09–02–2024 ರಂದು ಬೆಳಗ್ಗೆ 09.00 ಕ್ಕೆ ಪ್ರಾರಂಭವಾಗಿ ಶನಿವಾರ, 09–03–2024 ರಂದು ಸಂಜೆ 05.00 ಕ್ಕೆ ಮುಕ್ತಾಯಗೊಳ್ಳುತ್ತದೆ.

ನಿರ್ದೇಶಕರ ಮಂಡಳಿಯ ಆದೇಶದ ಮೇರೆಗೆ
ನಮಸ್ತೆ ಎಕ್ಸ್‌ಪೋರ್ಟ್ಸ್ ಲಿಮಿಟೆಡ್‌ಪರವಾಗಿ
ಸಹಿ/– ಖಂಡಿಗೆ ವಿನೋದ್ ಭಟ್
ವ್ಯವಸ್ಥಾಪಕ ನಿರ್ದೇಶಕರು, DIN: 02359812

ಸ್ಥಳ: ಬೆಂಗಳೂರು
ದಿನಾಂಕ: 09–02–2024

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರರವರ ಕಛೇರಿ, ಮಹದೇವಪುರ ವಿಭಾಗ, ಬೆಂಗಳೂರು – 560 048.

ಸಂ: ಕಾಪಾಅ/ಮದೇಪು/ಟೆಂಡ್/14/2023–24 ದಿನಾಂಕ:07.02.2024

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ
(ಜಿಓಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಮಹದೇವಪುರ ವಿಭಾಗ, ಇವರು ಅರ್ಹ ನೋಂದಾಯಿತ ಗುತ್ತಿಗೆದಾರರಿಂದ ಕೆಳಕಂಡ ವಿವಿಧ ಕಾಮಗಾರಿಗಳಿಗೆ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ವಾರ್ಡ್ ನಂ.	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂಗಳಲ್ಲಿ)	ಕಾಮಗಾರಿಗಳ ಸಂಖ್ಯೆ
ಸಾಮಾನ್ಯ ಪ್ರವರ್ಗಕ್ಕೆ				
1	97	5.00 & 25.00	25,000 & 50,000	02
2	98	5.00 ರಿಂದ 25.00	25,000 ರಿಂದ 50,000	04
3	99	5.00 ರಿಂದ 15.00	12,500 ರಿಂದ 30,000	03
4	100	5.00 ರಿಂದ 25.00	25,000 ರಿಂದ 50,000	03
5	101	5.00 & 25.00	12,500 & 50,000	02
6	102	5.00 ರಿಂದ 25.00	12,500 ರಿಂದ 50,000	04
7	103	5.00 ರಿಂದ 30.00	12,500 ರಿಂದ 60,000	03
8	104	5.00 ರಿಂದ 30.00	12,500 ರಿಂದ 60,000	03
9	105	15.00	37,500	01
ಪರಿಶಿಷ್ಟ ಜಾತಿ ಪ್ರವರ್ಗಕ್ಕೆ				
10	97	30.00	30,000	01
11	100	15.00	18,750	01
12	101	15.00	18,750	01
13	105	15.00 & 25.00	18,750 & 25,000	02
ಪರಿಶಿಷ್ಟ ಪಂಗಡ ಪ್ರವರ್ಗಕ್ಕೆ				
14	99	25.00	25,000	01
15	101	15.00	18,750	01
ಒಟ್ಟು ಕಾಮಗಾರಿಗಳ ಸಂಖ್ಯೆ				32

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಜಿಓಕೆ ಕೆಪಿಪಿ ಪೋರ್ಟಲ್ https://kppp.karnataka.gov.in ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. **2) ಪೂರ್ವಭಾವಿ ಸಭೆ ದಿನಾಂಕ : 17.02.2024 ರ ಬೆಳಿಗ್ಗೆ 11.00 ಗಂಟೆಗೆ.** 3) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **21.02.2024ರ ಸಂಜೆ 4.00 ಗಂಟೆಯವರೆಗೆ** 4) ಟೆಂಡರ್‌ಗಳನ್ನು ತೆರೆಯುವ ದಿನಾಂಕ: **22.02.2024ರ ಸಂಜೆ 4.30 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯಲ್ಲಿ ಕಛೇರಿಯ ಸಮಯದಲ್ಲಿ ಹಾಗೂ ವೆಬ್‌ಸೈಟ್: https://.kppp.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಮಹದೇವಪುರ ವಿಭಾಗ.

ದಾಬಸ್‌ಪೇಟೆ ಅರಣ್ಯ ವ್ಯಾಪ್ತಿಯಲ್ಲಿ ಕಾರ್ಯಕ್ರಮ

ಹಚ್ಚದಿರಿ ಬೆಂಕಿ: ಅರಿವಿಗೆ ಜಾಗೃತಿ

• ಸಿ.ಜಿ. ಮೋಹನ್ ಕುಮಾರ್



ಬೆಂಕಿಯಿಂದಾಗುವ ಅನಾಹುತದ ಬಗ್ಗೆ ಬೀದಿ ನಾಟಕದ ಮೂಲಕ ಅರಿವು ಮೂಡಿಸಲಾಯಿತು

ದಾಬಸ್‌ಪೇಟೆ: ಚಳಿಗಾಲ ಹೋಗಿ ಬೇಸಿಗೆ ಕಾಲ ಪ್ರಾರಂಭವಾಗುತ್ತಿದ್ದು, ಕಾಡಿಗೆ ಬೆಂಕಿ ಬೀಳುವ ಆತಂಕ ಶುರುವಾಗಿದೆ. ಈಗಾಗಲೇ ದಾಬಸ್‌ಪೇಟೆ ಅರಣ್ಯ ವ್ಯಾಪ್ತಿಯಲ್ಲಿ ಬೆಂಕಿ ಬೀಳುತ್ತಿದೆ. ಹೀಗಾಗಿ ಅರಣ್ಯ ಇಲಾಖೆಯು ಬೀದಿನಾಟಕದ ಮೂಲಕ ಜಾಗೃತಿ ಮೂಡಿಸುತ್ತಿದೆ.

ಅರಣ್ಯ ಪ್ರದೇಶದಲ್ಲಿ ಆಕಸ್ಮಿಕವಾಗಿ ಅಥವಾ ಕಿಡಿಗೇಡಿಗಳು ಬೆಂಕಿ ಹಚ್ಚುವುದರಿಂದ ಕಾಡು ಮತ್ತು ಅಲ್ಲಿನ ವನ್ಯಜೀವಿಗಳಿಗೆ ನಾನಾ ರೀತಿಯ ತೊಂದರೆಗಳು ಆಗುತ್ತಿವೆ. ಜೊತೆಗೆ ಕಾಡಂಚಿನಲ್ಲಿರುವ ರೈತರ ಜಮೀನುಗಳಲ್ಲಿ ಬೆಳೆದಿರುವ ಮಾವು, ತೆಂಗು, ಅಡಿಕೆ, ಸೀಬೆ, ನೀಲಗಿರಿ ತೋಟಗಳು, ರಸ್ತೆ ಬದಿಯಲ್ಲಿರುವ ಮರಗಳು ಬೆಂಕಿಗೆ ಆಹುತಿ ಆಗುತ್ತಿವೆ. ಬಿಸಿಲಿನ ತಾಪಮಾನ ಹೆಚ್ಚಳ, ಜೋರಾಗಿ ಗಾಳಿ ಬೀಸುವುದರಿಂದ ಬೆಂಕಿ ಹೊತ್ತಿಕೊಂಡರೆ ಅದು ವೇಗವಾಗಿ ಎಲ್ಲೆಡೆಯೂ ಹರಡಿಕೊಳ್ಳುತ್ತದೆ. ಅದನ್ನು ನಿಯಂತ್ರಿಸುವುದು ಕಷ್ಟವಾಗಲಿದೆ. ಹೀಗಾಗಿ ಅರಣ್ಯ ಇಲಾಖೆ ಕಾಡಂಚಿನ ಹಳ್ಳಿಗಳಲ್ಲಿ ಜಾಗೃತಿ ಮೂಡಿಸುತ್ತಿದೆ.

‘ಹೊಲಗಳ ಬದುವಿನಲ್ಲಿ ಹಾಗೂ ಕಾಡು ಪ್ರದೇಶಗಳಲ್ಲಿ ಬೆಳೆಯುವ ಒಣ ಹುಲ್ಲಿಗೆ ಬೆಂಕಿ ಹಚ್ಚುವುದು ಸಾಮಾನ್ಯವಾಗಿದೆ. ಹುಲ್ಲು ಸುಟ್ಟರೆ ಮುಂದಿನ ವರ್ಷ ಚೆನ್ನಾಗಿ ಬೆಳೆಯುತ್ತದೆ ಎಂಬ ತಪ್ಪು ಕಲ್ಪನೆ ಕೆಲವರಲ್ಲಿ ಇದೆ. ಆದರೆ, ಇದರಿಂದ, ಮಾನವ ಸೇರಿದಂತೆ ಅರಣ್ಯದಲ್ಲಿರುವ ಜೀವಸಂಕುಲ ನಾಶವಾಗುವ ಸಾಧ್ಯತೆ ಇದೆ’ ಎಂದು ಅರಣ್ಯ ವೀಕ್ಷಕರಾದ ಶ್ರೀನಾಥ್ ಮತ್ತು ಶ್ರೀಧರ್ ಹೇಳಿದರು.

‘ಕಾಡು, ಗುಡ್ಡ ಪ್ರದೇಶಗಳಲ್ಲಿ ಅನೇಕ ಜೀವರಾಶಿಗಳು ಆಶ್ರಯ ಪಡೆದಿರುತ್ತವೆ. ಅವು ಪರಿಸರ ಸಮತೋಲನದಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಹುಲ್ಲು, ಕಾಡಿನ ಪೊದೆಗಳಲ್ಲಿ ಅನೇಕ ಪಕ್ಷಿಗಳು, ಓತಿಗಳು, ಹಲ್ಲಿಗಳು, ಕೀಟಗಳು, ಸರೀಸೃಪಗಳು, ನವಿಲುಗಳು ಇಟ್ಟಿರುವ ಮೊಟ್ಟೆಗಳು ಬೆಂಕಿಯ ಕೆನ್ನಾಲಿಗೆಗೆ ಸಿಲುಕಿ ನಾಶವಾಗುತ್ತವೆ. ಮೊಲ, ಇಲಿ, ಅಳಿಲು, ಜಿಂಕೆಯ ಮರಿಗಳು ಬೆಂಕಿಯಲ್ಲಿ ಬೆಂದು ಹೋಗುತ್ತವೆ. ಜೊತೆಗೆ ಆಹಾರ ಸರಪಳಿ ತುಂಡಾಗುವ ಸಾಧ್ಯತೆ ಇದೆ. ಇದು ರೈತರ ಬೆಳೆಗಳ ಮೇಲೆ ಪರಿಣಾಮ ಬೀರುತ್ತದೆ’ ಎಂದು ಅವರು ವಿವರಿಸಿದರು.

‘ಕಾಡಿಗೆ ಬೆಂಕಿ ಇಟ್ಟರೆ ಗಿಡ–ಮರಗಳು ಸುಡುವುದು ಅಷ್ಟೇ ಅಲ್ಲದೇ ಮಣ್ಣಿನ ಸವಕಳಿಗೂ ಕಾರಣವಾಗುತ್ತದೆ. ಇದರಿಂದ ಹಲವಾರು ಸಸ್ಯ ಪ್ರಭೇದಗಳು ಕಣ್ಮರೆಯಾಗುತ್ತವೆ. ಅಂತರ್ಜಲಮಟ್ಟ ಕುಸಿಯುವ ಜೊತೆಗೆ ಮಳೆ ಪ್ರಮಾಣ ಕಡಿಮೆಯಾಗುತ್ತದೆ’ ಎಂದು ತಿಳಿಸಿದರು.

> **ಅರಣ್ಯಕ್ಕೆ ಬರುವ ಪ್ರವಾಸಿಗರು ಪ್ಲಾಸ್ಟಿಕ್ ತ್ಯಾಜ್ಯ ಎಸೆದು ಹೋಗುತ್ತಿದ್ದಾರೆ. ಇದಕ್ಕೆ ಬೆಂಕಿ ತಗುಲಿ ಇನ್ನೂ ಹೆಚ್ಚು ಅಪಾಯವಾಗುವ ಸಾಧ್ಯತೆ ಇದೆ**
>
> **ಚಿಕ್ಕಣ್ಣ,** ಪರಿಸರ ಪ್ರೇಮಿ

ಬೀದಿ ನಾಟಕದ ಮೂಲಕ ಜಾಗೃತಿ

ಕಾಡಿನಲ್ಲಿ ಬೆಂಕಿ ಬೀಳುವುದನ್ನು ತಪ್ಪಿಸಲು ಈಗಾಗಲೇ ಇಲಾಖೆಯಿಂದ ಫೈರ್‌ಲೈನ್ ಹಾಕಲಾಗಿದೆ. ಇದಕ್ಕಾಗಿ 9 ಜನ ವೀಕ್ಷಕರನ್ನು ನೇಮಿಸಲಾಗಿದೆ ಎಂದು ನೆಲಮಂಗಲ ವಲಯ ಅರಣ್ಯಾಧಿಕಾರಿ ಎಸ್. ಶ್ರೀಧರ್ ತಿಳಿಸಿದರು. ಜನವರಿಯಲ್ಲಿ ಕಾಡಂಚಿನ ಗ್ರಾಮಗಳಲ್ಲಿ ಕಾಡಿಗೆ ಬೆಂಕಿ ಬೀಳದಂತೆ, ಬಿದ್ದರೆ ಅದನ್ನು ನಂದಿಸುವ ಹಾಗೂ ಅರಣ್ಯ ಇಲಾಖೆಗೆ ಮಾಹಿತಿ ನೀಡುವ ಕುರಿತು ಜಾಗೃತಿ ಮೂಡಿಸಲಾಗಿದೆ. ಬೀದಿ ನಾಟಕಗಳನ್ನು ಮಾಡುವ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗಿದೆ.

ಚಪ್ಪಲಿಯಲ್ಲಿ ಬಡಿದಾಡಿದ ಮಹಿಳೆಯರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಜೆಸ್ಟಿಕ್‌ನಿಂದ ಪೀಣ್ಯಕ್ಕೆ ಹೊರಟಿದ್ದ ಬಿಎಂಟಿಸಿ ಬಸ್‌ನಲ್ಲಿ ಮಹಿಳಾ ಪ್ರಯಾಣಿಕರಿಬ್ಬರು ಚಪ್ಪಲಿ ಹಿಡಿದು ಪರಸ್ಪರ ಹೊಡೆದಾಡಿಕೊಂಡಿದ್ದು, ಇದರ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

ಬಸ್ಸಿನ ಕಿಟಕಿ ವಿಚಾರಕ್ಕೆ ಮಾತಿಗೆ ಮಾತು ಬೆಳೆದು ಮಾರಾಮಾರಿ ನಡೆದಿರುವುದಾಗಿ ಗೊತ್ತಾಗಿದೆ. ಮಹಿಳೆಯರಿಬ್ಬರ ಜಗಳದ ವಿಡಿಯೊವನ್ನು ಚಿತ್ರೀಕರಿಸಿರುವ ಸಹ ಪ್ರಯಾಣಿಕರೊಬ್ಬರು, ಅದನ್ನು ಜಾಲತಾಣಗಳಲ್ಲಿ ಹರಿಬಿಟ್ಟಿದ್ದಾರೆ. ಹಲವರು ಹಂಚಿಕೊಂಡಿದ್ದಾರೆ.

ಬಿಎಂಟಿಸಿ ಬಸ್‌ನಲ್ಲಿ (ಕೆಎ 57 ಎಫ್ 4255) ಹೆಚ್ಚು ಪ್ರಯಾಣಿಕರಿದ್ದರು. ಮುಂದಿನ ಸೀಟ್‌ನಲ್ಲಿ ಕುಳಿತಿದ್ದ ಮಹಿಳೆಗೂ ಹಾಗೂ ಹಿಂದಿನ ಸೀಟಿನಲ್ಲಿದ್ದ ಮಹಿಳೆಗೂ ಕಿಟಕಿ ತೆರೆಯುವ ವಿಚಾರಕ್ಕೆ ಜಗಳ ಶುರುವಾದ ದೃಶ್ಯ ವಿಡಿಯೊದಲ್ಲಿದೆ.

ಮಾತಿಗೆ ಮಾತು ಬೆಳೆದು ಇಬ್ಬರೂ ಪರಸ್ಪರ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು. ಇಬ್ಬರೂ ತಮ್ಮ ಚಪ್ಪಲಿಗಳನ್ನು ಕೈಯಲ್ಲಿ ಹಿಡಿದು, ಪರಸ್ಪರ ಹೊಡೆದಾಡಿಕೊಂಡಿದ್ದರು. ಮಧ್ಯ ಪ್ರವೇಶಿಸಿದ್ದ ಸಹ ಪ್ರಯಾಣಿಕರು, ಇಬ್ಬರನ್ನೂ ಸಮಾಧಾನ ಪಡಿಸಿ ಪರಿಸ್ಥಿತಿ ತಿಳಿಗೊಳಿಸಿರುವುದು ದೃಶ್ಯದಲ್ಲಿದೆ. ಈ ಘಟನೆ ಬಗ್ಗೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿಲ್ಲ.



ಎಸ್.ಪಿ. ವರದರಾಜು ಪ್ರಶಸ್ತಿಯನ್ನು ರಂಗಭೂಮಿ ಕಲಾವಿದೆ ಅನ್ನಪೂರ್ಣ ಸಾಗರ ಮತ್ತು ಚಿತ್ರ ನಿರ್ದೇಶಕ ಬಿ.ಮಲ್ಲೇಶ್ ಅವರಿಗೆ ಪ್ರದಾನ ಮಾಡಲಾಯಿತು. ಬರಗೂರು ರಾಮಚಂದ್ರಪ್ಪ, ರಾಘವೇಂದ್ರ ರಾಜಕುಮಾರ್, ಗ್ರೀನ್ ಹೌಸ್ ವಾಸು, ಗಿರೀಶ್ ಕಾಸರವಳ್ಳಿ ಉಪಸ್ಥಿತರಿದ್ದರು. –ಪ್ರಜಾವಾಣಿ ಚಿತ್ರ

‘ವರದಪ್ಪ ಸ್ಕ್ರಿಪ್ಟ್ ಡಾಕ್ಟರ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಲ್ಲರೂ ಪ್ರೀತಿಯಿಂದ ವರದಪ್ಪ, ವರದಣ್ಣ ಎಂದು ಕರೆಯುತ್ತಿದ್ದ ವರದರಾಜು ಅವರು ಅತ್ಯುತ್ತಮ ಸ್ಕ್ರಿಪ್ಟ್ ಡಾಕ್ಟರ್ ಆಗಿದ್ದರು’ ಎಂದು ಚಿತ್ರ ನಿರ್ದೇಶಕ ಗಿರೀಶ್ ಕಾಸರವಳ್ಳಿ ನೆನಪು ಮಾಡಿಕೊಂಡರು.

ನಗರದಲ್ಲಿ ಗುರುವಾರ ಎಸ್.ಪಿ. ವರದರಾಜು ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

‘ಕೇವಲ 2ನೇ ತರಗತಿ ಕಲಿತಿದ್ದ ವರದಪ್ಪ ತಮ್ಮ ಅಗಾಧ ಓದಿನ ಪರಿಣಾಮದಿಂದಾಗಿ ಸಂಭಾಷಣೆಯನ್ನೇ ಬದಲಾಯಿಸುವಷ್ಟು ಜ್ಞಾನ ಹೊಂದಿದ್ದರು’ ಎಂದು ತಿಳಿಸಿದರು.

‘ಬಾಲ್ಯದಲ್ಲಿ ರಾಜಕುಮಾರ್ ಅವರಂತೆ ವರದಪ್ಪ ಕೂಡ ನಟನೆ ಮಾಡುತ್ತಿದ್ದರು. ಹಾಸ್ಯ ಮತ್ತು ತುಂಟ ಪಾತ್ರಗಳನ್ನು ಮಾಡುತ್ತಿದ್ದುದರಿಂದ ವರದಪ್ಪ ಅವರೇ ಹೆಚ್ಚು ಚಪ್ಪಾಳೆ ಗಿಟ್ಟಿಸಿಕೊಳ್ಳುತ್ತಿದ್ದರು. ಒಂದು ವಯಸ್ಸು ದಾಟಿದ ಮೇಲೆ ನಟನೆಯ ಕ್ಷೇತ್ರವನ್ನು ಅಣ್ಣನಿಗೆ ಬಿಟ್ಟು, ಅವರು ಹಿಂದಕ್ಕೆ ಸರಿದರು’ ಎಂದು ಹೇಳಿದರು.

‘ಎಸ್.ಪಿ. ವರದರಾಜು ಆತ್ಮೀಯ ಬಳಗ’ದ ಬರಗೂರು ರಾಮಚಂದ್ರಪ್ಪ ಮಾತನಾಡಿ, ‘ಬಳಗದಿಂದ 18 ವರ್ಷಗಳಿಂದ ಪ್ರಶಸ್ತಿ ಪ್ರದಾನ ಮಾಡುತ್ತಾ ಬಂದಿದ್ದೇವೆ. ವರದರಾಜು ಅವರು ಪ್ರೇಕ್ಷಕ ಕೇಂದ್ರಿತ ವಿವೇಕವನ್ನು ಹೊಂದಿದ್ದರು. ರಾಜಕುಮಾರ್ ಅವರ ಯಾವ ಚಿತ್ರದಲ್ಲಿಯೂ ಅಶ್ಲೀಲ, ದ್ವಂದ್ವಾರ್ಥ ಸಂಭಾಷಣೆ ಬಾರದಂತೆ ವರದರಾಜು ನೋಡಿಕೊಳ್ಳುತ್ತಿದ್ದರು. ರಾಜಕುಮಾರ್ ಅವರ ಚಿತ್ರಗಳಲ್ಲಿ ಮನುಷ್ಯ ಸಂಬಂಧಗಳಿದ್ದವು. ಭಕ್ತಿಯನ್ನೇ ಬಂಡವಾಳ ಮಾಡಿಕೊಂಡಿರುವ ಈ ಕಾಲದಲ್ಲಿ, ರಾಜಕುಮಾರ್ ಅವರ ಭಕ್ತಿ ಪ್ರಧಾನ ಚಿತ್ರಗಳನ್ನು ನೋಡಿದರೆ ಭಕ್ತಿ ಅಂದರೆ ಬಂಡವಾಳ ಅಲ್ಲ, ಅದು ಸಂದೇಶ ಎಂಬುದನ್ನು ಕಾಣಬಹುದು’ ಎಂದರು.

ರಂಗನಟಿ ಅನ್ನಪೂರ್ಣ ಸಾಗರ, ಚಿತ್ರನಿರ್ದೇಶಕ ಬಿ. ಮಲ್ಲೇಶ್ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ನಿರ್ಮಾಪಕ ರಾಘವೇಂದ್ರ ರಾಜಕುಮಾರ್ ಉಪಸ್ಥಿತರಿದ್ದರು.

ಹಣ ಕಳೆದುಕೊಂಡ ರ‍್ಯಾಪಿಡೊ ಚಾಲಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಹಕರ ಸೋಗಿನಲ್ಲಿ ರ‍್ಯಾಪಿಡೊ ಬೈಕ್ ಟ್ಯಾಕ್ಸಿ ಕಾಯ್ದಿರಿಸಿ ಚಾಲಕರ ಬ್ಯಾಂಕ್ ಖಾತೆಯಿಂದ ಹಣ ವರ್ಗಾಯಿಸಿಕೊಂಡು ವಂಚಿಸಲಾಗುತ್ತಿದ್ದು, ಈ ಬಗ್ಗೆ ಬ್ಯಾಡರಹಳ್ಳಿ ಠಾಣೆಯಲ್ಲಿ ಮೂರು ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

‘ರ‍್ಯಾಪಿಡೊ ಬೈಕ್ ಟ್ಯಾಕ್ಸಿಯ ಮೂವರು ಚಾಲಕರು ಪ್ರತ್ಯೇಕವಾಗಿ ದೂರು ನೀಡಿದ್ದಾರೆ. ಅಪರಿಚಿತ ಸೈಬರ್ ವಂಚಕರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಚಾಲಕ ಕುಮಾರ್ ಅವರ ಟ್ಯಾಕ್ಸಿ ಕಾಯ್ದಿರಿಸಿದ್ದ ಆರೋಪಿ, ₹ 4,000 ವರ್ಗಾಯಿಸಿಕೊಂಡು ವಂಚಿಸಿದ್ದಾನೆ. ಅಂದ್ರಹಳ್ಳಿ ನಿವಾಸಿಯಾಗಿರುವ ಚಾಲಕ ಆನಂದ್, ₹ 12,000 ಕಳೆದುಕೊಂಡಿದ್ದಾರೆ. ಹೇರೋಹಳ್ಳಿಯ ಮಹದೇಶ್ವರ ನಗರ ನಿವಾಸಿ ಭಾನುಪ್ರಕಾಶ್ ಬ್ಯಾಂಕ್ ಖಾತೆಯಿಂದ ಸೈಬರ್ ವಂಚಕರು ₹ 23,000 ವರ್ಗಾಯಿಸಿಕೊಂಡಿದ್ದಾರೆ’ ಎಂದು ತಿಳಿಸಿದರು.

‘ಟ್ಯಾಕ್ಸಿ ಕಾಯ್ದಿರಿಸುವ ವಂಚಕರು, ‘ನಮ್ಮ ಬಳಿಯ ಹಣವನ್ನು ನಿಮ್ಮ ಖಾತೆಗೆ ಹಾಕುತ್ತೇವೆ. ದಯವಿಟ್ಟು ಸ್ನೇಹಿತರು, ಪತ್ನಿ ಹಾಗೂ ಸಂಬಂಧಿಕರಿಗೆ ವರ್ಗಾಯಿಸಿ’ ಎಂದಿದ್ದರು. ಇದಾದ ನಂತರ, ಹಣ ವರ್ಗಾವಣೆಯಾದ ಬಗ್ಗೆ ಚಾಲಕರ ಮೊಬೈಲ್‌ಗೆ ಸಂದೇಶ ಬಂದಿತ್ತು. ಈ ಸಂದೇಶ ನಂಬಿ ಚಾಲಕರು, ಆರೋಪಿಗಳು ಹೇಳಿದ್ದ ಖಾತೆಗಳಿಗೆ ಹಣ ಕಳುಹಿಸಿದ್ದರು. ಆದರೆ, ಚಾಲಕರ ಖಾತೆಗೆ ಯಾವುದೇ ಹಣ ವರ್ಗಾವಣೆ ಆಗಿರಲಿಲ್ಲ. ಸಂದೇಶ ಮಾತ್ರ ಬಂದಿತ್ತು. ನಂತರ ಚಾಲಕರು ಕರೆ ಮಾಡಿದಾಗ, ಆರೋಪಿಗಳ ಮೊಬೈಲ್‌ಗಳು ಸ್ವಿಚ್ ಆಫ್ ಆಗಿವೆ’ ಎಂದು ಪೊಲೀಸರು ಹೇಳಿದರು.

PUBLIC NOTICE

IN THE COURT OF THE XII ADDL. CITY CIVIL AND SESSIONS JUDGE (CCH-27), AT BENGALURU CITY

O.S. No. 6525/2012

BETWEEN:
M/s Poornaprajna House Building, Co-operative Society Ltd., Having its office at No. 390, 9th Main Road, Sri. Kumaraswamy Temple Road, Hanumanthanagar, Bangalore – 560019, Represented by its Secretary/Manager L. Nanjapppa S/o N. Lakshmaiah .....**PLAINTIFF**

AND

Smt. Puttamma and 78 ors ...... **DEFENDANTS**

NOTICE/SUMMONS TO THE DEFENDANTS NO. 2, 10, 11, 20, 26, 27, 30, 32, 35, 44, 63.

To,

D2. Smt. Munirathnamma D/o late Pillamuniyappa, Aged about 50 years, R/at Hemavathi Badavane, Vaddarapalya Village, Uttarahalli Hobli, Bengaluru – 560 061

D10. Smt. B S Vimala, Major, R/at No.9, Hemavathi Badavane, Vaddarapalya Village,Uttarahalli Hobli, Bengaluru – 560 061

D11. Smt. N Manjula, Major, R/at No.9, Hemavathi Badavane, Vaddarapalya Village, Uttarahalli Hobli, Bengaluru – 560 061

D20. Mr. K. Shivaprasad S/o Sri. K Anjaneyalu, Aged about 62 years, R/at No. 3, TTD Staff Quarters, Vyalikaval, Bengaluru – 560 003

D26. Sri. S Harish S/o K.V. Subramanya, Aged about 42 years R/at no. 13, 16th Main, Near Akshara Vidya Samsthe, A.G.S. Layout, Arehalli, Bengaluru – 560 061

D27. Sri. Manjunath C N S/o Narasimha Gowda, Aged about 41 years, R/at no. 94, 4th Cross, 1st Main, Ittamadu Main Road, Banashankari 3rd Stage, Bengaluru – 560 085

D30. Sri. R Chowdary S/o P Rajendra Naidu, Aged about 42 years R/at no. 5/2, Hanumagirinagara, 5th Cross, Chikkallasandra, Subramanyapura Post, Bengaluru – 560 061

D32. Sri. P.G. Dharmendra S/o Late Gurappa, Aged about 58 years, R/at no. 124/6, Arehalli (Vaddarapalya), Uttarahalli hobli, Bengaluru – 560 061

D35. Sri. Muralidhar Kudligi S/o K.N. Raghavendra Rao Aged about 58 years, R/at no. 37, Model LIC Colony, Mahalakshmi Layout, Bengaluru – 560 079

D 44. Sri. Narasimulu Naidu S/o Sri. Govinda Naidu Aged about 68 years, R/at No. 922, 7th Cross, BSK 1st Stage, 2nd Block, Bengaluru – 560 050

D63. Sri. C. Narasimhulu Reddy S/o Sri. Ramulu Reddy, Aged about 56 years R/at no. 49 'A', Sy. No. 11/1, Opp. BHCS Layout, Vallaba Nagar, Subramanyapura Post, Bengaluru – 560 061

Whereas, the above named plaintiff has instituted a suit against you in O.S.6525/2012 before The XII Addl' City Civil Judge (CCH-27), At Bangalore City seeking for the reliefs of Declaration, possession and mandatory injunction and other reliefs.

You are hereby summoned to appear before this Court on the 20th day of February, 2024 at 11AM in person or through advocate/pleader to answer questions to the claim and you are directed to produce on that day all the documents upon which you intend to rely in support of your evidence. Failing which the suit will be heard and determined as ex-parte.

SCHEDULE PROPERTY

All that piece and parcel of the property bearing Sy. No. 24/2 acquired in favour of the Society for the formation of the residential layout by the Government of Karnataka measuring 3A-11G situated at Vaddarapalya Village, Uttarahalli Hobli, Bengaluru South Taluk, Bengaluru, bounded on –

East By : Sites bearing No. 602 to 613 formed by the Society
West By : Sites bearing no. 583 to 591 formed by the Society
North By : Uttarahalli to Kengeri Main Road
South By : Sites bearing No. 594 to 603 formed by the Society

Given under my hand & seal of the Court, this the 07th day of February, 2024

Lawyers Inc,
Advocate and Solicitors, #15/2,
V.S Raju Road,12th Cross, Kumara Rao Park West, Bengaluru – 560020.

By Order of the Court,
Sd/-
Assistant Registrar,
City Civil Court, Bangalore

PERSONAL

Change of Name

CHANGE OF NAME
I, **NISAR AHMED KHAN KHADER** Residing at 56, 4th Main, Rajyothsavangar, BDA Layout, Yelachanahalli, Bangalore-560078, have changed my name to **NISAR AHMED KHAN** vide affidavit dated 8.2.2024 before Notary S.I. Balaguru, Bangalore. Henceforth I shall be known as **NISAR AHMED KHAN** only.

I, MUNMUN ROY, W/O ZEEL PARAGKUMAR SHAH Residing at 46054 Sobha Dream Acres Phase-2, Balagere, Varthur, Bangalore- 560087 have changed my Name to MUNMUN ROY SHAH vide Affidavit dated 07-02-2024 sworn before NOTARY VEENA. J, BANGALORE.

CHANGE OF NAME
I, **DAMODAR PRABHU,** R/at # 21, 4th Cross, Pattagarpalya, Bengaluru-79, have changed my name to **DAMODAR ANANTH PRABHU** vide affidavit dated 07-02-2024, before notary Shankarnarayan B. L, Bengaluru. Henceforth I shall be called **DAMODAR ANANTH PRABHU** only.

CHANGE OF NAME
I, **SRIDEVI G N,** R/at # 11/19, Srirama Nilaya, 5th Main, 5th Cross, Hosakerehalli, BSK 3rd Stage, Bengaluru - 560085 have changed my name to **SRIDEVI R K** vide affidavit dated 07-02-2024, before notary Shankarnarayan B. L, Bengaluru Henceforth I shall be called **SRIDEVI R K** only.

CHANGE OF NAME
I, **KAVITHA B** Residing at #226/1, Sai Dhyana Residency, 1st A Cross, 2nd G Main Road, 2nd Stage, Nagarabhavi, Near Ravi GYM, Bangalore-560072 have changed my name to **KAVITHA B S** vide affidavit dated 8/2/2024 before Notary Devaraja E, Bangalore. Henceforth I shall be known as **KAVITHA B S** only.

Lost

DOCUMENT LOST
I, **Shyamala Jagapathi.** residing at Ramya Nilaya, BTM Layout, Bannerghatta Road, Bangalore-76, have lost the original sale deed, Document **No. 3503/ 1996-97** located at **site No. 193,** 2nd Stage Layout, Beguru Hobli Arakere, Bangalore South. While Shifting residence Finders Please **Contact: 9566075052**

TENDER NOTICE

We welcome sealed bids for the provision of the listed categories to the hotels & restaurants mentioned below: **Nandhana Foods Pvt Ltd, SRR Foods India Pvt Ltd, Lasara Hotels Pvt Ltd,** The contract will cover a twelve-month duration starting from 1st April, 2024 to 31st March 2025 for our 26 Restaurant and 7 Hotels.

1. Fruits	15. Ready to Eat Foods
2. Vegetables (Local)	16. Printing Items
3. Frozen Green Peas, Corn & Food Items	17. Stationeries
4. Dairy Products	18. General Disposable Items
5. Milk & Dairy Products	19. Packaging
6. Poultry	20. Gel Fuel
7. Free range Eggs	21. Transport Vehicle
8. Fresh Mutton	22. Engineering - Hardware items
9. Fresh Fish & Sea Foods Frozen	23. Pest Control
10. Ice Cream	24. LPG Cylinders Commercial
11. Indian Groceries, Pulses, Tin Products & Juices	25. Duct Cleaning
	26. Sustainable Guest Amenities
12. Spices	27. Laundry Services (Linen & Uniforms)
13. Dry Fruits	
14. Fresh Cut Vegetables	28. Linen & Uniform

Tender forms, along with specifications, are available for collection at the Purchase Office of **Nandhana Foods Pvt Ltd, No 525, K R Garden, 8th Block, Koramangala, Bengaluru – 560 095**. They can be obtained at a cost of Rs.1000 per application from **09th February, 2024 until 20th February, 2024.** All sealed tenders to be **received 29.02.2024** and should be addressed to the **NANDHANA FOODS PVT LTD** Bangalore Purchase Committee. The Purchase Committee retains the right to accept or reject tenders in full or in part without providing any reasons.

Certification / Labelling for all products & temperature for chilled and frozen items as per FSSAI standard in madatory. HACCP / ISO certified vendors would be preferred.

ಹಿಟ್ ನಿರೀಕ್ಷೆಯಲ್ಲಿ ಪೃಥ್ವಿ ಅಂಬಾರ್


ಪೃಥ್ವಿ ಅಂಬಾರ್

ನಟ ಪೃಥ್ವಿ ಅಂಬಾರ್ ಕೈಯಲ್ಲಿ ಸದ್ಯ ನಾಲ್ಕೈದು ಸಿನಿಮಾಗಳಿವೆ. ಒಟಿಟಿಯಲ್ಲಿ ಪ್ರೇಕ್ಷಕರ ಮನಗೆದ್ದ ಈ ನಟ ಥಿಯೇಟ್ರಿಕಲ್ ಹಿಟ್ ನಿರೀಕ್ಷೆಯಲ್ಲಿದ್ದಾರೆ. ಅವರ ನಟನೆಯ 'ಜೂನಿ' ಇಂದು(ಫೆ.9) ತೆರೆಕಾಣುತ್ತಿದೆ. ಈ ಸಂದರ್ಭದಲ್ಲಿ ಅವರೊಂದಿಗಿನ ಮಾತುಕತೆ...

ಅಭಿಲಾಷ್ ಪಿ.ಎಸ್.

- **ಈ ತಿಂಗಳಲ್ಲೇ ಮೂರು ಸಿನಿಮಾ ಬಿಡುಗಡೆ!**

ಹೌದು. ಇಂದು(ಫೆ.9) 'ಜೂನಿ' ತೆರೆಕಾಣುತ್ತಿದೆ. ಫೆ.23ರಂದು 'ಫಾರ್ ರಿಜಿಸ್ಟ್ರೇಷನ್' ಹಾಗೂ 'ಮತ್ಸ್ಯಗಂಧ' ಬಿಡುಗಡೆಯಾಗುತ್ತಿದೆ. ಹೀಗೆ ಸಾಲು ಸಾಲಾಗಿ ಸಿನಿಮಾ ಬಿಡುಗಡೆ ಮಾಡಬೇಡಿ ಎಂದು ನಾನು ಚಿತ್ರತಂಡಗಳಲ್ಲಿ ಆದಷ್ಟು ಮನವಿ ಮಾಡಿದೆ. ಸಿನಿಮಾಗಳ ನಡುವೆ ಕನಿಷ್ಠ ಒಂದೂವರೆ ತಿಂಗಳು ಸಮಯ ಕೊಡಿ ಎಂದಿದ್ದೆ. ಆದರೆ ಮುಂದಿನ ಲೋಕಸಭೆ ಚುನಾವಣೆ, ಪರೀಕ್ಷೆಗಳು, ಐಪಿಎಲ್ ಹೀಗೆ ಹಲವು ಕಾರಣಗಳಿಂದಾಗಿ ನಿರ್ಮಾಪಕರು ಈಗಲೇ ಸಿನಿಮಾ ಬಿಡುಗಡೆಗೆ ನಿರ್ಧರಿಸಿದ್ದಾರೆ. ಅವರ ಲೆಕ್ಕಾಚಾರಕ್ಕೆ ನಾನು ವಿರೋಧಿಸಿಲ್ಲ. ಪ್ರಸ್ತುತ ಒಂದು ಸಿನಿಮಾಗೆ ಪ್ರಚಾರ ಮಾಡುವುದೇ ಕಷ್ಟ. ಹೀಗಿದ್ದಾಗ ಮೂರು ಸಿನಿಮಾ. ಆದರೂ ಎಲ್ಲಾ ಸಿನಿಮಾಗಳಿಗೂ ಪ್ರಚಾರದಲ್ಲಿ ನ್ಯಾಯ ಒದಗಿಸುವ ಪ್ರಯತ್ನ ನನ್ನದಾಗಿದೆ.

- **ಪೃಥ್ವಿ ಒಟಿಟಿಯಲ್ಲಿ ಸ್ಟಾರ್. ಇದನ್ನು ಹೊರತುಪಡಿಸಿ ನಿಮ್ಮ ನಿರೀಕ್ಷೆ ಏನು?**

ಒಟಿಟಿಯಲ್ಲಿ ನನ್ನ ಸಿನಿಮಾಗಳು ಬಿಡುಗಡೆಯಾದಾಗ ಜನರು ನೆಚ್ಚಿಕೊಂಡಿದ್ದಾರೆ. ಆದರೆ ಚಿತ್ರಮಂದಿರದಲ್ಲಿ ನನ್ನ ಸಿನಿಮಾ ಹಿಟ್ ಆಗಬೇಕಾದ ಅವಶ್ಯಕತೆ ತುಂಬಾ ಇದೆ. ಈ ರೀತಿಯ ಒಂದು ಹಿಟ್ ಬೇಕೇ ಬೇಕು. ಏಕೆಂದರೆ ಅದರ ಪರಿಣಾಮವೇ ಬೇರೆಯಾಗಿರುತ್ತದೆ. ನನ್ನ ಪಾತ್ರಗಳು ಒಟಿಟಿಯಲ್ಲಿ ಹೆಚ್ಚಿನ ಗಮನಸೆಳೆದ ಕಾರಣದಿಂದಾಗಿ ಪ್ರಯೋಗಾತ್ಮಕ ಪಾತ್ರಗಳು ಹೆಚ್ಚಾಗಿ ಬರಲಾರಂಭಿಸಿದವು. ನಿರ್ದೇಶಕರು ಇಂತಹ ಪಾತ್ರಗಳಿಗೆ ನಾನು ಸೂಕ್ತ ಎಂದು ಭಾವಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಹೊಸ ಹೊಸ ಪ್ರೊಡಕ್ಷನ್ ಹೌಸ್‌ಗಳ ಜೊತೆ, ನಿರ್ದೇಶಕರ ಜೊತೆ ಕೆಲಸ ಮಾಡುತ್ತಿದ್ದೇನೆ. 'ಜೂನಿ', 'ಮತ್ಸ್ಯಗಂಧ' ಸಿನಿಮಾಗಳು ಇದಕ್ಕೆ ಸಾಕ್ಷಿ.

ನಾನು ಬಾಕ್ಸ್ ಆಫೀಸ್ ಗಳಿಕೆ ಎಂಬ ಪದದ ಹಿಂದೆ ಬಿದ್ದಿಲ್ಲ. ಹೀಗಾಗಿದ್ದರೆ 'ದೂರದರ್ಶನ', 'ಜೂನಿ'ಯಂತಹ ಸಿನಿಮಾಗಳನ್ನು ನಾನು ಒಪ್ಪಿಕೊಳ್ಳುತ್ತಿರಲಿಲ್ಲ. ಮಾರುಕಟ್ಟೆ ಬಗ್ಗೆ ತಲೆಕೆಡಿಸಿಕೊಂಡವನಲ್ಲ. ಶೂನ್ಯದಿಂದ ಬಂದಿದ್ದೇನೆ; ಕಳೆದುಕೊಳ್ಳಲು ಏನೂ ಇಲ್ಲ. ಹೀಗಾಗಿ ಕಥೆ ನನ್ನನ್ನು ಕಾಡಿದರೆ ಸಿನಿಮಾ ಮಾಡುತ್ತೇನೆ. ಈ ದಾರಿಯಲ್ಲಿ ಅನ್ವೇಷಣೆ ನಿರಂತರ.

- **'ಜೂನಿ' ಚಿತ್ರದಲ್ಲಿನ ನಿಮ್ಮ ಪಾತ್ರ...**

'ಜೂನಿ' ಒಂದು ಪ್ರಯೋಗಾತ್ಮಕ ಪ್ರೇಮಕಥೆ. ವೈಭವ್ ಮಹಾದೇವ್ ಸಾರಥ್ಯದ ಈ ಸಿನಿಮಾ ಸದ್ದಿಲ್ಲದೇ ಮುಗಿಸಿದ್ದೆವು. ಅಂತಿಮ ಪ್ರಾಡಕ್ಟ್ ಸಿದ್ಧವಾದ ಬಳಿಕವಷ್ಟೇ ನಾವು ಸಿನಿಮಾವನ್ನು ಘೋಷಿಸಿದ್ದೆವು. ಒಂದು ರೀತಿಯಲ್ಲಿ ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಮೂಡಿಸುವ ಸಿನಿಮಾ ಇದಾಗಿದೆ. ಈ ವಿಷಯವನ್ನು ಮನರಂಜನಾತ್ಮಕವಾಗಿ ನಿರ್ದೇಶಕರು ಇಲ್ಲಿ ಹೇಳಿದ್ದಾರೆ. 'ಪಾರ್ಥ' ಎಂಬ ಪಾತ್ರದಲ್ಲಿ ನಾನು ನಟಿಸುತ್ತಿದ್ದೇನೆ. ತನಗೆ ಅರಿವಿಲ್ಲದೇ 'ಡಿಸೋಸಿಯೇಟಿವ್ ಐಡೆಂಟಿಟಿ ಡಿಸಾರ್ಡರ್'ನಿಂದ ಬಳಲುತ್ತಿರುವ ಹುಡುಗಿಯನ್ನು ಪ್ರೀತಿಸಿದಾತ. ಆಕೆಗೆ ಎರಡು ಮನಃಸ್ಥಿತಿ. ಒಂದು 'ಜೂನಿ', ಮತ್ತೊಬ್ಬಳು 'ಮಾನ್ಸಿ'. ಇಂತಹ ಅನಾರೋಗ್ಯದಿಂದ ಬಳಲುತ್ತಿರುವ ನೈಜ ವ್ಯಕ್ತಿಯನ್ನು ಆಧರಿಸಿ ಸಿನಿಮಾ ಹೆಣೆಯಲಾಗಿದೆ.

ಸಾಮಾನ್ಯವಾಗಿ ಇಂತಹ ಕಾಯಿಲೆ ಉಳ್ಳವರಿಂದ ಸಮಾಜಕ್ಕೆ ತೊಂದರೆ ಇದೆ ಎಂದೇ ಸಿನಿಮಾಗಳಲ್ಲಿ ತೋರಿಸಲಾಗುತ್ತದೆ. ಸರಣಿ ಹಂತಕರಾಗಿ ಇವರನ್ನು ಬಿಂಬಿಸಲಾಗುತ್ತದೆ. ಆದರೆ ಅವರೂ ನಮ್ಮಂತೆಯೇ ಮನುಷ್ಯರು ಎನ್ನುವುದನ್ನು ನಿರ್ದೇಶಕರು ಇಲ್ಲಿ ಬಿಂಬಿಸಿದ್ದಾರೆ. 'ಪಾರ್ಥ' ಎಂಬ ಪಾತ್ರದ ಮೂಲಕ ನಾನು ಪ್ರೇಕ್ಷಕರ ಜೊತೆ ಮಾತನಾಡುತ್ತೇನೆ. 'ಜೂನಿ' ಕಥೆಯನ್ನು ನನ್ನ ಮೂಲಕ ನಿರ್ದೇಶಕರು ಹೇಳುತ್ತಾರೆ. ಬಹಳ ನ್ಯಾಚುರಲ್ ಆಗಿ ಈ ಸಿನಿಮಾದ ಚಿತ್ರೀಕರಣ ನಡೆದಿದೆ.

- **ಹೊಸ ಪ್ರಾಜೆಕ್ಟ್‌ಗಳು ಯಾವುದು?**

'ಮತ್ಸ್ಯಗಂಧ' ನಮ್ಮ ಮಣ್ಣಿನ ಕಥೆ. ಉತ್ತರ ಕನ್ನಡದ ಘಮಲು ಇರುವ ಈ ಸಿನಿಮಾದಲ್ಲಿ ಮೊದಲ ಬಾರಿ ಪೊಲೀಸ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಪ್ರಮೋದ್ ಜೊತೆಯಾಗಿ, ಗಿರೀಶ್ ನಿರ್ದೇಶನದ 'ಭುವನಂ ಗಗನಂ' ಸಿನಿಮಾ ಹಾಗೂ ನಾಗತಿಹಳ್ಳಿ ಚಂದ್ರಶೇಖರ ಅವರ ಹೊಸ ಪ್ರಾಜೆಕ್ಟ್‌ನಲ್ಲಿ ನಟಿಸುತ್ತಿದ್ದೇನೆ. ಮಂಗಳೂರು ಮೂಲದ ನಿರ್ಮಾಪಕ ಹರಿಪ್ರಸಾದ್ ನಿರ್ಮಾಣದ ಹೊಸ ಸಿನಿಮಾದ ಮಾತುಕತೆ ನಡೆಯುತ್ತಿದೆ. ಇದನ್ನು ಅಶ್ವಿನ್ ನಿರ್ದೇಶಿಸುತ್ತಿದ್ದಾರೆ. 'ದಿಯಾ' ಸಿನಿಮಾ ಮರಾಠಿಯಲ್ಲಿ ಬಿಡುಗಡೆಗೊಂಡ ಬಳಿಕ ಆ ಕಡೆಯಿಂದಲೂ ಹಲವು ಅವಕಾಶಗಳು ಬಂದಿವೆ. ಆದರೆ ನನ್ನನ್ನು ಆಕರ್ಷಿಸಿದ ಕಥೆಗಳು ಇರಲಿಲ್ಲ ಎನ್ನುವ ಕಾರಣಕ್ಕೆ ತಿರಸ್ಕರಿಸಿದ್ದೇನೆ. ❖

ಡಿಸ್ಟಿಂಕ್ಷನ್ ಪಡೆದರೂ 'ಜಸ್ಟ್ ಪಾಸ್'


ಪ್ರಣತಿ

ಅಲ್ಲೊಂದು ಕಾಲೇಜು ಇದೆ. ಅದರ ವಿಶೇಷ ಏನೆಂದರೆ ಅದು ಇರುವುದು 'ಜಸ್ಟ್ ಪಾಸ್' ಆದವರಿಗೆ ಮಾತ್ರ! ಇದರ ಪ್ರಾಂಶುಪಾಲ 'ದಳವಾಯಿ'(ರಂಗಾಯಣ ರಘು).

ನಿಜಜೀವನದಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ನಟಿ ಪ್ರಣತಿ, 'ಅಕ್ಷರ'ಳಾಗಿ ಈ ಕಾಲೇಜಿಗೆ ಸೇರ್ಪಡೆಯಾಗಿದ್ದಾರೆ. 'ಜಸ್ಟ್ ಪಾಸ್' ಸಿನಿಮಾ ಇಂದು(ಫೆ.9) ಬಿಡುಗಡೆಯಾಗುತ್ತಿದ್ದು, ಈ ಸಿನಿಮಾ ಮೂಲಕ ಚಂದನವನದಲ್ಲಿ ತಮ್ಮ ಪಯಣ ಆರಂಭಿಸಿದ್ದಾರೆ ಪ್ರಣತಿ. ಅವರೊಂದಿಗಿನ ಮಾತುಕತೆ ಇಲ್ಲಿದೆ.

'ಇದು ನನ್ನ ಮೊದಲನೆ ಸಿನಿಮಾ. ನಾನು ಬೆಂಗಳೂರಿನವಳು. ಪಿಇಎಸ್ ಕಾಲೇಜಿನಲ್ಲಿ ಎಂಸಿಎ ಶಿಕ್ಷಣ ಪಡೆಯುತ್ತಿರುವಾಗ, ಅಂದರೆ 2023ರಲ್ಲಿ 'ಜಸ್ಟ್ ಪಾಸ್' ಸಿನಿಮಾದ ಆಫರ್ ಬಂದಿತ್ತು. ಆಡಿಷನ್ ಮೂಲಕ ಸಿನಿಮಾಗೆ ಆಯ್ಕೆಯಾಗಿದ್ದೆ. ಪ್ರಸ್ತುತ ನನ್ನ ಶಿಕ್ಷಣ ಪೂರ್ಣಗೊಂಡಿದ್ದು, ಸಿನಿಮಾ ಕ್ಷೇತ್ರದತ್ತ ಚಿತ್ತವಿದೆ' ಎಂದು ಮಾತು ಆರಂಭಿಸಿದ ಪ್ರಣತಿ, ನಟನೆಯತ್ತ ಒಲವು ಮೂಡಿದ್ದು ಹೇಗೆ ಎನ್ನುವುದರತ್ತ ಮಾತು ಹೊರಳಿಸಿದರು.

'ನಾನು ಏಳನೇ ತರಗತಿಯಲ್ಲಿ ಇರುವಾಗ ಚಿಂಟು ಟಿ.ವಿಯಲ್ಲಿ ಆ್ಯಂಕರಿಂಗ್ ಮಾಡುತ್ತಿದ್ದೆ. ಇದಾದ ಬಳಿಕ ಎಸ್ಸೆಸ್ಸೆಲ್ಸಿಯಲ್ಲಿ ಇರುವಾಗ ಶ್ರುತಿ ನಾಯ್ಡು ಅವರ 'ಪುನರ್ ವಿವಾಹ' ಧಾರಾವಾಹಿಯಲ್ಲಿ ಒಂದು ಸಣ್ಣ ಪಾತ್ರ ದೊರಕಿತ್ತು. ನಂತರ ಅದೇ ಬ್ಯಾನರ್‌ನಲ್ಲಿ ನಿರ್ಮಾಣವಾದ 'ಬ್ರಹ್ಮಗಂಟು' ಧಾರಾವಾಹಿ ಮಾಡಿದರು. ಅದರಲ್ಲಿ ಐದು ವರ್ಷ 'ಪ್ರಣತಿ' ಎಂಬ ಪಾತ್ರದಲ್ಲಿ ನಟಿಸಿದ್ದೆ. ಶಿಕ್ಷಣದ ಜೊತೆಜೊತೆಗೇ ನಟನೆಯೂ ಮುಂದುವರಿದಿತ್ತು. ಅಲ್ಲಿಂದ 'ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್' ರಿಯಾಲಿಟಿ ಶೋನಲ್ಲಿ ರನ್ನರ್‌ಅಪ್ ಆದೆ. ಡಿಗ್ರಿ ಬಳಿಕ ಸ್ನಾತಕೋತ್ತರ ಪದವಿ ಪಡೆಯುವ ಸಂದರ್ಭದಲ್ಲಿ ನಟನೆಯಿಂದ ಕೊಂಚ ದೂರ ಉಳಿದಿದ್ದೆ. ಶಿಕ್ಷಣದತ್ತಲೇ ನನ್ನ ಗಮನವಿತ್ತು. ಹೀಗಾಗಿ ಎಂಸಿಎಯ ಕೊನೆಯ ವರ್ಷದಲ್ಲಿ ಸಿನಿಮಾ ಒಪ್ಪಿಕೊಂಡೆ' ಎನ್ನುತ್ತಾರೆ ಪ್ರಣತಿ.

'ಧಾರಾವಾಹಿಯೇ ನನ್ನ ನಟನಾ ಶಾಲೆ': 'ಧಾರಾವಾಹಿಯೇ ನನ್ನ ಮೊದಲ ವೇದಿಕೆ ಹಾಗೂ ಆಧಾರಸ್ತಂಭ. ನಟನೆಯೇ ತಿಳಿಯದಿದ್ದ ನನಗೆ ಧಾರಾವಾಹಿ ಪಾಠಶಾಲೆಯಾಗಿತ್ತು. ನನ್ನ ನಟನಾ ಶಾಲೆಯೇ 'ಬ್ರಹ್ಮಗಂಟು' ಧಾರಾವಾಹಿ. ನನ್ನ ನಟನೆಗೆ ಸಾಣೆ ಹಿಡಿದವರು ರಮೇಶ್ ಇಂದಿರಾ ಅವರು' ಎಂದರು.

'ಈ ಸಿನಿಮಾದಲ್ಲಿ ರಂಗಾಯಣ ರಘು, ಸುಚೇಂದ್ರ ಪ್ರಸಾದ್ ಮುಂತಾದ ದೊಡ್ಡ ನಟರ ಜೊತೆ ತೆರೆ ಹಂಚಿಕೊಳ್ಳುವ ಅವಕಾಶ ಲಭಿಸಿದೆ. ಕೆಲವು ದೃಶ್ಯಗಳಲ್ಲಿ ಅವರ ನಟನೆಯನ್ನು ನೋಡಿ ನಾವು ನಮ್ಮ ನಟನೆಯನ್ನು ಮತ್ತಷ್ಟು ಸುಧಾರಿಸಿಕೊಂಡದ್ದೂ ಇದೆ' ಎಂದು ಚಿತ್ರೀಕರಣದ ಅನುಭವ ಬಿಚ್ಚಿಟ್ಟರು ಪ್ರಣತಿ.

ಜಸ್ಟ್ ಪಾಸ್ ಅಲ್ಲ ಡಿಸ್ಟಿಂಕ್ಷನ್: 'ನಿಜಜೀವನದಲ್ಲಿ ನಾನು 'ಜಸ್ಟ್ ಪಾಸ್' ಅಲ್ಲವೇ ಅಲ್ಲ. ಎಲ್ಲವುದರಲ್ಲೂ ಫಸ್ಟ್ ಕ್ಲಾಸ್ ಅಥವಾ ಡಿಸ್ಟಿಂಕ್ಷನ್ ಪಡೆದಿದ್ದೇನೆ. ಸಿನಿಮಾದಲ್ಲಷ್ಟೇ ಜಸ್ಟ್ ಪಾಸ್. 'ಅಕ್ಷರ' ಎಂಬ ಪಾತ್ರದಲ್ಲಿ ನಾನು ನಟಿಸುತ್ತಿದ್ದೇನೆ. ಬಹಳ ಮೃದು ಸ್ವಭಾವದವಳು ಈಕೆ. ಅಪ್ಪ-ಅಮ್ಮನಿಗಿಂತಲೂ ಅಜ್ಜ-ಅಜ್ಜಿಯನ್ನು ಹಚ್ಚಿಕೊಂಡವಳು. ಈ ಸಿನಿಮಾ ಕೇವಲ ಕಾಲೇಜು ಕಥೆಯಲ್ಲ. ಇದರಲ್ಲಿ ಎಲ್ಲ ಅಂಶಗಳೂ ಇವೆ. ಗೆಳೆತನ, ಅಪ್ಪ-ಅಮ್ಮನ ಪ್ರೀತಿ, ಜಸ್ಟ್ ಪಾಸ್ ಆದವರೂ ಸಾಧನೆಯ ಶಿಖರವೇರಬಲ್ಲರು ಹೀಗೆ ಹಲವು ವಿಷಯಗಳನ್ನು ಇಟ್ಟುಕೊಂಡು ನಿರ್ದೇಶಕರಾದ ಕೆ.ಎಂ. ರಘು ಕಥೆ ಹೆಣೆದಿದ್ದಾರೆ' ಎಂದ ಪ್ರಣತಿ ಸಿನಿಮಾ ಕ್ಷೇತ್ರದಲ್ಲೇ ಮುಂದುವರಿಯುವ ಮುನ್ಸೂಚನೆ ನೀಡಿ ಮಾತಿಗೆ ವಿರಾಮವಿತ್ತರು. ❖

ಇವನೇ 'ಸತ್ಯ ಸನ್ ಆಫ್ ಹರಿಶ್ಚಂದ್ರ'

'ರಂಗಿತರಂಗ' ಬಳಿಕ ನಿರೂಪ್ ಭಂಡಾರಿ ಹಾಗೂ ಸಾಯಿಕುಮಾರ್ ಮತ್ತೊಮ್ಮೆ ಜೊತೆಯಾಗಿ ನಟಿಸುತ್ತಿರುವ ಹೊಸ ಪ್ರಾಜೆಕ್ಟ್ ಇತ್ತೀಚೆಗಷ್ಟೇ ಘೋಷಣೆಯಾಗಿತ್ತು. ಇದೀಗ ಚಿತ್ರತಂಡ ಸಿನಿಮಾದ ಶೀರ್ಷಿಕೆಯನ್ನು ಅನಾವರಣಗೊಳಿಸಿದೆ.

ತಂದೆ-ಮಗನಾಗಿ ಸಾಯಿಕುಮಾರ್-ನಿರೂಪ್ ಈ ಸಿನಿಮಾದಲ್ಲಿ ಕಾಣಿಸಿಕೊಳ್ಳಲಿದ್ದು, ಚಿತ್ರಕ್ಕೆ 'ಸತ್ಯ ಸನ್ ಆಫ್ ಹರಿಶ್ಚಂದ್ರ' ಎಂಬ ಶೀರ್ಷಿಕೆ ಇಡಲಾಗಿದೆ. ಶೀರ್ಷಿಕೆಯ ಜೊತೆಗೆ ಚಿತ್ರದ ಫಸ್ಟ್‌ಲುಕ್ ಕೂಡಾ ಬಿಡುಗಡೆಯಾಗಿದೆ. 'ನನ್ನ ತಂದೆಯೇ ನನ್ನ ವಿಲನ್' ಎಂಬ ಅಡಿಬರಹದೊಂದಿಗೆ ಈ ಸಿನಿಮಾ ಸೆಟ್ಟೇರಿದೆ. ಮೊದಲ ಬಾರಿಗೆ ನಿರ್ದೇಶಕನ ಕ್ಯಾಪ್ ತೊಟ್ಟಿರುವ ಸಚಿನ್ ವಾಲಿ ಸಾರಥ್ಯದ ಈ ಸಿನಿಮಾದಲ್ಲಿ 'ಕೌಸಲ್ಯ ಸುಪ್ರಜಾ ರಾಮ' ಚಿತ್ರದಲ್ಲಿ 'ಶಿವಾನಿ'ಯಾಗಿ ಮಿಂಚಿದ ಬೃಂದಾ ಆಚಾರ್ಯ ನಾಯಕಿಯಾಗಿ ನಟಿಸಲಿದ್ದಾರೆ. ❖



ವನ್ಯಜೀವಿ ಮಂಡಳಿ ನಕಾರ


ಮಹದಾಯಿಯ ಕಳಸಾ ನಾಲಾ ತಿರುವು ಯೋಜನೆಗೆ ಸಿಗದ ಅನುಮೋದನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಹದಾಯಿಯ ಕಳಸಾ ನಾಲಾ ತಿರುವು ಯೋಜನೆಗೆ ವನ್ಯಜೀವಿ ಅನುಮೋದನೆ ನೀಡಲು ರಾಷ್ಟ್ರೀಯ ವನ್ಯಜೀವಿ ಮಂಡಳಿ ನಿರಾಕರಿಸಿದೆ.

ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವ ಭೂಪೇಂದರ್ ಯಾದವ್ ಅಧ್ಯಕ್ಷತೆಯಲ್ಲಿ ಜನವರಿ 30ರಂದು ನಡೆದ ಮಂಡಳಿಯ ಸ್ಥಾಯಿ ಸಮಿತಿಯ 77ನೇ ಸಭೆಯಲ್ಲಿ ಯೋಜನೆಯ ಸಾಧಕ ಬಾಧಕಗಳ ಕುರಿತು ಸಮಗ್ರ ಪರಾಮರ್ಶೆ ನಡೆಸಲಾಯಿತು.

ಈ ವಿಷಯವು ನ್ಯಾಯಿಕ ಪ್ರಕ್ರಿಯೆಯಲ್ಲಿನ ಮಧ್ಯಪ್ರವೇಶ (ಸಬ್ ಜ್ಯುಡಿಸ್) ಆಗುತ್ತದೆ ಎಂದು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ (ಎನ್‌ಟಿಸಿಎ) ತಿಳಿಸಿದೆ. ಹೀಗಾಗಿ, ಪ್ರಾಧಿಕಾರವು ಯೋಜನೆ ಕುರಿತು ಯಾವುದೇ ಅಭಿಪ್ರಾಯ ನೀಡಿಲ್ಲ. 1972ರ ವನ್ಯಜೀವಿ ಸಂರಕ್ಷಣಾ ಕಾಯ್ದೆಯ ಸೆಕ್ಷನ್ 38ರ ಪ್ರಕಾರ, ಪ್ರಾಧಿಕಾರದಿಂದ ಅಭಿಪ್ರಾಯ ಪಡೆಯಲು ಸ್ಥಾಯಿ ಸಮಿತಿ ನಿರ್ಧರಿಸಿತು. ಕಾರ್ಯಸೂಚಿಯನ್ನು ಮುಂದಿನ ಸಭೆಗೆ ಮುಂದೂಡಲಾಯಿತು.



ಕಳಸಾ ಬಂಡೂರಿ ಯೋಜನಾ ನಾಲೆ

ಹುಬ್ಬಳ್ಳಿ-ಧಾರವಾಡ, ಸುತ್ತಮುತ್ತಲಿನ ಪಟ್ಟಣಗಳು ಹಾಗೂ ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವ ಗುರಿ ಹೊಂದಿರುವ ಈ ಯೋಜನೆಗೆ ಮಹದಾಯಿ ನದಿ ನೀರು ವಿವಾದ ನ್ಯಾಯಮಂಡಳಿಯು 2018ರ ಆಗಸ್ಟ್ 14ರಂದು 3.90 ಟಿಎಂಸಿ ಅಡಿ ನೀರಿನ ಹಂಚಿಕೆ ಮಾಡಿತ್ತು. ಈ ಯೋಜನೆಯ ಪರಿಷ್ಕೃತ ವಿಸ್ತೃತ ಯೋಜನಾ ವರದಿಗೆ ಕೇಂದ್ರ ಜಲ ಆಯೋಗ 2022ರ ಡಿ. 29ರಂದು ಅನುಮೋದನೆ ನೀಡಿತ್ತು. ಇದರಲ್ಲಿ ಕಳಸಾ ನಾಲಾ ತಿರುವು ಯೋಜನೆಗೆ 1.78 ಟಿಎಂಸಿ ಅಡಿ ಮೀಸಲಿಡಲಾಗಿದೆ. ಈ ಯೋಜನೆಗೆ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಏಳು ಗ್ರಾಮಗಳ ಅರಣ್ಯ ಬಳಕೆಗೆ (ಜಾಕ್‌ವೆಲ್ ನಿರ್ಮಾಣ, ಪಂಪ್ ಹೌಸ್, ಎಲೆಕ್ಟ್ರಿಕಲ್ ಸಬ್ ಸ್ಟೇಷನ್, ಪೈಪ್‌ಲೈನ್) ಒಪ್ಪಿಗೆ ನೀಡುವಂತೆ ರಾಜ್ಯ ಸರ್ಕಾರವು ಮಂಡಳಿಗೆ ಪ್ರಸ್ತಾವ ಸಲ್ಲಿಸಿತ್ತು.

'ಯೋಜನೆಯ ಅನುಷ್ಠಾನಕ್ಕೆ 26.92 ಹೆಕ್ಟೇರ್ ಅರಣ್ಯ ಬಳಸಿಕೊಳ್ಳಲಾಗುತ್ತಿದೆ. ಯೋಜನೆಗಾಗಿ ಕಾಳಿ ಹುಲಿ ಕಾರಿಡಾರ್ ಹಾಗೂ ಸಹ್ಯಾದ್ರಿ ಹುಲಿ ಸಂರಕ್ಷಿತ ಪ್ರದೇಶದ 7.96 ಹೆಕ್ಟೇರ್ ಅರಣ್ಯ ಹಾಗೂ 2.71 ಹೆಕ್ಟೇರ್ ಅರಣ್ಯೇತರ ಪ್ರದೇಶ ಬಳಸಿಕೊಳ್ಳಲು ಉದ್ದೇಶಿಸಲಾಗಿದೆ' ಎಂದೂ ರಾಜ್ಯ ಸರ್ಕಾರವು ಪ್ರಸ್ತಾವ ದಲ್ಲಿ ತಿಳಿಸಿತ್ತು.

ಕರ್ನಾಟಕದಿಂದ ಅಭಿಷೇಕ್ ಮನು ಸಿಂಘ್ವಿ ಸ್ಪರ್ಧೆ ಸಾಧ್ಯತೆ

ರಾಜ್ಯಸಭೆ ಚುನಾವಣೆ: ನಾಳೆ 'ಕೈ' ಸಭೆ?

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯಸಭಾ ಚುನಾವಣೆಗೆ ಅಭ್ಯರ್ಥಿಗಳ ಅಖೈರುಗೊಳಿಸಲು ಕಾಂಗ್ರೆಸ್ ಹೈಕಮಾಂಡ್ ಶನಿವಾರ ಸಭೆ ನಡೆಸುವ ಸಂಭವವಿದೆ.

ಇದೇ 27ರಂದು ಚುನಾವಣೆ ನಡೆಯಲಿದೆ. ಕಾಂಗ್ರೆಸ್‌ನ ಒಂಬತ್ತು ಸದಸ್ಯರು ರಾಜ್ಯಸಭೆಯಿಂದ ನಿವೃತ್ತರಾಗುತ್ತಿದ್ದಾರೆ. ಈ ಚುನಾವಣೆಯಲ್ಲಿ ಕಾಂಗ್ರೆಸ್ 10 ಸ್ಥಾನಗಳನ್ನು ಗೆಲ್ಲುವ ನಿರೀಕ್ಷೆ ಇದೆ.

ಕರ್ನಾಟಕದ ಕಾಂಗ್ರೆಸ್ ಸದಸ್ಯರಾದ ಸಯ್ಯದ್ ನಾಸಿರ್ ಹುಸೇನ್, ಜಿ.ಸಿ. ಚಂದ್ರಶೇಖರ್ ಹಾಗೂ ಎಲ್. ಹನುಮಂತಯ್ಯ ನಿವೃತ್ತರಾಗುತ್ತಿದ್ದಾರೆ. ರಾಜ್ಯ ವಿಧಾನಸಭೆಯ ಬಲಾಬಲದ ಆಧಾರದಲ್ಲಿ ಕಾಂಗ್ರೆಸ್ ಪಕ್ಷವು ಮೂರು ಸ್ಥಾನಗಳನ್ನು ಗೆಲ್ಲಲಿದೆ. ನಾಸಿರ್ ಹುಸೇನ್ ಅವರನ್ನು ಕಣಕ್ಕೆ ಇಳಿಸಲು ಹೈಕಮಾಂಡ್ ಒಲವು ತೋರಿದೆ. ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಆಪ್ತರು. ಜಿ.ಸಿ.ಚಂದ್ರಶೇಖರ್ ಅವರು ಹೈಕಮಾಂಡ್ ಮಟ್ಟದಲ್ಲಿ ಲಾಬಿ ನಡೆಸಿದ್ದಾರೆ. ಆದರೆ, ಅವರನ್ನು ಹುರಿಯಾಳುವನ್ನಾಗಿ ಮಾಡಲು ರಾಜ್ಯ ನಾಯಕರಿಗೆ ಹೆಚ್ಚಿನ ಒಲವು ಇಲ್ಲ.

ಯುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಬಿ.ವಿ.ಶ್ರೀನಿವಾಸ್ ಅವರು ಟಿಕೆಟ್‌ಗಾಗಿ ಪ್ರಯತ್ನ ನಡೆಸಿದ್ದಾರೆ. ಅವರನ್ನು ಅಭ್ಯರ್ಥಿಯನ್ನಾಗಿ ಮಾಡಲು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಉತ್ಸುಕ-ರಾಗಿದ್ದಾರೆ. ಆದರೆ, ಶ್ರೀನಿವಾಸ್ ಅವರು ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲಿ ಎಂದು ಕೆಲವು ನಾಯಕರು ಒತ್ತಾಯಿಸಿದ್ದಾರೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿರುವ ಶ್ರೀನಿವಾಸ್, ತಮ್ಮನ್ನು ಅಭ್ಯರ್ಥಿಯ-ನ್ನಾಗಿ ಮಾಡಬೇಕು ಎಂದು ಮನವಿ ಮಾಡಿದ್ದಾರೆ. ಪಶ್ಚಿಮ ಬಂಗಾಳದಿಂದ ರಾಜ್ಯಸಭೆಗೆ ಆಯ್ಕೆಯಾಗಿರುವ ಅಭಿಷೇಕ್ ಮನು ಸಿಂಘ್ವಿ ಅವರು ಈ ಸಲ ಕರ್ನಾಟಕದಿಂದ ಸ್ಪರ್ಧೆ ಮಾಡುವ ಕುರಿತು ಊಹಾಪೋಹಗಳು ಹರಡಿವೆ.

ರಾಜ್ಯಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಅವರನ್ನು ಕಣಕ್ಕಿಳಿಸುವ ಕುರಿತು ಹೈಕಮಾಂಡ್ ಮಟ್ಟದಲ್ಲಿ ಚರ್ಚೆಗಳು ನಡೆದಿವೆ. ಕಾಂಗ್ರೆಸ್ ಆಡಳಿತವಿರುವ ಕರ್ನಾಟಕ, ತೆಲಂಗಾಣ ಅಥವಾ ಹಿಮಾಚಲ ಪ್ರದೇಶದಿಂದ ಅಭ್ಯರ್ಥಿ-ಯನ್ನಾಗಿ ಮಾಡಬೇಕು ಎಂದು ರಾಜ್ಯ ಘಟಕಗಳು ಹೈಕಮಾಂಡ್‌ಗೆ ಮನವಿ ಮಾಡಿವೆ. ಕರ್ನಾಟಕದಿಂದ ಸ್ಪರ್ಧೆ ಮಾಡುವಂತೆ ಡಿ.ಕೆ. ಶಿವಕುಮಾರ್ ಅವರು ಸೋನಿಯಾ ಗಾಂಧಿ ಅವರಿಗೆ ಬುಧವಾರ ಮನವಿ ಮಾಡಿದ್ದರು. ಸೋನಿಯಾ ಅವರು ದಕ್ಷಿಣದ ರಾಜ್ಯಗಳಿಂದ ಸ್ಪರ್ಧಿಸುವ ಸಾಧ್ಯತೆ ಕಡಿಮೆ. 'ರಾಹುಲ್ ಗಾಂಧಿ ಅವರು ಕೇರಳದ ವಯನಾಡ್‌ನ ಸಂಸದರಾಗಿ-ದ್ದಾರೆ. ಸೋನಿಯಾ ಅವರು ದಕ್ಷಿಣದಿಂದ ಆಯ್ಕೆಯಾದರೆ ತಪ್ಪು ಸಂದೇಶ ರವಾನೆ ಯಾಗುತ್ತದೆ. ಹಾಗಾಗಿ, ರಾಜ್ಯಸಭೆಗೆ ರಾಜಸ್ಥಾನದಿಂದ ಸ್ಪರ್ಧೆ ಮಾಡುವ ಸಂಭವ ಇದೆ' ಎಂದು ಮೂಲಗಳು ಹೇಳಿವೆ.

ವಿಜಯೇಂದ್ರ ದೆಹಲಿಗೆ

ರಾಜ್ಯಸಭಾ ಹಾಗೂ ವಿಧಾನ ಪರಿಷತ್ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ ಸಂಬಂಧ ವರಿಷ್ಠರೊಂದಿಗೆ ಚರ್ಚಿಸಲು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಗುರುವಾರ ನವದೆಹಲಿಗೆ ಬಂದಿದ್ದಾರೆ.

ಅವರು ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಶುಕ್ರವಾರ ಭೇಟಿ ಮಾಡುವ ಸಾಧ್ಯತೆ ಇದೆ.

ರಾಜ್ಯ ಕಾಂಗ್ರೆಸ್ ಸರ್ಕಾರದಲ್ಲೂ ಶೇ 40ರಷ್ಟು ಕಮಿಷನ್: ಕೆಂಪಣ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶೇ 40ರಷ್ಟು ಕಮಿಷನ್ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲೂ ಮುಂದುವರಿದಿದೆ. ಬಿಜೆಪಿ ನೇತೃತ್ವದ ಹಿಂದಿನ ಸರ್ಕಾರದಲ್ಲಿ ಶಾಸಕರೇ ನೇರವಾಗಿ ಕಮಿಷನ್ ಪಡೆಯುತ್ತಿದ್ದರು. ಈಗ ಅಧಿಕಾರಿಗಳ ಮೂಲಕ ಕಮಿಷನ್ ಸಂಗ್ರಹಿಸಲಾಗುತ್ತಿದೆ' ಎಂದು ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಅವರು ಆರೋಪಿಸಿದರು.



ಡಿ. ಕೆಂಪಣ್ಣ

ಪತ್ರಿಕಾಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, 'ರಾಜ್ಯ ಸರ್ಕಾರದ ಎಲ್ಲ ಇಲಾಖೆಗಳಲ್ಲೂ ಬಹುತೇಕ ಅಧಿಕಾರಿಗಳು ಭ್ರಷ್ಟಾಚಾರ ದಲ್ಲಿ ತೊಡಗಿದ್ದಾರೆ. ಸಚಿವರು, ಶಾಸಕರಿಗೆ ನೀಡಬೇಕು ಎಂದು ಗುತ್ತಿಗೆದಾರರಿಂದ ಕಮಿಷನ್ ವಸೂಲಿ ಮಾಡುತ್ತಿದ್ದಾರೆ' ಎಂದು ದೂರಿದರು.

'ಯಾವ ಅಧಿಕಾರಿಗಳು ಕಮಿಷನ್ ಕೇಳುತ್ತಿದ್ದಾರೆ ಎಂಬ ಬಗ್ಗೆ ನಮಗೆ ಸಂಪೂರ್ಣ ಮಾಹಿತಿ ಇದೆ. ಇನ್ನಷ್ಟು ದಾಖಲೆಗಳನ್ನು ಸಂಗ್ರಹಿಸಲಾಗುತ್ತದೆ. ಈಗಾಗಲೇ ಐದು ಮಾನನಷ್ಟ ಮೊಕದ್ದಮೆ ನನ್ನ ಮೇಲೆ ದಾಖಲಾಗಿವೆ. ಹೀಗಾಗಿ ಸದ್ಯಕ್ಕೆ ಹೆಸರು ಬಹಿರಂಗ ಪಡಿಸಲ್ಲ' ಎಂದು ಕೆಂಪಣ್ಣ ಹೇಳಿದರು.

'ಶೇ 40ರಷ್ಟು ಕಮಿಷನ್ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಆಯೋಗಕ್ಕೆ ಸುಮಾರು ಏಳು ಸಾವಿರ ಪುಟಗಳ ದಾಖಲೆ ನೀಡಲಾಗಿದೆ. ಈಗಲೂ ಮುಂದುವರಿದಿರುವ ಶೇ 40ರಷ್ಟು ಕಮಿಷನ್ ಬಗ್ಗೆ ಅಗತ್ಯ ಸಂದರ್ಭದಲ್ಲಿ ದಾಖಲೆ ಒದಗಿಸಲಾಗುವುದು' ಎಂದು ತಿಳಿಸಿದರು.

'ಪೊಲೀಸ್ ವಸತಿ ಗೃಹ ಅಭಿವೃದ್ಧಿ ನಿಗಮ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆ ಸೇರಿದಂತೆ ಎಲ್ಲ ಇಲಾಖೆಗಳಲ್ಲಿ ಕಾಮಗಾರಿಗಳನ್ನು ನಡೆಸಲು ಪ್ಯಾಕೇಜ್ ಪದ್ಧತಿ ಅನುಸರಿಸ-ಲಾಗುತ್ತಿದೆ. ಸ್ಥಳೀಯ ಗುತ್ತಿಗೆದಾರರನ್ನು ದೂರವಿಟ್ಟು ನೆರೆ ರಾಜ್ಯದ ಗುತ್ತಿಗೆದಾ-ರರನ್ನು ಓಲೈಸುವ ಉದ್ದೇಶದಿಂದ ಈ ಹೀಗೆ ಮಾಡಲಾಗುತ್ತಿದೆ. ಪ್ಯಾಕೇಜ್ ಪದ್ಧತಿಯಿಂದ ರಾಜ್ಯದ ಸ್ಥಳೀಯ, ಸಣ್ಣ–ಮಧ್ಯಮ ಗುತ್ತಿಗೆದಾರರಿಗೆ ಸಮಸ್ಯೆ-ಯಾಗಿದ್ದು, ಅವರಿಗೆ ಕಾಮಗಾರಿಗಳು ಸಿಗುತ್ತಿಲ್ಲ' ಎಂದು ದೂರಿದರು.

'ಆರ್. ಅಶೋಕಗೂ ದೂರು'

'ಸರ್ಕಾರದ ಎಲ್ಲ ಇಲಾಖೆಗಳಲ್ಲಿನ ಕಮಿಷನ್ ಹಾಗೂ ಪ್ಯಾಕೇಜ್ ಟೆಂಡರ್‌ಗಳಿಂದ ಗುತ್ತಿಗೆದಾರರಿಗೆ ಆಗುತ್ತಿರುವ ಸಂಕಷ್ಟಗಳ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ. ಶಿವಕುಮಾರ್ ಅವರಿಗೆ ಮತ್ತೊಮ್ಮೆ ದೂರು ನೀಡುತ್ತೇವೆ. ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರನ್ನೂ ಭೇಟಿ ಮಾಡಿ ಎಲ್ಲ ಮಾಹಿತಿ ನೀಡಲಾಗುತ್ತದೆ' ಎಂದು ಕೆಂಪಣ್ಣ ಹೇಳಿದರು.

'ಈ ಹಿಂದೆ ಬಿಜೆಪಿ ನೇತೃತ್ವದ ಸರ್ಕಾರದಲ್ಲಿನ ಶೇ 40ರಷ್ಟು ಕಮಿಷನ್ ಆರೋಪ ಮಾಡಿದಾಗ, ಅಂದು ವಿರೋಧ ಪಕ್ಷದ ನಾಯಕರಾಗಿದ್ದ ಸಿದ್ದರಾಮಯ್ಯ ಅವರೇ ನನಗೆ ಕರೆ ಮಾಡಿ, ಕರೆಯಿಸಿಕೊಂಡು ಮಾಹಿತಿ ಪಡೆದಿದ್ದರು. ಎಚ್.ಡಿ. ಕುಮಾರಸ್ವಾಮಿ ಅವರನ್ನೂ ಇತ್ತೀಚೆಗೆ ಭೇಟಿ ಮಾಡಿ ಸಮಸ್ಯೆ ಹೇಳಿಕೊಂಡಿದ್ದೇನೆ. ಅಶೋಕ ಅವರನ್ನು ಒಂದೆರಡು ದಿನಗಳಲ್ಲಿ ಭೇಟಿ ಮಾಡುತ್ತೇನೆ' ಎಂದರು.

'ಮುಖ್ಯ ಆಯುಕ್ತರು ಹೇಳಿದರೂ ಪ್ರಯೋಜನವಿಲ್ಲ'

'ಬಿಬಿಎಂಪಿಯಲ್ಲಿ ಹಲವು ವಾರ್ಡ್‌ಗಳ ಕಾಮಗಾರಿಗಳನ್ನು ಸೇರಿಸಿ ಪ್ಯಾಕೇಜ್ ರೂಪದಲ್ಲಿ ಟೆಂಡರ್ ಕರೆಯಲಾಗುತ್ತಿದೆ. ಇದರ ಬಗ್ಗೆ ಗುತ್ತಿಗೆದಾರರು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ದೂರು ನೀಡಿದ್ದರು. ಯೋಜನಾ ವಿಭಾಗದ ಮುಖ್ಯ ಎಂಜಿನಿಯರ್ ಲೋಕೇಶ್ ಅವರಿಗೆ ನಿರ್ದೇಶನ ನೀಡಿದ್ದ ತುಷಾರ್ ಅವರು, 'ಏಕೆ ಹೀಗೆ ಮಾಡಿದಿರಿ, ಸರಿಪಡಿಸಿ' ಎಂದು ತಾಕೀತು ಮಾಡಿದ್ದರು. ಆದರೂ ಲೋಕೇಶ್ ಪ್ಯಾಕೇಜ್ ರೂಪದಲ್ಲೇ ಟೆಂಡರ್‌ಗಳನ್ನು ಕರೆಯುತ್ತಿದ್ದಾರೆ. ಬಿಬಿಎಂಪಿ ಸೇರಿದಂತೆ ಎಲ್ಲ ಇಲಾಖೆಗಳ ಮುಖ್ಯ ಎಂಜಿನಿಯರ್‌ಗಳು ಪ್ಯಾಕೇಜ್ ಟೆಂಡರ್‌ಗಳನ್ನೇ ಮಾಡುತ್ತಿದ್ದಾರೆ' ಎಂದು ಡಿ.ಕೆಂಪಣ್ಣ ಆರೋಪಿಸಿದರು.

ಬಾಡಿಗೆ ಮನೆ ಬದಲಿಸಿದರೂ 'ಗೃಹ ಜ್ಯೋತಿ' ಸೌಲಭ್ಯ

ಬೆಂಗಳೂರು: 'ಗೃಹ ಜ್ಯೋತಿ' (200 ಯುನಿಟ್‌ವರೆಗೆ ಉಚಿತ ವಿದ್ಯುತ್) ಯೋಜನೆಯ ಫಲಾನುಭವಿ ಬಾಡಿಗೆದಾರರು ತಮ್ಮ ಮನೆ ಬದಲಿಸಿದರೂ ಈ ಯೋಜನೆಯನ್ನು ಮುಂದುವರಿಸಲು ಇಂಧನ ಇಲಾಖೆ 'ಡಿ–ಲಿಂಕ್' ಸೌಲಭ್ಯವನ್ನು ಕಲ್ಪಿಸಿದೆ.

ಮನೆ ಬದಲಿಸಿದ ಬಾಡಿಗೆದಾರರು ತಕ್ಷಣ ಹಳೆ ಮನೆಯ ವಿಳಾಸದ ವಿದ್ಯುತ್ ಸಂಪರ್ಕವನ್ನು ರದ್ದುಪಡಿಸಿ, 'ಡಿ ಲಿಂಕ್' ಆಯ್ಕೆ ಮಾಡಿಕೊಂಡು ಹೊಸ ಮನೆಯ ವಿಳಾಸಕ್ಕೆ 'ಗೃಹ ಜ್ಯೋತಿ'ಯ ಪ್ರಯೋಜನ ಪಡೆಯಬಹುದು.

ಗೃಹ ಜ್ಯೋತಿ ಯೋಜನೆ ಜಾರಿಗೆ ಬಂದ ನಂತರ ಕೆಲವು ಸಮಸ್ಯೆಗಳು ಎದುರಾಗಿದ್ದವು. ಬಾಡಿಗೆ ಮನೆಯ-ಲ್ಲಿದ್ದವರು ಬೇರೆ ಬೇರೆ ಕಾರಣಗಳಿಗೆ ಮನೆ ಬದಲಿಸಿದ ಸಂದರ್ಭದಲ್ಲಿ ಹೊಸ ಮನೆಯ ಆರ್‌ಆರ್ ಸಂಖ್ಯೆಗೆ ತಮ್ಮ ಆಧಾರ್ ಜೋಡಣೆ ಮಾಡಿ ಗೃಹ ಜ್ಯೋತಿ ಯೋಜನೆಯ ಸೌಲಭ್ಯ ಪಡೆಯಲು ಸಾಧ್ಯ ಆಗುತ್ತಿರಲಿಲ್ಲ. ಅಲ್ಲದೆ, ಈ ಹಿಂದೆ ಇದ್ದ ಮನೆಯ ವಿದ್ಯುತ್ ಸಂಪರ್ಕಕ್ಕೆ ಜೋಡಣೆಯಾಗಿದ್ದ ಆಧಾರ್ ಸಂಖ್ಯೆ ಯನ್ನು ರದ್ದುಪಡಿಸಲು ಕೂಡಾ ಆಗುತ್ತಿರಲಿಲ್ಲ. ಇದೀಗ ಈ ಸಮಸ್ಯೆ ಪರಿಹಾರಗೊಂಡಿದೆ. ಹೊಸ ಬಾಡಿಗೆ ಮನೆಯ ಆರ್‌ಆರ್ ಸಂಖ್ಯೆಯನ್ನು ಸುಲಭವಾಗಿ ನೋಂದಣಿ ಮಾಡಿಕೊಳ್ಳುವ ಸೌಲಭ್ಯ ಕಲ್ಪಿಸಲಾಗಿದೆ. ಸೇವಾ ಸಿಂಧು ಪೋರ್ಟಲ್‌ನಲ್ಲಿ ಈ ಬದಲಾವಣೆ ಮಾಡಿಕೊಳ್ಳಬಹುದು.

ಗೃಹ ಜ್ಯೋತಿ ಯೋಜನೆಯ ಫಲಾನುಭವಿಗಳು ಮನೆ ಬದಲಾಯಿಸಿದಾಗ ತಮ್ಮ ಖಾತೆಗಳನ್ನು ಡಿ-ಲಿಂಕ್ ಮಾಡಲು ಮತ್ತು ವಿಳಾಸ ಬದಲಾವಣೆ ಮತ್ತು ಸ್ಥಳಾಂತರದ ನಂತರ ಮರು ಲಿಂಕ್ ಅವಕಾಶ ಕಲ್ಪಿಸುವ ಪ್ರಕ್ರಿಯೆ ಆರಂಭಿಸುವಂತೆ ವಿದ್ಯುತ್ ಸರಬರಾಜು ನಿಗಮಗಳಿಗೆ (ಎಸ್ಕಾಂ) ರಾಜ್ಯ ಸರ್ಕಾರ ಬುಧವಾರ ಆದೇಶ ಹೊರಡಿಸಿದೆ.

ಪ್ರಭಾಕರ್ ರಾವ್ ಅಧ್ಯಕ್ಷ


ಬೆಂಗಳೂರು: ಭಾರತೀಯ ಸಕ್ಕರೆ ಕಾರ್ಖಾನೆ ಹಾಗೂ ಜೈವಿಕ ಇಂಧನ ಉತ್ಪಾದಕರ ಸಂಸ್ಥೆಯ ರಾಷ್ಟ್ರೀಯ ಅಧ್ಯಕ್ಷರಾಗಿ ಎನ್‌ಎಸ್‌ಎಲ್ ಸಕ್ಕರೆ ಕಂಪನಿ ಮಾಲೀಕ ಮಾಂಡವ ಪ್ರಭಾಕರ್ ರಾವ್ ಆಯ್ಕೆಯಾಗಿದ್ದಾರೆ.

ಮಾಂಡವ ಪ್ರಭಾಕರ್ ರಾವ್ ಮೂಲತಃ ಆಂಧ್ರಪ್ರದೇಶದ ಗುಂಟೂರಿನ ರೈತ ಕುಟುಂಬದವರು. ಬನಾರಸ್ ಹಿಂದೂ ವಿಶ್ವವಿದ್ಯಾಲಯದ ವಿದ್ಯಾರ್ಥಿ. 1982ರಿಂದ ಎನ್‌ಎಸ್‌ಎಲ್ ಗ್ರೂಪ್‌ನ ಅಧ್ಯಕ್ಷರಾಗಿ ಬೀಜ ಉತ್ಪನ್ನ, ಟೆಕ್ಸ್‌ಟೈಲ್ಸ್, ಸಕ್ಕರೆ, ಮೂಲಸೌಕರ್ಯ ಮತ್ತು ನವೀಕರಿಸಬಹುದಾದ ಇಂಧನ ಉತ್ಪನ್ನ ವಿಭಾಗದಲ್ಲಿ ಹಲವಾರು ಕಂಪನಿಗಳನ್ನು ಸ್ಥಾಪಿಸಿದ್ದಾರೆ.

ಪಾದಚಾರಿ ಮಾರ್ಗಗಳಲ್ಲಿ ವಾಹನ ನಿಲುಗಡೆ ● ಮಾಲೀಕರ ಪತ್ತೆಹಚ್ಚಲು ಸ್ಟಿಕ್ಕರ್ ಅಳವಡಿಸಲು ನಿರ್ಧಾರ

ಹರಾಜಿಗೆ ಹೈಕೋರ್ಟ್ ಗಡುವು

ಪ್ರಜಾವಾಣಿ ವಾರ್ತೆ



ಸಾಂದರ್ಭಿಕ ಚಿತ್ರ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿನ ರಸ್ತೆ, ಪಾದಚಾರಿ ಮಾರ್ಗಗಳಲ್ಲಿ ದೀರ್ಘಕಾಲದಿಂದ ನಿಲುಗಡೆ ಮಾಡಲಾಗಿರುವ ಅಪರಿಚಿತ ಹಾಗೂ ವಾರಸುದಾರರು ಪತ್ತೆಯಾಗದ ವಾಹನಗಳನ್ನು ಹರಾಜು ಹಾಕಲು ಹೈಕೋರ್ಟ್ ಕಾಲಮಿತಿ ನಿಗದಿಪಡಿಸಿದೆ.

'ತ್ಯಾಗರಾಜ ನಗರದಲ್ಲಿನ ಪಾದಚಾರಿ ಮಾರ್ಗಗಳ ಒತ್ತುವರಿ ತೆರವುಗೊಳಿಸಬೇಕು' ಎಂದು ಕೋರಿ ಸ್ಥಳೀಯ ನಿವಾಸಿ ಪ್ರಶಾಂತ್ ರಾವ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಎಸ್.ದಿನೇಶ್ ಕುಮಾರ್ ಹಾಗೂ ನ್ಯಾಯಮೂರ್ತಿ ಟಿ.ಜಿ. ಶಿವಶಂಕರೇಗೌಡ ಅವರಿದ್ದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಾದ ಮಂಡಿಸಿದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ನಗರದಲ್ಲಿನ ಪಾದಚಾರಿ ಮಾರ್ಗಗಳ ಒತ್ತುವರಿ ತೆರವು ಹಾಗೂ ರಸ್ತೆಗಳಲ್ಲಿ ಬಿಟ್ಟು ಹೋಗಿರುವ ಅಪರಿಚಿತ, ವಾರಸುದಾರರು ಪತ್ತೆಯಾಗದ ವಾಹಗಳ ಸ್ಥಳಾಂತರ, ಅವುಗಳ ಹರಾಜು ಹಾಕುವ ಸಂಬಂಧ 2024ರ ಜನವರಿ 31ರಂದು ಬಿಬಿಎಂಪಿ ಹಾಗೂ ಪೊಲೀಸ್ ಅಧಿಕಾರಿಗಳ ಜಂಟಿ ಸಭೆಯಲ್ಲಿ ಕೈಗೊಳ್ಳಲಾದ ನಿರ್ಣಯದ ಪ್ರಮಾಣ ಪತ್ರಗಳನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು.

'ರಸ್ತೆಗಳಲ್ಲಿ ಬಿಟ್ಟು ಹೋಗಿರುವ ವಾಹನಗಳನ್ನು ಸ್ಥಳಾಂತರ ಮಾಡಲು ನಾಲ್ಕು ಸ್ಥಳಗಳನ್ನು ಗುರುತಿಸಲಾಗಿದೆ. ಪೊಲೀಸರು ಹಾಗೂ ಪ್ರಾದೇಶಿಕ ಸಾರಿಗೆ ಅಧಿಕಾರಿ (ಆರ್‌ಟಿಒ) ಅಧಿಕಾರಿಗಳ ಮೂಲಕ ವಾಹನದ ಮಾಲೀಕರನ್ನು ಪತ್ತೆಹಚ್ಚಲು ಕ್ರಮ ಕೈಗೊಳ್ಳಲಾಗುತ್ತದೆ. ರಸ್ತೆ ಬದಿ ನಿಂತಲ್ಲೇ ನಿಂತಿರುವ ವಾಹನಗಳನ್ನು ತೆಗೆಯುವಂತೆ ಸ್ಟಿಕ್ಕರ್ ಅಳವಡಿಸಲಾಗುವುದು. 15 ದಿನಗಳ ನಂತರ ಆರ್‌ಟಿಒ ಕಚೇರಿಗೆ ತಂದು ಮಾಲೀಕರನ್ನು ಸಂಪರ್ಕಿಸಲಾಗುವುದು. ಮಾಲೀಕರು ಸಿಗದೇಹೋದರೆ ಕೋರ್ಟ್ ಅನುಮತಿ ಪಡೆದು ಹರಾಜು ಹಾಕಲಾಗುವುದು. ಆ ರೀತಿ ವಾಹನಗಳನ್ನು ಹರಾಜು ಹಾಕುವ ಮುನ್ನ ಪತ್ರಿಕಾ ಪ್ರಕಟಣೆ ನೀಡಲಾಗುವುದು' ಎಂದು ಶಶಿಕಿರಣ ಶೆಟ್ಟಿ ನ್ಯಾಯಪೀಠಕ್ಕೆ ವಿವರಿಸಿದರು.

'ವಾರಸುದಾರರು ಪತ್ತೆಯಾಗದ ಸಂದರ್ಭದಲ್ಲಿ ಸಂಬಂಧಿಸಿದ ಮ್ಯಾಜಿಸ್ಟ್ರೇಟ್ ಕೋರ್ಟ್‌ನಿಂದ ಅನುಮತಿ ಪಡೆದು ಅಂತಹ ವಾಹನಗಳನ್ನು ಹರಾಜು ಹಾಕಲಾಗುತ್ತದೆ. ಗೆಜೆಟ್ ಪ್ರಕಟಣೆಯ ದಿನಾಂಕದಿಂದ ಆರು ತಿಂಗಳ ಅವಧಿಯಲ್ಲಿ ವಾಹನಗಳನ್ನು ಹರಾಜು ಹಾಕಲು 2023ರ ಜುಲೈ 11ರಂದು ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಆದೇಶಿಸಿದೆ. ರಸ್ತೆಗಳಲ್ಲಿ ಬಿಟ್ಟು ಹೋಗಿರುವ ವಾಹನಗಳನ್ನು ತ್ವರಿತವಾಗಿ ವಿಲೇವಾರಿ ಮಾಡದಿದ್ದರೆ ಆಡಳಿತಾತ್ಮಕ ಅಪಾಯಗಳು ಎದುರಾಗುತ್ತವೆ. ಹೀಗಾಗಿ, ಅವಧಿಯನ್ನು 15 ದಿನಕ್ಕೆ ಇಳಿಕೆ ಮಾಡಿದರೆ ಅನುಕೂಲವಾಗಲಿದೆ. ಅಂತಹ ವಾಹನಗಳ ಸ್ಥಳಾಂತರಕ್ಕೆ ಬೆಂಗಳೂರು ಉತ್ತರ ತಾಲ್ಲೂಕಿನ ಮಲ್ಲಸಂದ್ರದಲ್ಲಿ 2 ಎಕರೆ ಜಾಗ ಗುರುತಿಸಲಾಗಿದೆ' ಎಂದು ಪ್ರಮಾಣ ಪತ್ರದ ಅಂಶಗಳನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಆದೇಶವನ್ನು ಮಾರ್ಪಡಿಸಿ ಅವಧಿಯನ್ನು ಕಡಿತಗೊಳಿಸಿತು. '15 ವರ್ಷ ಮೇಲ್ಪಟ್ಟ ವಾಹನಗಳನ್ನು ಎಲ್ಲಾ ಕಾನೂನು ಪ್ರಕ್ರಿಯೆ ಮುಗಿಸಿದ 30 ದಿನಗಳಲ್ಲಿ ಹರಾಜು ಹಾಕಬೇಕು. 1ರಿಂದ 5 ವರ್ಷದ ವಾಹನಗಳನ್ನು ಮೂರು ತಿಂಗಳಲ್ಲಿ ಹಾಗೂ 5ರಿಂದ 15 ವರ್ಷದ ವಾಹನಗಳನ್ನು ಹರಾಜು ಹಾಕಬೇಕು. ಇದರ ಪ್ರಗತಿ ಆಧರಿಸಿ ಪೊಲೀಸರು ನ್ಯಾಯಾಲಯದಿಂದ ಮುಂದಿನ ನಿರ್ದೇಶನಗಳನ್ನು ಕೋರಬಹುದು' ಎಂದು ಸೂಚಿಸಿ ವಿಚಾರಣೆಯನ್ನು ಮಾರ್ಚ್ 14ಕ್ಕೆ ಮುಂದೂಡಿತು.

ಒತ್ತುವರಿ ತೆರವಿಗೆ ಕಾರ್ಯಾಚರಣೆ

ಬಿಬಿಎಂಪಿ ವ್ಯಾಪ್ತಿಯ 609.89 ಕಿ.ಮೀ ಮತ್ತು 734.45 ಕಿ.ಮೀನಷ್ಟು ಉಪ ಮುಖ್ಯರಸ್ತೆಗಳ ಪಾದಚಾರಿ ಮಾರ್ಗದ ಮೇಲೆ ಶಾಶ್ವತ ಹಾಗೂ ಉಪ ಶಾಶ್ವತ ನಿರ್ಮಾಣಕ್ಕೆ ಅನುಮತಿ ನೀಡುವುದಿಲ್ಲ. ಪಾದಚಾರಿ ಮಾರ್ಗಗಳ ಒತ್ತುವರಿಯನ್ನು ಗುರುತಿಸಿ, ತೆರವುಗೊಳಿಸಲು ಕಾಲಕಾಲಕ್ಕೆ ವಿಶೇಷ ಕಾರ್ಯಾಚರಣೆ ನಡೆಸಲಾಗುವುದು. ಈ ಕಾರ್ಯಾಚರಣೆಗೆ ಅಗತ್ಯವಾದ ಭದ್ರತೆ ಕಲ್ಪಿಸಲು ಪೊಲೀಸ್ ಇಲಾಖೆ ಸಮ್ಮತಿಸಿದೆ.

ವಸತಿ ಪ್ರದೇಶದಲ್ಲಿ ಬೀದಿ ಬದಿ ವ್ಯಾಪಾರಿಗಳು ಪಾದಚಾರಿ ಮಾರ್ಗಗಳ ಮೇಲೆ ವ್ಯಾಪಾರ ಮಳಿಗೆಗಳನ್ನು ಇಟ್ಟುಕೊಂಡು ಒತ್ತುವರಿ ಮಾಡಿರುವುದು ಕಂಡುಬಂದಿದೆ. ಈ ಕುರಿತು ಸರ್ವೆ ನಡೆಸಿ ಆ ರಸ್ತೆಗಳಲ್ಲಿ ಸಾರ್ವಜನಿಕರ ಮುಕ್ತ ಸಂಚಾರಕ್ಕೆ ಅನುಕೂಲ ಮಾಡಿಕೊಡಲು ನಗರ ವ್ಯಾಪಾರ ಸಮಿತಿ ರಚಿಸಲಾಗುವುದು.

ಈ ಸಮಿತಿಯು ಪಾದಚಾರಿ ಮಾಗದ ಮೇಲಿನ ಬೀದಿ ಬದಿ ವ್ಯಾಪಾರಗಳನ್ನು ತೆರವುಗೊಳಿಸುವ ಹಾಗೂ ಅಂಥವರ ಜೀವನಾಧಾರಕ್ಕೆ ತೊಂದರೆಯಾಗದಂತೆ ವ್ಯಾಪಾರ ವಲಯ ಗುರುತಿಸಿ, ಅಲ್ಲಿ ಅವರು ತಮ್ಮ ಸರಕು ಮಾರಾಟ ಮಾಡುವ ವ್ಯವಸ್ಥೆ ಮಾಡಲಿದೆ. ಅವರಿಗೆ ಗುರುತಿನ ಚೀಟಿಯನ್ನೂ ಕಲ್ಪಿಸಲಾಗುತ್ತದೆ. 'ಬೀದಿ ಬದಿ ವ್ಯಾಪಾರಿಗಳ ವ್ಯಾಪಾರಕ್ಕೆ ಸಮಯ ನಿಗದಿಪಡಿಸಲು ಮಾರ್ಗಸೂಚಿ ರೂಪಿಸಲಾಗುವುದು. ಮಾರಾಟ ವಲಯಗಳನ್ನು ಗುರುತಿಸುವವರೆಗೆ ಬೀದಿ ವ್ಯಾಪಾರಿಗಳ ಮಾರಾಟಕ್ಕೆ ಮತ್ತು ಸಾರ್ವಜನಿಕರ ಸಾಮಾನ್ಯ ಸಂಚಾರಕ್ಕೆ ಸಾಕಷ್ಟು ಜಾಗವನ್ನು ಬಿಟ್ಟುಕೊಡಲು ಬಿಬಿಎಂಪಿ ಮೇಲ್ವಿಚಾರಣೆ ನಡೆಸಲಿದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಪ್ರಮಾಣ ಪತ್ರದಲ್ಲಿ ವಿವರಿಸಿದ್ದಾರೆ.

ಪ್ರಮಾಣ ಪತ್ರದಲ್ಲಿ ಏನಿದೆ?

ಪಾದಚಾರಿ ಮಾರ್ಗಗಳಲ್ಲಿ ವಾಹನ ನಿಲುಗಡೆ ಮಾಡಿದ ಸಂಬಂಧ 2021ರಲ್ಲಿ 74,851, 2022ರಲ್ಲಿ 1,53,983, 2023ರಲ್ಲಿ 78,238 ಮತ್ತು 2024ರಲ್ಲಿ 479 ವಾಹನಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಪಾದಚಾರಿ ಮಾರ್ಗಗಳಲ್ಲಿ ವಾಹನ ಚಲಾಯಿಸಿದ್ದಕ್ಕೆ ಸಂಬಂಧಿಸಿದಂತೆ 2021ರಲ್ಲಿ 8,422, 2022ರಲ್ಲಿ 18,144, 2023ರಲ್ಲಿ 9,547, 2024ರಲ್ಲಿ 113 ಪ್ರಕರಣ ದಾಖಲಿಸಲಾಗಿದೆ.

ಪಾದಚಾರಿ ಮಾರ್ಗದ ಮೇಲೆ 15 ಮತ್ತು ಅದಕ್ಕಿಂತ ಹೆಚ್ಚು ದಿನ ನಿಲುಗಡೆ ಮಾಡಿದ ವಾಹನಗಳನ್ನು ವಾರಸುದಾರರಿಲ್ಲದ ವಾಹನ ಮತ್ತು ಅದು ಇರುವ ಪ್ರದೇಶವನ್ನು ಪತ್ತೆಹಚ್ಚಲು ಗುರುತು ತಂಡ ರಚಿಸಲಾಗಿದೆ. ಈ ತಂಡವು ಅಂತಹ ವಾಹನಗಳನ್ನು ಮಹಜರು ಮಾಡಿದ ನಂತರ ಸಂಗ್ರಹಣಾ ಸ್ಥಳಕ್ಕೆ ಟೋಯಿಂಗ್ ಮಾಡಲಿದೆ. ನಂತರ ಪ್ರಾದೇಶಿಕ ಸಾರಿಗೆ ಇಲಾಖೆಯನ್ನು ಸಂಪರ್ಕಿಸಿ, ಆಯಾ ವಾಹನಗಳ ಮಾಲೀಕರು, ಅವರ ವಿಳಾಸ ಹಾಗೂ ಅವುಗಳ ವಿರುದ್ಧದ ಪ್ರಕರಣಗಳ ಬಗ್ಗೆ ಮಾಹಿತಿ ಪಡೆಯಲಾಗುವುದು. ವಾಹನ ಮಾಲೀಕರಿಗೆ ದಂಡ ಪಾವತಿಸಲು ಸೂಚಿಸಲಾಗುವುದು. ಪಾವತಿಸದಿದ್ದರೆ ಹರಾಜು ಹಾಕಲು ಅಥವಾ ಗುಜರಿಗೆ ಹಾಕುವ ಮೂಲಕ ವಿಲೇವಾರಿ ಮಾಡಲಾಗುವುದು.

ಸುದ್ದಿ 2 ನಿಮಿಷ

ಚಿಕ್ಕಬಳ್ಳಾಪುರದಲ್ಲಿಯೇ ಬಾಲ ಕಾರ್ಮಿಕರ ರಕ್ಷಣೆ ಹೆಚ್ಚು

ಚಿಕ್ಕಬಳ್ಳಾಪುರ: ಮಕ್ಕಳನ್ನು ಕಾರ್ಮಿಕರನ್ನಾಗಿ ದುಡಿಸಿಕೊಳ್ಳುವುದು ಶಿಕ್ಷಾರ್ಹ. ಈ ಬಗ್ಗೆ ಕಾರ್ಮಿಕ ಇಲಾಖೆ, ಪೊಲೀಸರು, ಮಹಿಳಾ ಮತ್ತು ಮಕ್ಕಳ ಇಲಾಖೆ ಆಗಾಗ್ಗೆ ಜಾಗೃತಿ ಮೂಡಿಸುತ್ತಿದ್ದರೂ ಜಿಲ್ಲೆಯಲ್ಲಿ ಬಾಲ ಕಾರ್ಮಿಕ ಪದ್ಧತಿ ಪೂರ್ಣವಾಗಿ ನಿರ್ಮೂಲನೆಯಾಗಿಲ್ಲ.

ಜಿಲ್ಲೆಯಲ್ಲಿ 2023-24ನೇ ಸಾಲಿನಲ್ಲಿ 30 ಬಾಲಕಾರ್ಮಿಕರನ್ನು ಪತ್ತೆ ಹಚ್ಚಲಾಗಿದೆ. ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ 12, ಬಾಗೇಪಲ್ಲಿಯಲ್ಲಿ ಇಬ್ಬರು, ಚಿಂತಾಮಣಿ ಏಳು, ಶಿಡ್ಲಘಟ್ಟದಲ್ಲಿ ಆರು, ಗೌರಿಬಿದನೂರು ತಾಲ್ಲೂಕಿನಲ್ಲಿ ಮೂರು ಬಾಲಕಾರ್ಮಿಕರನ್ನು ಅಧಿಕಾರಿಗಳು ರಕ್ಷಿಸಿದ್ದಾರೆ. ಹೀಗೆ ರಕ್ಷಿಸಿರುವವರಲ್ಲಿ ಬಹುತೇಕ ಮಂದಿ ನಗರದ ಅಂಗಡಿಗಳು, ಹೋಟೆಲ್‌ಗಳು ಗ್ಯಾರೇಜ್ ಹೀಗೆ ವಿವಿಧ ಕಡೆಗಳಲ್ಲಿ ಕೆಲಸ ಮಾಡುತ್ತಿದ್ದವರಾಗಿದ್ದಾರೆ. ಚಿಕ್ಕಬಳ್ಳಾಪುರ ನಗರದಲ್ಲಿಯೇ ಅತಿ ಹೆಚ್ಚು ಮಂದಿ ಬಾಲ ಕಾರ್ಮಿಕರು ಪತ್ತೆಯಾಗಿದ್ದಾರೆ.

ಈ ಮಕ್ಕಳನ್ನು ಮಕ್ಕಳ ಕಲ್ಯಾಣ ಸಮಿತಿ ಎದುರು ಹಾಜರುಪಡಿಸುತ್ತೇವೆ. ಪೋಷಕರ ಮನವೊಲಿಸಿ ಅವರನ್ನು ಶಾಲೆಗೆ ಸೇರಿಸುವಂತೆ ಮಾಡುತ್ತೇವೆ ಎನ್ನುತ್ತಾರೆ ಜಿಲ್ಲಾ ಕಾರ್ಮಿಕ ಇಲಾಖೆ ಅಧಿಕಾರಿ ವರಲಕ್ಷ್ಮಿ.

ಗೌರಿಬಿದನೂರಿನ ಇಟ್ಟಿಗೆ ಕಾರ್ಖಾನೆಯಲ್ಲಿದ್ದ ಬಿಹಾರ ಮೂಲದ ಬಾಲ ಕಾರ್ಮಿಕರನ್ನು ಸಹ ರಕ್ಷಿಸಲಾಗಿತ್ತು ಎಂದು ಹೇಳಿದರು.

ರಾಜ್ಯದಲ್ಲಿ ₹ 59.16 ಕೋಟಿ ಮೌಲ್ಯದ ಡ್ರಗ್ಸ್ ನಾಶ

ಬೆಂಗಳೂರು: ರಾಜ್ಯದ ಪೊಲೀಸರು ಕಾರ್ಯಾಚರಣೆ ನಡೆಸಿ ಜಪ್ತಿ ಮಾಡಿರುವ ₹ 59.16 ಕೋಟಿ ಮೌಲ್ಯದ ಡ್ರಗ್ಸ್ ನಾಶಪಡಿಸುವ ಪ್ರಕ್ರಿಯೆ ಆರಂಭಿಸಲಾಗಿದೆ.

'ರಾಜ್ಯದ ಎಲ್ಲ ಪೊಲೀಸ್ ಕಮಿಷನರೇಟ್, ಜಿಲ್ಲಾ ಪೊಲೀಸ್, ರೈಲ್ವೆ ಪೊಲೀಸ್ ಠಾಣೆ ವ್ಯಾಪ್ತಿಗಳಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿ ಡ್ರಗ್ಸ್ ಜಪ್ತಿ ಮಾಡಿದ್ದಾರೆ. ಇಂಥ ಡ್ರಗ್ಸ್ ನಾಶಪಡಿಸಲು ನ್ಯಾಯಾಲಯ ಅನುಮತಿ ನೀಡಿದ್ದು, ಫೆ.8 ಮತ್ತು 9ರಂದು ಪ್ರಕ್ರಿಯೆ ನಡೆಯಲಿದೆ' ಎಂದು ಪೊಲೀಸ್ ಇಲಾಖೆ ಪ್ರಕಟಣೆ ತಿಳಿಸಿದೆ.

'ಗಾಂಜಾ, ಬ್ರೌನ್ ಶುಗರ್, ಹೆರಾಯಿನ್, ಚರಸ್, ಎಂಡಿಎಂಎ, ಎಲ್‌ಎಸ್‌ಡಿ ಕಾಗದ ಚೂರುಗಳು ಸೇರಿದಂತೆ ವಿವಿಧ ಪ್ರಕಾರದ ಡ್ರಗ್ಸ್ ಜಪ್ತಿ ಮಾಡಲಾಗಿದೆ. ಆಯಾ ಪೊಲೀಸ್ ಕಮಿಷನರೇಟ್ ಹಾಗೂ ಜಿಲ್ಲಾ ಪೊಲೀಸ್ ವ್ಯಾಪ್ತಿಗಳಲ್ಲಿ ಡ್ರಗ್ಸ್ ನಾಶಪಡಿಸುವ ಕೆಲಸ ನಡೆಯಲಿದೆ' ಎಂದು ಹೇಳಿದೆ.


'ದಾಬಸ್‌ಪೇಟೆ ಕೈಗಾರಿಕಾ ಪ್ರದೇಶದಲ್ಲಿರುವ ಕರ್ನಾಟಕ ತ್ಯಾಜ್ಯ ನಿರ್ವಹಣೆ ಯೋಜನೆ ಘಟಕದಲ್ಲಿ ಫೆ. 9ರಂದು ಡ್ರಗ್ಸ್ ನಾಶಪಡಿಸುವ ಕಾರ್ಯಕ್ರಮವಿದೆ. ಗೃಹ ಸಚಿವ ಜಿ. ಪರಮೇಶ್ವರ, ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಹಾಜರಿರಲಿದ್ದಾರೆ' ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಚಿಕ್ಕಬಾಣಾವರ: ಹದಗೆಟ್ಟ ರಸ್ತೆಯಲ್ಲಿ ವಾಹನ ಸವಾರರ ಪರದಾಟ

ಡಾಂಬರು ಕಾಣದ ಅಂದಾನಪ್ಪ ಲೇಔಟ್ ರಸ್ತೆ

ಪೀಣ್ಯ ದಾಸರಹಳ್ಳಿ: ಚಿಕ್ಕಬಾಣಾವರ ಪುರಸಭೆ ವ್ಯಾಪ್ತಿಯ ಗಣಪತಿ ನಗರದ ರಸ್ತೆಯಿಂದ ತಮ್ಮೇನಹಳ್ಳಿ ಕಡೆಗೆ ಸಂಪರ್ಕಿಸುವ ಅಂದಾನಪ್ಪ ಲೇಔಟ್ ರಸ್ತೆ ಗುಂಡಿಮಯವಾಗಿದೆ. ಈ ರಸ್ತೆಗೆ ಇದುವರೆಗೂ ಡಾಂಬರು ಹಾಕಿಲ್ಲ.

ಚಿಕ್ಕಬಾಣಾವರ ಗ್ರಾಮ ಪಂಚಾಯಿತಿಯನ್ನು ಪುರಸಭೆಯಾಗಿ ಮೇಲ್ದರ್ಜೆಗೇರಿಸಿ ಎರಡು ವರ್ಷವಾದರೂ ಅಧಿಕಾರಿಗಳು ಇತ್ತ ಗಮನಹರಿಸದೆ ನಿರ್ಲಕ್ಷ್ಯ ವಹಿಸಿದ್ದಾರೆ. ಎಡಿಫೈ ಶಾಲೆಯಿಂದ ತಮ್ಮೇನಹಳ್ಳಿ, ಕುದುರೆಗೆರೆ ಅಂದಾನಪ್ಪ ಲೇಔಟ್ ಕಡೆಗೆ ನೇರ ಸಂಪರ್ಕ ಕಲ್ಪಿಸುವ ರಸ್ತೆ ಇದಾಗಿದ್ದು, ಸಂಪೂರ್ಣ ಕಿತ್ತುಹೋಗಿದೆ. ಇದರಿಂದ, ಶಾಲಾ–ಕಾಲೇಜಿಗೆ ತೆರಳುವ ವಿದ್ಯಾರ್ಥಿಗಳು ತಡವಾಗಿ ತಲುಪುತ್ತಿದ್ದಾರೆ. ದೂಳುಮಯ ರಸ್ತೆಯಲ್ಲಿ ವಾಹನ ಸಂಚಾರ ಮಾಡುವ ಪರಿಸ್ಥಿತಿ ಎದುರಾಗಿದೆ. ಇದರಿಂದ ಸ್ಥಳೀಯರಲ್ಲಿ ಅನಾರೋಗ್ಯ ಉಂಟಾಗುತ್ತಿದೆ.


ಗಣಪತಿನಗರದ ರಸ್ತೆಯಿಂದ ತಮ್ಮೇನಹಳ್ಳಿ ಕಡೆಗೆ ಹೋಗುವ ಅಂದಾನಪ್ಪ ಲೇಔಟ್ ರಸ್ತೆ

ಕಲ್ಲು, ಮಣ್ಣಿನಿಂದ ಕೂಡಿರುವ ರಸ್ತೆಯಲ್ಲಿ ವಾಹನ ಸಂಚಾರ ದುಸ್ತರವಾಗಿದ್ದು, ಹಲವಾರು ಅಪಘಾತಗಳು ಆಗಿವೆ. ಆದರೆ, ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಹಲವರು ಬಿದ್ದು, ಗಾಯ ಮಾಡಿಕೊಂಡಿದ್ದಾರೆ. ಆದ್ದರಿಂದ ಕೂಡಲೇ ಈ ರಸ್ತೆಯನ್ನು ದುರಸ್ತಿಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು ಎಂದು ಸ್ಥಳೀಯ ಆಗ್ರಹಿಸಿದ್ದಾರೆ.

ದೂಳಿನ ಸಮಸ್ಯೆ



ಅಂದಾನಪ್ಪ ಲೇಔಟ್ ರಸ್ತೆ ಹಲವಾರು ವರ್ಷಗಳಿಂದ ಡಾಂಬರೀಕರಣ ಆಗಿಲ್ಲ. ಈ ರಸ್ತೆಯಲ್ಲಿ ಬೇಸಿಗೆ ಕಾಲದಲ್ಲಿ ದೂಳಿನ ಸಮಸ್ಯೆಯಾಗುತ್ತದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ರಸ್ತೆ ಅಭಿವೃದ್ಧಿಗೆ ಕ್ರಮ ಕೈಗೊಳ್ಳಬೇಕು.

ಬಿ.ಎಂ.ಚಿಕ್ಕಣ್ಣ, ಸ್ಥಳೀಯ ನಿವಾಸಿ

ಅಭಿವೃದ್ಧಿಯಾಗಿಲ್ಲ



ಇಲ್ಲಿನ ರಸ್ತೆ ಸಮಸ್ಯೆಯನ್ನು ಬಗೆಹರಿಸುವಂತೆ ಶಾಸಕ ಮುನಿರಾಜು ಅವರ ಗಮನಕ್ಕೆ ತರಲಾಗಿದೆ. ಆದರೆ ರಸ್ತೆ ಇನ್ನೂ ದೂಳುಮಯವಾಗಿದ್ದು, ಅಭಿವೃದ್ಧಿಯನ್ನು ಕಾಣುತ್ತಿಲ್ಲ.

ರಾಣಿ ಗೌಡ, ಸ್ಥಳೀಯ ನಿವಾಸಿ

ಶಾಸಕ ಎಸ್. ಮುನಿರಾಜು ಮಾತನಾಡಿ, 'ಅನುದಾನದ ಕೊರತೆಯಿಂದಾಗಿ ಅಭಿವೃದ್ಧಿಯ ಕೆಲಸಗಳು ನಡೆಯುತ್ತಿಲ್ಲ. ಈ ರಸ್ತೆ ಬಗ್ಗೆ ಹಲವಾರು ದೂರುಗಳು ಬಂದಿದ್ದು, ಕೂಡಲೇ ರಸ್ತೆ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುವುದು' ಎಂದು ತಿಳಿಸಿದರು.

ಅಂದಾನಪ್ಪ ಲೇಔಟ್ ರಸ್ತೆಯು ಹಾಳಾಗಿರುವ ಬಗ್ಗೆ ನಮ್ಮ ಗಮನಕ್ಕೆ ಬಂದಿದೆ. ಶೀಘ್ರವೇ ರಸ್ತೆ ಅಭಿವೃದ್ಧಿ ಮಾಡಲು ಕ್ರಮ ಕೈಗೊಳ್ಳಲಾಗುವುದು

ಎಚ್.ಎ. ಕುಮಾರ್, ಚಿಕ್ಕಬಾಣಾವರ ಪುರಸಭೆ ಮುಖ್ಯ ಅಧಿಕಾರಿ

ನಾರಾಯಣಗೌಡ ಕಾಂಗ್ರೆಸ್‌ಗೆ?

ಪ್ರಜಾವಾಣಿ ವಾರ್ತೆ

ಮಂಡ್ಯ: ಬಿಜೆಪಿ ಮುಖಂಡ ಕೆ.ಸಿ.ನಾರಾಯಣಗೌಡ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ್ದರೆನ್ನಲಾದ ಚಿತ್ರವೊಂದು ಜಾಲತಾಣಗಳಲ್ಲಿ ಹರಿದಾಡುತ್ತಿದ್ದು, 'ಅವರು ಶೀಘ್ರ ಕಾಂಗ್ರೆಸ್‌ಗೆ ಸೇರ್ಪಡೆಯಾಗಲಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಕಳೆದ ವಿಧಾನಸಭಾ ಚುನಾವಣೆ ವೇಳೆಯೇ ಅವರು ಕಾಂಗ್ರೆಸ್ ಸೇರುತ್ತಾರೆಂಬ ಸುದ್ದಿ ಹರಡಿತ್ತು. ಕೇಂದ್ರ ಸಚಿವ ಅಮಿತ್ ಶಾ, ಅವರ ಮನವೊಲಿಸಿ ಬಿಜೆಪಿಯಲ್ಲೇ ಉಳಿಸಿಕೊಂಡಿದ್ದರು. ಕೆ.ಆರ್.ಪೇಟೆ ಕ್ಷೇತ್ರದಿಂದ ಸ್ಪರ್ಧಿಸಿದ್ದ ನಾರಾಯಣಗೌಡ 3ನೇ ಸ್ಥಾನ ಪಡೆದಿದ್ದರು.

'ಈಗ ಮತ್ತೊಮ್ಮೆ ಕಾಂಗ್ರೆಸ್ ಕದ ತಟ್ಟಿರುವ ಅವರು ಮುಖ್ಯಮಂತ್ರಿಯೊಂದಿಗೆ ರಹಸ್ಯ ಸಭೆಯಲ್ಲಿ ಮಾತನಾಡಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಕಾಂಗ್ರೆಸ್ ಟಿಕೆಟ್ ಕೇಳಿದ್ದಾರೆ' ಎಂಬ ಸುದ್ದಿಗಳು ಹರಿದಾಡುತ್ತಿವೆ.

ಮೈಸೂರು ರೇಸ್

ಭರತ್ ಗೆಲ್ಲುವ ನಿರೀಕ್ಷೆ

ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಮೆಮೋರಿಯಲ್ ಮಿಲಿಯನ್ ಶುಕ್ರವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಭರತ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ.

1ನೇ ರೇಸ್: ಹಿಯರ್ ಐ ಕಮ್ 11, ಗೋಲ್ಡನ್ ಬರ್ಡ್ 1, ರೈಸ್ ಎ ಬಕ್ 8
2ನೇ ರೇಸ್: ರೈಸಿಂಗ್ ಸನ್ 1, ಬ್ರೇಕ್ ಅವೇ 5, ಪಿಟೈಟ್ಸ್ ಚಾಯ್ಸ್ 10
3ನೇ ರೇಸ್: ಟ್ವಿಲೈಟ್ ಫೇಮ್ 4, ಡಲ್ಲಾಸ್ 8, ಆರಿಲ್ 5
4ನೇ ರೇಸ್: ಕೋಡ್ ಆಫ್ ಹಾನರ್ 9. ನ್ಯಾಚುರಲ್ ಒನ್ 5, ಗಿಂಟೋಕಿ 7
5ನೇ ರೇಸ್: ಆಲ್‌ಗೋಜ್ 5, ಸಿಯೊಲ್‌ಫಾರ್ ಬುಲೆಟ್ 2, ಮಿಲೊಸ್ 10
6ನೇ ರೇಸ್: ಭರತ್ 2, ರೋಡ್ ರನ್ನರ್ 4
7ನೇ ರೇಸ್: ಪರ್ಫೆಕ್ಟ್ ಜಸ್ಟೀಸ್ 8, ಇಂಡಿಯನ್ ಗ್ಲೋರಿ 6, ಗೋಲ್ಡ್ ಕ್ರೆಸ್ಟ್ 9
8ನೇ ರೇಸ್: ರನ್ನಿಂಗ್ ಬೋಲ್ಟ್ 2, ಕಿಂಗ್ ಆಫ್ ಕೇಸರಿ 9, ರೂಮರ್ ಲೇಡಿ 5

ಉತ್ತಮ ಬೆಟ್: ರೈಸಿಂಗ್ ಸನ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

ಹುತ್ರಿದುರ್ಗ: ದೋಷಪೂರಿತ ಆಹಾರ ಸೇವನೆ ಶಂಕೆ

40ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಸ್ವಸ್ಥ

ಪ್ರಜಾವಾಣಿ ವಾರ್ತೆ

ಕುಣಿಗಲ್(ತುಮಕೂರು): ತಾಲ್ಲೂಕಿನ ಹುತ್ರಿದುರ್ಗ ಹೋಬಳಿಯ ಸೀನಪ್ಪನಹಳ್ಳಿ ಅಂಬಾಭವಾನಿ ಪ್ರೌಢಶಾಲೆಯ 40ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಬುಧವಾರ ಮಧ್ಯಾಹ್ನ ಬಿಸಿಯೂಟ ಸೇವಿಸಿದ ನಂತರ ಅಸ್ವಸ್ಥಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಶಾಲೆ ಮುಗಿದ ನಂತರ ಮನೆಗೆ ತೆರಳಿದ ವಿದ್ಯಾರ್ಥಿಗಳಿಗೆ ರಾತ್ರಿ ವಾಂತಿ, ಭೇದಿ, ತಲೆಸುತ್ತು ಕಾಣಿಸಿಕೊಂಡಿದೆ. ಆತಂಕಗೊಂಡ ಪೋಷಕರು ಮಕ್ಕಳನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ. ಗುರುವಾರ ಶಾಲೆಗೆ ಬಂದ ಕೆಲವು ವಿದ್ಯಾರ್ಥಿಗಳಿಗೂ ಮೊದಲು ಸುಸ್ತು, ತಲೆಸುತ್ತು ಕಾಣಿಸಿಕೊಂಡು ನಂತರ ವಾಂತಿಯಾಗಿದೆ. ನಂತರ ಇತರ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೂ ವಾಂತಿ ಶುರುವಾಗಿದೆ.


ಕುಣಿಗಲ್ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ವಿದ್ಯಾರ್ಥಿಗಳು

ಎಲ್ಲರಿಗೂ ಇಪ್ಪಾಡಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ನೀಡಿ, ನಂತರ ಕುಣಿಗಲ್ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಎಲ್ಲರ ಆರೋಗ್ಯದಲ್ಲಿ ಸುಧಾರಣೆ ಕಂಡು ಬಂದಿದೆ.

ದೋಷಪೂರಿತ ಆಹಾರ ಸೇವನೆಯಿಂದಾಗಿ ಆರೋಗ್ಯದಲ್ಲಿ ಏರುಪೇರಾಗಿದೆ ಎಂದು ಆಸ್ಪತ್ರೆಯ ಮಕ್ಕಳ ತಜ್ಞೆ ಸುಮಾ, ಆಡಳಿತ ವೈದ್ಯಾಧಿಕಾರಿ ಗಣೇಶ್ ಬಾಬು, ಮಂಜುನಾಥ ಸ್ಮರಣ್ ಅಭಿಪ್ರಾಯ ಪಟ್ಟಿದ್ದಾರೆ.

ಶಾಲೆಯ ಪಕ್ಕದಲ್ಲಿರುವ ಮಾವಿನ ತೋಟದ ಮರಗಳಿಗೆ ಬುಧವಾರ ಕ್ರಿಮಿನಾಶಕ ಸಿಂಪಡಿಸಲಾಗಿತ್ತು. ಕ್ರಿಮಿನಾಶಕ ಆಹಾರದಲ್ಲಿ ಬೆರೆತು ಇಲ್ಲವೇ ಗಾಳಿಯಲ್ಲಿ ಬೆರೆತು ವ್ಯತ್ಯಾಸ ವಾಗಿರಬಹುದು ಎಂದು ಕೆಲವು ಪೋಷಕರು ಅಭಿಪ್ರಾಯಪಟ್ಟಿದ್ದಾರೆ.

ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಜೋಸೆಫ್, ತಾಲ್ಲೂಕು ಆರೋಗ್ಯಾಧಿಕಾರಿ ಮರಿಯಪ್ಪ, ಪಿಎಸ್‌ಐ ಕೃಷ್ಣಪ್ರಸಾದ್ ಮತ್ತು ಸಿಬ್ಬಂದಿ ಆಸ್ಪತ್ರೆಗೆ ಭೇಟಿ ನೀಡಿ ಮಾಹಿತಿ ಪಡೆದರು.



ನೀರಿಗೆ ತತ್ವಾರ

ಬೇಸಿಗೆಯ ತಾಪಮಾನ ಏರುತ್ತಿದ್ದಂತೆ ಯಶವಂತಪುರ ವಿಧಾನಸಭಾ ಕ್ಷೇತ್ರದ ಅಂದ್ರಹಳ್ಳಿಯ ಕೆಲವು ಪ್ರದೇಶಗಳಲ್ಲಿ ನೀರಿನ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದ್ದು, ಟ್ಯಾಂಕರ್ ಮೂಲಕ ಪೂರೈಸುತ್ತಿರುವ ನೀರನ್ನು ಮಹಿಳೆಯರು ಸಂಗ್ರಹಿಸುತ್ತಿರುವುದು ಕಂಡುಬಂತು

–ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ಸುಧಾಕರ್‌ಗೆ ಟಿಕೆಟ್ ನೀಡಲು ಮುಖಂಡರ ಆಗ್ರಹ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಮಾಜಿ ಸಚಿವ ಡಾ.ಕೆ.ಸುಧಾಕರ್ ಅವರಿಗೆ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ನೀಡುವಂತೆ ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಮುಖಂಡರು ಒಕ್ಕೊರಲಿನಿಂದ ಆಗ್ರಹಿಸಿದರು.

ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮರಳುಕುಂಟೆ ಕೃಷ್ಣಮೂರ್ತಿ, 'ಈ ಭಾಗದಲ್ಲಿ ಬಿಜೆಪಿಗೆ ಮತಗಳಿಕೆ ಕಡಿಮೆ ಇತ್ತು. ಎಂ.ಟಿ.ಬಿ ನಾಗರಾಜ್ ಹಾಗೂ ಡಾ.ಕೆ. ಸುಧಾಕರ್ ಅವರು ಬಿಜೆಪಿಗೆ ಬಂದರು. ಕೋಲಾರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಪಕ್ಷ ಸಂಘಟನೆಯಲ್ಲಿ ಪ್ರಮುಖ ಪಾತ್ರವಹಿಸಿದರು' ಎಂದರು.

ಕೋಲಾರ: ಎಚ್‌ಡಿಕೆಯಿಂದ ಮಾಹಿತಿ ಸಂಗ್ರಹ

ಜೆಡಿಎಸ್ ಅಭ್ಯರ್ಥಿ ಆಯ್ಕೆಗೆ ಸಮೀಕ್ಷೆ

ಪ್ರಜಾವಾಣಿ ವಾರ್ತೆ

ಕೋಲಾರ: 'ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಕೋಲಾರ ಕ್ಷೇತ್ರದ ಟಿಕೆಟ್ ಜೆಡಿಎಸ್‌ಗೆ ಲಭಿಸುವ ಸಾಧ್ಯತೆ ಹೆಚ್ಚಿದ್ದು, ಅಭ್ಯರ್ಥಿಗಳ ಆಯ್ಕೆಗೆ ಸಂಬಂಧಿಸಿದಂತೆ ಪಕ್ಷದ ರಾಜ್ಯ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಸರ್ವೆ ನಡೆಸುತ್ತಿದ್ದಾರೆ' ಎಂದು ವಿಧಾನ ಪರಿಷತ್ ಸದಸ್ಯ, ಕೋಲಾರ ಕ್ಷೇತ್ರದ ಜೆಡಿಎಸ್ ಸಹ ಉಸ್ತುವಾರಿ ಇಂಚರ ಗೋವಿಂದರಾಜು ಸುಳಿವು ನೀಡಿದ್ದಾರೆ.

'ಮುಳಬಾಗಿಲು ಶಾಸಕ ಸಮೃದ್ಧಿ ಮಂಜುನಾಥ್, ವಿಧಾನಸಭೆ ಚುನಾವಣೆಯಲ್ಲಿ ಪರಾಜಿತ ಅಭ್ಯರ್ಥಿಗಳಾದ ಬಂಗಾರಪೇಟೆ ಕ್ಷೇತ್ರದ ಮಲ್ಲೇಶಬಾಬು ಹಾಗೂ ದೇವನಹಳ್ಳಿ ಕ್ಷೇತ್ರದ ನಿಸರ್ಗ ನಾರಾಯಣಸ್ವಾಮಿ ಟಿಕೆಟ್ ಆಕಾಂಕ್ಷಿಗಳಾಗಿದ್ದಾರೆ. ಇವರ ಬಗ್ಗೆ ಕ್ಷೇತ್ರದಲ್ಲಿ ಕುಮಾರಸ್ವಾಮಿ ಮಾಹಿತಿ ಸಂಗ್ರಹಿಸುತ್ತಿದ್ದು, ಸರ್ವೆ ವರದಿ ಬಂದ ತಕ್ಷಣ ಹೆಸರು ಪ್ರಕಟಿಸಲಿದ್ದಾರೆ' ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



ಕೋಲಾರ ರಿಂಗ್ ರಸ್ತೆಗೆ ₹ 100 ಕೋಟಿ ಅನುದಾನ ಮೀಸಲಿಟ್ಟಿರುವುದು ಸ್ವಾಗತಾರ್ಹ. ಇದು ಬಹು ವರ್ಷಗಳ ಬೇಡಿಕೆ. ಡಿಪಿಆರ್ ಮಾಡಲು ಜಿಲ್ಲಾ ಉಸ್ತುವಾರಿ ಸಚಿವರು ಸೂಚನೆ ನೀಡಿದ್ದಾರೆ

ಇಂಚರ ಗೋವಿಂದರಾಜು, ವಿಧಾನ ಪರಿಷತ್ ಸದಸ್ಯ

'ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡು ಈ ಬಾರಿ ಚುನಾವಣೆ ಎದುರಿಸುತ್ತಿದ್ದೇವೆ. ಗೆಲುವಿಗೆ ಅವಕಾಶವಿದ್ದು, ಕೋಲಾರ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಡುವಂತೆ ಮನವಿ ಮಾಡಿದ್ದೇವೆ. ಕುಮಾರಸ್ವಾಮಿ ಕೂಡ ಸಕಾರಾತ್ಮಕವಾಗಿ ಸ್ಪಂದಿಸಿ ಬಿಜೆಪಿ ಮುಖಂಡರ ಜೊತೆ ಮಾತನಾಡುವುದಾಗಿ ಹೇಳಿದ್ದಾರೆ. ವಿಧಾನಸಭೆ ಚುನಾವಣೆಯಲ್ಲಿ ಕ್ಷೇತ್ರ ವ್ಯಾಪಿ ಎಂಟು ಕ್ಷೇತ್ರಗಳ ಪೈಕಿ ಮೂರರಲ್ಲಿ ಜೆಡಿಎಸ್ ಶಾಸಕರಿದ್ದಾರೆ. ಜೆಡಿಎಸ್‌ಗೆ ಶೇಕಡವಾರು ಮತ ಕೂಡ ಹೆಚ್ಚು ಬಂದಿವೆ. ಇದರ ಜತೆಗೆ ಬಿಜೆಪಿ ಮತ ದೊರೆಯುವುದರಿಂದ ಜೆಡಿಎಸ್ ಅಭ್ಯರ್ಥಿ ಗೆಲುವು ಸುಗಮ ಎಂಬದನ್ನು ಗಮನಕ್ಕೆ ತರಲಾಗಿದೆ' ಎಂದು ಹೇಳಿದರು.

ಬಿಜೆಪಿ ಮುಖಂಡ ಸಿ.ಟಿ.ರವಿ ಆರೋಪ

ಸುಳ್ಳಿನ ಬ್ರಹ್ಮಾಸ್ತ್ರ ಪ್ರಯೋಗಿಸುತ್ತಿರುವ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಕುಣಿಗಲ್ (ತುಮಕೂರು): ಲೋಕಸಭಾ ಚುನಾವಣೆ ಗೆಲ್ಲಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬತ್ತಳಿಕೆಯಿಂದ ಸುಳ್ಳುಗಳ ಬ್ರಹ್ಮಾಸ್ತ್ರ ಬಿಡುತ್ತಿದ್ದಾರೆ ಎಂದು ಬಿಜೆಪಿ ಮುಖಂಡ ಸಿ.ಟಿ.ರವಿ ಟೀಕಿಸಿದರು.

ಸಿದ್ದರಾಮಯ್ಯ ಪ್ರಯೋಗಿಸುತ್ತಿರುವ ಸುಳ್ಳಿನ ಅಸ್ತ್ರಗಳಿಗೆ ಬಿಜೆಪಿ ಸತ್ಯದ ಪ್ರತ್ಯಾಸ್ತ್ರಗಳೊಂದಿಗೆ ಪ್ರತಿದಾಳಿ ಮಾಡಬೇಕಿದೆ ಎಂದು ಕಾರ್ಯಕರ್ತರಿಗೆ ಸಲಹೆ ನೀಡಿದರು.

ಪಟ್ಟಣದಲ್ಲಿ ಗುರುವಾರ ನಡೆದ ಗ್ರಾಮ ಚಲೊ ಅಭಿಯಾನದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಜಾತಿ ರಾಜಕಾರಣ ಮಾಡುತ್ತಿರುವ ಸಿದ್ದರಾಮಯ್ಯ 'ಜಾತಿ ರಾಜಕಾರಣದ ಮ್ಯಾನ್ ಆಫ್ ದಿ ಸಿರೀಸ್' ಎಂದು ಲೇವಡಿ ಮಾಡಿದರು.


ಕುಣಿಗಲ್‌ನಲ್ಲಿ ನಡೆದ ಬಿಜೆಪಿ ಕಾರ್ಯಕರ್ತರ ಸಭೆಯನ್ನು ಸಿ.ಟಿ.ರವಿ ಉದ್ಘಾಟಿಸಿದರು

ಸಿದ್ದರಾಮಯ್ಯ ಮೊದಲಿಗೆ 'ಸಿದ್ರಾಮುಲ್ಲಾ ಖಾನ್' ಎಂದು ಹೆಸರು ಪಡೆದಿದ್ದರು. ಈಗ 'ಸುಳ್ಳಿನ ರಾಮಯ್ಯ' ಎಂಬ ಬಿರುದು ನೀಡಬಹುದು ಎಂದರು.

ಬಿಜೆಪಿ ಪರವಾದ ಹಿಂದೂಗಳ ಮತಗಳನ್ನು ಪಡೆಯಲು ಕಾಂತರಾಜ ವರದಿ ಮೂಲಕ ಜಾತಿ, ಜಾತಿ ನಡುವಿನ ಸಂಘರ್ಷಕ್ಕೆ ನಾಂದಿ ಹಾಡುತ್ತಿದ್ದಾರೆ. ಶಾದಿ ಭಾಗ್ಯ, ಮಕ್ಕಳ ಪ್ರವಾಸ ಭಾಗ್ಯದಲ್ಲೂ ಜಾತಿ ರಾಜಕಾರಣ ಮಾಡಿ, ಕನಕ, ಬಸವ ಮತ್ತು ಕುವೆಂಪು ತತ್ವಗಳನ್ನು ಗಾಳಿಗೆ ತೂರಿ ರಾಜಕಾರಣ ಮಾಡುತ್ತಿದ್ದಾರೆ ಎಂದು ಕುಟುಕಿದರು.

ಕೇಂದ್ರ ಸರ್ಕಾರದ ತೆರಿಗೆ ಪಾಲಿನಲ್ಲಿ ಅನ್ಯಾಯವಾಗಿದೆ ಎಂದು ದೆಹಲಿಯಲ್ಲಿ ಸುಳ್ಳು ಹೇಳುತ್ತಿದ್ದಾರೆ. ಮನಮೋಹನ್ ಸಿಂಗ್ ಅವರ ಹತ್ತು ವರ್ಷದ ಆಡಳಿತದಲ್ಲಿ ರಾಜ್ಯಕ್ಕೆ ₹81,795 ಕೋಟಿ ಬಿಡುಗಡೆಯಾಗಿದ್ದರೆ, ಮೋದಿ ಆಡಳಿತದ ಹತ್ತು ವರ್ಷದಲ್ಲಿ ₹2,82,791 ಕೋಟಿ ತೆರಿಗೆ ಪಾಲಿನ ಹಣ ಬಿಡುಗಡೆಯಾಗಿದೆ. ಇನ್ನೂ ಅನುದಾನ ಮತ್ತು ಸಬ್ಸಿಡಿ ಹಣದಲ್ಲೂ ಕಾಂಗ್ರೆಸ್ ಸರ್ಕಾರಕ್ಕಿಂತಲೂ ಹೆಚ್ಚು ಹಣ ಬಿಡುಗಡೆಯಾಗಿದೆ ಎಂದು ಸಮರ್ಥಿಸಿಕೊಂಡರು.

ಕುದುರೆ ಫಾರ್ಮ್: ಕನಕಪುರದವರ ಕಣ್ಣು

ಮಾರಿ ಕಣ್ಣು ಹೋರಿ ಮೇಲೆ ಎಂಬಂತೆ ಕನಕಪುರದ ಸಹೋದರರ ಕಣ್ಣು ಕುಣಿಗಲ್ ಕುದುರೆ ಫಾರ್ಮ್ ಮೇಲೆ ಬಿದ್ದಿದೆ ಎಂದು ಸಿ.ಟಿ. ರವಿ ವಾಗ್ದಾಳಿ ನಡೆಸಿದರು.

ಬೆಂಗಳೂರಿನಲ್ಲಿ ಕಟ್ಟಡ ನಿರ್ಮಾಣಕ್ಕಾಗಿ ಪರವಾನಗಿ ನೀಡಲು ಚದರ ಅಡಿಗೆ ವಸೂಲಿ ಮಾಡುತ್ತಿರುವ ಹಣ ಸರ್ಕಾರದ ಖಾತೆಗೆ ಹೋಗದೆ ಕನಕಪುರದವರ ಖಾತೆಗೆ ಹೋಗುತ್ತಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಆರೋಪ ಮಾಡಿದರು.

ಚನ್ನವೀರ ಶಿವಾಚಾರ್ಯ ಶ್ರೀಗಳಿಗೆ ಪ್ರಶಸ್ತಿ


ಚನ್ನವೀರ ಶಿವಾಚಾರ್ಯ ಸ್ವಾಮೀಜಿ

ಧಾರವಾಡ: ನಗರದ ಮುರುಘಾ ಮಠ ನೀಡುವ ಮೃತ್ಯುಂಜಯ–ಮಹಾಂತ ಪ್ರಶಸ್ತಿಗೆ ಬೀದರ್ ಜಿಲ್ಲೆಯ ಹಾರಕೂಡದ ಚನ್ನವೀರ ಮಠದ ಚನ್ನವೀರ ಶಿವಾಚಾರ್ಯ ಸ್ವಾಮೀಜಿ ಅವರನ್ನು ಆಯ್ಕೆ ಮಾಡಲಾಗಿದೆ.

ಫೆಬ್ರುವರಿ 13ರಂದು ಮುರುಘಾಮಠದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಪ್ರಶಸ್ತಿಯು ₹ 25 ಸಾವಿರ ನಗದು, ಚಿನ್ನದ ಪದಕ ಒಳಗೊಂಡಿದೆ ಎಂದು ಮುರುಘಾಮಠದ ಮಲ್ಲಿಕಾರ್ಜುನ ಸ್ವಾಮೀಜಿ ತಿಳಿಸಿದ್ದಾರೆ.

ತಹಶೀಲ್ದಾರ್‌ಗೆ ವಾರಂಟ್ ಜಾರಿ

ಹಾರೋಹಳ್ಳಿ: ನ್ಯಾಯಾಲಯ ಆದೇಶ ಪಾಲಿಸದೆ ನಿರ್ಲಕ್ಷ್ಯ ಧೋರಣೆ ತೋರಿದ ಹಾರೋಹಳ್ಳಿ ತಾಲ್ಲೂಕು ತಹಶೀಲ್ದಾರ್ ವಿರುದ್ಧ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ ₹25 ಸಾವಿರ ಜಾಮೀನು ಸಹಿತ ದಸ್ತಗಿರಿ ವಾರೆಂಟ್ ಜಾರಿ ಮಾಡಿದೆ.

ಮತ್ತಿಕುಂಟೆ ಗ್ರಾಮ ಠಾಣಾ ವ್ಯಾಪ್ತಿಯ ಒಂದು ಎಕರೆ ಜಾಗ ಒತ್ತುವರಿ ಹಾಗೂ ಮಣಿಕೊಪ್ಪ ಗ್ರಾಮದ ಹಾದಿ ಒತ್ತುವರಿ ಪ್ರಕರಣದ ವಿಚಾರಣೆಯನ್ನು ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ ಗಂಭೀರವಾಗಿ ಪರಿಗಣಿಸಿ ಆದೇಶ ಹೊರಡಿಸಿದೆ.

ಫೆ.9ರಂದು ಬೆಳಗ್ಗೆ 11ಕ್ಕೆ ವಿಚಾರಣೆಗೆ ಹಾಜರಾಗಬೇಕೆಂದು ವಾರೆಂಟ್‌ನಲ್ಲಿ ಸೂಚಿಸಲಾಗಿದೆ.

ಮೆಟ್ರೊ ರೈಲು: ಭದ್ರಾ' ಟಿಬಿಎಂ ಕಾರ್ಯಾಚರಣೆ ಪೂರ್ಣ • ಪ್ರಕ್ರಿಯೆ ವೀಕ್ಷಿಸಿದ ಡಿ.ಕೆ. ಶಿವಕುಮಾರ್

2025ರೊಳಗೆ ಗುಲಾಬಿ ಮಾರ್ಗ ಪೂರ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ ಗುಲಾಬಿ ಮಾರ್ಗದಲ್ಲಿ 2025ರೊಳಗೆ ಸಂಚಾರ ಆರಂಭಗೊಳ್ಳಲಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುರಂಗ ಕೊರೆಯುವ ಮಷಿನ್ (ಟಿಬಿಎಂ) 'ಭದ್ರಾ' ಕಾರ್ಯಾಚರಣೆ ಪೂರ್ಣಗೊಳಿಸಿ ಹೊರಬರುವ ಪ್ರಕ್ರಿಯೆಯನ್ನು ಕೆ.ಜಿ. ಹಳ್ಳಿ ಮೆಟ್ರೊ ನಿಲ್ದಾಣದಲ್ಲಿ ಗುರುವಾರ ವೀಕ್ಷಿಸಿದ ಬಳಿಕ ಅವರು ಮಾತನಾಡಿದರು.

ಕಾಳೇನ ಅಗ್ರಹಾರದಿಂದ ನಾಗವಾರ ವರೆಗೆ 21.76 ಕಿ.ಮೀ.ನ ಈ ಮಾರ್ಗದಲ್ಲಿ 13.76 ಕಿ.ಮೀ. ಉದ್ದದ ಸುರಂಗ ಮಾರ್ಗ ನಿರ್ಮಾಣಗೊಳ್ಳುತ್ತಿದೆ. 9 ಸುರಂಗ ಮಾರ್ಗಗಳಲ್ಲಿ 8 ಪೂರ್ಣಗೊಂಡಿವೆ. ಇನ್ನೂ ಒಂದು ಸುರಂಗದಲ್ಲಿ ಕೊರೆಯುವ ಕಾರ್ಯ ನಡೆಯುತ್ತಿದ್ದು, ಮುಂದಿನ ತಿಂಗಳು ಅದೂ ಪೂರ್ಣಗೊಳ್ಳಲಿದೆ ಎಂದು ಮಾಹಿತಿ ನೀಡಿದರು.

ಈ ಹಂತದ ಮೆಟ್ರೊ ಕಾಮಗಾರಿ ಜವಾಬ್ದಾರಿಯನ್ನು ಅಬ್‌ಕಾಮ್, ಎಲ್ ಆ್ಯಂಡ್ ಟಿ ಮತ್ತು ಐಟಿಡಿ ಸಂಸ್ಥೆಗಳು ಗುತ್ತಿಗೆ ತೆಗೆದುಕೊಂಡಿವೆ. ಪ್ರಸ್ತುತ ಐಟಿಡಿ ಸಂಸ್ಥೆ ಕಾಮಗಾರಿ ನಡೆಸುತ್ತಿರುವ ಭಾಗದಲ್ಲಿ ಸುರಂಗ ಕೊರೆಯುವ ಕೆಲಸವನ್ನು ವೀಕ್ಷಿಸಲಾಯಿತು ಎಂದು ವಿವರ ನೀಡಿದರು.

'ನಮ್ಮ ಮೆಟ್ರೊ ಅಂತರರಾಷ್ಟ್ರೀಯ ಗುಣಮಟ್ಟ ಕಾಪಾಡಿಕೊಂಡಿದೆ. ದೆಹಲಿಗಿಂತ ಉತ್ತಮವಾದ ಕೆಲಸ ನಮ್ಮಲ್ಲಿ ನಡೆದಿದೆ. ಯಾವುದೇ ಹಂತದಲ್ಲೂ ಕೆಲಸದ ಗುಣಮಟ್ಟದಲ್ಲಿ ರಾಜಿಯಾಗಿಲ್ಲ' ಎಂದರು.




ಕೆ.ಜಿ. ಹಳ್ಳಿ ಮೆಟ್ರೊ ನಿಲ್ದಾಣದಲ್ಲಿ ಸುರಂಗ ಕೊರೆಯುವ ಮಷಿನ್ (ಟಿಬಿಎಂ) 'ಭದ್ರಾ' ಗುರುವಾರ ಕಾರ್ಯಾಚರಣೆ ಪೂರ್ಣಗೊಳಿಸುತ್ತಿರುವುದು (ಮೊದಲ ಚಿತ್ರ), 'ಭದ್ರಾ' ಕಾರ್ಯಾಚರಣೆ ಪ್ರಕ್ರಿಯೆಯನ್ನು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವೀಕ್ಷಿಸಿದರು –ಪ್ರಜಾವಾಣಿ ಚಿತ್ರಗಳು

ತುಮಕೂರು, ಆನೇಕಲ್‌ಗೆ 'ಮೆಟ್ರೊ': ವರದಿಗೆ ಸೂಚನೆ

ತುಮಕೂರು, ಆನೇಕಲ್, ಬಿಡದಿ ಮಾರ್ಗಗಳಲ್ಲಿ ಮೆಟ್ರೊ ವಿಸ್ತರಿಸಲು ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸುವಂತೆ ಸೂಚನೆ ನೀಡಲಾಗಿದೆ. ವರದಿ ಬಂದ ಮೇಲೆ ಮಾಹಿತಿ ನೀಡಲಾಗುವುದು. ಕೇಂದ್ರ ಸರ್ಕಾರದ ಪ್ರಾಯೋಜಕತ್ವವೂ ಇರುವುದರಿಂದ, ಅವರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಲಾಗುವುದು' ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

'ಬೆಂಗಳೂರಿನಲ್ಲಿ ಸುರಂಗ ರಸ್ತೆಗಳನ್ನು ಮಾಡುವ ಆಲೋಚನೆ ನಮ್ಮ ಮುಂದಿದೆ. ಎಷ್ಟು ಆಳ ಹೋಗಬೇಕಾಗುತ್ತದೆ. ಏನಾದರೂ ಅಡಚಣೆ ಉಂಟಾಗುತ್ತದೆಯೇ? ಸವಾಲುಗಳು ಏನು? ಎಂದು ತಿಳಿದುಕೊಳ್ಳಲು ಖುದ್ದಾಗಿ ಕಾಮಗಾರಿ ವೀಕ್ಷಣೆಗೆ ಬಂದಿದ್ದೇನೆ' ಎಂದು ವಿವರಿಸಿದರು.

'ದೇವನಹಳ್ಳಿ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಮೆಟ್ರೊ ಕಾಮಗಾರಿ ವೇಗದಿಂದ ಸಾಗುತ್ತಿದೆ. ಇನ್ನು ಮುಂದೆ ಪಿಲ್ಲರ್ ಅಳವಡಿಸುವ ಮಾರ್ಗದಲ್ಲಿ ಎರಡು ಹಂತದ ಮಾರ್ಗ ಮಾಡಲು ಸೂಚನೆ ನೀಡಲಾಗಿದೆ. ಮೇಲೆ ಮೆಟ್ರೊ ಮತ್ತು ಕೆಳಗೆ ರಸ್ತೆ ಇರುವಂತೆ 'ಡಬಲ್ ಡೆಕರ್' ನಿರ್ಮಾಣ ಮಾಡಬೇಕು. ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಈ ಆಲೋಚನೆಯನ್ನು ಅನುಷ್ಠಾನ ಮಾಡಲಾಗುವುದು' ಎಂದು ಹೇಳಿದರು.

'ಡಬಲ್ ಡೆಕರ್‌ನಿಂದ ಮೇಲ್ಸೇತುವೆ ನಿರ್ಮಾಣಕ್ಕೆ ಆಗುವ ವೆಚ್ಚದಲ್ಲಿ ಶೇ 60ರಷ್ಟು ಕಡಿಮೆಯಾಗಲಿದೆ. ಬಿಬಿಎಂಪಿ ಮತ್ತು ಬಿಎಂಆರ್‌ಸಿಎಲ್ ಜಂಟಿಯಾಗಿ ಈ ಯೋಜನೆ ರೂಪಿಸಲಿವೆ. ಬೆಂಗಳೂರಿನಲ್ಲಿ ಸಂಚಾರ ದಟ್ಟಣೆ ನಿಯಂತ್ರಣಕ್ಕಾಗಿ ಈ ರೀತಿಯ ಯೋಜನೆ ರೂಪಿಸಲಾಗಿದೆ' ಎಂದರು.

ಟಿಬಿಎಂ: 'ವರದ', 'ಅವನಿ', 'ಊರ್ಜ್ವಾ', 'ವಿಂಧ್ಯಾ', 'ಲವಿ', 'ವಮಿಕ', 'ರುದ್ರ' ಟನಲ್ ಬೋರಿಂಗ್ ಮಷಿನ್‌ಗಳು ಇಲ್ಲಿವರೆಗೆ ಕಾರ್ಯಾಚರಣೆ ಪೂರ್ಣಗೊಳಿಸಿವೆ. ವೆಂಕಟೇಶಪುರ–ಕಾಡುಗೊಂಡನಹಳ್ಳಿ (ಕೆ.ಜಿ. ಹಳ್ಳಿ) ಒಂದು ಸುರಂಗ ಮಾರ್ಗವನ್ನು 'ತುಂಗಾ' ಡಿಸೆಂಬರ್‌ನಲ್ಲಿ ಪೂರ್ಣಗೊಳಿಸಿತ್ತು. ಇನ್ನೊಂದು ಸುರಂಗವನ್ನು ಇದೀಗ ಪೂರ್ಣಗೊಳಿಸಿ 'ಭದ್ರಾ' ಹೊರಬಂದಿದೆ. ಸೌತ್ ರ‍್ಯಾಂಪ್ ನಿಲ್ದಾಣದಿಂದ ಲ್ಯಾಂಗ್‌ಫೋರ್ಡ್ ಟೌನ್ ಸುರಂಗ ಮಾರ್ಗವು (2.16 ಕಿ.ಮೀ.) ಮುಂದಿನ ತಿಂಗಳು ಪೂರ್ಣಗೊಳ್ಳಲಿದೆ. ಸುರಂಗ ಕೊರೆಯುವ ಕಾರ್ಯ ಶೇ 91ರಷ್ಟು ಮುಗಿದಿದೆ. ಒಟ್ಟು ಕಾಮಗಾರಿ ಶೇ 75ರಷ್ಟು ಆಗಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

1000 ಎಕರೆಯಲ್ಲಿ 'ಕೆಎಚ್‌ಐಆರ್ ಸಿಟಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಶೋಧನೆ, ಜ್ಞಾನದ ಅನ್ವೇಷಣೆಗೆ ಆದ್ಯತೆ ನೀಡುವ, ಆರೋಗ್ಯ ಸೇವೆ, ನವೋದ್ಯಮಗಳಿಗೆ ನೆಲೆ ಕಲ್ಪಿಸುವ ಉದ್ದೇಶದಿಂದ ನಗರದ ಹೊರವಲಯದ 1,000ಕ್ಕೂ ಹೆಚ್ಚು ಎಕರೆಯಲ್ಲಿ 'ಕೆಎಚ್‌ಐಆರ್ (ಜ್ಞಾನ, ಆರೋಗ್ಯ, ನಾವೀನ್ಯ, ಸಂಶೋಧನೆ) ಸಿಟಿ' ನಿರ್ಮಾಣವಾಗಲಿದೆ.

ಕೆಎಚ್‌ಐಆರ್ (KHIR - Knowledge, Health, Innovation and Research) ಸಿಟಿಯ ವಿನ್ಯಾಸ , ರೂಪುರೇಷೆಯ ಕುರಿತು ಬೋಸ್ಟನ್ ಕನ್ಸಲ್ಟೆನ್ಸಿ ಗ್ರೂಪ್(ಬಿಸಿಜಿ) ಸಿದ್ಧಪಡಿಸಿರುವ ಪ್ರಾತ್ಯಕ್ಷಿಕೆಯನ್ನು ಮೂಲ ಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ಅವರು ಗುರುವಾರ ವೀಕ್ಷಿಸಿದರು. ಬಳಿಕ, ಅಧಿಕಾರಿಗಳು ಮತ್ತು ನಿರ್ಮಾಣ ತಜ್ಞರ ಜತೆ ಮೊದಲ ಹಂತದ ಸಮಾಲೋಚನೆ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವ ಪಾಟೀಲ, 'ಕೆಎಚ್‌ಐಆರ್ ಸಿಟಿಯಲ್ಲಿ ಸಂಶೋಧನೆ, ನಾವೀನ್ಯ ಮತ್ತು ಮೂಲ ಮಾದರಿಗಳ ಅಭಿವೃದ್ಧಿಗೆ ಒತ್ತು ಕೊಡಲಾಗುವುದು. ಇಲ್ಲಿ ತಯಾರಿಕಾ ಚಟುವಟಿಕೆಗಳಿಗೆ ಅವಕಾಶ ಇರುವುದಿಲ್ಲ. ಮೊದಲ ಹಂತದಲ್ಲಿ ಒಟ್ಟು 1,000 ಎಕರೆಯಲ್ಲಿ ಈ ಸಿಟಿ ನಿರ್ಮಾಣವಾಗಲಿದೆ. ತಲಾ 200-300 ಎಕರೆಗಳಂತೆ ಹಂತಹಂತವಾಗಿ ಅಭಿವೃದ್ಧಿಪಡಿಸಬೇಕು ಎಂಬ ಸಲಹೆಯನ್ನು ತಜ್ಞರು ನೀಡಿದ್ದಾರೆ' ಎಂದರು.

ಈ ಸಿಟಿಯ ಶೇ 15ರಷ್ಟು ಜಾಗದಲ್ಲಿ ಸಂಶೋಧನಾ ವಿ.ವಿ.ಗಳು, ಶೈಕ್ಷಣಿಕ ಸಂಸ್ಥೆಗಳು, ಶೇ 15ರಷ್ಟು ಪ್ರದೇಶದಲ್ಲಿ ಆರೋಗ್ಯಸೇವಾ ಉದ್ದಿಮೆಗಳು, ಶೇ 20ರಷ್ಟು ಜಾಗದಲ್ಲಿ ನಾನಾ ಉದ್ಯಮಗಳ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರಗಳು ಮತ್ತು ಕಾರ್ಪೊರೇಟ್ ಕಚೇರಿಗಳು ಮತ್ತು ಶೇ 10ರಷ್ಟು ಜಾಗದಲ್ಲಿ ನವೋದ್ಯಮಗಳು, ಶೇ 20ರಷ್ಟು ಜಾಗದಲ್ಲಿ ವಸತಿ ಸಮುಚ್ಚಯಗಳು, ಶೇ 15ರಷ್ಟು ಪ್ರದೇಶದಲ್ಲಿ ವಾಣಿಜ್ಯ ಮಳಿಗೆಗಳು ಮತ್ತು ಶೇ 5ರಷ್ಟು ಜಾಗದಲ್ಲಿ ಸರ್ಕಾರಿ ಕಚೇರಿಗಳು ಹಾಗೂ ನಾಗರಿಕ ಸೇವಾ ಕೇಂದ್ರಗಳು ತಲೆ ಎತ್ತಲಿವೆ ಎಂದರು.

ಬೋಸ್ಟನ್ ಕನ್ಸಲ್ಟೆನ್ಸಿ ಗ್ರೂಪ್‌ನ ಹಿರಿಯ ಸಲಹೆಗಾರ ರಾಂಚ್ ಕಿಮ್ಬಾಲ್, ಮೂಲಸೌಕರ್ಯ ವಿಭಾಗದ ಮುಖ್ಯಸ್ಥ ಸುರೇಶ್ ಸುಬುಧಿ ಮತ್ತು ಅಭಿವೃದ್ಧಿ ತಜ್ಞ ಅದಿಲ್ ಇಕ್ರಂ ಅವರು ವಿಡಿಯೊ ಕಾನ್ಫರೆನ್ಸ್ ಮೂಲಕ ಭಾಗವಹಿಸಿದ್ದರು. ಕೈಗಾರಿಕಾ ಇಲಾಖೆ ಆಯುಕ್ತೆ ಗುಂಜನ್ ಕೃಷ್ಣ, ಕೈಗಾರಿಕಾ ಸಚಿವರ ತಾಂತ್ರಿಕ ಸಲಹೆಗಾರ ಅರವಿಂದ ಗಲಗಲಿ ಉಪಸ್ಥಿತರಿದ್ದರು.



ಕೆಎಚ್‌ಐಆರ್ ಸಿಟಿ ಸಂಪೂರ್ಣ ಖಾಸಗಿ ಹೂಡಿಕೆಯಿಂದ ಆಗಲಿದೆ. ನಗರದಿಂದ ಒಂದು ಗಂಟೆಯಲ್ಲಿ ತಲುಪುವಂತೆ ಈ ಸಿಟಿ ಇರಬೇಕು ಎನ್ನುವ ಸಲಹೆ ಬಂದಿದೆ
ಎಂ.ಬಿ.ಪಾಟೀಲ, ಸಚಿವ

ಸಮಗ್ರ ಕೃಷಿ ವಿವಿಯಾಗಿ ವಿ.ಸಿ.ಫಾರಂ?

ಜಿಲ್ಲಾ ಉಸ್ತುವಾರಿ ಸಚಿವರಿಂದ ಪ್ರಸ್ತಾವ ಸಲ್ಲಿಕೆ, ಬಜೆಟ್‌ನಲ್ಲಿ ಘೋಷಿಸುವರೇ ಮುಖ್ಯಮಂತ್ರಿ?

ಎಂ.ಎನ್.ಯೋಗೇಶ್

ಮಂಡ್ಯ: ತಾಲ್ಲೂಕಿನ ಐತಿಹಾಸಿಕ ವಿ.ಸಿ. ಫಾರಂಗೆ ಮೈಸೂರು ವಿಭಾಗದ 8 ಜಿಲ್ಲೆಗಳನ್ನೊಳಗೊಂಡಂತೆ 'ಸಮಗ್ರ ಕೃಷಿ ವಿಶ್ವವಿದ್ಯಾಲಯ' ರೂಪ ನೀಡಬೇಕು ಎಂಬ ಪ್ರಸ್ತಾವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲ್ಲಿಕೆಯಾಗಿದ್ದು, ರಾಜ್ಯ ಬಜೆಟ್‌ನಲ್ಲಿ ಅದು ಸಾಕಾರಗೊಳ್ಳಲಿದೆ ಎಂಬ ನಿರೀಕ್ಷೆ ಈ ಭಾಗದ ರೈತ ಮುಖಂಡರು ಹಾಗೂ ಕೃಷಿ ವಿಜ್ಞಾನಿಗಳಲ್ಲಿದೆ.

ರಾಜ್ಯದ ನಾಲ್ಕು ಕಂದಾಯ ವಿಭಾಗಗಳಲ್ಲಿ ತಲಾ ಒಂದೊಂದು ಕೃಷಿ ವಿಶ್ವ ವಿದ್ಯಾಲಯಗಳಿವೆ. 9 ಜಿಲ್ಲೆಗಳನ್ನೊಳಗೊಂಡ ಬೆಂಗಳೂರು ವಿಭಾಗದಲ್ಲಿ ಬೆಂಗಳೂರು ಕೃಷಿ ವಿವಿ (ಜಿಕೆವಿಕೆ), 7 ಜಿಲ್ಲೆಗಳನ್ನು ಒಳಗೊಂಡ ಬೆಳಗಾವಿ ವಿಭಾಗದಲ್ಲಿ ಧಾರವಾಡ ಕೃಷಿ ವಿವಿ, 7 ಜಿಲ್ಲೆಗಳುಳ್ಳ ಕಲಬುರಗಿ ವಿಭಾಗದಲ್ಲಿ ರಾಯಚೂರು ಕೃಷಿ ವಿವಿ ಇವೆ. ಜೊತೆಗೆ ಬಾಗಲಕೋಟೆ ತೋಟಗಾರಿಕೆ ವಿವಿ ಇದೆ.

ಆದರೆ, 8 ಜಿಲ್ಲೆಗಳನ್ನೊಳಗೊಂಡ ಮೈಸೂರು ವಿಭಾಗದಲ್ಲಿ ಒಂದೂ ಕೃಷಿ ವಿವಿ ಇಲ್ಲದ ಕಾರಣ ಮಂಡ್ಯದ ವಿ.ಸಿ.ಫಾರಂ (ವಿಶ್ವೇಶ್ವರಯ್ಯ ಕೆನಾಲ್ ಫಾರ್ಮ್)ಗೆ ಕೃಷಿ, ತೋಟಗಾರಿಕೆ, ಅರಣ್ಯ, ಪಶುವೈದ್ಯಕೀಯ ವಿಜ್ಞಾನಗಳನ್ನು ಒಳಗೊಂಡಂತೆ ಸಮಗ್ರ ಕೃಷಿ ವಿಶ್ವವಿದ್ಯಾಲಯವನ್ನಾಗಿ ಘೋಷಣೆ ಮಾಡಬೇಕು ಎಂಬ ಒತ್ತಾಯ ಮೊದಲಿನಿಂದಲೂ ಇದೆ.

ಸದ್ಯ ವಿಸಿ.ಫಾರಂ ಬೆಂಗಳೂರು ಕೃಷಿ ವಿವಿ ಅಡಿ ನಡೆಯುತ್ತಿದೆ. 650 ಎಕರೆ ವಿಶಾಲ ಕೃಷಿ ಭೂಮಿಯ ನಡುವೆ ಅರಳಿ ನಿಂತಿರುವ ವಿಸಿ ಫಾರಂನಲ್ಲಿ ವಲಯ ಕೃಷಿ ಸಂಶೋಧನಾ ಕೇಂದ್ರ (ಸಂಶೋಧನೆ), ಕೃಷಿ ವಿಜ್ಞಾನ ಕೇಂದ್ರ (ವಿಸ್ತರಣೆ) ಹಾಗೂ ಕೃಷಿ ಮಹಾವಿದ್ಯಾಲಯ (ಬೋಧನೆ) ವಿಭಾಗಗಳಿವೆ. ಸಂಶೋಧನೆಯಲ್ಲಿ ರಾಷ್ಟ್ರಮಟ್ಟದಲ್ಲಿ ಪ್ರಸಿದ್ಧಿ ಪಡೆದಿರುವ ವಿ.ಸಿ.ಫಾರಂ ಕಬ್ಬು, ಭತ್ತ, ಮುಸುಕಿನ ಜೋಳ, ರಾಗಿ ತಳಿ ಸಂಶೋಧನೆ, ಕೃಷಿ ಯಂತ್ರೋಪಕರಣಗಳ ಸಂಶೋಧನೆಯಲ್ಲಿ ಮುಂಚೂಣಿ ಸ್ಥಾನದಲ್ಲಿದೆ.

ಕೆಆರ್‌ಎಸ್ ಜಲಾಶಯಕ್ಕೆ ಹತ್ತಿರವಿರುವ ವಿ.ಸಿ.ಫಾರಂ ವರ್ಷದ 365 ದಿನಗಳೂ ನೀರಾವರಿ ಸೌಲಭ್ಯ ಹೊಂದಿದೆ. ಮಂಡ್ಯ, ಮೈಸೂರು, ಚಾಮರಾಜನಗರ, ದಕ್ಷಿಣ ಕನ್ನಡ, ಹಾಸನ, ಕೊಡಗು, ಉಡುಪಿ, ಚಿಕ್ಕಮಗಳೂರು ಜಿಲ್ಲಾ ವ್ಯಾಪ್ತಿಯ 20 ಲಕ್ಷ ಹೆಕ್ಟೇರ್ ಕೃಷಿ ಭೂಮಿಗೆ ಸಂಪನ್ಮೂಲ ಒದಗಿಸುವ ಸಾಮರ್ಥ್ಯ ಹೊಂದಿದೆ. ಈ ಹಿನ್ನೆಲೆಯಲ್ಲಿ 8 ಜಿಲ್ಲೆಗಳನ್ನು ಒಳಗೊಂಡಂತೆ ಸಮಗ್ರ ಕೃಷಿ ವಿವಿ ಘೋಷಣೆ ಮಾಡಬೇಕು ಎಂದು ರೈತ ಮುಖಂಡರು ಒತ್ತಾಯಿಸುತ್ತಾರೆ.

'ವಿ.ಸಿ. ಫಾರಂನಲ್ಲಿ ಈಚೆಗೆ ನಡೆದ ರಾಗಿ ಲಕ್ಷ್ಮಣಯ್ಯ ಸ್ಮಾರಕ ಉಪನ್ಯಾಸದಲ್ಲಿ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ವಿವಿ ಘೋಷಣೆ ಸಂಬಂಧ ರೈತ ಮುಖಂಡರು ಹಾಗೂ ಕೃಷಿ ವಿಜ್ಞಾನಿಗಳ ಅಭಿಪ್ರಾಯ ಸಂಗ್ರಹಿಸಿದ್ದಾರೆ. ನಂತರ ಬಜೆಟ್‌ನಲ್ಲಿ ಘೋಷಣೆ ಮಾಡುವಂತೆ ಮುಖ್ಯಮಂತ್ರಿಗಳಿಗೆ ಅವರೇ ಪ್ರಸ್ತಾವ ಸಲ್ಲಿಸಿರುವುದಾಗಿ ತಿಳಿಸಿದ್ದಾರೆ' ಎಂದು ರೈತ ಮುಖಂಡ ಕೆ.ಬೋರಯ್ಯ ತಿಳಿಸಿದರು.

ಬಜೆಟ್‌ನಲ್ಲಿ ಸಮಗ್ರ ಕೃಷಿ ವಿವಿ ಘೋಷಣೆಯಾಗುವ ಸಾಧ್ಯತೆ ಇದೆ ಎಂದು ಚಲುವರಾಯಸ್ವಾಮಿ ಅವರೇ ಈಚೆಗೆ ತಿಳಿಸಿದ್ದಾರೆ.

ಐತಿಹಾಸಿಕ ಹಿನ್ನೆಲೆ: ನಗರದಿಂದ 10 ಕಿ.ಮೀ ದೂರದಲ್ಲಿರುವ ವಿ.ಸಿ.ಫಾರಂಗೆ ಐತಿಹಾಸಿಕ ಹಿನ್ನೆಲೆ ಇದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕನಸಸಿನ ಕೂಸಿನಂತೆ 'ಕಬ್ಬು ಸಂಶೋಧನಾ ಕೇಂದ್ರ'ವಾಗಿ 1931ರಂದು ಆರಂಭವಾಯಿತು.

ಕೆನಡಾದ ಸಸ್ಯ ವಿಜ್ಞಾನ ತಜ್ಞ ಲೆಸ್ಲಿ ಕೋಲ್ಮನ್ ಅವರ ಮುನ್ನೋಟದೊಂದಿಗೆ ವಿ.ಸಿ.ಫಾರಂ ಆಗಿ ಹೊಸ ರೂಪ ಪಡೆಯಿತು. ರಾಗಿ ಬ್ರಹ್ಮ ಎಂದೇ ಪ್ರಸಿದ್ಧಿ ಪಡೆದಿರುವ ರಾಗಿ ಲಕ್ಷ್ಮಣಯ್ಯ ಅವರು ಇಂಡಾಫ್ ಸರಣಿ ತಳಿಯ ಸಂಶೋಧನೆಯ ಮೂಲಕ ಕೇಂದ್ರಕ್ಕೆ ಅವಿಸ್ಮರಣೀಯ ಕೊಡುಗೆ ನೀಡಿದರು. ಇಂದಿಗೂ ವಿ.ಸಿ.ಫಾರಂ ತಳಿ ಸಂಶೋಧನೆಗಳು ರೈತರಿಂದ ಮೆಚ್ಚುಗೆಗೆ ಪಾತ್ರವಾಗಿವೆ.

'ವಿವಿ ರೂಪ ನೀಡುವ ಸಂಬಂಧ ರಾಜಕೀಯ ಮುಖಂಡರ ಮಟ್ಟದಲ್ಲಿ ಪ್ರಯತ್ನಗಳು ನಡೆಯುತ್ತಿವೆ. ಬಜೆಟ್‌ನಲ್ಲಿ ಘೋಷಣೆಯಾಗುವ ಸಾಧ್ಯತೆ ಇದ್ದು ನಾವೂ ನಿರೀಕ್ಷೆಯಲ್ಲಿದ್ದೇವೆ' ಎಂದು ಹೆಸರು ಹೇಳಲಿಚ್ಛಿಸದ ಕೃಷಿ ವಿಜ್ಞಾನಿಯೊಬ್ಬರು ಹೇಳಿದರು.


ಮಂಡ್ಯ ವಿ.ಸಿ.ಫಾರಂನಲ್ಲಿರುವ ಸಂಶೋಧನಾ ಘಟಕ

ಸಂಶೋಧಕರ ವಿರೋಧ ಏಕೆ?

ವಿ.ಸಿ.ಫಾರಂಗೆ ಸಮಗ್ರ ಕೃಷಿ ವಿವಿ ರೂಪಕೊಡುವ ಪ್ರಸ್ತಾವಕ್ಕೆ ಫಾರಂನ ಕೆಲ ಸಂಶೋಧಕರು, ಪ್ರಾಧ್ಯಾಪಕರು, ವಿಜ್ಞಾನಿಗಳು ವಿರೋಧಿಸಿದ್ದಾರೆ. ಬೆಂಗಳೂರು ವಿವಿ ಅಡಿಯಲ್ಲೇ ಇರಬೇಕು, ಪ್ರತ್ಯೇಕ ಸ್ಥಾನ ಬೇಡ ಎಂದು ತಿಳಿಸಿದ್ದಾರೆ.

'ಬಹುತೇಕ ಪ್ರಾಧ್ಯಾಪಕರು ಬೆಂಗಳೂರು, ಮೈಸೂರಿನಲ್ಲಿ ನೆಲೆಸಿದ್ದಾರೆ. ವಿ.ಸಿ.ಫಾರಂ ಕೃಷಿ ವಿವಿಯಾದರೆ ಮಂಡ್ಯದಲ್ಲೇ ಉಳಿಯುವ ಅನಿವಾರ್ಯತೆ ಸೃಷ್ಟಿಯಾಗುತ್ತದೆ ಎಂಬ ಕಾರಣಕ್ಕೆ ಅವರು ವಿರೋಧಿಸುತ್ತಿದ್ದಾರೆ. ಅವರು ತಮ್ಮ ಮನೋಭಾವ ಬದಲಾಯಿಸಿಕೊಳ್ಳಬೇಕು' ಎಂದು ರೈತ ಮುಖಂಡರು ಹೇಳುತ್ತಾರೆ.


ರಸ್ತೆಯಲ್ಲಿ ನೀರು ಥಣಿಸಂದ್ರ ಮುಖ್ಯರಸ್ತೆಯಲ್ಲಿ ಒಳಚರಂಡಿ ನೀರು ರಸ್ತೆಯಲ್ಲಿಯೇ ಹರಿದ ಕಾರಣ ವಾಹನ ಸವಾರರು, ಪಾದಚಾರಿಗಳು ತೊಂದರೆ ಅನುಭವಿಸಿದರು.–ಪ್ರಜಾವಾಣಿ ಚಿತ್ರ/ಎಸ್.ಕೆ. ದಿನೇಶ್

ಬಂಡೀಪುರ: ಹುಲಿ ಸಾವು

ಚಾಮರಾಜನಗರ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಹೆಡಿಯಾಲ ಉಪ-ವಿಭಾಗ ಮೊಳೆಯೂರು ವಲಯದಲ್ಲಿ ಗುರುವಾರ ಹುಲಿಯೊಂದರ ಮೃತದೇಹ ಪತ್ತೆಯಾಗಿದೆ.

ಮೊಳೆಯೂರು ಶಾಖೆಯ ನಡಾಡಿ ಗಸ್ತಿನಲ್ಲಿ ಸಿಬ್ಬಂದಿಗೆ ಕಳೇಬರ ಕಂಡು ಬಂದಿದ್ದು, ಹುಲಿಗೆ 1ರಿಂದ 2 ವರ್ಷವಾಗಿರಬಹುದು ಎಂದು ಅಂದಾಜಿಸಲಾಗಿದೆ. ಹುಲಿಯು ಗಂಡು ಅಥವಾ ಹೆಣ್ಣು ಎಂಬುದು ಗೊತ್ತಾಗಿಲ್ಲ.

ಪಶುವೈದ್ಯಾಧಿಕಾರಿ ಡಾ.ವಾಸೀಂ ಮಿರ್ಜಾ ಅವರು ಮರಣೋತ್ತರ ಪರೀಕ್ಷೆ ನಡೆಸಿದರು.

ಮತ್ತೊಂದು ಹುಲಿಯ ಜೊತೆ ನಡೆದ ಕಾದಾಟದಲ್ಲಿ ಕತ್ತು ಮುರಿದಿರುವುದರಿಂದ ಅದು ಸತ್ತಿದೆ ಎಂದು ಪಶು ವೈದ್ಯರು ತಿಳಿಸಿದ್ದಾರೆ. ಮೃತದೇಹವನ್ನು ಕಾಡುನಾಯಿಗಳು ಸೇರಿದಂತೆ ಇತರೆ ಜೀವಿಗಳು ತಿಂದಿರುವುದರಿಂದ ಲಿಂಗ ಪತ್ತೆಯೂ ಸಾಧ್ಯವಾಗಿಲ್ಲ.

ಹುಲಿ ಯೋಜನೆಯ ಎಪಿಸಿಸಿಎಫ್, ಆನೆ ಯೋಜನೆ ಎಪಿಸಿಸಿಎಫ್, ಬಂಡೀಪುರ ಹುಲಿ ಯೋಜನೆ ನಿರ್ದೇಶಕ ರಮೇಶ್ ಕುಮಾರ್ ಸೇರಿದಂತೆ ಅಧಿಕಾರಿಗಳು, ಇಲಾಖಾ ಇತರರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಜಿಂಕೆ ಬೇಟೆ: ಒಬ್ಬನ ಬಂಧನ

ಗುಂಡ್ಲುಪೇಟೆ: ಜಿಂಕೆ ಬೇಟೆಯಾಡಿ ಮಾಂಸ ಸಾಗಣೆ ಮಾಡುತ್ತಿದ್ದ ವ್ಯಕ್ತಿಯನ್ನು ಬಂಡೀಪುರದ ಓಂಕಾರ ವನ್ಯಜೀವಿ ವಲಯ ವ್ಯಾಪ್ತಿಯಲ್ಲಿ ಬಂಧಿಸಿರುವ ಘಟನೆ ನಡೆದಿದೆ.

ನಂಜನಗೂಡು ತಾಲ್ಲೂಕಿನ ಕೊತ್ತನಹಳ್ಳಿ ಗ್ರಾಮದ ಗಣೇಶ ಬಂಧಿತ ಆರೋಪಿ. ಕೃಷ್ಣ ಎಂಬಾತ ಪರಾರಿಯಾಗಿದ್ದಾನೆ.


ಇಬ್ಬರು ಓಂಕಾರ ವನ್ಯಜೀವಿ ವಲಯದ ಆಲದಮರದ ಹಳ್ಳ ಅರಣ್ಯ ಪ್ರದೇಶದಲ್ಲಿ ಬೇಟೆಯಾಡಿದ್ದರು.

'ಭಾರತ–ಮ್ಯಾನ್ಮಾರ್ ಗಡಿ: ಮುಕ್ತ ಸಂಚಾರ ರದ್ದು'

ನವದೆಹಲಿ (ಪಿಟಿಐ): 'ಈಶಾನ್ಯ ರಾಜ್ಯಗಳ ಜನಸಂಖ್ಯಾ ರಚನೆಯನ್ನು ಕಾಪಾಡಿಕೊಳ್ಳಲು ಮತ್ತು ದೇಶದ ಆಂತರಿಕ ಭದ್ರತೆಯನ್ನು ನಿರ್ವಹಿಸಲಿಕ್ಕಾಗಿ ಭಾರತ–ಮ್ಯಾನ್ಮಾರ್ ಗಡಿಯಲ್ಲಿರುವ ಮುಕ್ತ ಸಂಚಾರ ವ್ಯವಸ್ಥೆಯನ್ನು (ಎಫ್‌ಎಂಆರ್) ರದ್ದುಗೊಳಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಗುರುವಾರ ಹೇಳಿದ್ದಾರೆ.

'ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಈ ವ್ಯವಸ್ಥೆಯನ್ನು ರದ್ದುಗೊಳಿಸುವ ಪ್ರಕ್ರಿಯೆ ನಡೆಸುತ್ತಿದೆ. ಇದನ್ನು ತಕ್ಷಣವೇ ರದ್ದುಗೊಳಿಸುವಂತೆ ಗೃಹ ಸಚಿವಾಲಯವು ಶಿಫಾರಸು ಮಾಡಿದೆ' ಎಂದು ಅವರು ತಿಳಿಸಿದ್ದಾರೆ.

'ದೇಶದ ಗಡಿಗಳನ್ನು ಭದ್ರಪಡಿಸುವ ಪ್ರಧಾನಿ ನರೇಂದ್ರ ಮೋದಿ ಸಂಕಲ್ಪವಿದು. ಗಡಿಯಲ್ಲಿರುವ ಮುಕ್ತ ಸಂಚಾರ ವ್ಯವಸ್ಥೆ ರದ್ದುಗೊಳಿಸಲು ಗೃಹ ಸಚಿವಾಲಯವು ನಿರ್ಧರಿಸಿದೆ' ಎಂದು ಸಾಮಾಜಿಕ ಜಾಲತಾಣ 'ಎಕ್ಸ್'ನ ತಮ್ಮ ಖಾತೆಯಲ್ಲಿ ಶಾ ಹೇಳಿದ್ದಾರೆ.


ಅಮಿತ್ ಶಾ

ಮಿಜೋರಾಂ, ಮಣಿಪುರ, ನಾಗಾಲ್ಯಾಂಡ್ ಮತ್ತು ಅರುಣಾಚಲ ಪ್ರದೇಶವನ್ನು ಒಳಗೊಂಡ 1,643 ಕಿ.ಮೀ ಪ್ರದೇಶವು ಎಫ್‌ಎಂಆರ್ ವ್ಯಾಪ್ತಿಗೆ ಒಳಪಟ್ಟಿದೆ. ಉಭಯ ದೇಶಗಳ ಗಡಿಗಳಿಂದ 16 ಕಿ.ಮೀ ಒಳಗೆ ನೆಲೆಸಿರುವ ಬುಡಕಟ್ಟು ಜನರು ಪರಸ್ಪರರ ಗಡಿಯಲ್ಲಿ ಯಾವೊಂದು ದಾಖಲೆಗಳಿಲ್ಲದೆ ಸಂಚರಿಸಲು ಇದು ಅನುವು ಮಾಡಿಕೊಟ್ಟಿತ್ತು.

ಭಾರತ – ಮ್ಯಾನ್ಮಾರ್ ಗಡಿಯುದ್ದಕ್ಕೂ ಬೇಲಿ ಹಾಕಲು ಭಾರತ ನಿರ್ಧರಿಸಿದೆ ಎಂದು ಗೃಹ ಸಚಿವರು ಹೇಳಿದ ಎರಡು ದಿನಗಳ ನಂತರ ಈ ಘೋಷಣೆ ಹೊರಬಿದ್ದಿದೆ.

'ಅಂತರ್ಜಾಲವನ್ನು ಮೂಲಭೂತ ಹಕ್ಕಾಗಿ ಪರಿಗಣಿಸಲಿರುವ ತೆಲಂಗಾಣ'

ಹೈದರಾಬಾದ್ (ಪಿಟಿಐ): ಡಿಜಿಟಲ್ ಸೌಲಭ್ಯಗಳು ಎಲ್ಲರಿಗೂ ದೊರಕುವಂತೆ ಮಾಡಲು ತೆಲಂಗಾಣ ಸರ್ಕಾರವು ಶೀಘ್ರದಲ್ಲಿ ಅಂತರ್ಜಾಲವನ್ನು ಮೂಲಭೂತ ಹಕ್ಕಾಗಿ ಪರಿಗಣಿಸಲಿದೆ ಹಾಗೂ ಹೈದರಾಬಾದ್, ತೆಲಂಗಾಣವನ್ನು ದೇಶದ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನದ ಕೇಂದ್ರವನ್ನಾಗಿ ರೂಪಿಸಲಿದೆ ಎಂದು ರಾಜ್ಯಪಾಲೆ ತಮಿಳ್‌ಇಸೈ ಸೌಂದರರಾಜನ್ ಗುರುವಾರ ತಿಳಿಸಿದ್ದಾರೆ.

ಬಜೆಟ್ ಅಧಿವೇಶನದ ಆರಂಭದಲ್ಲಿ ಜಂಟಿ ಸದನವನ್ನು ಉದ್ದೇಶಿಸಿ ಮಾತನಾಡಿದ ಅವರು, 'ಸರ್ಕಾರವು ಸುಮಾರು 50ರಿಂದ 100 ಎಕರೆ ಜಾಗದಲ್ಲಿ ಎಐ ನಗರವನ್ನು ನಿರ್ಮಿಸಲಿದೆ' ಎಂದರು.

'ತೆಲಂಗಾಣವು ಡಿಜಿಟಲ್ ಕ್ಷೇತ್ರದಲ್ಲಿನ ಲಾಭಗಳನ್ನು ಪಡೆಯುವುದು ಮಾತ್ರವಲ್ಲದೇ, ಹೊಸ ತಂತ್ರಜ್ಞಾನ ಬಳಕೆಯಲ್ಲಿ ದೇಶದಲ್ಲಿಯೇ ಮುಂಚೂಣಿಯಲ್ಲಿ ನಿಲ್ಲಬೇಕು. ನಮ್ಮ ಸರ್ಕಾರದ ಬಹುಮುಖ್ಯ ಮತ್ತು ಅತ್ಯಗತ್ಯವಾದ ನಿರ್ಧಾರಗಳಲ್ಲಿ ಅಂತರ್ಜಾಲವನ್ನು ಮೂಲಭೂತ ಹಕ್ಕಾಗಿ ಪರಿಗಣಿಸುವುದು ಕೂಡ ಒಂದು' ಎಂದರು.

'ಡಿಜಿಟಲ್ ವ್ಯವಸ್ಥೆ ನಿರ್ಮಾಣ ಜೊತೆಗೆ, ಎಲ್ಲ ವರ್ಗಗಳಿಗೆ ಕೈಗೆಟುಕುವಂತೆ ಮಾಡುವುದು ನಮ್ಮ ಉದ್ದೇಶ' ಎಂದರು.

36 ಅಡಿ ಎತ್ತರದ ಮೂರ್ತಿ ಅನಾವರಣ 12ಕ್ಕೆ

ವೀರಸೋಮೇಶ್ವರ ಸ್ವಾಮೀಜಿ ಅವರ ಪೀಠಾರೋಹಣ ವರ್ಧಂತಿ ಮಹೋತ್ಸವ

ಪ್ರಜಾವಾಣಿ ವಾರ್ತೆ

ರಂಭಾಪುರಿ ಪೀಠ(ಬಾಳೆಹೊನ್ನೂರು): ಇಲ್ಲಿನ ವೀರಸೋಮೇಶ್ವರ ಸ್ವಾಮೀಜಿ ಅವರ 33ನೇ ವರ್ಷದ ಪೀಠಾರೋಹಣ ವರ್ಧಂತಿ ಮಹೋತ್ಸವ, ರೇಣುಕಾಚಾರ್ಯರ 36 ಅಡಿ ಎತ್ತರದ ಮೂರ್ತಿ ಲೋಕಾರ್ಪಣೆ ಹಾಗೂ ಮಹಾ ಮಸ್ತಕಾಭಿಷೇಕ ಫೆ.12 ಮತ್ತು 13ರಂದು ಶಿಕಾರಿಪುರ ತಾಲ್ಲೂಕಿನ ಮಳೆ ಮಲ್ಲೇಶ್ವರಸ್ವಾಮಿ ಜಾಗೃತ ಸ್ಥಳ ಕಡೇನಂದಿಹಳ್ಳಿ ತಪೋಕ್ಷೇತ್ರ ಗುರು ರೇವಣಸಿದ್ದೇಶ್ವರ ಆಶ್ರಮದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪೀಠದ ವಾರ್ತಾ ಸಂಯೋಜನಾಧಿಕಾರಿ ಸಿ.ಎಚ್.ಬಾಳನಗೌಡ್ರ ತಿಳಿಸಿದ್ದಾರೆ.

'ಫೆ. 12ರಂದು ಸಂಜೆ 4 ಗಂಟೆಗೆ ರಂಭಾಪುರಿ ಸ್ವಾಮೀಜಿ ಅವರ ಅಡ್ಡಪಲ್ಲಕ್ಕಿ ಮಹೋತ್ಸವ ಕಡೇನಂದಿಹಳ್ಳಿಯಿಂದ ಆರಂಭಗೊಳ್ಳಲಿದೆ. ಸಂಜೆ 7 ಗಂಟೆಗೆ ಜನ ಜಾಗೃತಿ ಧರ್ಮ ಸಮಾರಂಭ ನಡೆಯುವುದು. ದುಗ್ಲಿ-ಕಡೇನಂದಿಹಳ್ಳಿ ರೇವಣಸಿದ್ಧೇಶ್ವರ ಶಿವಾಚಾರ್ಯ ಸ್ವಾಮೀಜಿ ಸಮಾರಂಭದ ನೇತೃತ್ವ ವಹಿಸುವರು.

ಸಂಸದ ಬಿ.ವೈ.ರಾಘವೇಂದ್ರ, ಧರ್ಮಸ್ಥಳ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಭಾಗವಹಿಸುವರು. ರಂಭಾಪುರಿ ಪೀಠದ ವಾರ್ತಾ ಸಂಕಲನವನ್ನು ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಬಿಡುಗಡೆ ಮಾಡುವರು' ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಫೆ. 13ರಂದು ಬೆಳಿಗ್ಗೆ ರೇಣುಕಾಚಾರ್ಯ ಮೂರ್ತಿಗೆ 1008 ಕುಂಭಗಳಿಂದ ಮಹಾ ಮಸ್ತಕಾಭಿಷೇಕ ನಡೆಯಲಿದೆ. ಅಂದು ಸಂಜೆ 4 ಗಂಟೆಗೆ ಬಿಜೆಪಿ ಮುಖಂಡ ಬಿ.ಎಸ್. ಯಡಿಯೂರಪ್ಪ ಅವರು ಜಗದ್ಗುರು ರೇಣುಕಾಚಾರ್ಯರ ಮೂರ್ತಿಯ ಲೋಕಾರ್ಪಣೆ ನೆರವೇರಿಸುವರು.

ರಂಭಾಪುರಿ ಪೀಠದ ವೀರಸೋಮೇಶ್ವರ ಸ್ವಾಮೀಜಿ ಸಾನ್ನಿಧ್ಯದಲ್ಲಿ 'ಪರಂಪರೆ ರಕ್ಷಣಾ ಧರ್ಮ' ಸಮಾರಂಭ ನಡೆಯಲಿದೆ. ಸಂಸದ ಬಿ.ವೈ. ರಾಘವೇಂದ್ರ ಅವರಿಗೆ 'ರಂಭಾಪುರಿ ಜಗದ್ಗುರು ರೇವಣಸಿದ್ಧೇಶ್ವರ ರಾಷ್ಟ್ರೀಯ ಪ್ರಶಸ್ತಿ', ದುಗ್ಲಿ-ಕಡೇನಂದಿಹಳ್ಳಿ ರೇವಣಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿ, ಕೆ.ಎಸ್. ಗುರುಮೂರ್ತಿ, ಎಚ್.ಟಿ.ಬಳಿಗಾರ್, ಶಿಲ್ಪಿಗಳಾದ ಕಾರ್ಕಳದ ಕೃಷ್ಣಾ ಆಚಾರ್ಯ, ಶಿವಮೊಗ್ಗದ ಜೀವನ್, ಗುತ್ತಿಗೆದಾರ ದೇವೇಂದ್ರಪ್ಪ ಪಿ.ಎಸ್. ಇವರಿಗೆ ವಿಶೇಷ ಪ್ರಶಸ್ತಿ ಪ್ರದಾನ ಮಾಡಲಾಗುವುದು. ರಾತ್ರಿ 9 ಗಂಟೆಗೆ ಹರ್ಲಾಪುರದ ಮೆಹಬೂಬಸಾಬ್, ಸಾಗರದ ಸುಹಾನಾ ಸೈಯದ್, ಚಿಕ್ಕಬೆಂಡಿಗೇರಿಯ ಲಿಂಗರಾಜ ಕಮ್ಮಾರ ಇವರಿಂದ ಸಂಗೀತ ಸೌರಭ ನಡೆಯಲಿದೆ.

ಹಿರೇಕೆರೂರು ಶಾಸಕ ಯು.ಬಿ. ಬಣಕಾರ, ಚಿತ್ರನಟ ಕೆ.ಸುಚೇಂದ್ರ ಪ್ರಸಾದ, ಎನ್.ವಿ.ಈರೇಶ್. ಯಡೆಯೂರು ರೇಣುಕ ಶಿವಾಚಾರ್ಯ, ಮುಕ್ತಿಮಂದಿರದ ವಿಮಲ ರೇಣುಕ ಮುಕ್ತಿಮುನಿ ಶಿವಾಚಾರ್ಯ, ಬಂಕಾಪುರದ ರೇವಣಸಿದ್ಧೇಶ್ವರ ಶಿವಾಚಾರ್ಯ, ಎಮ್ಮಿಗನೂರಿನ ವಾಮದೇವ ಮಹಾಂತ ಶಿವಾಚಾರ್ಯ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ರಾತ್ರಿ ವಾಹನ ಸಂಚಾರ ರದ್ದು: ಅರಣ್ಯ ಸಚಿವರ ಪರಿಶೀಲನೆ

ಮೈಸೂರು: ಬಂಡೀಪುರ ಅರಣ್ಯ ಪ್ರದೇಶದೊಳಗಿನ ರಸ್ತೆಯ ಮೂಲಕ ಕೇರಳದ ವಯನಾಡಿಗೆ ಹೋಗುವ ಮಾರ್ಗದಲ್ಲಿ ರಾತ್ರಿ ವಾಹನಗಳ ಸಂಚಾರ ನಿರ್ಬಂಧಕ್ಕೆ ಸಂಬಂಧಿಸಿ ಅರಣ್ಯ ಸಚಿವ ಈಶ್ವರ ಖಂಡ್ರೆ ಖುದ್ದು ಪರಿಶೀಲನೆ ನಡೆಸಿದರು.

ಮಂಗಳವಾರ ಮಧ್ಯರಾತ್ರಿ 12ರಿಂದ ಬುಧವಾರ ನಸುಕಿನ 2 ಗಂಟೆಯವರೆಗೆ ಈ ಮಾರ್ಗವಾಗಿ ಕೇರಳದ ಗಡಿಯವರೆಗೂ ಅಧಿಕಾರಿಗಳೊಂದಿಗೆ ಪ್ರಯಾಣಿಸಿದ ಸಚಿವರು, ರಸ್ತೆಯನ್ನು ದಾಟುವ ಜಿಂಕೆಗಳು, ಆನೆಗಳನ್ನು ವೀಕ್ಷಿಸಿ, ಕರ್ನಾಟಕದ ಗಡಿಯೊಳಗಿನ ಚೆಕ್ ಪೋಸ್ಟ್‌ನಲ್ಲಿ ಪರಿಶೀಲನೆ ನಡೆಸಿದರು.

ನಿತ್ಯ ಎಷ್ಟು ವಾಹನಗಳು ಈ ಮಾರ್ಗವಾಗಿ ಸಂಚರಿಸುತ್ತವೆ? ರಾತ್ರಿಯ ವೇಳೆ ವಾಹನ ಸಂಚಾರದಿಂದ ಎಷ್ಟು ವನ್ಯಜೀವಿಗಳು ಮೃತಪಟ್ಟಿವೆ? ಎಂಬ ಬಗ್ಗೆಯೂ ಮಾಹಿತಿ ಪಡೆದರು. ಈ ಮಾರ್ಗದಲ್ಲಿ ರಾತ್ರಿ ವೇಳೆ ವಾಹನ ಸಂಚಾರಕ್ಕೆ ಅವಕಾಶ ನೀಡಬೇಕು ಎಂಬ ಕೇರಳದ ಬೇಡಿಕೆಯ ಕುರಿತು ಅಧಿಕಾರಿಗಳ ಜೊತೆ ಚರ್ಚಿಸಿದರು. ಚೆಕ್ ಪೋಸ್ಟ್ ಸಿಬ್ಬಂದಿಯೊಂದಿಗೆ ಮಾತುಕತೆ ನಡೆಸಿದ ಸಚಿವರು, ಕುಂದುಕೊರತೆಯನ್ನೂ ಆಲಿಸಿದರು.

ಈ ಮಾರ್ಗದಲ್ಲಿ ರಾತ್ರಿ 9ರ ನಂತರ ಆಂಬುಲೆನ್ಸ್ ಗಳಿಗೆ ಮತ್ತು ಕರ್ನಾಟಕದ 5 ಹಾಗೂ ಕೇರಳದ 5 ಬಸ್‌ಗಳ ಸಂಚಾರಕ್ಕೆ ಮಾತ್ರವೇ ಅವಕಾಶ ನೀಡಲಾಗಿದೆ. ಉಳಿದಂತೆ ತೀರಾ ತುರ್ತು ಸನ್ನಿವೇಶದಲ್ಲಿ ಪ್ರಯಾಣಿಕರ ವಾಹನಗಳ ಪ್ರಯಾಣಿಕರ ವಿವರ ಪಡೆದು ಸಂಚಾರಕ್ಕೆ ಅವಕಾಶ ನೀಡಲಾಗುವುದು ಎಂದು ಸಚಿವರು ತಿಳಿಸಿದರು.

ಭಯೋತ್ಪಾದನೆಗೆ ಆರ್ಥಿಕ ನೆರವು: ವ್ಯಕ್ತಿ ಬಂಧನ

ಶ್ರೀನಗರ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಮ್ಮು ಮತ್ತು ಕಾಶ್ಮೀರದ ಕುಪ್ವಾರ ಜಿಲ್ಲೆಯ ವ್ಯಕ್ತಿಯೊಬ್ಬನನ್ನು ಜಾರಿ ನಿರ್ದೇಶನಾಲಯ (ಇ.ಡಿ) ಬಂಧಿಸಿದೆ.

'ಮೊಹಮ್ಮದ್ ಅಬ್ದುಲ್ಲಾ ಶಾ ಎಂಬ ವ್ಯಕ್ತಿಯನ್ನು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ (ಪಿಎಂಎಲ್‌ಎ) ಮಂಗಳವಾರ ಬಂಧಿಸಲಾಗಿದೆ. ಜಮ್ಮು ಮತ್ತು ಕಾಶ್ಮೀರದ ವಿದ್ಯಾರ್ಥಿಗಳಿಗೆ ಪಾಕಿಸ್ತಾನದ ಕಾಲೇಜುಗಳಲ್ಲಿ ಎಂಬಿಬಿಎಸ್ ಮತ್ತು ಇತರ ಕೋರ್ಸ್‌ಗಳಿಗೆ ಪ್ರವೇಶವನ್ನು ಏರ್ಪಡಿಸಿದ್ದ, ಉಗ್ರ ಸಂಘಟನೆಯ ನಿರ್ವಾಹಕನಾದ ಮಂಜೂರ್ ಅಹ್ಮದ್ ಶಾ ಜೊತೆ ಆರೋಪಿ ಕೈಜೋಡಿಸಿದ್ದ. ಅಲ್ಲದೇ ಭಯೋತ್ಪಾದನೆ ಸಂಘಟನೆಗಳಿಗೆ ಹಣಕಾಸಿನ ನೆರವನ್ನೂ ನೀಡಿದ್ದ' ಎಂದು ಇ.ಡಿ 'ಎಕ್ಸ್'ನಲ್ಲಿ ಹೇಳಿದೆ.

ವಿವಿಧ ಯೋಜನೆಗಳನ್ನು ಪ್ರಕಟಿಸಿದ ಕೇಂದ್ರ ಸರ್ಕಾರ

ಲಕ್ಷದ್ವೀಪ: ಪ್ರವಾಸೋದ್ಯಮಕ್ಕೆ ಉತ್ತೇಜನ

ಕವರತ್ತಿ (ಲಕ್ಷದ್ವೀಪ) (ಪಿಟಿಐ): ಲಕ್ಷದ್ವೀಪದಲ್ಲಿ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ಸಲುವಾಗಿ ಕೇಂದ್ರ ಸರ್ಕಾರವು ಹಲವಾರು ಮಹತ್ತರ ಯೋಜನೆಗಳನ್ನು ಕೈಗೆತ್ತಿಕೊಂಡಿದೆ.

ಹೆಚ್ಚು ಪ್ರವಾಸಿಗರು ಲಕ್ಷದ್ವೀಪದ ಕಡೆಗೆ ಬರುವಂತೆ ಮಾಡಲು ಸರ್ಕಾರವು ಮೊದಲ ಹೆಜ್ಜೆಯಾಗಿ ಸಂಪರ್ಕ ವ್ಯವಸ್ಥೆಯನ್ನು ಸುಧಾರಿಸಲು ಮುಂದಾಗಿದೆ. ಫ್ಲೈ19 ಮತ್ತು ಸ್ಪೈಸ್‌ಜೆಟ್ ವಿಮಾನಯಾನ ಸಂಸ್ಥೆಗಳು ಅಗತ್ತಿ ದ್ವೀಪಕ್ಕೆ ವಿಮಾನಯಾನ ಸೇವೆ ಒದಗಿಸಲು ಅನುಮತಿಯನ್ನು ಪಡೆದುಕೊಂಡಿವೆ.

ಲಕ್ಷದ್ವೀಪದ ಅಧಿಕಾರಿಗಳೊಂದಿಗೆ ಬುಧವಾರ ಮಾತುಕತೆ ನಡೆಸಿರುವ ಇಂಡಿಗೋ ವಿಮಾನಯಾನ ಸಂಸ್ಥೆಯು ದ್ವೀಪಕ್ಕೆ ವಿಮಾನಸಂಪರ್ಕ ಕಲ್ಪಿಸಲು ಆಸಕ್ತಿ ವ್ಯಕ್ತಪಡಿಸಿದೆ.

'ಫ್ಲೈ19 ಸಂಸ್ಥೆಯು ತಿಂಗಳಾಂತ್ಯದಲ್ಲಿ ಲಕ್ಷದ್ವೀಪಕ್ಕೆ ವಿಮಾನಯಾನ ಸೇವೆಯನ್ನು ಆರಂಭಿಸಲಿದೆ' ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಪ್ರಸ್ತುತ ಅಲೈನ್ಸ್ ವಿಮಾನಯಾನ ಸಂಸ್ಥೆ ಮಾತ್ರ ಅಗತ್ತಿ ದ್ವೀಪಕ್ಕೆ ವಿಮಾನಯಾನ ಸೇವೆ ಒದಗಿಸುತ್ತಿದ್ದು, ಈ ಸೇವೆ ಬುಧವಾರ ಮತ್ತು ಭಾನುವಾರ ಮಾತ್ರ ಲಭ್ಯವಿರುತ್ತದೆ.

'₹4,500 ಕೋಟಿ ವೆಚ್ಚದಲ್ಲಿ ವಿಮಾನ ನಿಲ್ದಾಣದ ರನ್‌ವೇಯನ್ನು 2,800 ಮೀಟರ್‌ವರೆಗೆ ವಿಸ್ತರಿಸುವ ಕಾಮಗಾರಿಯನ್ನು ಎಲ್&ಟಿ ಸಂಸ್ಥೆಗೆ ವಹಿಸಲಾಗಿದೆ' ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಸಂಪರ್ಕ ವ್ಯವಸ್ಥೆಯು ಸಮರ್ಪಕವಾದ ಬಳಿಕ, ಮುಂದಿನ ಹೆಜ್ಜೆಯಾಗಿ ಪ್ರವಾಸಿಗರಿಗೆ ವಸತಿ ಸೌಲಭ್ಯ ಕಲ್ಪಿಸಲು ಯೋಜನೆ ರೂಪಿಸಲಾಗುತ್ತದೆ. ಸುಹೇಲಿ, ಮಿನಿಕಾಯ್ ಮತ್ತು ಕಡ್ಮಟ್ ದ್ವೀಪಗಳಲ್ಲಿ ತಾಜ್ ರೆಸಾರ್ಟ್‌ಗಳನ್ನು ಆರಂಭಿಸುವುದಾಗಿ ಟಾಟಾ ಸಂಸ್ಥೆಯು ಈಗಾಗಲೇ ಪ್ರಸ್ತಾವನೆಯನ್ನು ಸಲ್ಲಿಸಿದೆ. 2 ದ್ವೀಪಗಳಿಂದ ಅನುಮತಿಯು ಸಿಕ್ಕಿದೆ.


ಲಕ್ಷದ್ವೀಪ

'ಭಾರತ್ ಬ್ರ್ಯಾಂಡ್ 'ಗ್ಯಾರಂಟಿ' ಯೋಜನೆಗೆ ಸಮ'

ಮೈಸೂರು: 'ಕೇಂದ್ರ ಸರ್ಕಾರದ 'ಭಾರತ್ ಬ್ರ್ಯಾಂಡ್' ಯೋಜನೆಯು ಕಾಂಗ್ರೆಸ್‌ನ ಗ್ಯಾರಂಟಿ ಯೋಜನೆಗಳಿಗೆ ಸಮ' ಎಂದು ಬಿಜೆಪಿಯ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಪ್ರತಿಪಾದಿಸಿದರು.

ನಗರದಲ್ಲಿ ಗುರುವಾರ ಬಿಜೆಪಿ ವಿಶೇಷ ಕಾರ್ಯಕಾರಿಣಿಯನ್ನು ಉದ್ಘಾಟಿಸಿ ಮಾತನಾಡಿ, 'ಸರ್ಕಾರವೇ 'ಭಾರತ್ ಬ್ರ್ಯಾಂಡ್' ಹೆಸರಿನಲ್ಲಿ ₹29ಕ್ಕೆ ಒಂದು ಕೆ.ಜಿ. ಅಕ್ಕಿ ಮಾರಾಟ ಮಾಡುತ್ತಿದ್ದು, ಅದರಿಂದ ಬಡವರ ಮೇಲಿನ ಹೊರೆ ತಗ್ಗಲಿದೆ ಎಂದರು.

ಸುತ್ತೂರು ಜಾತ್ರೆಯ ಧಾರ್ಮಿಕ ಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸಿ, 'ಕೇಂದ್ರ ಈಗಾಗಲೇ ₹ 60ಕ್ಕೆ ಕೆ.ಜಿ. ಕಡಲೆಬೇಳೆ, ₹ 27.5ಕ್ಕೆ ಗೋದಿ, ₹ 93ಕ್ಕೆ ಹೆಸರುಬೇಳೆ ನೀಡುತ್ತಿದೆ. ಬಡವರ ಮೇಲಿನ ಹೊರೆ ತಗ್ಗಿದೆ' ಎಂದು ಪ್ರತಿಪಾದಿಸಿದರು.

ಬಿಜೆಪಿ ಜೊತೆಗಿನ ಮೈತ್ರಿ ಶಾಶ್ವತ: ನಿತೀಶ್

ಪಟ್ನಾ (ಪಿಟಿಐ): 'ನಾನು ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದಿಂದ ಕೆಲಕಾಲ ದೂರವಿದ್ದೆ. ಈಗ ಅಲ್ಲಿಗೇ ಮರಳಿದ್ದೇನೆ. ಈ ಮೈತ್ರಿಕೂಟದಲ್ಲೇ ಮುಂದುವರಿಯಲಿದ್ದೇನೆ. ಇದು ಶಾಶ್ವತ' ಎಂದು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಗುರುವಾರ ಹೇಳಿದರು.

ದೆಹಲಿಗೆ ತೆರಳಿ, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿ ಬಿಜೆಪಿಯ ಪ್ರಮುಖ ನಾಯಕರನ್ನು ಬುಧವಾರ ಭೇಟಿಯಾಗಿ ಅವರು ಮಾತುಕತೆ ನಡೆಸಿದ್ದರು. ಬಿಹಾರಕ್ಕೆ ವಾಪಸ್ಸಾದ ಬಳಿಕ ನಿತೀಶ್ ಅವರು ಸುದ್ದಿಗಾರರ ಎದುರು ಮಾತನಾಡಿದರು.

ಫೆಬ್ರುವರಿ 12ರಂದು ನಡೆಯಲಿರುವ ವಿಶ್ವಾಸಮತ ಯಾಚನೆ ಕುರಿತು ಆತಂಕಗೊಂಡಿದ್ದೀರಾ ಎಂಬ ಪ್ರಶ್ನೆಗೆ, 'ನಮ್ಮ ಪಕ್ಷ ಮತ್ತು ಮಿತ್ರಪಕ್ಷದ ನಾಯಕರ ಜೊತೆ ಎಲ್ಲವನ್ನೂ ಚರ್ಚಿಸಲಾಗಿದೆ. ಯಾವುದೇ ಆತಂಕವಿಲ್ಲ' ಎಂದರು.

ಮಂಡ್ಯ ಟಿಕೆಟ್‌ಗೆ ಸುಮಲತಾ ಯತ್ನ



ಜೆ.ಪಿ.ನಡ್ಡಾ ಅವರನ್ನು ಭೇಟಿಯಾದ ಸಂಸದೆ ಸುಮಲತಾ ಹೂಗುಚ್ಛ ನೀಡಿದರು

ಪ್ರಜಾವಾಣಿ ವಾರ್ತೆ

ನವದೆಹಲಿ: ಮಂಡ್ಯದ ಸಂಸದೆ ಸುಮಲತಾ ಅಂಬರೀಷ್ ಅವರು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಹಾಗೂ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್. ಸಂತೋಷ್ ಅವರನ್ನು ಗುರುವಾರ ಭೇಟಿ ಮಾಡಿ ಮಂಡ್ಯ ಕ್ಷೇತ್ರ ಹಾಗೂ ಲೋಕಸಭಾ ಚುನಾವಣೆ ಕುರಿತು ಚರ್ಚಿಸಿದರು.

ಲೋಕಸಭಾ ಚುನಾವಣೆಗೆ ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಮಾಡಿಕೊಂಡಿವೆ. ಮಂಡ್ಯ ಕ್ಷೇತ್ರವನ್ನು ತಮ್ಮ ಪಕ್ಷಕ್ಕೆ ಬಿಟ್ಟುಕೊಡಬೇಕು ಎಂದು ಜೆಡಿಎಸ್ ನಾಯಕರು ಪಟ್ಟು ಹಿಡಿದಿದ್ದಾರೆ.

ಈ ಕ್ಷೇತ್ರದಲ್ಲಿ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಕಣಕ್ಕಿಳಿಯುವ ಸಂಭವ ಇದೆ. ಮಂಡ್ಯ ಕ್ಷೇತ್ರಕ್ಕೆ ತಮ್ಮನ್ನೇ ಅಭ್ಯರ್ಥಿಯನ್ನಾಗಿ ಮಾಡಬೇಕು ಎಂದು ಸುಮಲತಾ ಅವರು ಬಿಜೆಪಿ ವರಿಷ್ಠರಿಗೆ ಮನವಿ ಮಾಡಿದರು ಎಂದು ಮೂಲಗಳು ಹೇಳಿವೆ.

ಒಂದು ವೇಳೆ ಬಿಜೆಪಿ ಟಿಕೆಟ್ ನಿರಾಕರಿಸಿದರೆ ಸ್ವತಂತ್ರ ಅಥವಾ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸುವ ಸಾಧ್ಯತೆ ಇದೆ. ಕಾಂಗ್ರೆಸ್‌ನ ಕೆಲವು ನಾಯಕರು ತಮ್ಮ ಜತೆಗೆ ಸಮಾಲೋಚನೆ ನಡೆಸಿದ್ದಾರೆ ಎಂದು ಸುಮಲತಾ ಅವರು ಇತ್ತೀಚೆಗೆ ಹೇಳಿಕೆ ನೀಡಿದ್ದರು.

'ತಮ್ಮ ಅಮೂಲ್ಯ ಸಮಯವನ್ನು ನೀಡಿ, ನನ್ನ ಮಾತುಗಳನ್ನು ಆಲಿಸಿದ ನಡ್ಡಾ ಹಾಗೂ ಸಂತೋಷ್ ಅವರಿಗೆ ಧನ್ಯವಾದಗಳು' ಎಂದು ಸುಮಲತಾ ಅವರು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಬರೆದುಕೊಂಡಿದ್ದಾರೆ.

'ಮಿರ್ಜಿ' ದಾಳವನ್ನು ಉರುಳಿಸಿದ ಜೆಡಿಎಸ್



ಜ್ಯೋತಿ ಪ್ರಕಾಶ್ ಮಿರ್ಜಿ ಅವರನ್ನು ಅಭಿನಂದಿಸಿದ ಜೆಡಿಎಸ್ ಜಿಲ್ಲಾ ಘಟಕದ ಕಾರ್ಯಾಧ್ಯಕ್ಷ ಟಿ.ಆರ್.ನಾಗರಾಜ್ ಹಾಗೂ ಪಕ್ಷದ ಸ್ಥಳೀಯ ಮುಖಂಡರು

ಪ್ರಜಾವಾಣಿ ವಾರ್ತೆ

ತುಮಕೂರು: ಮುಂಬರುವ ಲೋಕಸಭೆ ಚುನಾವಣೆಯಲ್ಲಿ ತುಮಕೂರು ಕ್ಷೇತ್ರವನ್ನು ತಮ್ಮಲ್ಲೇ ಉಳಿಸಿಕೊಳ್ಳಲು ಜಂಟಿಯಾಗಿ ತಂತ್ರಗಾರಿಕೆ ರೂಪಿಸಿರುವ ಬಿಜೆಪಿ– ಜೆಡಿಎಸ್ ಇದೀಗ ನಿವೃತ್ತ ಪೊಲೀಸ್ ಅಧಿಕಾರಿ ಜ್ಯೋತಿ ಪ್ರಕಾಶ್ ಮಿರ್ಜಿ ಮೂಲಕ ಹೊಸ ದಾಳ ಉರುಳಿಸಲು ಸಜ್ಜಾಗಿವೆ ಎಂಬ ಚರ್ಚೆ ಸ್ಥಳೀಯ ರಾಜಕೀಯ ವಲಯದಲ್ಲಿ ನಡೆದಿವೆ.

ನಿವೃತ್ತ ಐಪಿಎಸ್ ಅಧಿಕಾರಿ ಮಿರ್ಜಿ ಅವರನ್ನು ಪಕ್ಷಕ್ಕೆ ಸೇರಿಸಿಕೊಂಡಿರುವ ದಳಪತಿಗಳು, 'ತುಮಕೂರು ಕ್ಷೇತ್ರದಿಂದ ಕಣಕ್ಕಿಳಿಸುವ ಬಗ್ಗೆ ಚಿಂತನೆ ನಡೆಸಿದ್ದಾರೆ' ಎಂಬ ವಿಚಾರವನ್ನು ಚರ್ಚೆಗೆ ಹರಿ ಬಿಟ್ಟಿದ್ದಾರೆ. ಸಾರ್ವಜನಿಕವಾಗಿ ವ್ಯಕ್ತವಾಗುವ ಅಭಿಪ್ರಾಯ ಆಧರಿಸಿ ಮುಖಂಡರು ಮುಂದಿನ ನಿರ್ಧಾರ ಕೈಗೊಳ್ಳಲಿದ್ದಾರೆ ಎಂದು ಜೆಡಿಎಸ್ ಮೂಲಗಳು ತಿಳಿಸಿವೆ.

ಬಿಜೆಪಿ– ಜೆಡಿಎಸ್ ಹೊಂದಾಣಿಕೆ ಮಾಡಿಕೊಂಡಿದ್ದರೂ ಈವರೆಗೂ ಕ್ಷೇತ್ರಗಳ ಹಂಚಿಕೆ ಬಗ್ಗೆ ಸ್ಪಷ್ಟ ನಿರ್ಧಾರಕ್ಕೆ ಬಂದಿಲ್ಲ. ಇಂತಹ ಸಮಯದಲ್ಲಿ ತುಮಕೂರು ಕ್ಷೇತ್ರವನ್ನು ತಮಗೆ ಬಿಟ್ಟುಕೊಡುವಂತೆ ಕೇಳಲು ಜೆಡಿಎಸ್‌ನಲ್ಲಿ ಪ್ರಬಲ ಸ್ಪರ್ಧೆ ಒಡ್ಡುವಂತಹ ನಾಯಕ ಇರಲಿಲ್ಲ. ಕಳೆದ ಬಾರಿಯ ಚುನಾವಣೆಯಲ್ಲಿ ಕ್ಷೇತ್ರದ ವ್ಯಾಪ್ತಿಗೆ ಬರುವ ಎಂಟು ವಿಧಾನಸಭೆ ಕ್ಷೇತ್ರಗಳಲ್ಲಿ ಇತರ ಪಕ್ಷಗಳ ಅಭ್ಯರ್ಥಿಗಳಿಗಿಂತ ಜೆಡಿಎಸ್ ಹುರಿಯಾಳುಗಳು ಹೆಚ್ಚು ಮತ ಪಡೆದಿದ್ದರು. ಈ ಆಧಾರದ ಮೇಲೆ ತಮಗೆ ಲೋಕಸಭಾ ಕ್ಷೇತ್ರ ಬಿಟ್ಟುಕೊಡಬೇಕು ಎಂಬ ಬೇಡಿಕೆ ಇಟ್ಟಿದ್ದರು. ಆದರೆ, ಸಮರ್ಥ ಅಭ್ಯರ್ಥಿ ಇಲ್ಲದ ಕಾರಣ ಗಟ್ಟಿಯಾಗಿ ಕೇಳುವುದು ಕಷ್ಟಕರವಾಗಿತ್ತು. ಈಗ ಮಿರ್ಜಿ ಅವರನ್ನು ಮುಂದಿಟ್ಟುಕೊಂಡು ಕ್ಷೇತ್ರದ ಮೇಲೆ ಜೆಡಿಎಸ್ ವರಿಷ್ಠರು ಕಣ್ಣಿಟ್ಟಿದ್ದಾರೆ ಎಂದು ಹೇಳಲಾಗುತ್ತಿದೆ.

ಮೈಸೂರು ಭಾಗದ ಯಾವ ಕ್ಷೇತ್ರದಲ್ಲೂ ಸ್ಪರ್ಧಿಸಲು ಲಿಂಗಾಯತರಿಗೆ ಅವಕಾಶ ಕ್ಷೀಣವಾಗಿವೆ. ಮೊದಲಿನಿಂದಲೂ ತುಮಕೂರು ಕ್ಷೇತ್ರದಲ್ಲಿ ಆ ಸಮುದಾಯಕ್ಕೆ ಬಿಜೆಪಿ ಅವಕಾಶ ನೀಡುತ್ತಾ ಬಂದಿದ್ದು, ತಮಗೆ ಕ್ಷೇತ್ರ ಬೇಕು ಎಂದು ಕೇಸರಿ ಪಡೆ ವಾದ ಮಂಡಿಸಿತ್ತು. ಇದಕ್ಕೆ ಪ್ರತಿ ತಂತ್ರ ರೂಪಿಸಿರುವ ಜೆಡಿಎಸ್, 'ಲಿಂಗಾಯತ ಸಮುದಾಯಕ್ಕೆ ಸೇರಿದ ಜ್ಯೋತಿ ಪ್ರಕಾಶ್ ಮಿರ್ಜಿ ಅವರಿಗೆ ಅವಕಾಶ ಮಾಡಿಕೊಡಲಾಗುವುದು. ನಮಗೆ ಬಿಟ್ಟುಕೊಡಿ' ಎಂದು ದಳಪತಿಗಳು ಪಟ್ಟು ಹಾಕಲು ಮುಂದಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ತುಮಕೂರು ಕ್ಷೇತ್ರದ ಮೇಲೆ ಕಣ್ಣಿಟ್ಟಿರುವ ಜೆಡಿಎಸ್ ವರಿಷ್ಠರು, ಮಿರ್ಜಿ ಅವರನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡು ಹಿರಿಯ ಉಪಾಧ್ಯಕ್ಷ ಸ್ಥಾನ ನೀಡಿದ್ದಾರೆ. ಮಿರ್ಜಿ ತಂದೆ ದಿ.ಗಂಗಾಧರಪ್ಪ ಮಿರ್ಜಿ ಅವರು ಹಿಂದೆ ನಗರ ಕ್ಷೇತ್ರದ ಶಾಸಕರಾಗಿದ್ದರು. ಜತೆಗೆ ಲಿಂಗಾಯತ, ವಿದ್ಯಾವಂತ, ನಿವೃತ್ತ ಐಪಿಎಸ್ ಅಧಿಕಾರಿ ಎಂಬ ವಿಶೇಷಣಗಳನ್ನು ಮುನ್ನೆಲೆಗೆ ತರುವುದು. ಚುನಾವಣೆಗೆ ಹೊಸ ಮುಖವಾದರೆ ಜನ ಬೆಂಬಲ ಸಿಗಬಹುದು ಎಂಬ ಲೆಕ್ಕಾಚಾರದಲ್ಲಿ ದಳಪತಿಗಳು ತೊಡಗಿದ್ದಾರೆ ಎನ್ನಲಾಗಿದೆ.

ಬಿಜೆಪಿಯಲ್ಲೂ 'ಬಣ–ಬಣ'

ಜಿಲ್ಲೆಯ ಬಿಜೆಪಿ ವಲಯದಲ್ಲೂ ಬಣ ರಾಜಕಾರಣ ಬಿರುಸು ಪಡೆದುಕೊಂಡಿದೆ. ಮಾಜಿ ಸಚಿವ ವಿ.ಸೋಮಣ್ಣ ಟಿಕೆಟ್‌ಗೆ ಪ್ರಯತ್ನ ನಡೆಸಿದ್ದು, ಅವರ ಸ್ಪರ್ಧೆಗೆ ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ ವಿರೋಧ ವ್ಯಕ್ತಪಡಿಸಿದ್ದಾರೆ. 'ಹೊರಗಿನವರು' ಎಂಬ ಪ್ರಚಾರ ಆರಂಭಿಸಿದ್ದಾರೆ. 'ಹೊರಗಿನವರು ಬಂದು ಸ್ಪರ್ಧಿಸಿ ಗೆದ್ದ ಉದಾಹರಣೆ ಇಲ್ಲ' ಎಂದು ಬಹಿರಂಗವಾಗಿ ವಿರೋಧಿಸಿದ್ದಾರೆ.

ಸೋಮಣ್ಣ ಪರ ಸಂಸದ ಜಿ.ಎಸ್.ಬಸವರಾಜು ನಿಂತಿದ್ದಾರೆ. ಸೋಮಣ್ಣ ಅವರಿಗೆ ಟಿಕೆಟ್ ನೀಡುವುದಕ್ಕೆ ಬಿಜೆಪಿ ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪ ಹಾಗೂ ಅವರ ಪುತ್ರ, ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಈ ಇಬ್ಬರೂ ನಾಯಕರನ್ನು ಸಾರ್ವಜನಿಕವಾಗಿ ಸೋಮಣ್ಣ ಟೀಕಿಸಿದ್ದರು. ಈ ಸಿಟ್ಟು ಇನ್ನೂ ಕಡಿಮೆಯಾಗಿಲ್ಲ. ಸೋಮಣ್ಣ ಅವರಿಗೆ ಟಿಕೆಟ್ ತಪ್ಪಿಸಲು ಜೆ.ಸಿ.ಮಾಧುಸ್ವಾಮಿ ಹೆಸರನ್ನು ಯಡಿಯೂರಪ್ಪ ಅವರೇ ಮುನ್ನೆಲೆಗೆ ತಂದಿದ್ದಾರೆ ಎನ್ನಲಾಗುತ್ತಿದೆ.

ಮಾಧುಸ್ವಾಮಿ ಹೆಸರು ಕೇಳಿ ಬರುತ್ತಿದ್ದಂತೆ ಜಿ.ಎಸ್.ಬಸವರಾಜು ಕೆಂಡಾಮಂಡಲವಾಗಿದ್ದಾರೆ. 'ಮಾಧುಸ್ವಾಮಿ ಗೆಲ್ಲುವುದಿಲ್ಲ' ಎಂದು ಮೊದಲೇ ಷರಾ ಬರೆದಿದ್ದಾರೆ. ಜತೆಗೆ ಗ್ರಾಮಾಂತರ ಕ್ಷೇತ್ರದ ಶಾಸಕ ಬಿ.ಸುರೇಶ್‌ಗೌಡ ಸಹ ತೀವ್ರ ವಿರೋಧ ವ್ಯಕ್ತಪಡಿಸುತ್ತಿದ್ದಾರೆ.

ಈಚೆಗೆ ನಡೆದ ಬಿಜೆಪಿ ಜಿಲ್ಲಾ ಕಾರ್ಯಕಾರಿಣಿಯಲ್ಲಿ ಮಾಧುಸ್ವಾಮಿ ಭಾಗವಹಿಸಿದ್ದ ಕಾರಣಕ್ಕೆ ಸಭೆಗೆ ಹೋಗದೆ ದೂರ ಉಳಿದಿದ್ದರು. ಸಂಸದ ಬಸವರಾಜು, ಶಾಸಕರಾದ ಸುರೇಶ್‌ಗೌಡ, ಜ್ಯೋತಿಗಣೇಶ್ ಸೇರಿದಂತೆ ಪ್ರಮುಖ ನಾಯಕರ ಬೆಂಬಲ ಸಿಗದಿದ್ದರೆ ಅವರ ಸ್ಪರ್ಧೆ ಕಷ್ಟಕರವಾಗಲಿದೆ.

ಈ ಎಲ್ಲಾ ಗೊಂದಲ, ಬಣ ರಾಜಕಾರಣ ಗಮನಿಸುತ್ತಿರುವ ಬಿಜೆಪಿ ವರಿಷ್ಠರು, 'ತುಮಕೂರು ಕ್ಷೇತ್ರ ತಮಗೆ ಬೇಕು' ಎಂದು ಗಟ್ಟಿಯಾಗಿ ಕೇಳುತ್ತಿಲ್ಲ. ಬಿಜೆಪಿಯಿಂದ ಲಿಂಗಾಯತ ಸಮುದಾಯಕ್ಕೆ ಅವಕಾಶ ನೀಡಬೇಕಿತ್ತು. ಅದೇ ಕೆಲಸವನ್ನು ಜೆಡಿಎಸ್ ಮಾಡುವುದಾದರೆ ಅವರಿಗೆ ಬಿಟ್ಟುಕೊಡಬಹುದು. ಹೊಂದಾಣಿಕೆ ಇರುವುದರಿಂದ ಯಾವ ಪಕ್ಷದಿಂದ ಗೆದ್ದರೂ 'ಅವರು ನಮ್ಮವರೇ ಆಗಿರುತ್ತಾರೆ' ಎಂಬ ನಿರ್ಧಾರಕ್ಕೆ ಬರುವ ಸಾಧ್ಯತೆಗಳಿಗೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಕುಂಬಾರಪೇಟೆಯಲ್ಲಿ ವಾಣಿಜ್ಯ ಸಂಕೀರ್ಣ • ಹಲವು ವರ್ಷಗಳ ವ್ಯಾಜ್ಯ

ಆಸ್ತಿ ಜಗಳ ಜೋಡಿ ಕೊಲೆಗೆ ಕಾರಣ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಂಬಾರಪೇಟೆ ಮುಖ್ಯ ರಸ್ತೆಯಲ್ಲಿ ನಡೆದಿರುವ ಬಿ.ಎಲ್. ಸುರೇಶ್ (55) ಹಾಗೂ ಮಹೇಂದ್ರ (68) ಜೋಡಿ ಕೊಲೆಗೆ ಕುಂಬಾರಪೇಟೆಯ ಎರಡು ಟ್ರಸ್ಟ್‌ಗಳ ಆಸ್ತಿ ಜಗಳ ಕಾರಣ ಎನ್ನುವುದು ಪೊಲೀಸರ ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ.

'ಕುಂಬಾರಪೇಟೆ ಅನ್ನದಾನ ಸಮಿತಿ ಟ್ರಸ್ಟ್ ಹಾಗೂ ಕುಂಬಾರಪೇಟೆ ಆಂಜನೇಯ ಸ್ವಾಮಿ ದೇವಸ್ಥಾನ ಕಟ್ಟಡ ಸಮಿತಿ ಟ್ರಸ್ಟ್ ಒಡೆತನದಲ್ಲಿ ಸುಮಾರು ₹ 8 ಕೋಟಿ ಮೌಲ್ಯದ ವಾಣಿಜ್ಯ ಸಂಕೀರ್ಣವಿದೆ. ಇದರಲ್ಲಿರುವ ಮಳಿಗೆಗಳಿಂದ ಪ್ರತಿ ತಿಂಗಳು ಸುಮಾರು ₹ 10 ಲಕ್ಷ ಬಾಡಿಗೆ ಬರುತ್ತದೆ. ಇದೇ ಆಸ್ತಿ ವಿಚಾರವಾಗಿ ಹಲವು ವರ್ಷಗಳಿಂದ ನಡೆಯುತ್ತಿದ್ದ ಜಗಳವೇ ಜೋಡಿ ಕೊಲೆಗೆ ಕಾರಣ ಎನ್ನುವುದು ಪುರಾವೆಗಳಿಂದ ತಿಳಿದುಬಂದಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕೃತ್ಯಕ್ಕೆ ಸಂಬಂಧಪಟ್ಟಂತೆ ಪ್ರತ್ಯಕ್ಷದರ್ಶಿಗಳು, ಟ್ರಸ್ಟ್ ಪದಾಧಿಕಾರಿಗಳು ಹಾಗೂ ಇತರರ ಹೇಳಿಕೆ ಪಡೆಯಲಾಗುತ್ತಿದೆ. ಎಲ್ಲರ ಹೇಳಿಕೆ ಪರಿಶೀಲಿಸಿ ಸೂಕ್ತ ಪುರಾವೆಗಳನ್ನು ಸಂಗ್ರಹಿಸಿ ದೋಷಾರೋಪ ಪಟ್ಟಿ ಸಿದ್ಧಪಡಿಸಲಾಗುವುದು' ಎಂದು ತಿಳಿಸಿವೆ.

ಆಸ್ತಿ ದುರುಪಯೋಗ ಆರೋಪ: 'ಪದ್ಮನಾಭನಗರದ ನಿವಾಸಿ ಸುರೇಶ್ ಅವರು ಟ್ರಸ್ಟ್‌ನ ಪದಾಧಿಕಾರಿಯಾಗಿದ್ದರು. ಅವರ ತಂದೆ ಈ ಹಿಂದೆ ಟ್ರಸ್ಟ್ ಅಧ್ಯಕ್ಷರಾಗಿದ್ದರು. ವಾಣಿಜ್ಯ ಸಂಕೀರ್ಣದಲ್ಲಿರುವ ಮಳಿಗೆಯೊಂದನ್ನು ಸುರೇಶ್ ತಮ್ಮ ಹೆಸರಿಗೆ ಪಡೆದುಕೊಂಡಿದ್ದರು. ಜೊತೆಗೆ, ಟ್ರಸ್ಟ್‌ಗೆ ಸಂಬಂಧಪಟ್ಟ ಆಸ್ತಿಯನ್ನೆಲ್ಲ ದುರುಪಯೋಗಪಡಿಸಿಕೊಂಡಿದ್ದ ಆರೋಪ ಅವರ ಮೇಲಿತ್ತು' ಎಂದು ಮೂಲಗಳು ಹೇಳಿವೆ.



ಕುಂಬಾರಪೇಟೆ ಅನ್ನದಾನ ಸಮಿತಿ ಟ್ರಸ್ಟ್ ಕಚೇರಿ

ಅಪರಾಧ ಸುದ್ದಿ

'ಟ್ರಸ್ಟ್‌ನ ಸಂಸ್ಥಾಪಕರ ಕುಟುಂಬದ ಸದಸ್ಯನಾಗಿದ್ದ ಆರೋಪಿ ಭದ್ರ, ಟ್ರಸ್ಟ್ ಆಸ್ತಿ ಹಾಗೂ ಕೌಟುಂಬಿಕ ಕಾರಣಕ್ಕೆ ಸುರೇಶ್ ಜೊತೆಗೆ ಮೈಮನಸ್ಸು ಹೊಂದಿದ್ದ. ಇದೇ ಸಿಟ್ಟಿನಲ್ಲಿ ಬುಧವಾರ (ಫೆ. 7) ರಾತ್ರಿ 8.30ರ ಸುಮಾರಿಗೆ ಮಳಿಗೆಗೆ ನುಗ್ಗಿ ಸುರೇಶ್ ಅವರನ್ನು ಚಾಕುವಿನಿಂದ ಇರಿದು ಕೊಂದಿದ್ದಾನೆ. ಸ್ನೇಹಿತ ಸುರೇಶ್ ಅವರನ್ನು ಮಾತನಾಡಿಸಲು ಬಂದಿದ್ದ ಮಹೇಂದ್ರ ಅವರನ್ನೂ ಆರೋಪಿ ಹತ್ಯೆ ಮಾಡಿದ್ದಾನೆ' ಎಂದು ಮೂಲಗಳು ವಿವರಿಸಿವೆ.

ಉಪ ಬಾಡಿಗೆ ನೀಡಿದ್ದ ಸುರೇಶ್: 'ವಾಣಿಜ್ಯ ಸಂಕೀರ್ಣದ ಮಳಿಗೆಯೊಂದನ್ನು ಸುರೇಶ್ ಅವರು ಬೇರೊಬ್ಬರಿಗೆ ಉಪ ಬಾಡಿಗೆಗೆ ನೀಡಿದ್ದರು. ಇದರ ವಿರುದ್ಧ ಟ್ರಸ್ಟ್‌ನ ಕೆಲವರಿಗೆ ಹಾಗೂ ಭದ್ರನಿಗೆ ಅಸಮಾಧಾನವಿತ್ತು. ತಮ್ಮ ಹಿರಿಯರು ಸ್ಥಾಪಿಸಿರುವ ಟ್ರಸ್ಟ್‌ನ ಲಾಭವನ್ನು ಸುರೇಶ್ ಮಾತ್ರ ಪಡೆಯುತ್ತಿದ್ದಾನೆಂಬ ಕೋಪ ಭದ್ರನಲ್ಲಿ ಮಡುಗಟ್ಟಿತ್ತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಮಾತನಾಡಿಸಲು ಬಂದು ಕೊಲೆಯಾದರು'

'ಸುರೇಶ್ ಹಾಗೂ ಮಹೇಂದ್ರ ಹಲವು ವರ್ಷಗಳ ಸ್ನೇಹಿತರು. ಬುಧವಾರ ಸಂಜೆ ಮಾರುಕಟ್ಟೆಗೆ ಬಂದಿದ್ದ ಮಹೇಂದ್ರ, ಸ್ನೇಹಿತ ಸುರೇಶ್ ಅವರ ಕುಶಲೋಪರಿ ವಿಚಾರಿಸಲು ಮಳಿಗೆಗೆ ಬಂದಿದ್ದರು. ಇಬ್ಬರೂ ಪರಸ್ಪರ ಮಾತನಾಡುತ್ತ ಕುಳಿತಿದ್ದಾಗಲೇ ಆರೋಪಿ ಭದ್ರ ದಾಳಿ ಮಾಡಿದ್ದ. ಆರಂಭದಲ್ಲಿ ಸುರೇಶ್ ಅವರನ್ನು ಚಾಕುವಿನಿಂದ ಇರಿದು ಕೊಂದಿದ್ದ. ಮಹೇಂದ್ರ ರಕ್ಷಣೆಗೆ ಹೋಗಿದ್ದರು. ಅವರ ಮೇಲೆಯೂ ದಾಳಿ ಮಾಡಿದ್ದ ಭದ್ರ, ಚಾಕುವಿನಿಂದ ಇರಿದು ಹತ್ಯೆ ಮಾಡಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

ದೂರವಾಗಿದ್ದ ಪತ್ನಿ: 'ಆರೋಪಿ ಭದ್ರನ ಪತ್ನಿ ಆತನಿಂದ ದೂರವಾಗಲು ಸುರೇಶ್ ಕಾರಣ ಎನ್ನಲಾಗಿದೆ. ಮಳಿಗೆಯೊಂದನ್ನು ಬಾಡಿಗೆಗೆ ನೀಡಿದ್ದರಿಂದ ಬಂದಿದ್ದ ಹಣದಲ್ಲಿ ಭದ್ರನ ಪತ್ನಿಗೂ ಪಾಲು ಕೊಟ್ಟಿದ್ದ ಸುರೇಶ್, ಪ್ರತ್ಯೇಕವಾಗಿ ವಾಸಿಸಲು ವ್ಯವಸ್ಥೆ ಮಾಡಿಕೊಟ್ಟಿದ್ದ. ಈ ಸಂಗತಿ ಭದ್ರನಿಗೆ ಗೊತ್ತಾಗಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಟ್ರಸ್ಟ್ ಆಸ್ತಿ ವಿಚಾರವಾಗಿ ನ್ಯಾಯಾಲಯದಲ್ಲಿ ವ್ಯಾಜ್ಯವಿತ್ತು. ಈ ಪ್ರಕರಣದಲ್ಲಿ ಭದ್ರ ಹಾಗೂ ಇತರರಿಗೆ ಹಿನ್ನಡೆ ಆಗಿತ್ತು. ಜೊತೆಗೆ, ಟ್ರಸ್ಟ್ ಆಸ್ತಿಯೆಲ್ಲವೂ ತನ್ನದೆಂದು ಸುರೇಶ್ ಹೇಳಿಕೊಂಡು ಓಡಾಡುತ್ತಿದ್ದರು. 'ಆಸ್ತಿಯನ್ನೂ ಅನುಭವಿಸುತ್ತಿದ್ದಾನೆ. ನನ್ನ ಪತ್ನಿಯನ್ನೂ ದೂರ ಮಾಡಿದ್ದಾನೆ' ಎಂದು ಕೋಪಗೊಂಡಿದ್ದ ಭದ್ರ, ಸುರೇಶ್ ಅವರನ್ನು ಕೊಲ್ಲಲು ಸಂಚು ರೂಪಿಸಿದ್ದ' ಎಂದು ಮೂಲಗಳು ತಿಳಿಸಿವೆ.

ಎಸಿಪಿಗೆ ದೂರು ನೀಡಿದ್ದ ಎದುರಾಳಿ ಗುಂಪು: 'ಬಿ.ಎಲ್. ಸುರೇಶ್ ಟ್ರಸ್ಟ್ ಆಸ್ತಿ ದುರುಪಯೋಗಪಡಿಸಿಕೊಳ್ಳುತ್ತಾರೆ' ಎಂದು ಆರೋಪಿಸಿ ಎದುರಾಳಿ ಗುಂಪಿನವರು, ಹಲಸೂರು ಗೇಟ್ ಎಸಿಪಿ ಅವರಿಗೆ 2023ರ ಏಪ್ರಿಲ್ 24ರಂದು ದೂರು ನೀಡಿದ್ದರು.

'ಬಾಡಿಗೆದಾರರನ್ನು ಬೆದರಿಸಿ ಬಾಡಿಗೆ ವಸೂಲಿ ಮಾಡಿದ್ದಾರೆ. ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಟ್ರಸ್ಟ್ ಆಸ್ತಿಯನ್ನು ಬಿ.ಎಲ್. ಸುರೇಶ್ ಹಾಗೂ ಕುಟುಂಬದವರು ಅಕ್ರಮವಾಗಿ ತಮ್ಮದಾಗಿಸಿಕೊಂಡಿದ್ದಾರೆ. ಬಾಡಿಗೆ ಹಾಗೂ ಆಸ್ತಿಯ ಇತರೆ ಹಣವನ್ನು ತಮ್ಮ ವೈಯಕ್ತಿಕ ಖಾತೆಗೆ ಹಾಕಿಸಿಕೊಂಡು ಅಕ್ರಮ ಎಸಗಿದ್ದಾರೆ' ಎಂದು ದೂರಿನಲ್ಲಿ ಆರೋಪಿಸಿದ್ದರು.

ಆಸ್ತಿಗೆ ಸಂಬಂಧಪಟ್ಟಂತೆ ಟ್ರಸ್ಟ್ ಕಚೇರಿಯಲ್ಲಿಯೇ 2023ರಲ್ಲಿ ಎರಡು ಬಣಗಳ ನಡುವೆ ಮಾರಾಮಾರಿ ನಡೆದಿತ್ತು. ಈ ಪ್ರಕರಣವೂ ಠಾಣೆಗೆ ಮೆಟ್ಟಿಲೇರಿತ್ತು. ಮಹಿಳೆಯೊಬ್ಬರ ಮೇಲೆ ಹಲ್ಲೆ ಮಾಡಿ ಕೊಲೆಗೆ ಯತ್ನಿಸಿದ್ದ ಆರೋಪದಡಿ ಬಿ.ಎಲ್. ಸುರೇಶ್ ವಿರುದ್ಧವೂ ಕೆ.ಆರ್. ಮಾರುಕಟ್ಟೆ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು.

ಯಂತ್ರಕ್ಕೆ ಅಡ್ಡ ಮಲಗಿ ಅಲೆಮಾರಿಗಳ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಗೌರಿಬಿದನೂರು: ತಾಲ್ಲೂಕಿನ ಕೋಟಾಲದಿನ್ನೆ ಬಳಿಯ ಎಚ್. ನರಸಿಂಹಯ್ಯ ವಿಜ್ಞಾನ ಉಪ ಕೇಂದ್ರಕ್ಕೆ ಸರ್ಕಾರ ಮಂಜೂರು ಮಾಡಿರುವ ಜಮೀನಿನ ಗಡಿ ಗುರುತಿಗೆ ಗುರುವಾರ ಅಧಿಕಾರಿಗಳು ಮುಂದಾಗಿದ್ದು, ಈ ವೇಳೆ ಅಲೆಮಾರಿ ಹಕ್ಕಿಪಿಕ್ಕಿ ಸಮುದಾಯದ ಜನರು ಪ್ರತಿಭಟಿಸಿದರು.

ಜಮೀನು ಹದ್ದುಬಸ್ತಿಗೆ ಮುಂದಾದ ಕಂದಾಯ ಅಧಿಕಾರಿಗಳ ವಿರುದ್ಧ ಪ್ರತಿಭಟಿಸಿದರು. ಯಂತ್ರಗಳಿಗೆ ಅಡ್ಡ ಮಲಗಿದರು. ವಿಜ್ಞಾನ ಪಾರ್ಕ್‌ಗೆ ಸರ್ವೆ ನಂಬರ್ 75ರಲ್ಲಿ 150.15 ಎಕರೆ ಜಮೀನನ್ನು ಸರ್ಕಾರ ಮಂಜೂರು ಮಾಡಿದೆ.

'ಕಳೆದ 50 ವರ್ಷಗಳಿಂದ ಇಲ್ಲಿ ಸಾಗುವಳಿ ಮಾಡುತ್ತಿದ್ದೇವೆ. ನಮಗೆ ಸರ್ಕಾರ ಸಾಗುವಳಿ ಚೀಟಿ ಸಹ ನೀಡಿದೆ. ನಮ್ಮ ಜಮೀನಿನ ಹದ್ದುಬಸ್ತು ನಿಗದಿ ಮಾಡಿಕೊಡಬೇಕು ಎಂದು ವಿನಂತಿಸುತ್ತಿದ್ದೇವೆ. ಅದನ್ನು ನಿರ್ಲಕ್ಷಿಸಿರುವ ಕಂದಾಯ ಅಧಿಕಾರಿಗಳು ಈಗ ಏಕೆ ಗಡಿ ಗುರುತಿಸಲು ಮುಂದಾಗಿದ್ದಾರೆ' ಎಂದು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

ಮಂಡ್ಯದಿಂದ ನಿಖಿಲ್ ಅಭ್ಯರ್ಥಿ?

ಮಂಡ್ಯ: 'ಯುವ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಫೆಬ್ರುವರಿ 19ರಿಂದ ಜಿಲ್ಲಾ ಪ್ರವಾಸ ಆರಂಭಿಸಲಿದ್ದು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮತ್ತೆ ಅವರೇ ಅಭ್ಯರ್ಥಿಯಾಗುತ್ತಾರೆ' ಎಂಬ ಸುದ್ದಿಗಳು ಹರಿದಾಡುತ್ತಿವೆ.

ಕಳೆದ ಲೋಕಸಭಾ ಚುನಾವಣೆಯಲ್ಲಿ ಅವರು ಪಕ್ಷೇತರ ಅಭ್ಯರ್ಥಿ ಸುಮಲತಾ ಅವರ ಎದುರು ಸೋತಿದ್ದರು. 'ಸೋತ ನೆಲದಲ್ಲೇ ಗೆಲ್ಲಬೇಕೆಂಬ ಉದ್ದೇಶದಿಂದ ಮಂಡ್ಯದಿಂದಲೇ ಬಿಜೆಪಿ- ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಸ್ಪರ್ಧಿಸಲಿದ್ದಾರೆ' ಎಂದು ಹೇಳಲಾಗುತ್ತಿದೆ.

ಪ್ರೀತಿ ಒಪ್ಪದೆ ದೂರವಾದ ಮಹಿಳೆ: ಯುವಕ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಠಾಣೆ ವ್ಯಾಪ್ತಿಯಲ್ಲಿ ಅನ್ಬುರಾಜನ್ ಅವರು ಆತ್ಮಹತ್ಯೆ ಮಾಡಿಕೊಂಡಿದ್ದು, ಪ್ರಚೋದನೆ ನೀಡಿದ್ದ ಆರೋಪದಡಿ ಮಹಿಳೆಯೊಬ್ಬರ ವಿರುದ್ಧ ದೂರು ದಾಖಲಾಗಿದೆ.

'ಅನ್ಬುರಾಜನ್ ಅವರು ಇತ್ತೀಚೆಗೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರ ಜೊತೆಗೆ ಸಲುಗೆ ಇಟ್ಟುಕೊಂಡಿದ್ದ ಮಹಿಳೆಯೇ ಆತ್ಮಹತ್ಯೆಗೆ ಪ್ರಚೋದನೆ ನೀಡಿದ್ದಾರೆಂದು ಆರೋಪಿಸಿ ಪೋಷಕರು ದೂರು ನೀಡಿದ್ದಾರೆ. ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿ ಮಹಿಳೆ, ಪತಿಯಿಂದ ದೂರವಾಗಿ ಪ್ರತ್ಯೇಕವಾಗಿ ವಾಸವಿದ್ದರು. ಬೆಂಗಳೂರಿನ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಅವರಿಗೂ ಅನ್ಬುರಾಜನ್‌ಗೂ ಪರಿಚಯವಾಗಿ, ಸ್ನೇಹ ಬೆಳೆದಿತ್ತು. ಇಬ್ಬರೂ ಸಲುಗೆಯಿಂದ ಇದ್ದರೆಂದು ಹೇಳಲಾಗುತ್ತಿದೆ.'

'ಪ್ರೀತಿ ಬೇಡವೆಂದು ದೂರವಾಗಿದ್ದ ಮಹಿಳೆ, ಅನ್ಬುರಾಜನ್ ಜೊತೆ ಮಾತನಾಡುವುದನ್ನು ನಿಲ್ಲಿಸಿದ್ದರು. ಮಹಿಳೆಗೆ ಬೇರೊಬ್ಬ ಪುರುಷನ ಜೊತೆ ಸಲುಗೆ ಏರ್ಪಟ್ಟಿತ್ತೆಂದು ಹೇಳಲಾಗುತ್ತಿದೆ. ಇದರಿಂದ ನೊಂದಿದ್ದ ಅನ್ಬುರಾಜನ್, ಆತ್ಮಹತ್ಯೆ ಮಾಡಿಕೊಂಡಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಆತ್ಮಕ್ಕೆ ಹತ್ತಿರವಾದ ಕವಿಜೀವ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಿಎಸ್‌ಎಸ್ ಮತ್ತು ನನ್ನದು ಕೇವಲ ಬರಹಗಾರ–ಓದುಗ, ಗುರು–ಶಿಷ್ಯ ಸಂಬಂಧವಲ್ಲ. ಮನೆಯ ಹಿರಿಯರಂತೆ ಆತ್ಮಕ್ಕೆ ಹತ್ತಿರವಾದ ಕವಿ ಜೀವ' ಎಂದು ಸಾಹಿತಿ ಎಚ್. ಎಸ್.ವೆಂಕಟೇಶಮೂರ್ತಿ ಬಣ್ಣಿಸಿದರು.

ಡಾ.ಜಿಎಸ್ಸೆಸ್ ವಿಶ್ವಸ್ತ ಮಂಡಲಿ ವತಿಯಿಂದ ಬುಧವಾರ 'ಜಿ.ಎಸ್.ಶಿವರುದ್ರಪ್ಪ' ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿದರು.

ಸಾರ್ವಜನಿಕ ದೀಪಗಳು ಇರುವಂತೆ, ವೈಯಕ್ತಿಕ ದೀಪ, ವೈಯಕ್ತಿಕ ಜೀವನವೂ ಬೆಳಗಬೇಕು ಎಂದು ಜಿಎಸ್‌ಎಸ್ ಬಯಸಿದ್ದರು ಎಂದು ವಿವರಿಸಿದರು.

ಜಿ.ಎಸ್.ಶಿವರುದ್ರಪ್ಪ ಪ್ರಶಸ್ತಿ ಸ್ವೀಕರಿಸಿದ ಮತ್ತೊಬ್ಬ ಬರಹಗಾರ ಟಿ.ಎಸ್.ಸತ್ಯನಾಥ ಮಾತನಾಡಿ, 'ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ತೌಲನಿಕ ಅಧ್ಯಯನ ವಿಭಾಗಗಳು ಇಲ್ಲದ ಕಾಲದಲ್ಲಿ ಜಿಎಸ್‌ಎಸ್ ತೌಲನಿಕ ಅಧ್ಯಯನಗಳಿಗೆ ಒತ್ತು ನೀಡಿದ್ದರು. ನನಗೆ ಅವರಿಂದ ಪಡೆದ ಅನುಭವ ನೆರವಾಯಿತು' ಎಂದು ನೆನಪು ಮಾಡಿಕೊಂಡರು.

ಪ್ರಶಸ್ತಿ ಪುರಸ್ಕೃತರ ಬಗ್ಗೆ ವಿಮರ್ಶಕಿ ಎಂ.ಎಸ್. ಆಶಾದೇವಿ ಮಾತನಾಡಿ, 'ಎಲ್ಲರೂ ಕೃಷ್ಣನ ಕಣ್ಣಲ್ಲಿ ಲೋಕವನ್ನು ನೋಡುತ್ತಿದ್ದ ಕಾಲದಲ್ಲಿ ಎಚ್‌ಎಸ್‌ವಿ ಅವರು ರಾಧೆಯ ಕಣ್ಣಲ್ಲಿ ಕೃಷ್ಣನನ್ನು ನೋಡಿದವರು. ಅದ್ಭುತವಾದ ದಾಂಪತ್ಯ ಗೀತೆಗಳನ್ನು ರಚಿಸಿದವರು' ಎಂದು ತಿಳಿಸಿದರು.

'ಶ್ರೀ ಸಂಸಾರಿ'ಯಲ್ಲಿ ಎಲ್ಲರನ್ನು ಪ್ರೀತಿಸುವ ಗೌರವಿಸುವ ರಾಮನನ್ನು ಚಿತ್ರಿಸಿದ್ದ ಎಚ್‌ಎಸ್‌ವಿ ಅವರು ಇತ್ತೀಚೆಗೆ ಮತ್ತೆ ರಾಮನ ಬಗ್ಗೆ ಕವನ ಬರೆದಿದ್ದರು. ಸಾಹಿತ್ಯದಲ್ಲಿ 'ಶ್ರೀ ಸಂಸಾರಿ'ಯೇ ಉಳಿಯುವುದು; ಇತ್ತೀಚಿನ ಕವನವಲ್ಲ ಎಂದು ವಿಶ್ಲೇಷಿಸಿದರು.

'ಟಿ.ಎಸ್. ಸತ್ಯನಾಥ ಅವರ ಬರಹಗಳು ಇಂದಿನ ಸಂಶೋಧನಾ ವಿದ್ಯಾರ್ಥಿಗಳಿಗೆ ದಾರಿದೀಪವಾಗಿವೆ. ಡಿ.ಆರ್. ನಾಗರಾಜ್ ಅವರ ಕೊಡುಗೆ ಹೇಗೆ ಮಹತ್ತರವಾದುದು ಎಂಬುದನ್ನು ಎ.ಕೆ. ರಾಮಾನುಜನ್ ಸಾಹಿತ್ಯದೊಂದಿಗೆ ಸಮೀಕರಿಸಿ ತೋರಿದ ಅವರ ಬರಹವು ಅತ್ಯಾಪ್ತವಾಗಿದೆ.' ಎಂದು ಹೇಳಿದರು.



ಜಿಎಸ್ಸೆಸ್ ವಿಶ್ವಸ್ತ ಮಂಡಲಿ ನೀಡುವ ಜಿ.ಎಸ್. ಶಿವರುದ್ರಪ್ಪ ಪ್ರಶಸ್ತಿಯನ್ನು ಟಿ.ಎಸ್.ಸತ್ಯನಾಥ್ ಮತ್ತು ಎಚ್. ಎಸ್. ವೆಂಕಟೇಶಮೂರ್ತಿ ಅವರಿಗೆ ಪ್ರದಾನ ಮಾಡಲಾಯಿತು. ಲಲಿತಾ ಶ್ರೀನಿವಾಸ್, ಕೆ.ಮರುಳಸಿದ್ಧಪ್ಪ, ನಟರಾಜ ಬೂದಾಳು, ಎಂ.ಎಸ್.ಆಶಾದೇವಿ, ಬಸವರಾಜ ಕಲ್ಗುಡಿ, ಪೂರ್ಣಿಮಾ, ಜಿ.ಎಸ್. ಜಯಂತಿ, ಜಿ.ಎಸ್.ಶಿವಪ್ರಸಾದ್ ಉಪಸ್ಥಿತರಿದ್ದರು. –ಪ್ರಜಾವಾಣಿ ಚಿತ್ರ

ಗ್ರಾಂ.ಪಂ. ಸದಸ್ಯರ ಪ್ರತಿಭಟನೆ

ಬೆಂಗಳೂರು: 'ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ₹15,000, ಉಪಾಧ್ಯಕ್ಷರಿಗೆ ₹ 12,000 ಹಾಗೂ ಸದಸ್ಯರಿಗೆ ₹ 10,000 ಮಾಸಿಕ ಗೌರವಧನ ನಿಗದಿಪಡಿಸಬೇಕು' ಎಂದು ಆಗ್ರಹಿಸಿ ರಾಜ್ಯ ಗ್ರಾಮ ಪಂಚಾಯಿತಿ ಸದಸ್ಯರ ಮಹಾ ಒಕ್ಕೂಟದ ಪದಾಧಿಕಾರಿಗಳು ನಗರದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಸೇರಿದ್ದ ಪ್ರತಿಭಟನಕಾರರು, ಬೇಡಿಕೆ ಈಡೇರಿಕೆಗಾಗಿ ಘೋಷಣೆ ಕೂಗಿದರು. ರಾಜ್ಯದ ವಿವಿಧ ಗ್ರಾಮ ಪಂಚಾಯಿತಿಗಳ ಸದಸ್ಯರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

'ಗ್ರಾಮ ಪಂಚಾಯಿತಿಗಳು ಸ್ವಯಂ ಸರ್ಕಾರಗಳಾಗಿ ಕಾರ್ಯನಿರ್ವಹಿಸಲು ಜವಾಬ್ದಾರಿ ನಕ್ಷೆ ರಚಿಸಬೇಕು. ತಂತ್ರಜ್ಞಾನದ ಸೌಲಭ್ಯದೊಂದಿಗೆ ಗ್ರಾಮ ಸಭೆ ಆಯೋಜಿಸಲು ಆಂದೋಲನ ನಡೆಸಬೇಕು. ಬಾಪೂಜಿ ಸೇವಾ ಕೇಂದ್ರಗಳಲ್ಲಿ ಹೆಚ್ಚುವರಿ ಡಾಟಾ ಎಂಟ್ರಿ ಆಪರೇಟರ್ ನೇಮಕಕ್ಕೆ ಅವಕಾಶ ನೀಡಬೇಕು. ಬೇಡಿಕೆಗೆ ತಕ್ಕಂತೆ ಎಲೆಕ್ಟ್ರಿಷಿಯನ್ ನೇಮಿಸಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.







1.ವಿಧಾನಸೌಧದ ಆವರಣದಲ್ಲಿ ಗುರುವಾರ ನಡೆದ ಜನಸ್ಪಂದನದಲ್ಲಿ ಮಹಿಳೆಯರು ಭಾಗವಹಿಸಿದರು 2. ನಾಗರಿಕರ ಅಹವಾಲು ಸ್ವೀಕರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ 3. ಜನಸ್ಪಂದನದಲ್ಲಿ ಊಟದ ಬಾಕ್ಸ್ ಪಡೆಯಲು ಜನರ ನೂಕುನುಗ್ಗಲು –ಪ್ರಜಾವಾಣಿ ಚಿತ್ರಗಳು: ಪ್ರಶಾಂತ್ ಎಚ್‌.ಜಿ./ಬಿ.ಕೆ. ಜನಾರ್ದನ

ಬುಧವಾರ ರಾತ್ರಿಯಿಂದಲೇ ಹರಿದುಬಂದ ಜನಸಾಗರ ● ಉದ್ಯೋಗಕ್ಕಾಗಿ ಅಂಗವಿಕಲರ ಮೊರೆ ● ಮುಖ್ಯಮಂತ್ರಿ ಎದುರೇ ಅತ್ತೆ– ಸೊಸೆ ಜಗಳ

ಜನಸ್ಪಂದನ: ಹಲವು ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸೌಧದ ಆವರಣದಲ್ಲಿ ಗುರುವಾರ ನಡೆದ ‘ಜನಸ್ಪಂದನ’ ಕಾರ್ಯಕ್ರಮ ಜನರ ಹಲವು ಸಮಸ್ಯೆಗಳಿಗೆ ತ್ವರಿತ ಪರಿಹಾರ ಒದಗಿಸುವಲ್ಲಿ ಯಶಸ್ವಿಯಾಯಿತು. ಕಂದಾಯ ಸೇರಿದಂತೆ ಕೆಲ ಇಲಾಖೆಗಳ ಸಮಸ್ಯೆಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದರೂ, ಆರೋಗ್ಯ ಸಮಸ್ಯೆಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ಥಳದಲ್ಲೇ ನೆರವು ಒದಗಿಸಿದರು.

ರಾಮನಗರ ಜಿಲ್ಲೆಯ ವಿಜಯಕುಮಾರ್ ಅವರ ಕಿಡ್ನಿ ಕಸಿ ಚಿಕಿತ್ಸೆಗಾಗಿ ₹4 ಲಕ್ಷ, ವಿಜಯಪುರ ಜಿಲ್ಲೆ ಸಿಂದಗಿ ತಾಲ್ಲೂಕಿನ ಬಸನಗೌಡ ಬಿರಾದಾರ್ ‘ಬೋನ್‌ಮ್ಯಾರೊ’ ಕಸಿಗಾಗಿ ₹4 ಲಕ್ಷ, ತುಮಕೂರು ಜಿಲ್ಲೆಯ ಎಂಟು ವರ್ಷದ ಶಾಂಭವಿಗೆ ಶ್ರವಣ ಸಾಧನ ಖರೀದಿಸಲು ₹50 ಸಾವಿರ, ಅಪಘಾತಕ್ಕೆ ಒಳಗಾದ ಬಾಲಕ ಲೋಕೇಶ್‌ಗೆ ₹50 ಸಾವಿರ, ಕೋಲಾರ ಜಿಲ್ಲೆಯ ಕೆಜಿಎಫ್‌ನ ಎಂಟು ವರ್ಷದ ಎನ್‌.ಕೃಷ್ಣಗೆ ₹ 1ಲಕ್ಷ ಪರಿಹಾರವನ್ನು ಮಂಜೂರು ಮಾಡಿದರು.

ತುಮಕೂರು ಜಿಲ್ಲೆಯ ಮಡಕಶಿರಾ ಗ್ರಾಮದ ಶಾಂತಿಬಾಯಿ ಅವರ ಬುದ್ಧಿಮಾಂದ್ಯ ಮಗುವಿನ ಚಿಕಿತ್ಸೆಗೆ, ನೆಲಮಂಗಲದ ಚೌಡೇಶ್ವರಿ ಅವರ ಕ್ಯಾನ್ಸರ್ ಶಸ್ತ್ರಚಿಕಿತ್ಸೆಗೆ, ರಾಯಚೂರಿನ ಮೂರು ವರ್ಷದ ಸುಶಾಂತ್ ತಲಸ್ಸೇಮಿಯಾ ಚಿಕಿತ್ಸೆಗೆ, ಬೆಂಗಳೂರಿನ ಜೆ.ಜೆ ನಗರ ಎಂ.ಶ್ರೀಧರ್ ಅವರ ಮೂತ್ರಪಿಂಡಗಳ ಕಸಿಗೆ, ಚೇತನ ಸತ್ಯನಾರಾಯಣ ಅವರಿಗೆ ಡಯಾಲಿಸಿಸ್ ಚಿಕಿತ್ಸೆಗಾಗಿ ಆರ್ಥಿಕ ನೆರವು ಕೋರಿದರು.

ಅಂಗವಿಕಲರ ಮೊರೆ: ಜನಸ್ಪಂದನ ಕಾರ್ಯಕ್ರಮದಲ್ಲಿ ಹಲವು ಅಂಗವಿಕಲರು ಉದ್ಯೋಗ ಕೊಡಿಸುವಂತೆ, ಎಲೆಕ್ಟ್ರಿಕಲ್ ವಾಹನ ನೀಡುವಂತೆ ಮನವಿ ಮಾಡಿದರು.

ಎರಡು ಪದವಿ ಪಡೆದಿರುವ ಬೆಂಗಳೂರಿನ ಚೇತನ ನವ್ಯಶ್ರೀ, ಗಂಗೂಬಾಯಿ ಹಾನಗಲ್ ವಿಶ್ವ-ವಿದ್ಯಾಲಯದಿಂದ ಕರ್ನಾಟಕ ಸಂಗೀತದಲ್ಲಿ ಸ್ನಾತಕೋತ್ತರ ಪದವಿ ಪಡೆದರುವ ಹುಣಸೂರು ತಾಲ್ಲೂಕಿನ ಶಿವಕುಮಾರಾಚಾರಿ ಅವರು ಉದ್ಯೋಗ ನೀಡುವಂತೆ, ಒಂದು ಕಾಲು ಕಳೆದುಕೊಂಡಿರುವ ರಾಮನಗರ ಮಾಜಿ ಯೋಧ ಶ್ರೀನಿವಾಸ ಎಲೆಕ್ಟ್ರಿಕಲ್ ವಾಹನ ಕೊಡಿಸುವಂತೆ ಮನವಿ ಮಾಡಿದರು.

ಎರಡೂ ಕಣ್ಣಿನ ದೃಷ್ಟಿ ಕಳೆದುಕೊಂಡಿರುವ ಬಳ್ಳಾರಿ ಜಿಲ್ಲೆಯ ಕಂಪ್ಲಿ ತಾಲ್ಲೂಕಿನ ಶರಣಬಸವ ಕುಮಾರ್ ಸ್ವಂತ ಉದ್ಯೋಗ ಕೈಗೊಳ್ಳಲು ಆರ್ಥಿಕ ನೆರವು ಕೋರಿದರು.

ಮುಖ್ಯಮಂತ್ರಿ ಮುಂದೆ ಅತ್ತೆ-ಸೊಸೆ ಜಗಳ: ಹುಬ್ಬಳ್ಳಿಯ ರಜಿಯಾಬೇಗಂ ಪುತ್ರ ಪಶುಪಾಲನಾ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದು, ಈಚೆಗೆ ನಿಧನರಾಗಿದ್ದಾರೆ. ‘ಮಗನ ಬಹುತೇಕ ನಾಮ ನಿರ್ದೇಶನದಲ್ಲಿ ನನ್ನ ಹೆಸರಿದ್ದರೂ, ಇಲಾಖೆಯ ಅಧಿಕಾರಿಗಳು ಸೊಸೆಗೆ ಹಣ ನೀಡಿದ್ದಾರೆ. 70 ದಾಟಿದ ನನಗೆ ಜೀವನ ಮಾಡುವುದೇ ಕಷ್ಟವಾಗಿದೆ. ಹೇಗಿದ್ದರೂ ಆಕೆಗೆ ಅನುಕಂಪದ ನೌಕರಿ, ಪಿಂಚಣಿ ದೊರೆಯುತ್ತದೆ. ನೆರವು ಕೇಳಿದರೆ ಜಗಳಕ್ಕೆ ಬರುತ್ತಾರೆ. ನನಗೂ ಸ್ವಲ್ಪ ಹಣ ಕೊಡಿಸಿ’ ಎಂದು ರಜಿಯಾಬೇಗಂ ಕೋರಿದರು.

‘ಕಷ್ಟಕ್ಕೆ ಸಂಸದೆ ಸಹಾಯ ಮಾಡಲಿಲ್ಲ. ನನಗೆ ದಯಾಮರಣಕ್ಕೆ ಅವಕಾಶ ಕೊಡಿಸಿ’ ಎಂದು ಮಂಡ್ಯದ ವಿಧವೆಯೊಬ್ಬರು ಹಾಗೂ ‘ಮಗ ಮನೆಗೆ ಸೇರಿಸಿಲ್ಲ, ಮಗಳ ಮನೆಯಲ್ಲಿ ಇರಲು ಆಗುತ್ತಿಲ್ಲ’ ಸಹಾಯ ಮಾಡಿ ಎಂದು ಬೆಂಗಳೂರಿನ ಮಹಿಳೆಯೊಬ್ಬರು ಸಿದ್ದರಾಮಯ್ಯ ಕಾಲಿಗೆ ಎರಗಲು ಮುಂದಾದರು. ಇಂತಹ ವಿಷಯಗಳಿಗೆಲ್ಲ ಇಲ್ಲಿಯವರೆಗೆ ಬರುತ್ತೀರಲ್ಲ ಎಂದು ಸಿದ್ದರಾಮಯ್ಯ ಮೆಲ್ಲಗೆ ಗದರಿದರು.

ಮೊಮ್ಮಗಳಿಗಾಗಿ ವಿಧಾನಸೌಧಕ್ಕೆ ಬಂದ ಶತಾಯುಷಿ: ಪದವಿ ಓದಿರುವ ಮೊಮ್ಮಗಳಿಗೆ ತಂದೆ ಇಲ್ಲ. ಆಕೆಗೆ ಒಂದು ಒಳ್ಳೆಯ ಕೆಲಸ ಕೊಡಿಸಿ ಎಂದು ಹೊಸಕೋಟೆಯ ಶತಾಯುಷಿ ಶಾಂತಮ್ಮ ಮುಖ್ಯಮಂತ್ರಿಗೆ ಮನವಿ ಮಾಡಿದರು.

ಸ್ವಚ್ಛತಾ ಕಾರ್ಯದ ಹಣ ಕೊಟ್ಟಿಲ್ಲ: ಬಿಬಿಎಂಪಿ ವ್ಯಾಪ್ತಿಯ ಆರ್‌ಆರ್ ನಗರದಲ್ಲಿ ಸ್ವಚ್ಛತಾ ಕಾರ್ಯ ಮಾಡುತ್ತಿರುವ ನಮಗೆ 6 ತಿಂಗಳಿನಿಂದ ವೇತನ ನೀಡಿಲ್ಲ. ಎಂಜಿನಿಯರ್ ಅಲೆದಾಡಿಸುತ್ತಾರೆ ಎಂದು ಪೌರ ಕಾರ್ಮಿಕರಾದ ಗೀತಾ, ಗಜೇಂದ್ರ ದೂರು ಸಲ್ಲಿಸಿದರು.

40 ವರ್ಷಗಳಿಂದ ಇನಾಮು ಜಾಗದಲ್ಲಿ ಮನೆಕಟ್ಟಿಕೊಂಡು ವಾಸಿಸುತ್ತಿದ್ದೇವೆ. ಇದುವರೆಗೂ ಹಕ್ಕುಪತ್ರ ಕೊಟ್ಟಿಲ್ಲ ಎಂದು ಹಾಜಿ ಸಾಬ್ ನೆಲದ ಮೇಲೆ ಮಲಗಿ ಬೇಡಿಕೊಂಡರು.

‘ವಿಪಕ್ಷಗಳಿಗೆ ಅಭಿವೃದ್ಧಿ ಅರ್ಥವೇ ಗೊತ್ತಿಲ್ಲ’

ವಿರೋಧ ಪಕ್ಷಗಳಿಗೆ ಅಭಿವೃದ್ಧಿಯ ಅರ್ಥವೇ ಗೊತ್ತಿಲ್ಲ. ಗ್ಯಾರಂಟಿ ಯೋಜನೆಗಳೂ ಅಭಿವೃದ್ಧಿಯ ಒಂದು ಭಾಗ. ಜನರ ಆರ್ಥಿಕ ಅಭಿವೃದ್ಧಿಗೆ ನೇರ ಪರಿಹಾರ ಒದಗಿಸುತ್ತಿವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದರು.

ಜನಸ್ಪಂದನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸಾಮಾಜಿಕ ಸಮಾನತೆ ನಿರ್ಮಾಣದ ಹಾದಿಯಲ್ಲಿ ಗ್ಯಾರಂಟಿ ಕಾರ್ಯಕ್ರಮಗಳು ಮಹತ್ವದ್ದಾಗಿವೆ ಎಂದು ಹೇಳಿದರು.

ಕೆಳ ಹಂತದಲ್ಲೇ ಅರ್ಜಿ ಇತ್ಯರ್ಥಪಡಿಸಿ: ಕೆಳ ಹಂತದಲ್ಲೇ ‘ಅಧಿಕಾರಿಗಳು ಸಮಸ್ಯೆಗಳನ್ನು ಬಗೆಹರಿಸಿದರೆ ಜನರು ಬೆಂಗಳೂರಿಗೆ ಬಂದು ಅರ್ಜಿ ಕೊಡುವ ಸಂದರ್ಭ ಉದ್ಭವಿಸುವುದಿಲ್ಲ. ಈ ನಿಟ್ಟಿನಲ್ಲಿ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿ ಸಿಇಒಗಳ ಮೇಲೆ ಹೆಚ್ಚಿನ ಜವಾಬ್ದಾರಿಯಿದೆ’ ಎಂದು ಮುಖ್ಯಮಂತ್ರಿ ಹೇಳಿದರು.

ಕಾರ್ಯಕ್ರಮದ ಕೊನೆಯಲ್ಲಿ ಮಾತನಾಡಿದ ಅವರು, ‘ಜನ ಸ್ಪಂದನೆಗೆ ಬಂದ ಅರ್ಜಿಗಳನ್ನು ಒಂದು ತಿಂಗಳ ಒಳಗೆ ಬಗೆಹರಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಆಯಾ ಜಿಲ್ಲೆಗೆ ಸಂಬಂಧಪಟ್ಟ ಅರ್ಜಿಗಳನ್ನು ಆಯಾ ಜಿಲ್ಲಾಧಿಕಾರಿಗಳು ಸಮಯ ಮಿತಿಯೊಳಗೆ ಬಗೆಹರಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ತಮ್ಮ ವ್ಯಾಪ್ತಿಯ ಅರ್ಜಿಗಳನ್ನು ಆದಷ್ಟು ಬೇಗ ಪರಿಹರಿಸುವಂತೆ ಹೇಳಿದ್ದೇನೆ’ ಎಂದರು.

‘ಮೊದಲ ಜನ ಸ್ಪಂದನೆಯಲ್ಲಿ ಬಂದ ಅರ್ಜಿಗಳ ಪೈಕಿ ಶೇ 98ರಷ್ಟು ಅರ್ಜಿಗಳಿಗೆ ಪರಿಹಾರ ನೀಡಲಾಗಿದೆ. ಈ ಬಾರಿಯೂ ಅಷ್ಟೇ ತ್ವರಿತವಾಗಿ ಪರಿಹಾರ ಒದಗಿಸಲು ಸೂಚನೆ ನೀಡಿದ್ದೇನೆ’ ಎಂದರು.

ಕೈ ಕುಲುಕಿದವರೇ ಹೆಚ್ಚು!

ಜನಸ್ಪಂದನ ಕಾರ್ಯಕ್ರಮಕ್ಕೆ 20 ಸಾವಿರಕ್ಕೂ ಹೆಚ್ಚು ಜನರು ಬಂದಿದ್ದರು. ಇಲಾಖಾವಾರು ತೆರೆಯಲಾಗಿದ್ದ ಕೌಂಟರ್‌ಗಳ ಮುಂದೆ ಜನರಿಗೆ ಕುಳಿತುಕೊಳ್ಳಲು ವ್ಯವಸ್ಥೆ ಮಾಡಲಾಗಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿ ಕೌಂಟರ್ ಬಳಿ ತೆರಳಿ ಅರ್ಜಿ ಸ್ವೀಕರಿಸಿದರು.

ಜಮೀನು ವಿವಾದ, ನಿವೇಶನ, ಊರಿನ ಸಮಸ್ಯೆ ಸೇರಿದಂತೆ ಒಂದು ಸಮಸ್ಯೆಗೆ ಅರ್ಜಿ ಸಲ್ಲಿಸಲು ಹಲವರು ಬಂದಿದ್ದರು. ಗುಂಪಿನ ಮುಖ್ಯಸ್ಥ ಅರ್ಜಿ ನೀಡಿದರೆ, ಉಳಿದವರು ಸಿದ್ದರಾಮಯ್ಯ ಕೈಕುಲುಕಲು ಮುಂದಾದರು. ಪ್ರತಿ ಕೌಂಟರ್‌ಗಳ ಮುಂದೂ ಕೈ ಕುಲುಕುವ ಕೆಲಸ ಪುನರಾವರ್ತನೆಯಾಯಿತು.

ಅರ್ಜಿ ಸ್ವೀಕರಿಸಲು ವಿಳಂಬವಾಗಿದೆ ಎಂದು ಆಕ್ರೋಶಗೊಂಡ ವ್ಯಕ್ತಿಯೊಬ್ಬರು ಸಿದ್ದರಾಮಯ್ಯ ವಿರುದ್ಧ ಘೋಷಣೆ ಕೂಗಿದರು. ತಕ್ಷಣವೇ ಅವರನ್ನು ಸುತ್ತುವರಿದ ಕೆಲವರು ಸಿದ್ದರಾಮಯ್ಯಗೆ ಜೈಕಾರ ಹಾಕಿದರು.

ದಲಿತರಿಗೆ ಸಿಗದ ಸಾಗುವಳಿ ಪತ್ರ: ಮನವಿ ಸಲ್ಲಿಕೆ

‘ಒಂದೇ ಊರಿನ 22 ದಲಿತ ಕುಟುಂಬಗಳು 1963ರಿಂದ ಜಮೀನು ಸಾಗುವಳಿ ಮಾಡಿಕೊಂಡು ಬರುತ್ತಿದ್ದೇವೆ. ಊರಿನ ಇತರೆ ಜಾತಿಗಳಿಗೆ ಸಾಗುವಳಿ ಪತ್ರ ನೀಡಲಾಗಿದೆ. ನಮಗೆ ಅನ್ಯಾಯ ಮಾಡಲಾಗಿದೆ’ ಎಂದು ಶಿರಾ ತಾಲ್ಲೂಕು ಬೊಮ್ಮನಹಳ್ಳಿಯ ನರಸಿಂಹಯ್ಯ, ಶಿವಮ್ಮ, ಈರಮ್ಮ, ರಾಜಪ್ಪ, ಚಂದ್ರಪ್ಪ ಸೇರಿದಂತೆ 50ಕ್ಕೂ ಹೆಚ್ಚು ಜನರು ಸಿ.ಎಂಗೆ ದೂರು ಸಲ್ಲಿಸಿದರು. ‘ಬಗರ್‌ಹುಕುಂ ಸಮಿತಿಗಳು ಪ್ರತಿ ಬಾರಿಯೂ ನಮ್ಮ ಅರ್ಜಿಗಳನ್ನು ವಜಾ ಮಾಡಿವೆ. ದುಡ್ಡು ಕೊಟ್ಟವರಿಗೆ ನ್ಯಾಯ ಸಿಕ್ಕಿದೆ. ನಮಗೂ ನ್ಯಾಯ ಕೊಡಿಸಬೇಕು’ ಎಂದು ಮನವಿ ಮಾಡಿದರು.

ಅತಿ ಹೆಚ್ಚು ಅರ್ಜಿ ಸ್ವೀಕಾರವಾದ ಇಲಾಖೆ	
ಕಂದಾಯ ಇಲಾಖೆ	3,150 ಅರ್ಜಿಗಳು
ವಸತಿ ಇಲಾಖೆ	1,500
ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ	903 ಅರ್ಜಿ

ಕುಸಿದ ಆಡಳಿತಯಂತ್ರಕ್ಕೆ ‘ಜನಸ್ಪಂದನ’ ಸಾಕ್ಷಿ: ಅಶೋಕ

‘ರಾಜ್ಯದಲ್ಲಿ ಆಡಳಿತ ಯಂತ್ರ ಕುಸಿದಿದ ಪರಿಣಾಮವೇ ಮುಖ್ಯಮಂತ್ರಿ ಜನಸ್ಪಂದನ. ಯಾವುದೇ ಜಿಲ್ಲೆ, ಗ್ರಾಮಗಳಲ್ಲಿ ಏನೂ ಕೆಲಸ ಆಗುತ್ತಿಲ್ಲ ಎಂಬುದಕ್ಕೆ ಈ ಕಾರ್ಯಕ್ರಮವೇ ಸಾಕ್ಷಿ’ ಎಂದು ವಿರೋಧ ಪಕ್ಷದ ನಾಯಕ ಆರ್‌.ಅಶೋಕ ಹೇಳಿದರು.

‘ಜನಸ್ಪಂದನ’ ಎಂದು ಪ್ರಚಾರಕ್ಕಾಗಿ ನಾಟಕ ಆಡುವ ಬದಲು ಮುಖ್ಯಮಂತ್ರಿ ತಮ್ಮ ಉಸ್ತುವಾರಿ ಮಂತ್ರಿಗಳಿಗೆ ಜಿಲ್ಲಾ ಕೇಂದ್ರಗಳಿಗೆ ಮತ್ತು ತಾಲ್ಲೂಕು ಕೇಂದ್ರಗಳಿಗೆ ಹೋಗಿ ಜನರ ಸಮಸ್ಯೆ ಆಲಿಸಲು ಸೂಚಿಸಬೇಕು ಎಂದು ಅವರು ಹೇಳಿದರು.

‘ವಿಕೇಂದ್ರೀಕೃತ ಆಡಳಿತ ವ್ಯವಸ್ಥೆ ಇದ್ದರೂ ಒಬ್ಬ ಬಡ ವ್ಯಕ್ತಿ ತನ್ನ ಸಮಸ್ಯೆ ಬಗೆಹರಿಸಿಕೊಳ್ಳಲು ದೂರದ ಊರುಗಳಿಂದ ಬಸ್ಸು, ರೈಲಿಗೆ ಹಣ ಖರ್ಚು ಮಾಡಿಕೊಂಡು ಬಂದಿದ್ದಾರೆ. ದಿನವೆಲ್ಲ ಕಾದು ಮುಖ್ಯಮಂತ್ರಿ ಮುಂದೆ ಕೈ ಚಾಚಬೇಕಾದ ಪರಿಸ್ಥಿತಿ ಇದೆ. ಆಡಳಿತ ವೈಫಲ್ಯಕ್ಕೆ ಇದಕ್ಕಿಂತ ಸಾಕ್ಷಿ ಬೇಕಾ’ ಎಂದರು.

ಜನಸ್ಪಂದನ ವಿಶೇಷಗಳು

- ಇದೇ ಮೊದಲ ಬಾರಿ ವಿಧಾನಸೌಧದ ಮುಂದೆ ಜನಸ್ಪಂದನ
- ಬುಧವಾರ ರಾತ್ರಿಯಿಂದಲೇ ಹರಿದು ಬಂದ ಜನಸಾಗರ
- ಗುರುವಾರ ಬೆಳಿಗ್ಗೆ 8.30ರಿಂದ ಅರ್ಜಿ ಸ್ವೀಕಾರ ಆರಂಭ
- ನೋಂದಣಿಗೆ ಎರಡು ಕೌಂಟರ್
- ಅರ್ಜಿ ಸಲ್ಲಿಸಲು ಇಲಾಖಾವಾರು 29 ಕೌಂಟರ್
- 11.30ಕ್ಕೆ ವಿಧಾನಸೌಧದ ಆವರಣಕ್ಕೆ ಬಂದ ಮುಖ್ಯಮಂತ್ರಿ ಸಿದ್ದರಾಮಯ್ಯ
- ಜನರು ಕುಳಿತ ಸ್ಥಳಕ್ಕೇ ಮಧ್ಯಾಹ್ನದ ಊಟ ಸರಬರಾಜು
- ನಂದಿನಿ ಪೇಡಾ, ಪುಲಾವ್, ವಡೆ, ಮೊಸರನ್ನ ವಿತರಣೆ
- ಕುಡಿಯುವ ನೀರು, ಶೌಚಾಲಯಕ್ಕಾಗಿ ಜನರ ಪರದಾಟ
- ಬಂದೋಬಸ್ತ್‌ಗೆ ಒಂದು ಸಾವಿರ ಪೊಲೀಸ್ ನಿಯೋಜನೆ

ಅಂಕಿ ಅಂಶಗಳು

12,372 ಜನಸ್ಪಂದನೆಗೆ ಬಂದ ಒಟ್ಟು ಅರ್ಜಿಗಳು

246 ಇತ್ಯರ್ಥವಾದ ಅರ್ಜಿಗಳು

12,126 ಕ್ರಮಕ್ಕೆ ಬಾಕಿ ಉಳಿದಿರುವ ಅರ್ಜಿಗಳು

ಅಂಗನವಾಡಿ ಕಾರ್ಯಕರ್ತೆಯರಿಗೆ ಮೊಬೈಲ್

ಸಹಕಾರಿ ಒಕ್ಕೂಟ, ಅಪೆಕ್ಸ್ ಸಂಘಗಳಲ್ಲೂ ಮೀಸಲಾತಿ: ಸಂಪುಟ ಸಭೆ ತೀರ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಹಕಾರ ಸಂಘಗಳ ಸದಸ್ಯತ್ವ ನೀಡುವಾಗ ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗ ಹಾಗೂ ಮಹಿಳೆಯರಿಗೆ ನೀಡಿರುವ ಮೀಸಲಾತಿಯನ್ನು ಸಹಕಾರಿ ಒಕ್ಕೂಟ, ಅಪೆಕ್ಸ್ ಸಹಕಾರ ಸಂಘ ಹಾಗೂ ಮಧ್ಯ-ಮ(ಜಿಲ್ಲಾ) ಸಹಕಾರ ಸಂಘಗಳಲ್ಲೂ ನೀಡುವ ಮಹತ್ವದ ತೀರ್ಮಾನವನ್ನು ಸರ್ಕಾರ ತೆಗೆದುಕೊಂಡಿದೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯು, ಈ ಮೀಸಲಾತಿ ಕಲ್ಪಿಸುವ ಉದ್ದೇಶದ ‘ಕರ್ನಾಟಕ ಸಹಕಾರ ಸಂಘಗಳು (ತಿದ್ದುಪಡಿ) ಮಸೂದೆಗೆ-2024ಕ್ಕೆ ಅನುಮೋದನೆ ನೀಡಿದೆ.

ಸಚಿವ ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಮತ್ತು ಸಂಸದೀಯ ಸಚಿವ ಎಚ್‌.ಕೆ. ಪಾಟೀಲ ಅವರು, ಸದ್ಯದಲ್ಲೇ ನಡೆಯಲಿರುವ ಅಧಿವೇಶನದಲ್ಲಿ ಈ ಮಸೂದೆಯನ್ನು ಮಂಡಿಸಲಾಗುವುದು. ಸಾಮಾಜಿಕ ನ್ಯಾಯವನ್ನು ಎಲ್ಲ ಹಂತದ ಸಹಕಾರ ಸಂಸ್ಥೆಗಳಲ್ಲಿ ಕಲ್ಪಿಸಲು ಈ ಮಸೂದೆ ಮಂಡಿಸಲಾಗುತ್ತದೆ. ಮೀಸಲಾತಿ ಪ್ರಮಾಣ ಎಷ್ಟಿರಬೇಕು ಎಂಬ ಬಗ್ಗೆ ನಿಯಮ ರೂಪಿಸುವಾಗ ನಿರ್ಧಾರ ಮಾಡಲಾಗುತ್ತದೆ. 25 ಸಾವಿರಕ್ಕೂ ಹೆಚ್ಚು ಸಹಕಾರ ಸಂಸ್ಥೆಗಳಲ್ಲಿ ಈ ಮೀಸಲು ಸೌಲಭ್ಯ ಸಿಗಲಿದೆ ಎಂದರು.

ಸಹಕಾರ ಸಂಘಗಳ ಸದಸ್ಯರು ನಿಗದಿತ ಸಾಮಾನ್ಯ ಸಭೆ ಹಾಗೂ ಸಂಘದ ಕನಿಷ್ಠ ಸೇವೆ (ಸಾಲ ಪಡೆಯುವುದು, ಠೇವಣಿ ಇಡುವುದು) ಬಳಸಿಕೊಳ್ಳದೇ ಇದ್ದರೆ ಪದಾಧಿಕಾರಿಗಳ ಆಯ್ಕೆಗೆ ನಡೆಯಲಿರುವ ಚುನಾವಣೆಯಲ್ಲಿ ಮತ ಹಾಕುವ ಹಕ್ಕು ಇರುವುದಿಲ್ಲ. ಈ ಷರತ್ತನ್ನು ಕೈಬಿಡುವ ಮೂಲಕ ಆಡಳಿತ ಮಂಡಳಿ ಚುನಾವಣೆಗಳಲ್ಲಿ ಎಲ್ಲ ಸದಸ್ಯರಿಗೂ ಸಮಾನ ಮತದಾನದ ಹಕ್ಕನ್ನು ನೀಡಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ ಎಂದು ಹೇಳಿದರು.

ಅಂಗನವಾಡಿ ಕಾರ್ಯಕರ್ತೆಯರಿಗೆ ಮೊಬೈಲ್: ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಮೇಲ್ವಿಚಾರಕಿಯರು, ಅಂಗನವಾಡಿ ಕಾರ್ಯಕರ್ತೆಯರಿಗೆ ಪೂರೈಸಲು ₹89.61 ಕೋಟಿ ವೆಚ್ಚದಲ್ಲಿ ಒಟ್ಟು75,938 ಮೊಬೈಲ್ ಫೋನ್‌ಗಳ ಖರೀದಿಗೆ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ತಲಾ ₹11,800 ಮೌಲ್ಯದ ಮೊಬೈಲ್ ಅನ್ನು ಟೆಂಡರ್ ಮೂಲಕ ಖರೀದಿಸಲಾಗುತ್ತದೆ. ಪೋಷಣ್ ಅಭಿಯಾನದಡಿ ಮಾಹಿತಿ ಸಂಗ್ರಹ, ದಾಖಲೀಕರಣ ಮತ್ತು ಸಂವಹನಕ್ಕೆ ಇದು ನೆರವಾಗಲಿದೆ ಎಂದು ಪಾಟೀಲ ಹೇಳಿದರು.

ವೈದ್ಯಕೀಯ ಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿನ 18 ವೈದ್ಯಕೀಯ ಕಾಲೇಜುಗಳ ಆಸ್ಪತ್ರೆ ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ 114 ಸಂಖ್ಯೆಯ ಮಾಡ್ಯುಲರ್ ಆಪರೇಷನ್ ಥಿಯೇಟರ್‌ಗಳನ್ನು ಒಟ್ಟು ₹176.70 ಕೋಟಿ ಅಂದಾಜು ವೆಚ್ಚದಲ್ಲಿ ಸ್ಥಾಪಿಸಲು ಅನುಮೋದನೆ ನೀಡಲಾಗಿದೆ.

ಪ್ರಮುಖ ನಿರ್ಣಯಗಳು:

- ಒಂದು ಜಿಲ್ಲೆ, ಒಂದು ಉತ್ಪನ್ನ ಜಿಐ ಉತ್ಪನ್ನಗಳು ಹಾಗೂ ಇತರೆ ಕರಕುಶಲ ಉತ್ಪನ್ನಗಳನ್ನು ಉತ್ತೇಜಿಸಲು ಮೈಸೂರಿನಲ್ಲಿ ಯೂನಿಟಿ ಮಾಲ್ ನಿರ್ಮಿಸಲು ಒಪ್ಪಿಗೆ. ಕೇಂದ್ರ ಸರ್ಕಾರವು ನೀಡುವ ₹193 ಕೋಟಿಗಳ ಬಡ್ಡಿ ರಹಿತ ಸಾಲದ ನೆರವಿನಲ್ಲಿ ನಿರ್ಮಿಸಲಾಗುವುದು.
- ಬಸವಕಲ್ಯಾಣದಲ್ಲಿ ನೂತನ ನ್ಯಾಯಾಲಯ ಸಂಕೀರ್ಣವನ್ನು ₹17.50 ಕೋಟಿಗಳ ಅಂದಾಜು ವೆಚ್ಚದಲ್ಲಿ ನಿರ್ಮಾಣ ಮಾಡಲು ಅನುಮತಿ.
- ಆನ್‌ಲೈನ್ ಮೂಲಕ ವಿವಾಹ ನೋಂದಣಿಗೆ ಅವಕಾಶ ನೀಡುವ ವಿಶೇಷ ವಿವಾಹ (ಕರ್ನಾಟಕ) (ತಿದ್ದುಪಡಿ) ನಿಯಮಗಳು, 2024ಕ್ಕೆ ಅನುಮೋದನೆ
- ರಾಮನಗರ ತಾಲ್ಲೂಕು ಬಿಡದಿ ಹೋಬಳಿಯ ಬಿಡದಿಯಲ್ಲಿ ಮಹಿಳೆಯರಿಗಾಗಿ ಪ್ರಾದೇಶಿಕ ವಾಹನ ಚಾಲನಾ ತರಬೇತಿ ಕೇಂದ್ರವನ್ನು ₹10.50 ಕೋಟಿ ವೆಚ್ಚದಲ್ಲಿ ಸ್ಥಾಪಿಸಲು ಅನುಮೋದನೆ.
- ಕಲಬುರಗಿ ಪ್ರಾದೇಶಿಕ ಕ್ಯಾನ್ಸರ್ ಚಿಕಿತ್ಸಾ ಕೇಂದ್ರದಲ್ಲಿ ₹106 ಕೋಟಿ ವೆಚ್ಚದಲ್ಲಿ 150 ಹಾಸಿಗೆಗಳ ಆಸ್ಪತ್ರೆ ನಿರ್ಮಾಣ ಹಾಗೂ ಮೈಸೂರು ಪ್ರಾದೇಶಿಕ ಕ್ಯಾನ್ಸರ್ ಕೇಂದ್ರಕ್ಕೆ ₹10 ಕೋಟಿ ವೆಚ್ಚದಲ್ಲಿ ಲೀನಿಯರ್ ಆಕ್ಸಿಲರೇಟರ್ ಯಂತ್ರ ಖರೀದಿಸಲು ಆಡಳಿತಾತ್ಮಕ ಒಪ್ಪಿಗೆ

‘ಉಪಾಹಾರ’ ಕೂಟ: ಸಚಿವರ ಸ್ಪರ್ಧೆಯ ಚರ್ಚೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಚಿವ ಕೆ.ಎಚ್‌. ಮುನಿಯಪ್ಪ ನಿವಾಸದಲ್ಲಿ ಗುರುವಾರ ಬೆಳಿಗ್ಗೆ ಉಪಾಹಾರ ಸೇವಿಸುವ ನೆಪದಲ್ಲಿ ದಲಿತ ಸಚಿವರೂ ಸೇರಿದಂತೆ ಕೆಲವರು ಮಾತುಕತೆ ನಡೆಸಿರುವುದು ರಾಜಕೀಯ ವಲಯದಲ್ಲಿ ನಾನಾ ಚರ್ಚೆಗಳಿಗೆ ಗ್ರಾಸವಾಗಿದೆ.

ಉಪಾಹಾರ ಕೂಟದಲ್ಲಿ ಸಚಿವರಾದ ಎಚ್‌.ಸಿ. ಮಹದೇವಪ್ಪ, ಜಿ. ಪರಮೇಶ್ವರ, ಸತೀಶ ಜಾರಕಿಹೊಳಿ ಇದ್ದರು. ಕೆಪಿಸಿಸಿ ಕಾರ್ಯಾಧ್ಯಕ್ಷ ಬಿ.ಎನ್‌. ಚಂದ್ರಪ್ಪ, ಬಿ.ಎಲ್‌. ಶಂಕರ್, ಎಂ.ಸಿ. ವೇಣುಗೋಪಾಲ, ಎಸ್‌.ಪಿ. ಮುದ್ದ ಹನುಮೇಗೌಡ ಕೂಡಾ ಇದ್ದರು.

ಲೋಕಸಭೆ ಚುನಾವಣೆಯಲ್ಲಿ ಸಚಿವರು ಕಣಕ್ಕಿಳಿಯಬೇಕಾದ ಅನಿವಾರ್ಯ ಬಂದರೆ ಸಿದ್ಧರಿರಬೇಕು ಎಂದು ಕಾಂಗ್ರೆಸ್ ವರಿಷ್ಠರು ಈಗಾಗಲೇ ಸೂಚನೆ ನೀಡಿದ್ದಾರೆ. ಉಪಾಹಾರ ಸೇವನೆ ವೇಳೆ ಈ ವಿಚಾರದ ಬಗ್ಗೆ ಚರ್ಚೆ ನಡೆದಿದೆ ಎಂದು ಹೇಳಲಾಗಿದೆ.

ಸುದ್ದಿಗಾರರ ಜೊತೆ ಮಾತನಾಡಿದ ಸತೀಶ ಜಾರಕಿಹೊಳಿ, ‘ಸಚಿವರ ಸ್ಪರ್ಧೆಯ ಬಗ್ಗೆ ನಾವು ಚರ್ಚೆ ಮಾಡಿಲ್ಲ. ಆದರೆ, ಆದಷ್ಟು ಬೇಗ ಅಭ್ಯರ್ಥಿಗಳನ್ನು ಘೋಷಿಸಬೇಕಿದೆ’ ಎಂದರು.

‘ಬೆಳಗಾವಿ ಅಧಿವೇಶನದ ಸಂದರ್ಭದಲ್ಲಿ ಉಪಾಹಾರಕ್ಕೆ ಸೇರುತ್ತಿದ್ದೆವು. ಈ ಬಾರಿ ಕೋಲಾರದ ರುಚಿ ನೋಡೋಣವೆಂದು ಮುನಿಯಪ್ಪ ಅವರ ಮನೆಗೆ ಬಂದಿದ್ದೇವೆ. ಇದನ್ನು ಬಿಟ್ಟು ಬೇರೆ ಏನೂ ಇಲ್ಲ’ ಎಂದರು.


‘ರಾಜ್ಯಸಭೆ ಅಥವಾ ವಿಧಾನ ಪರಿಷತ್ ಯಾವುದೇ ಇರಬಹುದು, ಕಾಂಗ್ರೆಸ್ ಪರ ಒಲವು ಇರುವ ಸಮುದಾಯಗಳನ್ನು ಗುರುತಿಸಿ, ಯಾರು ಹೆಚ್ಚು ಕೆಲಸ ಮಾಡಿದ್ದಾರೆ ಅಂಥವರಿಗೆ ಸ್ಥಾನ ಕೊಡಬೇಕು ಎನ್ನುವುದು ನಮ್ಮ ಆಶಯ. ಪಕ್ಷದ ಮುಖಂಡರು ಏನು ತೀರ್ಮಾನ ಮಾಡುತ್ತಾರೊ ನೋಡೋಣ’ ಎಂದರು.

ಮುನಿಯಪ್ಪ ಮಾತನಾಡಿ, ‘ಕೆಲವೊಮ್ಮೆ ಸತೀಶ ಜಾರಕಿಹೊಳಿ ಮನೆಯಲ್ಲಿ ಉಪಾಹಾರಕ್ಕೆ ಸೇರುತ್ತೇವೆ. ಇವತ್ತು ನನ್ನ ಮನೆಯಲ್ಲಿ ಸೇರಿದ್ದೇವೆ, ಅಷ್ಟೆ. ತಿಂಡಿ ತಿನ್ನುತ್ತಾ ಲೋಕಸಭೆ ತಯಾರಿ ಬಗ್ಗೆಯೂ ಚರ್ಚಿಸಿದ್ದೇವೆ. ಯಾವ ರೀತಿ ಕಾರ್ಯಕ್ರಮ ರೂಪಿಸಬೇಕು. ಆದಷ್ಟು ಬೇಗ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕು. ಸರ್ಕಾರ ಒಳ್ಳೆಯ ಕಾರ್ಯಕ್ರಮಗಳನ್ನು ಕೊಟ್ಟಿದೆ. ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಿ ಎಲ್ಲ 28 ಕ್ಷೇತ್ರಗಳನ್ನು ಗೆಲ್ಲಿಸಿಕೊಳ್ಳಬೇಕೆಂದು ಮಾತನಾಡಿಕೊಂಡಿದ್ದೇವೆ’ ಎಂದರು.

‘ಪರಸ್ಪರ ಚರ್ಚಿಸಿ ಆದಷ್ಟು ಬೇಗ ಅಭ್ಯರ್ಥಿಗಳನ್ನು ಘೋಷಿಸಬೇಕೆಂದು ಸಿ.ಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್‌ಗೆ ಹೇಳುತ್ತೇವೆ. ಈ ವಿಚಾರವನ್ನು ಹೈಕಮಾಂಡ್ ಗಮನಕ್ಕೂ ತರುತ್ತೇವೆ’ ಎಂದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ‘ರಾಜ್ಯಸಭೆಯಲ್ಲಿ ಸಮುದಾಯದ ಪ್ರಾತಿನಿಧ್ಯದ ವಿಚಾರವನ್ನು ಹೈಕಮಾಂಡ್ ನೋಡಿಕೊಳ್ಳುತ್ತದೆ. ಲೋಕಸಭೆ ಚುನಾವಣೆಯಲ್ಲಿ ಸಚಿವರ ಸ್ಪರ್ಧೆ ವಿಚಾರದಲ್ಲೂ ಹೈಕಮಾಂಡ್ ತೀರ್ಮಾನ ಮಾಡಲಿದೆ. ಪಕ್ಷದ ಹಿತದೃಷ್ಟಿಯಿಂದ ಯಾವುದೇ ನಿರ್ಧಾರ ತೆಗೆದುಕೊಂಡರೂ ನಾವು ಬದ್ಧ’ ಎಂದರು.

‘ಎಲ್ಲಿ ಸಚಿವರನ್ನು ನಿಲ್ಲಿಸಬೇಕೆಂದು ಅಂದುಕೊಂಡಿದ್ದಾರೋ ಅಲ್ಲಿ ಸಚಿವರೇ ನಿಂತು ಕೆಲಸ ಮಾಡಿದರೆ ಗೆಲ್ಲಬಹುದು. ನಮ್ಮದೇ ಆದ ಸಲಹೆಗಳನ್ನು ನಾವು ಕೊಡುತ್ತೇವೆ. ಅಂತಿಮವಾಗಿ ಹೈಕಮಾಂಡ್ ತೀರ್ಮಾನ ಮಾಡಬೇಕು’ ಎಂದೂ ಹೇಳಿದರು.



ಕೆ.ಎಚ್‌. ಮುನಿಯಪ್ಪ ಅವರ ನಿವಾಸದಲ್ಲಿ ಜಿ. ಪರಮೇಶ್ವರ, ಎಚ್‌.ಸಿ. ಮಹದೇವಪ್ಪ, ಸತೀಶ ಜಾರಕಿಹೊಳಿ ಉಪಾಹಾರ ಸೇವಿಸಿದರು

ಮುಂಬಡ್ತಿ: ನಿಯಮ ಬದಲು

ಕೆಎಎಸ್ (ಸೂಪರ್‌ಟೈಮ್ ಸ್ಕೇಲ್) ಮತ್ತು ಕೆಎಎಸ್ (ಆಯ್ಕೆ ಶ್ರೇಣಿ) ವೃಂದಕ್ಕೆ ಮುಂಬಡ್ತಿ ಪಡೆಯಲು ನಿಗದಿಪಡಿಸಿದ ಅರ್ಹತಾ ಸೇವಾ ಅವಧಿಯನ್ನು ಒಂದು ಬಾರಿಗೆ ಮಾತ್ರ ಕಡಿತಗೊಳಿಸಲು ‘ಕರ್ನಾಟಕ ಆಡಳಿತ ಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮ–2024’ಕ್ಕೆ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ.

ಕೆಎಎಸ್ (ಸೂಪರ್‌ಟೈಮ್ ಸ್ಕೇಲ್)ಗೆ ಬಡ್ತಿ ಪಡೆಯಲು ಹಾಲಿ ನಿಯಮದ ಪ್ರಕಾರ ಕೆಎಎಸ್ (ಕಿರಿಯ ಶ್ರೇಣಿ, ಹಿರಿಯ ಶ್ರೇಣಿ ಮತ್ತು ಆಯ್ಕೆ ಶ್ರೇಣಿ) ವೃಂದಗಳಲ್ಲಿ ಒಟ್ಟು 13 ವರ್ಷ ಕೆಲಸ ಮಾಡಿರಬೇಕು. ಈ ಪೈಕಿ, ಆಯ್ಕೆ ಶ್ರೇಣಿ ವೃಂದದಲ್ಲಿ ಕನಿಷ್ಠ ಒಂದು ವರ್ಷ ಸೇವೆ ಸಲ್ಲಿಸಿರಬೇಕು. ಅದನ್ನು 10 ವರ್ಷಕ್ಕೆ ಇಳಿಸಲು ನಿಯಮದಲ್ಲಿ ತಿದ್ದುಪಡಿ ತರಲಾಗುವುದು.

ಕೆಎಎಸ್ (ಆಯ್ಕೆ ಶ್ರೇಣಿ)ಗೆ ಬಡ್ತಿ ಪಡೆಯಲು ಹಾಲಿ ನಿಯಮದ ಪ್ರಕಾರ ಕೆಎಎಸ್ (ಕಿರಿಯ ಶ್ರೇಣಿ, ಹಿರಿಯ ಶ್ರೇಣಿ) ವೃಂದಗಳಲ್ಲಿ ಒಟ್ಟು 10 ವರ್ಷ ಕೆಲಸ ಮಾಡಿರಬೇಕು. ಈ ಪೈಕಿ, ಹಿರಿಯ ಶ್ರೇಣಿ ವೃಂದದಲ್ಲಿ ಕನಿಷ್ಠ ನಾಲ್ಕು ವರ್ಷ ಸೇವೆ ಸಲ್ಲಿಸಿರಬೇಕು. ಅದನ್ನು 7 ವರ್ಷಕ್ಕೆ ಇಳಿಸಲು ಮತ್ತು ಹಿರಿಯ ಶ್ರೇಣಿ ವೃಂದದಲ್ಲಿ ಕನಿಷ್ಠ ಎರಡು ವರ್ಷ ಸೇವೆ ಸಲ್ಲಿಸಿರಬೇಕು ಎಂದು ನಿಯಮದಲ್ಲಿ ತಿದ್ದುಪಡಿ ತರಲಾಗುವುದು. ಅಲ್ಲದೆ, ಆರ್ಥಿಕ ಇಲಾಖೆ ಅನುಮತಿ ನೀಡಿದಂತೆ ಕೆಎಎಸ್ (ಆಯ್ಕೆ ಶ್ರೇಣಿ) 45 ಹುದ್ದೆಗಳನ್ನು ಕೆಎಎಸ್ (ಸೂಪರ್‌ಟೈಮ್ ಸ್ಕೇಲ್) ವೃಂದಕ್ಕೆ ತಾತ್ಕಾಲಿಕವಾಗಿ ಉನ್ನತೀಕರಿಸಲು ಕೂಡಾ ಸಂಪುಟ ಸಭೆ ಅನುಮೋದನೆ ನೀಡಿದೆ.

‘ಅಧಿವೇಶನದಲ್ಲಿ ಶ್ವೇತಪತ್ರ ಮಂಡನೆ’

ನವದೆಹಲಿ: ‘ರಾಜ್ಯದ ಆರ್ಥಿಕ ಪರಿಸ್ಥಿತಿ ಕುರಿತು ಶ್ವೇತಪತ್ರ ಮಂಡಿಸಬೇಕು ಎಂದು ಬಿಜೆಪಿಯವರು ಒತ್ತಾಯಿಸಿದ್ದಾರೆ. ಕೇಂದ್ರದಿಂದ ರಾಜ್ಯಕ್ಕೆ ಬಿಡುಗಡೆಯಾಗಿರುವ ಅನುದಾನಗಳ ಕುರಿತು ವಿಧಾನಮಂಡಲದ ಅಧಿವೇಶನದಲ್ಲಿ ಶ್ವೇತಪತ್ರ ಮಂಡಿಸುತ್ತೇವೆ’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಗುರುವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ಸಂಸತ್ತಿನಲ್ಲಿ ಸಂಸದ ಡಿ.ಕೆ.ಸುರೇಶ್ ಅವರಿಗೆ ಮಾತನಾಡಲೂ ಅವಕಾಶ ಕೊಡದೆ, ನಮ್ಮ ಧ್ವನಿ ಅಡಗಿಸುವ ಯತ್ನ ನಡೆದಿದೆ. ಜತೆಗೆ ಕೇಂದ್ರ ಸರ್ಕಾರ ರಾಜ್ಯದ ಪ್ರತಿ ಬಡವನ ಹೊಟ್ಟೆ ಮೇಲೆ ಹೊಡೆಯುತ್ತಿದೆ’ ಎಂದರು.

28 ಸಾವಿರ ಹಳ್ಳಿಗಳಿಗೆ ‘ಗ್ರಾಮ ಚಲೋ’ ಅಭಿಯಾನಕ್ಕೆ ಚಾಲನೆ

28 ಕ್ಷೇತ್ರ ಗೆಲ್ಲುವ ಗುರಿ ನಿಗದಿ: ವಿಜಯೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದಲ್ಲಿ ಮೋದಿ ಅಲೆ ಬೀಸುತ್ತಿದ್ದು, ರಾಜ್ಯದಲ್ಲಿ ಈ ಬಾರಿ 28 ಲೋಕಸಭಾ ಕ್ಷೇತ್ರಗಳನ್ನು ಬಿಜೆಪಿ-ಜೆಡಿಎಸ್ ಸೇರಿ ಗೆಲ್ಲುತ್ತೇವೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ವಿಶ್ವಾಸ ವ್ಯಕ್ತಪಡಿಸಿದರು.

ಯಶವಂತಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಎಚ್‌.ಗೊಲ್ಲಹಳ್ಳಿ ಗ್ರಾಮದಲ್ಲಿ ‘ಗ್ರಾಮ ಚಲೋ’ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಸುದ್ದಿಗಾರರ ಜತೆ ಮಾತನಾಡಿದರು.

‘ದೇಶದ ಭವಿಷ್ಯದ ದೃಷ್ಟಿಯಿಂದ ಮೋದಿ ಅವರೇ ಮತ್ತೊಮ್ಮೆ ಪ್ರಧಾನಿ ಆಗಬೇಕೆಂಬುದು ದೇಶದ ಜನರಿಗೆ ಮನವರಿಕೆ ಆಗಿದೆ. ಹೀಗಾಗಿ ರಾಜ್ಯದಲ್ಲಿ ಜೆಡಿಎಸ್ ಜತೆ ಸೇರಿ ಎಲ್ಲ 28 ಕ್ಷೇತ್ರಗಳನ್ನು ಗೆಲ್ಲುವ ಗುರಿ ಇಟ್ಟುಕೊಂಡಿದ್ದೇವೆ. ನಮ್ಮ ಕಾರ್ಯಕರ್ತರು ರಣೋತ್ಸಾಹದಲ್ಲಿದ್ದಾರೆ. ಮೋದಿ ಮತ್ತೊಮ್ಮೆ ಎಂಬ ವಿಷಯದಲ್ಲಿ ಮತದಾರರೂ ಉತ್ಸಾಹದಲ್ಲಿದ್ದಾರೆ’ ಎಂದರು.

ಪಕ್ಷದ ಅಧ್ಯಕ್ಷ ಜೆ.ಪಿ. ನಡ್ಡಾ ಮತ್ತುಮೋದಿ ಅವರ ಅಪೇಕ್ಷೆಯ ಮೇರೆಗೆ ಗ್ರಾಮ ಚಲೋ ಅಭಿಯಾನ ಆರಂಭಿಸಲಾಗಿದೆ. ರಾಜ್ಯದಲ್ಲಿ 28 ಸಾವಿರಕ್ಕೂ ಹೆಚ್ಚು ಹಳ್ಳಿಗಳು, ನಗರದ 19 ಸಾವಿರ ಬೂತ್‌ಗಳಲ್ಲಿ ಇದೇ 9, 10 ಮತ್ತು 11ರಂದು ಅಭಿಯಾನ ನಡೆಯಲು ಭಾಗವಹಿಸಲಿದ್ದಾರೆ ಎಂದು ಅವರು ತಿಳಿಸಿದರು.

‘ಎಚ್‌.ಗೊಲ್ಲಹಳ್ಳಿ ಗ್ರಾಮದಲ್ಲಿ ಬೂತ್ ಸಂಖ್ಯೆ 454, 455 ರಲ್ಲಿ ಗ್ರಾಮ ಚಲೋ ಅಭಿಯಾನಕ್ಕೆ ಚಾಲನೆ ನೀಡಿದ್ದೇನೆ. 2047 ನೇ ಇಸವಿಗೆ ಭಾರತವು ವಿಕಸಿತ ಭಾರತವಾಗಿ ಪರಿವರ್ತನೆ ಹೊಂದಬೇಕು, ಭಾರತವು ಸಂಪೂರ್ಣ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಿ ಪರಿವರ್ತನೆ ಕಾಣಬೇಕೆಂಬ ಬಯಕೆ ಮೋದಿ ಅವರದು. ಅವರ ಕನಸು ನನಸು ಮಾಡಲು ಎಲ್ಲ ಗ್ರಾಮಗಳೂ ಅಭಿವೃದ್ಧಿ ಹೊಂದಬೇಕಿದೆ’ ಎಂದು ವಿಜಯೇಂದ್ರ ಹೇಳಿದರು.

ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ನಂದೀಶ್ ರೆಡ್ಡಿ, ರಾಜ್ಯ ಕಾರ್ಯದರ್ಶಿಗಳಾದ ವಿನಯ್ ಬಿದರೆ, ಶರಣು ತಳ್ಳಿಕೆರೆ, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಹರೀಶ್ ಪಾಲ್ಗೊಂಡಿದ್ದರು.



ಬಿ.ವೈ.ವಿಜಯೇಂದ್ರ, ನಂದೀಶ್ ರೆಡ್ಡಿ ಗ್ರಾಮ ಚಲೋ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಎಸ್‌ಟಿಎಸ್ ಗೈರು

ಬಿಜೆಪಿಯಿಂದ ಅಂತರ ಕಾಯ್ದುಕೊಂಡಿರುವ ಯಶವಂತಪುರ ಕ್ಷೇತ್ರದ ಶಾಸಕ ಎಸ್‌.ಟಿ.ಸೋಮಶೇಖರ್ ಕಾರ್ಯಕ್ರಮದಲ್ಲಿ ಭಾಗಿಯಾಗಲಿಲ್ಲ.

ಲೋಕಸಭಾ ಚುನಾವಣೆಗೆ ಮುನ್ನ ಬಿಜೆಪಿಯು ರಾಜ್ಯದಾದ್ಯಂತ ಹಮ್ಮಿಕೊಂಡಿರುವ ‘ಗ್ರಾಮ ಚಲೋ’ ಅಭಿಯಾನಕ್ಕೆ ಯಶವಂತಪುರ ಕ್ಷೇತ್ರದ ಎಚ್‌. ಗೊಲ್ಲಹಳ್ಳಿಯಲ್ಲಿ ವಿಜಯೇಂದ್ರ ಚಾಲನೆ ನೀಡಿದರು. ಬಿಜೆಪಿಯ ಯಾವುದೇ ಕಾರ್ಯಕ್ರಮದಲ್ಲೂ ಕಾಣಿಸಿಕೊಳ್ಳದ ಸೋಮಶೇಖರ್, ಕ್ಷೇತ್ರದಲ್ಲಿ ನಡೆದ ಪಕ್ಷದ ಅಧ್ಯಕ್ಷರ ಕಾರ್ಯಕ್ರಮದಿಂದಲೂ ದೂರ ಉಳಿದರು.

ಸಚಿವೆ ನಿರ್ಮಲಾ ಕಚೇರಿ ಫಲಕಕ್ಕೆ ಮಸಿ

ಬೆಂಗಳೂರು: ‘ತೆರಿಗೆ ಹಂಚಿಕೆಯಲ್ಲಿ ಅನ್ಯಾಯ ಆಗುತ್ತಿದೆ’ ಎಂದು ಆರೋಪಿಸಿ ನಗರದಲ್ಲಿ ಪ್ರತಿಭಟನೆ ನಡೆಸಿದ ಭಾರತೀಯ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟದ (ಎನ್‌ಎಸ್‌ಯುಐ) ಕಾರ್ಯಕರ್ತರು, ಕೇಂದ್ರ ಹಣಕಾಸು ಸಚಿವರಾದ ನಿರ್ಮಲಾ ಸೀತಾರಾಮನ್ ಅವರ ಕಚೇರಿಯ ಫಲಕಕ್ಕೆ ಮಸಿ ಬಳಿದು ಆಕ್ರೋಶ ಹೊರ ಹಾಕಿದರು.

ಮಿಲ್ಲರ್ಸ್ ರಸ್ತೆಯಲ್ಲಿರುವ ನಿರ್ಮಲಾ ಸೀತಾರಾಮನ್ ಅವರ ಕಚೇರಿಗೆ ಗುರುವಾರ ಮುತ್ತಿಗೆ ಹಾಕಿದ್ದ ಕಾರ್ಯಕರ್ತರು, ಎನ್‌ಎಸ್‌ಯುಐ ಬಾವುಟ ಪ್ರದರ್ಶಿಸಿದರು. ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಕಚೇರಿಯ ಎದುರಿಗೆ ಪ್ರದರ್ಶಿಸಲಾಗಿದ್ದ ‘ಶ್ರೀಮತಿ ನಿರ್ಮಲಾ ಸೀತಾರಾಮನ್, ರಾಜ್ಯಸಭಾ ಸದಸ್ಯರು, ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರ ಸಚಿವರು, ಭಾರತ ಸರ್ಕಾರ’ ಎಂಬ ಕನ್ನಡ ಹಾಗೂ ಇಂಗ್ಲಿಷ್ ಫಲಕಕ್ಕೆ ಕಾರ್ಯಕರ್ತರು ಕಪ್ಪು ಮಸಿ ಬಳಿದರು. ‘ನಮ್ಮ ತೆರಿಗೆ ಪಾಲು ನಮಗೆ ಕೊಡಿ’ ಹಾಗೂ ‘ನಮ್ಮ ತೆರಿಗೆಯ ಹಣ ನಮ್ಮ ಹಕ್ಕು’ ಎಂದು ಒತ್ತಾಯಿಸಿದರು.

ಮುತ್ತಿಗೆ ಸುದ್ದಿ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಬಂದ ವಿಧಾನಸೌಧ ಠಾಣೆ ಪೊಲೀಸರು, 10ಕ್ಕೂ ಹೆಚ್ಚು ಕಾರ್ಯಕರ್ತರನ್ನು ವಶಕ್ಕೆ ಪಡೆದು ವಾಹನದಲ್ಲಿ ಕರೆದೊಯ್ದರು.

‘ಸಿದ್ಧಸಿರಿ: 4 ವಾರಗಳಲ್ಲಿ ಮನವಿ ಪರಿಗಣಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಕುಟುಂಬದ ಒಡೆತನಕ್ಕೆ ಸೇರಿದ ಸಿದ್ಧಸಿರಿ ಸಕ್ಕರೆ ಕಾರ್ಖಾನೆ, ಎಥೆನಾಲ್ ಘಟಕದ ಕಾರ್ಯ ನಿರ್ವಹಣೆ ಹಾಗೂ ಅದರ ವಿಸ್ತರಣೆಗೆ ಅಗತ್ಯ ಅನುಮತಿ ನೀಡುವ ವಿಚಾರವನ್ನು ನಾಲ್ಕು ವಾರಗಳಲ್ಲಿ ಪರಿಗಣಿಸಿ ಕಾನೂನು ಪ್ರಕಾರ ತೀರ್ಮಾನ ಕೈಗೊಳ್ಳಿ’ ಎಂದು ಹೈಕೋರ್ಟ್, ರಾಜ್ಯ ಸರ್ಕಾರ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ (ಕೆಎಸ್‌ಪಿಸಿಬಿ) ಸೂಚಿಸಿದೆ.

ಕಾರ್ಖಾನೆ ಮುಚ್ಚುವಂತೆ ನೀಡಲಾಗಿದ್ದ ನೋಟಿಸ್ ರದ್ದುಪಡಿಸುವಂತೆ ಕೋರಿ ಬಸನಗೌಡ ಪಾಟೀಲ ಯತ್ನಾಳ್ ಅವರ ಪುತ್ರ ಹಾಗೂ ಸಂಸ್ಥೆಯ ನಿರ್ದೇಶಕ ರಮಣಗೌಡ ಬಿ.ಪಾಟೀಲ ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಎಸ್.ದಿನೇಶ್ ಕುಮಾರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ವೆಂಕಟೇಶ್ ಪಿ.ದಳವಾಯಿ, ‘ಕಾರ್ಖಾನೆಯ ಕಾರ್ಯ ನಿರ್ವಹಣೆ ಮತ್ತು ವಿಸ್ತರಣೆಗೆ ಅನುಮತಿ ಕೋರಿ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಮನವಿ ಪರಿಗಣಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು. ಅಲ್ಲಿಯವರೆಗೂ ಘಟಕದಲ್ಲಿ ಕಬ್ಬು ಅರೆಯುವುದಿಲ್ಲ’ ಎಂದು ತಿಳಿಸಿ ನ್ಯಾಯಪೀಠಕ್ಕೆ ಮುಚ್ಚಳಿಕೆ ನೀಡಿದರು.

ಇದನ್ನು ಪರಿಗಣಿಸಿದ ನ್ಯಾಯಪೀಠ ಘಟಕವನ್ನು ಮುಚ್ಚಲು ಸೂಚಿಸಿ ಕೆಎಸ್‌ಪಿಸಿಬಿ ನೀಡಿದ್ದ ಆದೇಶವನ್ನು ಶೋಕಾಸ್ ನೋಟಿಸ್ ಆಗಿ ಪರಿವರ್ತಿಸಿತು. ಅಂತೆಯೇ, ‘ಘಟಕದ ಕಾರ್ಯನಿರ್ವಹಣೆ ಹಾಗೂ ವಿಸ್ತರಣೆಗೆ ಅನುಮತಿ ಕೋರಿ ಅರ್ಜಿದಾರ ಸಂಸ್ಥೆ ಸಲ್ಲಿಸಿರುವ ಮನವಿಯನ್ನು ನಾಲ್ಕು ವಾರಗಳಲ್ಲಿ ಪರಿಗಣಿಸಿ ತೀರ್ಮಾನ ಕೈಗೊಳ್ಳಬೇಕು. ಅದಕ್ಕೂ ಮುನ್ನ ಅರ್ಜಿದಾರರ ಅಹವಾಲು ಆಲಿಸಬೇಕು’ ಎಂದು ಸರ್ಕಾರ ಮತ್ತು ಕೆಎಸ್‌ಪಿಸಿಬಿಗೆ ನಿರ್ದೇಶಿಸಿ ಅರ್ಜಿ ವಿಲೇವಾರಿ ಮಾಡಿತು.

ಪ್ರಕರಣವೇನು?: ‘ಕಲಬುರಗಿ ಜಿಲ್ಲೆ ಚಿಂಚೋಳಿ ತಾಲ್ಲೂಕಿನ ಹೊರವಲಯದಲ್ಲಿರುವ ಸಿದ್ಧಸಿರಿ ಎಥೆನಾಲ್ ಮತ್ತು ಪವರ್ ಘಟಕವನ್ನು ಅರ್ಜಿದಾರರು 2021ರಲ್ಲಿ ಖರೀದಿಸಿದ್ದಾರೆ. ಇದಕ್ಕೆ ಅಗತ್ಯ ಅನುಮತಿ ಪಡೆದಿಲ್ಲ ಹಾಗೂ ಕೆಲವು ಪರಿಸರ ನಿಯಮಗಳನ್ನು ಉಲ್ಲಂಘಿಸಲಾಗಿದೆ’ ಎಂಬ ಆರೋಪದಡಿ ಕಾರ್ಖಾನೆಯನ್ನು ಮುಚ್ಚುವಂತೆ ಕಲಬುರಗಿ ವಲಯದ ಕೆಎಸ್‌ಪಿಸಿಬಿ ಅಧಿಕಾರಿಗಳು 2024ರ ಜನವರಿ 18ರಂದು ನೋಟಿಸ್ ಜಾರಿ ಮಾಡಿದ್ದರು. ಅರ್ಜಿದಾರರು ಇದನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಹಲ್ದ್ವಾನಿಯಲ್ಲಿ ಹಿಂಸಾಚಾರ: 60 ಜನರಿಗೆ ಗಾಯ

ಹಲ್ದ್ವಾನಿ (ಉತ್ತರಾಖಂಡ) (ಪಿಟಿಐ): ಕಾನೂನು ಬಾಹಿರವಾಗಿ ನಿರ್ಮಿಸಿದ್ದ ಮದರಸಾ ಕಟ್ಟಡವನ್ನು ಕೆಡವಿದ್ದಕ್ಕಾಗಿ ಆಕ್ರೋಶಗೊಂಡ ಸ್ಥಳೀಯ ನಿವಾಸಿಗಳು ವಾಹನಗಳಿಗೆ ಬೆಂಕಿ ಹಚ್ಚಿ, ಕಲ್ಲು ತೂರಾಟ ನಡೆಸಿದ್ದಾರೆ. ಇದರಿಂದ 60ಕ್ಕೂ ಹೆಚ್ಚು ಜನರಿಗೆ ಗಾಯಗಳಾಗಿದ್ದು, ಕರ್ಫ್ಯೂ ವಿಧಿಸಲಾಗಿದೆ.

ಪೊಲೀಸರ ಬಂದೋಬಸ್ತಿನಲ್ಲಿ ಪುರಸಭೆಯ ಕಾರ್ಮಿಕರು ಮದರಸಾ ಕಟ್ಟಡ ತೆರವು ಕಾರ್ಯಾಚರಣೆ ನಡೆಸುತ್ತಿದ್ದರು. ಕಟ್ಟಡವನ್ನು ಬುಲ್ಡೋಜರ್ ಧ್ವಂಸಗೊಳಿಸುತ್ತಿದ್ದ ಸಂದರ್ಭ ಗುಂಪಾಗಿ ಇಲ್ಲಿದ್ದ ಕೆಲ ಜನರು ಪೊಲೀಸರ ಮೇಲೆ ಕಲ್ಲು ತೂರಿದರು. ವಾಹನಗಳಿಗೆ ಬೆಂಕಿ ಹಚ್ಚಿದರು. ಈ ವೇಳೆ ನಡೆದ ಹಿಂಸಾಚಾರದಲ್ಲಿ 60ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದು ಅವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸರ್ಕಾರಿ ಜಾಗದಲ್ಲಿ ಅಕ್ರಮವಾಗಿ ಮದರಸಾ ನಿರ್ಮಿಸಲಾಗಿದೆ. ಈ ಸಂಬಂಧ ಹಿಂದೆಯೇ ನೋಟಿಸ್ ನೀಡಲಾಗಿತ್ತು ಎಂದು ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಪ್ರಹ್ಲಾದ್ ಮೀಣಾ ಹೇಳಿದ್ದಾರೆ.

ಪುರಸಭೆಯ ಆಯುಕ್ತ ಪಂಕಜ್ ಉಪಾಧ್ಯಾಯ, ಸಿಟಿ ಮ್ಯಾಜಿಸ್ಟ್ರೇಟ್ ರಿಚಾ ಸಿಂಗ್, ಎಸ್‌ಡಿಎಂ ಪರಿತೋಷ್ ವರ್ಮಾ ಅವರ ಸಮ್ಮುಖದಲ್ಲಿ ಈ ಕಟ್ಟಡ ಕೆಡವಲಾಗಿದೆ ಎಂದು ಮೀಣಾ ತಿಳಿಸಿದರು.

ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಡೆಹ್ರಾಡೂನ್‌ನಲ್ಲಿ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ಹಿರಿಯ ಅಧಿಕಾರಿಗಳ ಜತೆ ಸಭೆ ನಡೆಸಿದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ನಿಮ್ಮ ಮಕ್ಕಳು ಪ್ರಾಮಾಣಿಕರಾಗಿ ಇರುವಂತೆ ಮಾಡುವುದೇ ಶಿಕ್ಷಣದ ಆರಂಭಿಕ ಹಂತ.

-ಜಾನ್ ರಸ್ಕಿನ್

ಕೇಂದ್ರದಿಂದ ಅನುದಾನ ಹಂಚಿಕೆ ರಾಜ್ಯಗಳ ಅಸಮಾಧಾನಕ್ಕೆ ಕಿವಿಗೊಡಿ

ಹಣಕಾಸಿನ ಅನುದಾನ ಬಿಡುಗಡೆಯ ವಿಚಾರದಲ್ಲಿ ಕೇಂದ್ರ ಸರ್ಕಾರವು ತಾರತಮ್ಯದ ಧೋರಣೆ ಅನುಸರಿಸುತ್ತಿದೆ ಎಂದು ಆರೋಪಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಅವರ ಸಂಪುಟದ ಸದಸ್ಯರು, ಕಾಂಗ್ರೆಸ್‌ನ ಶಾಸಕರು ಹಾಗೂ ಪಕ್ಷದ ಪದಾಧಿಕಾರಿಗಳು ದೆಹಲಿಯಲ್ಲಿ ನಡೆಸಿದ ಪ್ರತಿಭಟನೆಯು ಹಿಂದೆಂದೂ ನಡೆದಿರದಂಥದ್ದು. ಅನುದಾನ ನೀಡುವಲ್ಲಿ ತಾರತಮ್ಯ ಎಸಗಲಾಗುತ್ತಿದೆ ಎಂಬ ಆರೋಪವನ್ನು ರಾಜ್ಯ ಸರ್ಕಾರವು ಕೇಂದ್ರದ ವಿರುದ್ಧ ಹಲವು ತಿಂಗಳುಗಳಿಂದ ಮಾಡುತ್ತಾ ಬಂದಿದೆ. 'ಚಲೋ ದೆಹಲಿ' ಹೆಸರಿನಲ್ಲಿ ನಡೆದ ಪ್ರತಿಭಟನೆಯು ಈ ವಿಚಾರವನ್ನು ರಾಷ್ಟ್ರಮಟ್ಟಕ್ಕೆ ಒಯ್ದಿದೆ. ಕರ್ನಾಟಕ ಹಾಗೂ ದಕ್ಷಿಣದ ಇತರ ರಾಜ್ಯಗಳ ಪಾಲಿಗೆ ಅನುಕೂಲಕರ ಅಲ್ಲದ ರೀತಿಯಲ್ಲಿ ಅನುದಾನ ಹಂಚಿಕೆ ನಡೆಯುತ್ತಿದೆ, ಅನುದಾನ ಹಂಚಿಕೆಯು ನ್ಯಾಯಸಮ್ಮತವಾಗಿ ಇರಬೇಕು ಎಂದು ಸಿದ್ದರಾಮಯ್ಯ ಹಲವು ಬಾರಿ ಹೇಳಿದ್ದಾರೆ. ದೇಶದ ಬೊಕ್ಕಸಕ್ಕೆ ರಾಜ್ಯ ನೀಡುವ ಪ್ರತಿ ₹100ರಲ್ಲಿ ಮರಳಿ ರಾಜ್ಯಕ್ಕೆ ಸಿಗುತ್ತಿರುವುದು ₹12 ಮಾತ್ರ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಇದು ಸರಿಯಲ್ಲ ಎಂಬುದು ಅವರ ನಿಲುವು. ಕೇಂದ್ರ ಹಾಗೂ ರಾಜ್ಯಗಳ ನಡುವೆ ಹಂಚಿಕೆಯಾಗುವ ತೆರಿಗೆ ವರಮಾನದಲ್ಲಿ ಕರ್ನಾಟಕದ ಪಾಲು ಶೇಕಡ 4.71ರಷ್ಟು ಇದ್ದದ್ದು 15ನೇ ಹಣಕಾಸು ಆಯೋಗದ ಶಿಫಾರಸಿನ ನಂತರದಲ್ಲಿ ಶೇಕಡ 3.64ಕ್ಕೆ ಇಳಿಕೆ ಆಗಿದೆ ಎಂದೂ ಹೇಳಲಾಗಿದೆ. ಮೊದಲ ಲೆಕ್ಕದಲ್ಲಿ ಹೇಳಬೇಕೆಂದರೆ, 14ನೇ ಹಣಕಾಸು ಆಯೋಗದ ಶಿಫಾರಸಿಗೆ ಅನುಗುಣವಾಗಿ ಪಡೆಯುತ್ತಿದ್ದ ಮೊತ್ತಕ್ಕೆ ಹೋಲಿಸಿದರೆ ಇದು ಶೇ 22.5ರಷ್ಟು ಕಡಿಮೆ. ಅನುದಾನ ಹಂಚಿಕೆಯ ಸೂತ್ರದಿಂದಾಗಿ ಅತಿಹೆಚ್ಚಿನ ನಷ್ಟ ಆಗಿರುವುದು ಕರ್ನಾಟಕಕ್ಕೆ ಎಂದು ಸರ್ಕಾರ ಹೇಳಿದೆ.



ಒಕ್ಕೂಟ ವ್ಯವಸ್ಥೆಯ ಹಣಕಾಸಿನ ಸಂಬಂಧಗಳಲ್ಲಿ ರಾಜಕೀಯ ನುಸುಳಬಾರದು

ರಾಜ್ಯ ಸರ್ಕಾರದ ಅಂದಾಜಿನ ಪ್ರಕಾರ, ರಾಜ್ಯಕ್ಕೆ ಆಗಿರುವ ಒಟ್ಟು ನಷ್ಟದ ಮೊತ್ತವು ₹1.87 ಲಕ್ಷ ಕೋಟಿ. ಹೆಚ್ಚು ಅಭಿವೃದ್ಧಿ ಹೊಂದಿರುವ ರಾಜ್ಯಗಳು, ಅಭಿವೃದ್ಧಿಯಲ್ಲಿ ಹಿಂದಿರುವ ರಾಜ್ಯಗಳಿಗೆ ನೆರವಾಗಬೇಕು ಎಂಬ ಆಧಾರದಲ್ಲಿ ಅನುದಾನ ಹಂಚಿಕೆಯ ಸೂತ್ರ ಜಾರಿಯಾಗಿರುವ ಕಾರಣದಿಂದಾಗಿ ಈ ರೀತಿ ಆಗಿದೆ. ಆದರೆ ಅಭಿವೃದ್ಧಿಯಲ್ಲಿ ಮುಂದೆ ಬಂದಿರುವ ರಾಜ್ಯಗಳಲ್ಲಿ, ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಉತ್ತಮ ಸಾಧನೆ ತೋರಿದ್ದಕ್ಕಾಗಿ ತಮ್ಮನ್ನು ಶಿಕ್ಷಿಸಲಾಗುತ್ತಿದೆ ಎಂಬ ಭಾವನೆ ಮೂಡುವ ಸ್ಥಿತಿ ನಿರ್ಮಾಣ ಆಗಬಾರದು. ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯ ಅಡಿಯಲ್ಲಿ ನೀಡಿದ ಪರಿಹಾರ ಮೊತ್ತವು ಸಮರ್ಪಕವಾಗಿ ಇಲ್ಲ, ರಾಜ್ಯಗಳ ಜೊತೆ ಹಂಚಿಕೊಳ್ಳಲು ಅವಕಾಶವಿಲ್ಲದ ಸೆಸ್ ಹಾಗೂ ಸರ್ಚಾರ್ಜ್ ವಿಧಿಸುವುದಕ್ಕೆ ಕೇಂದ್ರವು ಹೆಚ್ಚು ಉತ್ಸಾಹ ತೋರಿಸುತ್ತಿದೆ ಎಂಬ ಟೀಕೆಗಳು ಕೂಡ ಕರ್ನಾಟಕದಿಂದ ಕೇಳಿಬಂದಿವೆ. 15ನೇ ಹಣಕಾಸು ಆಯೋಗವು ತೆರಿಗೆ ವರಮಾನದಲ್ಲಿ ಶೇ 41ರಷ್ಟನ್ನು ರಾಜ್ಯಗಳ ಜೊತೆ ಹಂಚಿಕೊಳ್ಳುವಂತೆ ಶಿಫಾರಸು ಮಾಡಿದ್ದರೂ, ವಾಸ್ತವದಲ್ಲಿ ಹಂಚಿಕೆ ಮಾಡುತ್ತಿರುವುದು ಸರಿಸುಮಾರು ಶೇ 30ರಷ್ಟು ಮೊತ್ತವನ್ನು ಮಾತ್ರ ಎಂದೂ ಕರ್ನಾಟಕ ಹೇಳಿದೆ. ಇವಿಷ್ಟೇ ಅಲ್ಲದೆ, ಇನ್ನೂ ಕೆಲವು ದೂರು-ದುಮ್ಮಾನಗಳನ್ನು ರಾಜ್ಯ ಹೊಂದಿದೆ.

ಬಿಜೆಪಿಯನ್ನು ವಿರೋಧಿಸುವ ಪಕ್ಷಗಳ ಆಡಳಿತ ಇರುವ ಇತರ ಕೆಲವು ರಾಜ್ಯಗಳ ಸರ್ಕಾರಗಳು ಕೂಡ ಕೇಂದ್ರ ಸರ್ಕಾರದ ನೀತಿಗಳಲ್ಲಿ ಅಸಮಾಧಾನ ಹೊಂದಿವೆ. ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಮತ್ತು ಅವರ ಸಂಪುಟದ ಸಹೋದ್ಯೋಗಿಗಳು ಗುರುವಾರ ದೆಹಲಿಯಲ್ಲಿ ಪ್ರತಿಭಟನೆ ನಡೆಸಿದ್ದಾರೆ. ಕರ್ನಾಟಕ ಸರ್ಕಾರದ ಪ್ರತಿಭಟನೆ ನಡೆದ ಮಾರನೆಯ ದಿನವೇ ಇದು ನಡೆದಿದೆ. ಕೇರಳದ ಪ್ರತಿಭಟನೆಯಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಮತ್ತು ವಿರೋಧ ಪಕ್ಷಗಳ ಕೆಲವು ನಾಯಕರು ಭಾಗಿಯಾಗಿದ್ದರು. ಪ್ರತಿಭಟನೆಗೆ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಬೆಂಬಲ ವ್ಯಕ್ತಪಡಿಸಿದ್ದಾರೆ. ಹಣಕಾಸು ಅನುದಾನ ಹಂಚಿಕೆಯಲ್ಲಿ ಕೇಂದ್ರವು ತಾರತಮ್ಯ ಎಸಗುತ್ತಿದೆ ಎಂದು ಕೇರಳ ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿಯೊಂದನ್ನು ಕೂಡ ಸಲ್ಲಿಸಿದೆ. ಕೇಂದ್ರದ ಹಲವು ಮಹತ್ವದ ಯೋಜನೆಗಳಿಗೆ ಅನುದಾನ ನಿರಾಕರಿಸಲಾಗುತ್ತಿದೆ ಎಂದು ಆರೋಪಿಸಿ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಧರಣಿ ನಡೆಸಿದ್ದಾರೆ. ಕರ್ನಾಟಕ ಹಾಗೂ ಇತರ ರಾಜ್ಯಗಳ ಆರೋಪವನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಅಲ್ಲಗಳೆದಿದ್ದಾರೆ. ಆದರೆ ಕೇಂದ್ರದ ನೀತಿಗಳ ಕುರಿತಾಗಿ ರಾಜ್ಯಗಳು ಹೊಂದಿರುವ ಅಸಮಾಧಾನ ಮತ್ತು ಅತೃಪ್ತಿ ಸಂಪೂರ್ಣವಾಗಿ ಆಧಾರರಹಿತವೇನೂ ಅಲ್ಲ. ಒಕ್ಕೂಟ ವ್ಯವಸ್ಥೆಯ ಹಣಕಾಸಿನ ಸಂಬಂಧಗಳಲ್ಲಿ ರಾಜಕೀಯ ನುಸುಳಬಾರದು. ರಾಜ್ಯಗಳ ದೂರು ಹಾಗೂ ಪ್ರತಿಭಟನೆಯನ್ನು 'ರಾಜಕೀಯ ಉದ್ದೇಶದ್ದು' ಎಂದು ಕೇಂದ್ರವು ತಳ್ಳಿಹಾಕುವುದು ತಪ್ಪಾಗುತ್ತದೆ.

ದಿನದ ಟ್ವೀಟ್

ಇದೆಂಥ ಅಭಿವೃದ್ಧಿ?



777 ಕೋಟಿ ರೂಪಾಯಿ ಸುರಂಗದಲ್ಲಿ ಹರಿದುಹೋಗಿದೆ. ಉದ್ಘಾಟನೆಗೊಂಡು ವರ್ಷ ಕಳೆದ ಬಳಿಕ ಸೋರಿಕೆ, ಬಿರುಕು, ಒಳಚರಂಡಿ ಸೋರಿಕೆ ಪತ್ತೆಯಾಗಿದೆ ಮತ್ತು ಅದನ್ನು ಬಳಸುವವರಿಗೆ ಅಪಾಯ ತಂದೊಡ್ಡಿದೆ. ಇದೀಗ ಎಲ್ ಆ್ಯಂಡ್ ಟಿ ಮತ್ತು ಪಿಡಬ್ಲ್ಯುಡಿ ಆರೋಪ, ಪ್ರತ್ಯಾರೋಪದಲ್ಲಿ ತೊಡಗಿವೆ. ಇದು 'ಅಭಿವೃದ್ಧಿ'ಯಲ್ಲ– ಬರೀ ಕೆಟ್ಟ ಆಡಳಿತ.

(ದೆಹಲಿಯ ಪ್ರಗತಿ ಮೈದಾನ ಸುರಂಗದ ಕಳಪೆ ಕಾಮಗಾರಿಗೆ ಪ್ರತಿಕ್ರಿಯೆ)

ಸುಷ್ಮಾ ದಾತೆ, ಮಕ್ಕಳತಜ್ಞೆ

ಕಿಡಿನುಡಿ



ರಾಜ್ಯ ಸರ್ಕಾರದ ಅಧಿಕಾರಿಗಳು ದುರಹಂಕಾರಿಗಳಾಗಿದ್ದಾರೆ. ಕೆಲಸ ಆಗಬೇಕಾದರೆ ಅವರಿಗೆ ಕಮಿಷನ್ ಕೊಡಬೇಕು. ಹೀಗೇಕೆ ಎಂದು ಮುಖ್ಯ ಎಂಜಿನಿಯರ್‌ಗಳನ್ನು ಗುತ್ತಿಗೆದಾರರು ಪ್ರಶ್ನಿಸಿದರೆ, 'ಮೇಲಿನವರಿಗೆ ಫೀಡ್ ಮಾಡಬೇಕು' ಎನ್ನುತ್ತಾರೆ. ಸಚಿವರು, ಶಾಸಕರತ್ತ ಬೊಟ್ಟು ಮಾಡಿ ತೋರಿಸುತ್ತಾರೆ.

ಡಿ. ಕೆಂಪಣ್ಣ, ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ

25 ವರ್ಷಗಳ ಹಿಂದೆ

ಮಂಗಳವಾರ, 9-2-1999

• ಜಯಾ ಪ್ರಕರಣಗಳ ವರ್ಗ ನ್ಯಾಯಾಧೀಶರ ತಿರಸ್ಕಾರ

ಚೆನ್ನೈ, ಫೆ. 8– ತಮಿಳುನಾಡಿನ ಮುಖ್ಯಮಂತ್ರಿ ಜಯಲಲಿತಾ ವಿರುದ್ಧದ ಭ್ರಷ್ಟಾಚಾರ ಪ್ರಕರಣಗಳನ್ನು ಬೇರೆ ನ್ಯಾಯಾಲಯಗಳಿಗೆ ವರ್ಗಾಯಿಸಿ ಹೊರಡಿಸಿರುವ ಆದೇಶವನ್ನು ಇಬ್ಬರು ವಿಶೇಷ ನ್ಯಾಯಾಧೀಶರು ತಿರಸ್ಕರಿಸುವುದರೊಂದಿಗೆ ಕೇಂದ್ರ ಸರ್ಕಾರದ ವಿವಾದಿತ ನಿರ್ಧಾರವು ನಾಟಕೀಯ ತಿರುವು ಪಡೆದುಕೊಂಡಿದೆ.

ಭ್ರಷ್ಟಾಚಾರ ಪ್ರಕರಣಗಳ ವಿಚಾರಣೆಗೆ ತಮಿಳುನಾಡು ಸರ್ಕಾರ ನೇಮಿಸಿದ್ದ ಮೂವರು ವಿಶೇಷ ನ್ಯಾಯಾಧೀಶರಲ್ಲಿ ಇಬ್ಬರು 'ಕೇಂದ್ರ ಸರ್ಕಾರದ ನಿರ್ಧಾರಕ್ಕೆ ಕಾನೂನಿನ ಬೆಂಬಲವಿಲ್ಲ' ಎಂದು ಘೋಷಿಸಿ, ವಿಚಾರಣಾ ಪ್ರಕ್ರಿಯೆ ಮುಂದುವರಿಸುವುದಾಗಿ ಹೇಳಿದ್ದಾರೆ.

ಬಸವೇಶ್ವರರಿಗೆ ಅಪಮಾನ: ಸಿಒಡಿ ತನಿಖೆಗೆ

ಹುಬ್ಬಳ್ಳಿ, ಫೆ. 8– ಶಹರದಲ್ಲಿ ಬಸವೇಶ್ವರರ ಭಾವಚಿತ್ರಕ್ಕೆ ಅಪಮಾನ ಮಾಡಲಾಯಿತೆಂದು ಆಪಾದಿಸಲಾಗಿರುವ ಘಟನೆಯ ತನಿಖೆಯನ್ನು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಸಿಒಡಿ ತನಿಖೆಗೆ ಒಪ್ಪಿಸಿದ್ದಾರೆ ಎಂಬುದಾಗಿ ಉನ್ನತ ಪೊಲೀಸ್ ಮೂಲಗಳು ತಿಳಿಸಿವೆ.

ಸಿಒಡಿ ತಂಡ ನಾಳೆ ಹುಬ್ಬಳ್ಳಿ ಶಹರಕ್ಕೆ ಬಂದು ಸ್ಥಳೀಯ ಪೊಲೀಸರಿಂದ ತನಿಖಾ ಕಾರ್ಯವನ್ನು ವಹಿಸಿಕೊಳ್ಳಲಿದೆ ಎಂದು ಪೊಲೀಸ್ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ಥಳೀಯ ಪೊಲೀಸರು ಈಗಾಗಲೇ ಕೆಲವರನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ ಎಂದು ಹೇಳಲಾಗಿದೆ.

50 ವರ್ಷಗಳ ಹಿಂದೆ

ಶನಿವಾರ, 9-2-1974

• ಗುಜರಾತಿನಲ್ಲಿ ಇನ್ನೊಬ್ಬ ಸಚಿವರ ರಾಜೀನಾಮೆ: ಮತ್ತಷ್ಟು ಬಿಕ್ಕಟ್ಟು

ಅಹಮದಾಬಾದ್, ಫೆ. 8– ರಾಜ್ಯದಲ್ಲಿ ಹಿಂಸಾಸ್ವರೂಪ ತಾಳಿರುವ ಆಹಾರ ಗಲಭೆಗಳು ಅಡಗುತ್ತಿರುವ ಸೂಚನೆಗಳು ಕಾಣುತ್ತಿರುವಂತೆಯೇ ಮತ್ತೊಬ್ಬ ಸಚಿವರ ರಾಜೀನಾಮೆಯಿಂದಾಗಿ ಚಿಮನ್‌ಭಾಯಿ ಪಟೇಲರ ಸಂಪುಟ ಮತ್ತಷ್ಟು ಬಿಕ್ಕಟ್ಟಿಗೆ ಸಿಲುಕಿದೆ.

ವಿದ್ಯಾರ್ಥಿ ಪ್ರದರ್ಶನಕಾರರ ವಿರುದ್ಧ ಪೊಲೀಸರ ದಬ್ಬಾಳಿಕೆ ಹಾಗೂ ಹದ್ದುಮೀರಿದ ವರ್ತನೆಯನ್ನು ಪ್ರತಿಭಟಿಸಿ ಶಿಕ್ಷಣ ಖಾತೆ ರಾಜ್ಯ ಸಚಿವ ಮಗನ್‌ಭಾಯಿ ಆರ್. ಬಾರೋಟ್ ಅವರು ಇಂದು ಚಿಮನ್‌ಭಾಯಿ ಪಟೇಲ್ ನಾಯಕತ್ವದ ಗುಜರಾತ್ ಸಚಿವ ಸಂಪುಟಕ್ಕೆ ರಾಜೀನಾಮೆ ನೀಡಿದರು.

ಚಿಮನ್‌ಭಾಯಿ ಪಟೇಲ್ ಅವರು ನಿನ್ನೆ ನಾಲ್ವರು ಸಚಿವರನ್ನು ವಜಾ ಮಾಡಿದರು. ಇದರಿಂದಾಗಿ 21 ಸಚಿವರ ರಾಜ್ಯ ಸಂಪುಟದ ಬಲ ಈಗ ಹದಿನಾರಕ್ಕಿಳಿದಿದೆ.

• ಮಹಾರಾಷ್ಟ್ರದಲ್ಲಿ ನೊಂದ ಕನ್ನಡಿಗರಿಗೆ ಪರಿಹಾರ ನೀಡಿಕೆ

ಬೆಂಗಳೂರು, ಫೆ. 8– ಮಹಾರಾಷ್ಟ್ರದಲ್ಲಿ ಕನ್ನಡಿಗರ ಮೇಲೆ ನಡೆದ ಗಲಭೆಯಲ್ಲಿ ನೊಂದವರಿಗೆ ಪರಿಹಾರ ನೀಡುವ ಕ್ರಮ ಆರಂಭವಾಗಿದೆ ಎಂದು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಅವರು ಕರ್ನಾಟಕ ಪ್ರದೇಶ ಕಾಂಗ್ರೆಸ್ (ಸಂಸ್ಥಾ) ಅಧ್ಯಕ್ಷ ಶ್ರೀ ವೀರೇಂದ್ರ ಪಾಟೀಲರಿಗೆ ತಿಳಿಸಿದ್ದಾರೆ.

ರಾಷ್ಟ್ರೀಯ ಭಾವೈಕ್ಯ ಮಂಡಳಿ ಸಭೆ ಕರೆಯಬೇಕು ಹಾಗೂ ನೊಂದವರಿಗೆ ಪರಿಹಾರ ನೀಡಬೇಕೆಂದು ಒತ್ತಾಯಿಸಿ ಪಾಟೀಲ್, ಪ್ರಧಾನಿಗೆ ಪತ್ರ ಬರೆದಿದ್ದರು.

ವಿದ್ಯಾರ್ಥಿಗಳ ಪ್ರವೇಶಾತಿ ಹೆಚ್ಚಳದಷ್ಟೇ ಅವರ ಸಾಂಸ್ಕೃತಿಕ ಭವಿಷ್ಯದ ಬಗೆಗಿನ ಕಾಳಜಿಯೂ ಮುಖ್ಯ

ಉನ್ನತ ಶಿಕ್ಷಣ: ಕಾಯಕಲ್ಪದ ಕಾಲ



ವಿಶ್ಲೇಷಣೆ

ನಿಂಗಪ್ಪ ಮುದೇನೂರು

ಉನ್ನತ ಶಿಕ್ಷಣ ಹಲವರ ಪಾಲಿಗೆ ಮರೀಚಿಕೆ ಎನ್ನುವ ಮಾತು ಹಿಂದಿನ ದಶಕಗಳಲ್ಲಿ ಜನಜನಿತವಾಗಿತ್ತು. ಆದರೆ ಇಂದು ಕಾಲ ಬದಲಾಗಿದೆ. ಉನ್ನತ ಶಿಕ್ಷಣ ಪಡೆಯಲು ಹಲವು ಅವಕಾಶಗಳು ದಕ್ಕುತ್ತಿವೆ. ಕಾಲೇಜುಗಳ ಸಂಖ್ಯೆ ಹೆಚ್ಚಳ, ವಿಶ್ವವಿದ್ಯಾಲಯಗಳ ವಿಕೇಂದ್ರೀಕರಣ, ಹಲವು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಾದ ಓದು, ವಿಶ್ವವಿದ್ಯಾಲಯಗಳಲ್ಲಿನ ಅಧ್ಯಯನ ಪೀಠಗಳು ನಡೆಸುತ್ತಿರುವ ಸ್ನಾತಕೋತ್ತರ ಡಿಪ್ಲೊಮಾ ಕೋರ್ಸ್‌ನಂತಹವು ವಿದ್ಯಾರ್ಥಿಗಳ ಪ್ರವೇಶಾತಿ ಹೆಚ್ಚಳಕ್ಕೆ ಕಾರಣವಾಗಿರಬಹುದು. ಇನ್ನು, ಪ್ರವೇಶಾತಿಯ ಸಂದರ್ಭದಲ್ಲಿ ವಿದ್ಯಾರ್ಥಿಗಳು ತುಂಬುವ ಶುಲ್ಕವನ್ನು ಆನಂತರ ಸರ್ಕಾರವು ಶಿಷ್ಯವೇತನದ ರೂಪದಲ್ಲಿ ಕೆಲವು ಸಮುದಾಯಗಳ ವಿದ್ಯಾರ್ಥಿಗಳಿಗೆ ಪಾವತಿಸುವ ಕ್ರಮವೂ ಈ ಪ್ರವೇಶಾತಿಯ ಹೆಚ್ಚಳಕ್ಕೆ ಮುಖ್ಯ ಕಾರಣವಾಗಿದೆ. ಹಲವು ಸೌಲಭ್ಯಗಳು, ವಿದ್ಯಾರ್ಥಿಸ್ನೇಹಿ ಕೊಡುಗೆಗಳೂ ಇದರ ಹಿಂದೆ ಇಲ್ಲದಿಲ್ಲ.

2021–22ರಲ್ಲಿ 4.33 ಕೋಟಿ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆದಿರುವ ವಿಷಯವು ಕಲಿಕೆಯ ದೃಷ್ಟಿಯಿಂದ ತುಂಬಾ ಮಹತ್ವದ್ದು. ಹೆಣ್ಣುಮಕ್ಕಳು ಹೆಚ್ಚು ಹೆಚ್ಚು ವಿದ್ಯಾವಂತರಾಗಿ ಸ್ವ ಉದ್ಯೋಗಗಳನ್ನು ಹಾಗೇ ಸರ್ಕಾರಿ, ಅರೆಸರ್ಕಾರಿ, ಖಾಸಗಿ ವಲಯದ ಉದ್ಯೋಗಗಳಲ್ಲಿ ತಮ್ಮದೇ ಆದ ದುಡಿಮೆಯ ಸ್ವಾತಂತ್ರ್ಯವನ್ನು ಹೊಂದಲು ಇದರಿಂದ ಸಾಧ್ಯವಾಗಬಲ್ಲದು. ಮಗಳು ಹೆಚ್ಚು ಕಲಿತು ಗಂಡಿನ ಸಮಕ್ಕೆ ಬಂದರೆ ವರದಕ್ಷಿಣೆ ಹಾವಳಿ ಕಡಿಮೆಯಾಗಬಹುದು ಎಂದು ಭಾವಿಸುವ ತಂದೆ– ತಾಯಿ ಹಳ್ಳಿಗಳಲ್ಲಿ ಈಗಲೂ ಇದ್ದಾರೆ.

ಈ ದಿಸೆಯಲ್ಲಿ ಕಲಿಕೆಯೊಂದಿಗೆ ಉದ್ಯೋಗಗಳು ಮುಖ್ಯವಾಗಿ ಸೃಷ್ಟಿಯಾಗಬೇಕು. ಆದರೆ ಇಂದಿನ ಶಿಕ್ಷಣ ವ್ಯವಸ್ಥೆಯು ಬಹುತೇಕ ಪರೀಕ್ಷೆಗಾಗಿ ಕಲಿಕೆ ಎಂಬಂತಾಗಿದೆ ಮತ್ತು ಪಡೆಯುವ ಅಂಕಗಳಿಗಷ್ಟೇ ಸೀಮಿತವಾಗಿದೆ. ಪಠ್ಯದ ಜೊತೆ ಜೀವನ ಶಿಕ್ಷಣವನ್ನು ಕಲಿಯುವ ಮತ್ತು ಕಲಿಸುವ ವ್ಯವಧಾನವನ್ನು ಸೆಮಿಸ್ಟರ್ ಪದ್ಧತಿ ಕಳೆದುಹಾಕಿದೆ.

ನಾಲ್ಕು ತಿಂಗಳಿನ ಒಂದು ಸೆಮಿಸ್ಟರ್ ಅವಧಿಯಲ್ಲಿ ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯನ್ನೋ ಅಥವಾ ರಾವ್ ಬಹದ್ದೂರ್ ಅವರ 'ಗ್ರಾಮಾಯಣ'ವನ್ನೋ ಓದುವ ಮತ್ತು ಓದಿದ್ದನ್ನು ಗ್ರಹಿಸಿಕೊಂಡು ಮನನ ಮಾಡುವ, ಮಾತನಾಡುವ, ಬರೆಯುವ ಒಂದು ಮುಕ್ತ ವಾತಾವರಣ ಇಂದು ಇಲ್ಲವಾಗಿದೆ. ಮೊದಲೆಲ್ಲ ನಮ್ಮ ಉನ್ನತ ಶಿಕ್ಷಣ ಅಧ್ಯಯನವು ವಾರ್ಷಿಕ ಸ್ವರೂಪದ್ದಾಗಿತ್ತು. ಎರಡು ವರ್ಷಗಳಲ್ಲಿ ಸ್ನಾತಕೋತ್ತರ ಪದವಿ ಮುಗಿಯುತ್ತಿತ್ತು. ಆದರೆ ಈಗ ಎರಡು ವರ್ಷಗಳಲ್ಲಿ ನಾಲ್ಕು ಸೆಮಿಸ್ಟರ್‌ಗಳನ್ನು ಪೂರೈಸಬೇಕಿದೆ. ಇದರಿಂದಾಗಿ ಇಡೀ ಕಥಾಸಂಕಲನವನ್ನು, ಕಾದಂಬರಿಯನ್ನು, ಕನ್ನಡದ ಮಹತ್ವದ ಕವಿಯನ್ನು ಅರ್ಥಪೂರ್ಣವಾಗಿ ಓದಿಕೊಳ್ಳಲಾರದ, ಓದಿಸಲಾರದ ಶಿಕ್ಷಣ ವ್ಯವಸ್ಥೆಯ ಜೊತೆಗೆ ನಾವಿದ್ದೇವೆ. ಪೂರ್ಣ ಕಲಿಸಲಾರದೆ ವಿದ್ಯಾರ್ಥಿಗಳಿಗೆ ಪರಾಮರ್ಶನ ಗ್ರಂಥ, ವಿಷಯಾಧಾರಿತವಾಗಿ ಒಂದಿಷ್ಟು ನೋಟ್ಸ್ ನೀಡಿ 'ಮುಕ್ತ'ವಾಗುವ ವಾತಾವರಣ ಇಂದಿನ ಬಹುತೇಕ ಉನ್ನತ ಶಿಕ್ಷಣ ಹಂತದಲ್ಲಿದೆ.

ಇದನ್ನು ಸುಧಾರಿಸುವಲ್ಲಿ ನಮ್ಮ ಉನ್ನತ ಶಿಕ್ಷಣ ಇಲಾಖೆ, ಉನ್ನತ ಶಿಕ್ಷಣ ಪರಿಷತ್ತು ಮತ್ತು ವಿಶ್ವವಿದ್ಯಾಲಯಗಳ ಶೈಕ್ಷಣಿಕ ವ್ಯವಸ್ಥೆ ಶ್ರಮಿಸಬೇಕು. ಇಂತಹ ಶಿಕ್ಷಣ ನೀತಿಯನ್ನು ರೂಪಿಸಿದವರು ಪುನರ್‌ವಿಮರ್ಶೆ ಮಾಡಿಕೊಳ್ಳಬೇಕಾದ ಸಂದರ್ಭವೂ ಇದಾಗಿದೆ. ಇಲ್ಲವಾದರೆ, ಬರೀ ಅಂಕಗಳಿಗಾಗಿ ಪದವಿಯನ್ನು ನೀಡಿ, ಆ ಮೂಲಕ ವಿದ್ಯಾರ್ಥಿಗಳು ಸಾಂಸ್ಕೃತಿಕ ಬದುಕಿನಿಂದ, ಸಾಹಿತ್ಯಕ ಒಲವಿನಿಂದ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಉನ್ನತವಾಗಿ ಬೆಳೆಯಬೇಕಾದ ಅವಕಾಶದಿಂದ ವಂಚಿತರಾಗಲು ನಮ್ಮ ಶೈಕ್ಷಣಿಕ ವ್ಯವಸ್ಥೆ ಮತ್ತು ಅದರ ಭಾಗವಾಗಿರುವ ನಾವೇ ಕಾರಣರಾಗುತ್ತೇವೆ.

ಉನ್ನತ ಶಿಕ್ಷಣದಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ ಹೆಚ್ಚಳ ಎಷ್ಟು ಮುಖ್ಯವೋ ಅವರ ಸಾಂಸ್ಕೃತಿಕ ಭವಿಷ್ಯದ ಬಗೆಗಿನ ಕಾಳಜಿಯೂ ಅಷ್ಟೇ ಮುಖ್ಯ. ಈಗಿನ ಸ್ಪರ್ಧಾತ್ಮಕ ಕಲಿಕೆಗಳನ್ನೇ ನಾವು ನಿಜವಾದ ಶಿಕ್ಷಣ ಎನ್ನುವುದಾದರೆ, ನಮಗಿದ್ದ ಪರಂಪರಾನುಗತವಾದ ಶಿಕ್ಷಣ, ನಮ್ಮ ಪರಿಸರದಿಂದ ದಕ್ಕಿದ ಜೈವಿಕ ಶಿಕ್ಷಣ, ಬೌದ್ಧಿಕ ಶಿಕ್ಷಣ ಮತ್ತು ಸಾಮಾಜಿಕ ಸೌಂದರ್ಯವನ್ನು ಸಾಧಿಸುವಲ್ಲಿ ಇರಬಹುದಾದ ಸಮಾನತೆಯ ಶಿಕ್ಷಣವನ್ನು ಕಲಿಯಲು ಇಂದಿನ ಸ್ಪರ್ಧಾತ್ಮಕ ಓದು, ಕಲಿಕೆಯಿಂದ ಸಾಧ್ಯವೇ? ಮೀಮಾಂಸೆಗಳನ್ನು ಓದಿ ಹೊಸ ಮೀಮಾಂಸೆಗಳನ್ನು ಕಟ್ಟುವ, ಕನ್ನಡ ಸಾಹಿತ್ಯ ಚರಿತ್ರೆ, ಭಾಷಾ ವಿಜ್ಞಾನ, ಮಾನವಶಾಸ್ತ್ರ, ಸಮಾಜಶಾಸ್ತ್ರ, ತತ್ವಶಾಸ್ತ್ರದಂತಹ ಮಾನವಿಕ ವಿಜ್ಞಾನಗಳ ಓದಿನಿಂದ ಹೊಸ ಮಾನವಿಕ ವಿಜ್ಞಾನಗಳನ್ನು ಕಟ್ಟುವ ವರ್ತಮಾನವನ್ನು ಕಾಣಲು ಸಾಧ್ಯವೇ? ಈ ಎಲ್ಲ ಪ್ರಶ್ನೆಗಳು ನಮ್ಮ ಮುಂದೆ ಇವೆ.

ಅಖಿಲ ಭಾರತ ಉನ್ನತ ಶಿಕ್ಷಣ ಸಮೀಕ್ಷೆಯು (ಎಐಎಸ್‌ಎಚ್‌ಇ) ತನ್ನ ನಿಖರ ಮತ್ತು ಸ್ಪಷ್ಟ ವರದಿಯನ್ನೇನೋ ಜನವರಿಯಲ್ಲಿ ಬಿಡುಗಡೆ ಮಾಡಿದೆ. ಆದರೆ, ಉನ್ನತ ಶಿಕ್ಷಣದಲ್ಲಿ ಕಲಿತವರು ಉನ್ನತವಾದ ಹುದ್ದೆಗೆ ಹೋಗುವ ಅವಕಾಶಗಳಿಂದ ವಂಚಿತರಾಗುವುದರ ಬಗೆಗಿನ ಒಳನೋಟವನ್ನು ಇದು ನೀಡಲಾರದು. ನಾನೊಬ್ಬ ಕನ್ನಡ ಸಾಹಿತ್ಯವನ್ನು ಬೋಧಿಸುವ ಅಧ್ಯಾಪಕನಾಗಿ ಹೇಳಬಹುದಾದರೆ, ಸ್ನಾತಕೋತ್ತರ ಕನ್ನಡ ಪದವಿಯನ್ನು ಪಡೆದ ವಿದ್ಯಾರ್ಥಿಗಳು ಈಗಲೂ ಬಹುತೇಕ ನಿರುದ್ಯೋಗದ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಹಲವರು ಸಣ್ಣ ಸಣ್ಣ ಉದ್ಯೋಗಗಳಲ್ಲಿ ತೃಪ್ತಿಪಟ್ಟರೆ, ಇನ್ನು ಕೆಲವರು ಅತಿಥಿ ಉಪನ್ಯಾಸಕರಾಗಿ, ಬೋಧನಾ ಸಹಾಯಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಹಲವರು ಮರಳಿ ತಮ್ಮ ಊರಿನ ಹೊಲಗದ್ದೆಗಳ ದುಡಿಮೆಗೆ ಹೋದದ್ದಿದೆ. ಅಂದರೆ ಓದಿನ ಸಾರ್ಥಕತೆ, ಉನ್ನತ ಶಿಕ್ಷಣದ ಕಲಿಕೆಯ ಕನಸು ಎಲ್ಲಿ ಈಡೇರಬೇಕಿತ್ತೋ ಅಂತಲ್ಲಿ ತುಕ್ಕು ಹಿಡಿಯುತ್ತಿರುವ ಶೈಕ್ಷಣಿಕ ವ್ಯವಸ್ಥೆಯನ್ನು ನಾವು ಕಾಣಬೇಕಾಗಿರುವುದು ತುಂಬಾ ವಿಷಾದದ ಸಂಗತಿ.




ಪ್ರಾಥಮಿಕ ಹಂತದಿಂದ ಉನ್ನತ ಶಿಕ್ಷಣದ ಹಂತದವರೆಗೂ ಸಾವಿರಾರು ಉದ್ಯೋಗಗಳು ಸೃಷ್ಟಿಯಾಗದೆ ಹಾಗೇ ಇವೆ. ವಿಶ್ವವಿದ್ಯಾಲಯಗಳಲ್ಲಂತೂ ಬೋಧನಾ ಮಟ್ಟ, ಸಂಶೋಧನಾ ಮಟ್ಟ ಕುಸಿಯಲು ಪೂರ್ಣಪ್ರಮಾಣದ ಪ್ರಾಧ್ಯಾಪಕರಿಲ್ಲದಿರುವುದು ಪ್ರಮುಖ ಕಾರಣವಾಗಿದ್ದು, ಇದು ಸಾಮಾನ್ಯ ಸಂಗತಿ ಎಂಬಂತಾಗಿದೆ. ಹತ್ತಿಪ್ಪತ್ತು ವರ್ಷಗಳಿಂದ ಬೋಧಕರನ್ನು ತುಂಬದೆ ಹಾಗೇ ಬಿಟ್ಟರೆ ನಾವು ಒಂದು ತಲೆಮಾರಿನ ಬೆಳವಣಿಗೆಯ ಜ್ಞಾನವನ್ನೇ ಕುಂಠಿತಗೊಳಿಸಿದಂತೆ. ಈಗೀಗ ಉನ್ನತ ಶಿಕ್ಷಣಕ್ಕೆ ಬರುವ ವಿದ್ಯಾರ್ಥಿಗಳು ಅಷ್ಟೋ ಇಷ್ಟೋ ಕಲಿತು ಜೊತೆಗೆ ಡಿಪ್ಲೊಮಾ ಕೋರ್ಸ್‌ಗಳನ್ನೂ ಮಾಡಿಕೊಂಡು, ಬಿಡುವು ಸಿಕ್ಕಾಗ ಸ್ಪರ್ಧಾತ್ಮಕ ಪರೀಕ್ಷೆಗಳ ಕೋಚಿಂಗ್ ಕೇಂದ್ರಗಳಿಗೆ ಅಲೆದು, ಅಲ್ಲಿಯೂ ಹಣ ಖರ್ಚು ಮಾಡಿ ಪರೀಕ್ಷೆಗಳನ್ನು ಬರೆಯುತ್ತಾ ಹೋಗುತ್ತಾರೆ. ಇನ್ನೊಂದೆಡೆ, ಬಿ.ಇಡಿ, ನೆಟ್, ಸ್ಲೆಟ್, ಜೆಆರ್‌ಎಫ್, ಪಿಎಚ್.ಡಿ ಎಂದು ಅರ್ಧ ವಯೋಮಾನವನ್ನು ಕಳೆದು ಬದುಕಿನ ಇನ್ನರ್ಧ ವಯೋಮಾನದಲ್ಲಿ ಉದ್ಯೋಗಕ್ಕೆ ಅಲೆಯುವ ಸ್ಥಿತಿಯನ್ನು ನಿತ್ಯವೂ ಕಾಣುತ್ತೇವೆ.

ಉದ್ಯೋಗ ಮಾಡಲು ಬ್ಯಾಂಕ್, ಪೊಲೀಸ್ ಇಲಾಖೆ ಯಾವುದಾದರೇನು? ನಮ್ಮಲ್ಲಿ ಓದಿ ಹೋದ ವಿದ್ಯಾರ್ಥಿಗಳೇ ದಾಖಲೆಗಳನ್ನು ಹಿಡಿದು ದೃಢೀಕರಣಕ್ಕೆಂದು ನಮ್ಮ ಬಳಿ ಬಂದಾಗ ಅವರ ಎಲ್ಲ ಕಷ್ಟಗಳು ನಮಗೆ ಎದುರಾಗುತ್ತವೆ. ಉದ್ಯೋಗಕ್ಕಾಗಿ ಅಲೆದು ಅಲೆದು ಹಿಂದಿನ ಲವಲವಿಕೆಯನ್ನು ಅವರು ಕಳೆದುಕೊಂಡಿರುತ್ತಾರೆ. ಒಂದರ್ಥದಲ್ಲಿ ನಾವು ಅಸಹಾಯಕರು, ಅವರೂ ಅಸಹಾಯಕರು. ನಮ್ಮ ಒಟ್ಟಾರೆ ಶೈಕ್ಷಣಿಕ ವ್ಯವಸ್ಥೆಯು ರೂಪಿಸಿರುವ ವರ್ತಮಾನವಿದು.

ಸಾಂಸ್ಕೃತಿಕ ಎಚ್ಚರ ಮತ್ತು ವಿವೇಚನೆ ಇಲ್ಲದ ಶೈಕ್ಷಣಿಕ ಸೆಮಿಸ್ಟರ್ ಪರೀಕ್ಷಾ ಪದ್ಧತಿ, ಇದನ್ನು ರೂಪಿಸಿರುವ ಶಿಕ್ಷಣ ತಜ್ಞರು, ಸರ್ಕಾರಗಳ ಅಸಡ್ಡೆ ಇಷ್ಟೆಲ್ಲಾ ಅವಾಂತರಗಳಿಗೆ ಕಾರಣ. ಉನ್ನತ ಶಿಕ್ಷಣ ಪ್ರವೇಶಾತಿ ಹೆಚ್ಚಳವನ್ನು ನಾವು ಹಿಗ್ಗಿನಿಂದ ಹೇಳಿಕೊಳ್ಳಬಹುದು. ಇದರಿಂದ ಶುಲ್ಕ ರೂಪದಲ್ಲಿ ಬರುವ ಒಂದಿಷ್ಟು ಸಂಪನ್ಮೂಲವು ಶಿಕ್ಷಣದ ಬೆಳವಣಿಗೆಗೆ, ಕಟ್ಟಡಗಳ ನಿರ್ಮಾಣಕ್ಕೆ, ಅಧ್ಯಾಪಕರ ಸಂಬಳಕ್ಕೂ ನೆರವಾಗಬಹುದು. ಆದರೆ ಒಂದು ತಲೆಮಾರಿನ ಸಾಂಸ್ಕೃತಿಕ, ಸಾಹಿತ್ಯಕ ಮತ್ತು ಶೈಕ್ಷಣಿಕ ವಿವೇಕವನ್ನು ಬಹುಕಾಲ ಜ್ಞಾಪಕದಲ್ಲಿ ಇಟ್ಟುಕೊಳ್ಳುವಂತಾಗಲು, ವರ್ಗಾಯಿಸಲು, ಹೊಸ ತಲೆಮಾರಿಗೆ ಅದನ್ನು ಬಿತ್ತಲು ಒಂದು ಸದೃಢ ವಿವೇಚನೆಯುಳ್ಳ ಶೈಕ್ಷಣಿಕ ವಾತಾವರಣವೊಂದು ನಮಗೆ ಬೇಕು. ನಾವೆಲ್ಲಾ ಆಲೋಚಿಸಬೇಕಾದ ಸಮಯ ಇದು.

ಲೇಖಕ: ಸಹಾಯಕ ಪ್ರಾಧ್ಯಾಪಕ, ಡಾ. ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಚುರುಮುರಿ



ಭಾರತ್ ಹಲ್ವಾ!

• ಬಿ.ಎನ್.ಮಲ್ಲೇಶ್

'ಮಂಜಮ್ಮ, ತಿಂಡಿ ಏನೈತೆ?' ಗುಡ್ಡೆ ಕೇಳಿದ.

'ತಿಂಡಿನಾ? ಸ್ಪೆಷಲ್ಲು... ಭಾರತ್ ಅಕ್ಕಿ ಇಡ್ಲಿ, ಭಾರತ್ ದೋಸೆ, ಭಾರತ್ ಚಿತ್ರಾನ್ನ...' ಮಂಜಮ್ಮನ ಮುಖದಲ್ಲಿ ಖುಷಿ.

'ಯಾಕೆ ಇಂಡಿಯಾ ಇಡ್ಲಿ, ದೋಸೆ ಇಲ್ವಾ?'

'ಅದ್ನ ನೀವು ಬೇರೆ ದೇಶ ಕೇಳ್ತಿದೀರಲ್ಲ, ಅಲ್ಲಿ ತಿನ್ನಕ್ಳಿ...'

ಗುಡ್ಡೆಗೆ ಸಿಟ್ಟು ಬಂತು. 'ಮಂಜಮ್ಮ ನೆಟ್ಟಗೆ ಮಾತಾಡು, ನಾವೆಲ್ಲಿ ಬೇರೆ ದೇಶ ಕೇಳಿದ್ವಿ? ನಮ್ ತೆರಿಗೆ ರೊಕ್ಕ ನಮಿಗೆ ಕೊಡದಿದ್ಕೆ ಹಂಗಂದ್ವಿ. ಈಗ ಅಪ್ಪ ಆಸ್ತಿ ಕೊಡದಿದ್ರೆ ಮಗ ಬೇರೆ ಮನಿ ಮಾಡ್ತೀನಿ ಅನ್ನಲ್ವ, ಹಂಗೆ' ಎಂದ.

'ಏನೇ ಆಗ್ಲಿ, ದೇಶ ಒಡೆಯೋ ಮಾತಾಡೋದು ತಪ್ಪು. ಹೋಗ್ಲಿ, ಭಾರತ್ ಹಲ್ವಾ ಏನರೆ ಮಾಡಿದೀಯ ಮಂಜಮ್ಮ?' ಕೊಟ್ರೇಶಿ ತಿಪ್ಪೆ ಸಾರಿಸಿದ.

'ಹಲ್ವಾ ಹೋದ್ಸಲಾನೇ ಕೊಟ್ರಲ್ಲೋ ಕೊಟ್ರಾ. ನಮ್ ಭದ್ರಾ ಮೇಲ್ದಂಡೆಗೆ 5,300 ಕೋಟಿ ಅಂತ ನಿರ್ಮಲಕ್ಕ ಹೇಳಿ ವರ್ಷಾತು, ನಯಾಪೈಸೆ ಬರ್ಲಿಲ್ಲ' ಗುಡ್ಡೆ ನಕ್ಕ.

'ಮತ್ತೆ ನಮ್ ಸರ್ಕಾರ ಬರುತ್ತೆ, ಕೊಡ್ತಾರೆ ತಗಾ, ನೀನು ನನ್ ಉದ್ರಿ ಬಾಕೀನೇ ವರ್ಷದಿಂದ ತೀರ್ಸಿಲ್ಲ, ಇನ್ನು ಕೋಟಿಗಟ್ಲೆ ರೊಕ್ಕ ಪಟ್ ಅಂತ ಬಂದ್ಬಿಡುತ್ತಾ?' ಮಂಜಮ್ಮ ವಾದಿಸಿದಳು.

'ಬಿಡು ಮಂಜಮ್ಮ, ಈಗ ಈ ಭಾರತ್ ಅಕ್ಕಿ ಹೆಂಗೈತೆ? ಹುಳ ಗಿಳ ಆಗಿಲ್ಲ ತಾನೆ?' ದುಬ್ಬೀರ ಮಾತು ಬದಲಿಸಿದ.

'ನಮ್ ಸಿದ್ರಾಮಣ್ಣ ಜಾಸ್ತಿ ದುಡ್ಡಿಗೆ ಅಕ್ಕಿ ಕೇಳಿದಾಗ ಕೊಡ್ಲಿಲ್ಲ, ಈಗ ಗೋಡನ್‌ನಲ್ಲಿ ಮುಗ್ಗಲು ಹಿಡಿದಿರ್ಬೇಕು, ಅದ್ಕೆ ಕಮ್ಮಿ ರೇಟಿಗೆ ಕೊಡ್ತದಾರೆ' ಗುಡ್ಡೆ ಪಟ್ಟು ಬಿಡಲಿಲ್ಲ.

'ಲೇ ಗುಡ್ಡೆ, ದೇಶದ ಬಗ್ಗೆ ಮಾತಾಡಿದ್ರೆ ಸುಮ್ನಿರಲ್ಲ ನೋಡು' ಮಂಜಮ್ಮ ರಾಂಗಾದಳು.

'ಅಲೆ ಇವ್ಳ, ನಾನೆಲ್ಲಿ ದೇಶದ ಬಗ್ಗೆ ಮಾತಾಡಿದೆ?'

'ಮತ್ತೆ? ಈ ಅಕ್ಕಿ ಯಾವುದು? ಭಾರತ್ ಅಕ್ಕಿ. ಅದ್ರಲ್ಲಿ ದೇಶ ಇಲ್ವಾ?'

ಗುಡ್ಡೆ ಪಿಟಿಕ್ಕನ್ನಲಿಲ್ಲ.

ಸಂಗತ

ಕಾಯುವ ಕರವೇ... ಕೊಲ್ಲದಿರು

ಚಂಚಲ ಮನಸ್ಸಿನಿಂದ ಮಕ್ಕಳೊಟ್ಟಿಗೆ ಸಾವಿಗೆ ಶರಣಾಗುವವರು, ಮಕ್ಕಳ ಹುಟ್ಟಿಗೆ ಕಾರಣರಾದ ತಮಗೆ, ಅವರನ್ನು ಕೊಲ್ಲುವ ಅಧಿಕಾರವೂ ಇದೆ ಎಂದು ಯಾಕೆ ಭಾವಿಸಬೇಕು?

• ಪ.ರಾಮಕೃಷ್ಣ ಶಾಸ್ತ್ರಿ

ಕುಡುಕ ಗಂಡನಿಂದ ಬೇಸತ್ತು ಮಕ್ಕಳ ಜೊತೆಗೂಡಿ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡ ತಾಯಿ, ವಿಚ್ಛೇದಿತ ಪತಿಯ ಮೇಲಿನ ದ್ವೇಷದಿಂದ ಪುಟ್ಟ ಮಗನನ್ನು ಕೊಂದ ಅಮ್ಮ... ಇತ್ತೀಚೆಗೆ ಸಂಭವಿಸಿದ ಇಂತಹ ಸರಣಿ ದುರಂತಗಳ ಹಿಂದೆ ಹೆತ್ತ ತಾಯಿಯೇ ಆರೋಪಿ ಸ್ಥಾನದಲ್ಲಿ ನಿಂತಿದ್ದಾಳೆ. ಹೆತ್ತು ಹೊತ್ತು ಎದೆಹಾಲನ್ನೂಡಿ ಬೆಳೆಸಿದ ತಾಯಂದಿರು ತಮ್ಮ ಬದುಕನ್ನು ಅರ್ಧದಲ್ಲೇ ಮುಗಿಸಿಕೊಳ್ಳುವುದರ ಜೊತೆಗೆ, ಬಾಳಿ ಬದುಕಬೇಕಿದ್ದ ಮಕ್ಕಳನ್ನು ಕೂಡ ಅಕಾಲಿಕ ಸಾವಿಗೆ ದೂಡುವ ಸುದ್ದಿ ಮೈಯಲ್ಲಿ ನಡುಕ ಹುಟ್ಟಿಸುತ್ತದೆ.

ಕೆಟ್ಟ ಮಗನಿರಬಹುದು, ಕೆಟ್ಟ ತಾಯಿ ಇರಲಾರಳು ಎಂಬುದು ಪ್ರಪಂಚವೇ ಒಪ್ಪಿಕೊಂಡ ಸತ್ಯ. ಆತ್ಮಹತ್ಯೆಯ ದೃಢ ನಿರ್ಧಾರ ತಳೆದ ಜೀವಗಳಿಗೆ ಇಂತಹ ಯಾವ ಸಂಗತಿಯೂ ನೆನಪಿಗೆ ಬರುವುದಿಲ್ಲ. ನೊಂದವರು, ಬೆಂದವರು, ಅನ್ಯ ದಾರಿಯೇ ಇಲ್ಲ ಎಂದುಕೊಂಡವರು ಕಟ್ಟಕಡೆಯ ನಿರ್ಣಯ ಕೈಗೊಳ್ಳುವಾಗಲೂ ತಾವಿಲ್ಲವಾದರೆ ತಮ್ಮ ಮಕ್ಕಳು ಅನಾಥರಾಗಬಹುದು, ಅವರಿಗೆ ಬದುಕುವ ದಾರಿ ತಿಳಿಯದೇ ಹೋಗಬಹುದು ಎಂದುಕೊಳ್ಳುವುದು ಅರ್ಥಹೀನ.

ಕಷ್ಟಗಳಿರಬಹುದು, ಹಾಗೆಂದು ಆತ್ಮಹತ್ಯೆಯ ನಿರ್ಧಾರಕ್ಕೆ ಗಟ್ಟಿಯಾಗುವ ತಾಯಂದಿರು ಪ್ರಪಂಚ ತಿಳಿಯದವರೇನಲ್ಲ. ಹುಟ್ಟುವಾಗ ಎರಡೂ ಕೈಗಳು, ಕಾಲುಗಳು, ಕಣ್ಣುಗಳಿಲ್ಲದವರು ಕೂಡ ಹೆತ್ತವರಿಗೆ ಭಾರವಾದ ಉದಾಹರಣೆಗಳು ಕಡಿಮೆ. ಲೋಕೋತ್ತರ ಕೀರ್ತಿಗೆ ಭಾಜನರಾದ ಹಲವರು ಅಂಗಾಂಗ ನ್ಯೂನತೆ ಹೊತ್ತು ವಿಶ್ವದ ಬೆಳಕು ಕಂಡವರು. ಇಂತಹ ಉದಾಹರಣೆಗಳು ಹೆಚ್ಚಿನವರಿಗೆ ಗೊತ್ತಿದೆ. ಕೈಕಾಲು ಗಟ್ಟಿಯಾಗಿದ್ದು ಪ್ರೌಢ ವಯಸ್ಸಿಗೆ ಕಾಲಿಡುತ್ತಿರುವ ಮಕ್ಕಳಿಗೆ ಹಿರಿಯರ ಶಾಶ್ವತ ಅನುಪಸ್ಥಿತಿ ಎದುರಾದರೂ ಅವರನ್ನು ಸೋಲಿಗೆ ದೂಡುವಷ್ಟು ನಮ್ಮ ಸಾಮಾಜಿಕ ಸಹೃದಯ ವ್ಯವಸ್ಥೆಯು ಮರಗಟ್ಟಿಲ್ಲ. ಹೆತ್ತವರನ್ನು ಕಳೆದುಕೊಂಡ ಯಾವ ಮಕ್ಕಳನ್ನೂ ತಬ್ಬಲಿಯಾಗಲು ಬಿಡದೆ, ಬದುಕಿನ ತೀರ ತಲುಪಿಸಲು ಕೈಹಿಡಿದು ನಡೆಸಬಲ್ಲ ಬಂಧುತ್ವ ಭಾವವು ಮೃತಾವಸ್ಥೆ ತಲುಪಿಲ್ಲ.

'ನನ್ನ ಮಕ್ಕಳಿಗೆ ನನ್ನನ್ನು ಬಿಟ್ಟರೆ ಇನ್ನೊಬ್ಬರಿಲ್ಲ' ಎಂಬ ನಿರ್ಣಯಕ್ಕೆ ಬಂದು, ಚಂಚಲ ಮನಸ್ಸಿನಿಂದ ನೇಣಿನ ಕುಣಿಕೆಗೆ ಕೊರಳೊಡ್ಡುವ ಜನನಿ, ಜನಕರು, ಮಕ್ಕಳ ಹುಟ್ಟಿಗೆ ಕಾರಣರಾದ ತಮಗೆ, ಅವರನ್ನು ಕೊನೆಗಾಣಿಸುವ ಅಧಿಕಾರವೂ ಇದೆ ಎಂದು ಯಾಕೆ ಭಾವಿಸಬೇಕು? ನಿಸರ್ಗವು ಬಂಜೆಯಲ್ಲ. ಕನಕದಾಸರು ಹೇಳಿದಂತೆ, 'ಕಲ್ಲೊಳಗೆ ಹುಟ್ಟಿದ ಕಪ್ಪೆಗೆ ಅಲ್ಲಿ ಉದಕವ ಕೊಡುವ' ಒಂದು ವ್ಯವಸ್ಥೆ ಇದೆ ಎಂಬುದು ಯಾರ ಊಹೆಗೂ ನಿಲುಕದಂತೆ ಕೆಲಸ ಮಾಡುತ್ತದೆ. ಬಂಧುಗಳಿಲ್ಲ ಎಂದು ಮರುಗದಂತೆ ಮಕ್ಕಳನ್ನು ಎದೆಗಾನಿಸಿಕೊಳ್ಳುವ ಭಾವನಾತ್ಮಕ ಹಿತಸ್ಪರ್ಶ ಇಡೀ ಸಮಾಜದಿಂದ ಸಿಗುತ್ತದೆ.

'ನನ್ನ ಕಂದನಿಗೆ ಯಾವುದೋ ಅಪರೂಪದ ಕಾಯಿಲೆ ಬಂದಿದೆ, ಚಿಕಿತ್ಸೆಗೆ ಹಣವಿಲ್ಲ' ಎಂದು ಸಹಾಯಕ್ಕಾಗಿ ಸಾಮಾಜಿಕ ಜಾಲತಾಣಗಳ ಮೂಲಕ ಮೊರೆಯಿಡುವ ಅದೆಷ್ಟೋ ಪೋಷಕರು, ಒಂದು ತಾಸಿನ ಒಳಗೇ 'ಅಗತ್ಯವಿರುವಷ್ಟು ಹಣ ಬಂದಿದೆ. ಇನ್ನು ಕಳುಹಿಸಬೇಡಿ' ಎಂದು ಕೇಳಿಕೊಳ್ಳುವಷ್ಟು ಹಣಕಾಸಿನ ನೆರವು ಹರಿದುಬಂದ ಉದಾಹರಣೆಗಳೂ ಇವೆ. ಅಂಥದ್ದರಲ್ಲಿ ವ್ಯಾವಹಾರಿಕ ಸೋಲು, ಬ್ಯಾಂಕ್ ಸಾಲದ ಹೊರೆ ಎಂದೆಲ್ಲ ಬದುಕಿಗೆ ವಿದಾಯ ಹೇಳುವ ವಯಸ್ಕರು, ಬಾಳಿ ಬದುಕುವ ಎಲ್ಲ ಅರ್ಹತೆಯನ್ನೂ ಹೊಂದಿದ ಜೀವಗಳಿಗೆ ಇತಿಶ್ರೀ ಹೇಳಬಾರದು.

ಆತ್ಮಹತ್ಯೆ ಎಂಬುದು ಕ್ಷಣದಲ್ಲಿ ಬರುವ ಆಲೋಚನೆ, ಆ ಕ್ಷಣದಲ್ಲಿ ಅದರಿಂದ ವಿಮುಖರಾದರೆ ಮತ್ತೆಂದಿಗೂ ಅಂತಹ ಸಾಹಸ ಮಾಡುವುದಿಲ್ಲ ಎಂಬ ಸಾಮಾನ್ಯ ನಂಬಿಕೆಯಿದೆ. ಹೊಸ ಬದುಕು ಕಂಡುಕೊಳ್ಳಲು ಅವರೊಂದು ಅವಕಾಶ ಪಡೆಯಬಹುದಲ್ಲವೇ? ಪ್ರಪಂಚದಲ್ಲಿ ಪರಿಹಾರ ಮಾರ್ಗವೇ ಇಲ್ಲದ ಸಮಸ್ಯೆ ಯಾವುದೂ ಇರುವುದಿಲ್ಲ.

ತನಗೊದಗಿದ ಸಂಕಷ್ಟವನ್ನು ಗೆಳೆಯರು, ಬಂಧುಗಳ ಬಳಿ ಹಂಚಿಕೊಂಡಾಗ ದೊರೆಯುವ ಸಲಹೆಗಳಿಂದ, ಇಕ್ಕಟ್ಟಿನಿಂದ ಪಾರಾಗುವ ಒಂದು ಆಧಾರ ತಂತು ಹೊಳೆಯದೇ ಹೋಗುವುದಿಲ್ಲ. ಬದುಕೆಂದರೆ ಏನೆಂದೇ ತಿಳಿಯದ ಎಳೆಯ ಮಕ್ಕಳಿಗೂ ಸಾವಿನ ಭೀಕರ ಸ್ಥಿತಿಯ ಅರಿವು ಮೂಡಿಸಲು ಮುಂದಾಗಬಾರದು. ಮಗು ಸಣ್ಣ ಜ್ವರದಿಂದ ಬಳಲಿದರೂ ಮಗುವಿಗಿಂತ ಹೆಚ್ಚು ವೇದನೆಯಿಂದ ಚಡಪಡಿಸುವ ತಾಯಿಯು ಮರಣದ ಕಡೆಯ ಕ್ಷಣ ತಲುಪುವವರೆಗೂ ಒದ್ದಾಡುವ ಎಳೆಯ ಜೀವದ ಅವಸ್ಥೆಯನ್ನು ಸಹಿಸಿಕೊಳ್ಳಬಲ್ಲೆ ಎಂದು ಹೇಗೆ ಎದೆ ಗಟ್ಟಿ ಮಾಡಿಕೊಳ್ಳುತ್ತಾಳೆ?



ಯಾವ ತಾಯಿಯೇ ಆಗಲಿ, ಪ್ರಪಂಚದ ಮೇಲೆ ನಂಬಿಕೆ ಕಳೆದುಕೊಳ್ಳಬಾರದು. ಮಕ್ಕಳು ತಮ್ಮ ಅನುಪಸ್ಥಿತಿಯನ್ನು ಎದುರಿಸುವಂತೆ ಮಾಡದೆ, ಎದುರಾದ ಸಂಕಷ್ಟಗಳಿಗೆ ಎದೆಯೊಡ್ಡಿ ನಿಲ್ಲಲು ಅವಕಾಶಗಳ ಆಕಾಶವನ್ನು ಬೊಗಸೆಯಲ್ಲಿ ಹಿಡಿದುಕೊಳ್ಳಬೇಕು. ತಾವೂ ಬದುಕಿ, ತಮ್ಮ ಮಕ್ಕಳನ್ನು ಸದೃಢಗೊಳಿಸುವ ಮೂಲಕ ಬದುಕಿನ ವಿಜಯವನ್ನು ಎತ್ತಿ ತೋರಿಸಬೇಕು.

ಭವಿಷ್ಯದ ಪೀಳಿಗೆ ಅವರ ಈ ಕೊಡುಗೆಗೆ ಕೃತಜ್ಞವಾಗಿರುತ್ತದೆ. ಅವರಲ್ಲಿ ಬದುಕುವ ಛಲ ಇನ್ನಷ್ಟು ಶಕ್ತಿಯುತವಾಗುತ್ತದೆ. ಯಾರ ಬದುಕೂ ಸುಖದ ಹಾಸಿಗೆಯಲ್ಲ, ಸಮಸ್ಯೆಗಳಿಂದ ಮುಕ್ತನಾದ ಮನುಷ್ಯನಿಲ್ಲ. ಬದುಕಿ ಬಾಳುವ ಛಲದಿಂದ ವಿಮುಖರಾಗಿ ತನ್ನವರ ಜೀವ ಕಸಿದುಕೊಳ್ಳುವ ಹಕ್ಕು ತಮಗಿದೆ ಎಂದು ಅನಾಹುತ ತಂದುಕೊಳ್ಳುವವರು ಮತ್ತೊಮ್ಮೆ, ಮಗದೊಮ್ಮೆ ಯೋಚಿಸಬೇಕು.

ವಾಚಕರ ವಾಣಿ

ತೆರಿಗೆ ಹಂಚಿಕೆ: ಬಿಟ್ಟುಕೊಟ್ಟಿಲ್ಲ...

ಕೇಂದ್ರ ಸರ್ಕಾರವು ರಾಜ್ಯಗಳಿಂದ ಸಂಗ್ರಹಿಸುವ ಜಿಎಸ್‌ಟಿ ಆಗಲೀ ವೈಯಕ್ತಿಕ ಆದಾಯ ತೆರಿಗೆಯಾಗಲೀ ಆಯಾ ಸೀಮಿತ ಪ್ರದೇಶದ ಜನಸಂಖ್ಯೆಯನ್ನು ಆಧರಿಸಿ ಇರುವುದಿಲ್ಲ, ಬದಲಿಗೆ ಅಲ್ಲಲ್ಲಿನ ಉತ್ಪಾದಕತೆ ಮತ್ತು ವ್ಯಾಪಾರ-ವಹಿವಾಟನ್ನು ಅವಲಂಬಿಸಿರುತ್ತದೆ. ಆದ್ದರಿಂದ ಒಕ್ಕೂಟ ನಿಧಿಯ ಹಂಚಿಕೆ, ಬೇರೆ ಬೇರೆ ನಾಡುಗಳ ಆರ್ಥಿಕ ಚಟುವಟಿಕೆ ಮತ್ತು ಉತ್ಪಾದಕ ಸಾಮರ್ಥ್ಯಕ್ಕೆ ತಕ್ಕಂತೆ ನಡೆಯಬೇಕೇ ವಿನಾ ರಾಜ್ಯಗಳ ಭೌಗೋಳಿಕ ವಿಸ್ತೀರ್ಣ ಅಥವಾ ಜನಸಂಖ್ಯೆಗೆ ತಕ್ಕಂತೆ ಅಲ್ಲ. ಒಟ್ಟಾರೆ, ಭಾರತ ರಾಷ್ಟ್ರವೆಂಬ ಪರಿಕಲ್ಪನೆಯ ಒಕ್ಕೂಟ ವ್ಯವಸ್ಥೆಯಲ್ಲಿ ನಂಬಿಕೆಯಿಟ್ಟು, ತೆರಿಗೆ ಸಂಗ್ರಹ ಮತ್ತು ಹಂಚಿಕೆಯ ಜವಾಬ್ದಾರಿಯನ್ನು ಕೇಂದ್ರ ಸರ್ಕಾರಕ್ಕೆ 'ವಹಿಸಿಕೊಡಲಾಗಿದೆ'ಯೇ ವಿನಾ 'ಬಿಟ್ಟುಕೊಡಲಾಗಿದೆ' ಎಂದು ಕಲ್ಪಿಸಿಕೊಳ್ಳಬಾರದು! ಆದ್ದರಿಂದ ಇಲ್ಲಿ ಕೇಂದ್ರವು 'ಕೋತಿ-ಕಜ್ಜಾಯ ನೀತಿ'ಯನ್ನು ಅಳವಡಿಸಿಕೊಳ್ಳಲಾಗದು. ಏಕೆಂದರೆ ರಾಜ್ಯಗಳು 'ಜೀ, ಹುಜೂರ್' ಎಂದು ಸುಮ್ಮನಿದ್ದುಬಿಡುವ ಪೆದ್ದು ಬೆಕ್ಕುಗಳಲ್ಲ!

ಇಷ್ಟಕ್ಕೂ ಈಗ ಎದ್ದಿರುವ ಕೂಗು ಪ್ರತ್ಯೇಕತೆಗಾಗಿ ಅಲ್ಲ. ಅಲ್ಲಿರುವ ಕಳಕಳಿಯು ಸಂಪತ್ತು ಮತ್ತು ಸಂಪನ್ಮೂಲಗಳ ಆರ್ಥಿಕ ಅನುಪಾತಾತ್ಮಕ ಹಂಚಿಕೆಗಾಗಿ ಅಷ್ಟೆ. ಅದನ್ನು ಸರಿಯಾಗಿ ಹೇಳಲು, ಭಾಷಾ ಸಂಸ್ಕಾರವಿಲ್ಲದ ರಾಜಕಾರಣಿಗಳಿಗೆ ಬರುತ್ತಿಲ್ಲವಾಗಿ, ವಿಷಯವು ರಾಜಕೀಯ ಮೇಲಾಟದ ವಸ್ತುವಾಗುತ್ತಿದೆ! ವಿವೇಕಶಾಲಿ ಆಡಳಿತ ವ್ಯವಸ್ಥೆಗೆ ಇದು ತರವಲ್ಲ.

ಆರ್.ಕೆ.ದಿವಾಕರ, ಎಚ್.ಕೆ.ವಿವೇಕಾನಂದ, ಬೆಂಗಳೂರು

ತೆರಿಗೆ ಹಂಚಿಕೆ ವಿವಾದ: ಚರ್ಚೆ ನಡೆಯಲಿ

ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ತೆರಿಗೆ ಹಂಚಿಕೆಯ ವಿಷಯದಲ್ಲಿ ಕೇಂದ್ರ ಸರ್ಕಾರದೊಂದಿಗೆ ನೇರವಾಗಿ ಸಂಘರ್ಷಕ್ಕೆ ಇಳಿದು, ನವದೆಹಲಿಯ ಜಂತರ್ ಮಂತರ್‌ನಲ್ಲಿ ಬುಧವಾರ ಪ್ರತಿಭಟನೆ ನಡೆಸಿದೆ. ರಾಜ್ಯವೊಂದು ಕೇಂದ್ರದ ವಿರುದ್ಧ ಅನುದಾನ ಬಿಡುಗಡೆಗೆ ಆಗ್ರಹಿಸಿ ಬಹಿರಂಗವಾಗಿ ಪ್ರತಿಭಟನೆ ನಡೆಸಿರುವುದು ಇದೇ ಮೊದಲು ಎನ್ನಬಹುದು. ಈ ಹಿಂದೆ ಅಂದರೆ 80ರ ದಶಕದಲ್ಲಿ, ಕರ್ನಾಟಕದ ರಾಮಕೃಷ್ಣ ಹೆಗಡೆ, ಆಂಧ್ರಪ್ರದೇಶದ ಎನ್.ಟಿ.ರಾಮರಾವ್ ಹಾಗೂ ಜಮ್ಮು– ಕಾಶ್ಮೀರದ ಫಾರೂಕ್ ಅಬ್ದುಲ್ಲಾ ಅವರು ಕೇಂದ್ರ ಸರ್ಕಾರದ ವಿರುದ್ಧ ಸಮರ ಸಾರಿದ್ದರು. ಆದರೆ ಅದು ಅನುದಾನ ಮತ್ತು ತೆರಿಗೆ ಹಂಚಿಕೆಗೆ ಸಂಬಂಧಪಟ್ಟಿರಲಿಲ್ಲ. ಎನ್.ಟಿ. ರಾಮರಾವ್ ಒಂದು ಹೆಜ್ಜೆ ಮುಂದೆ ಹೋಗಿ, ಕೇಂದ್ರ ಸರ್ಕಾರ ಎಂಬುದು ಒಂದು ಮಿಥ್ಯೆ ಎಂದು ಆಂಧ್ರ ವಿಧಾನಸಭೆಯಲ್ಲಿ ಗುಡುಗಿದ್ದರು.

ಕೇಂದ್ರ ಮತ್ತು ರಾಜ್ಯ ಸಂಬಂಧಗಳ ಬಗ್ಗೆ ದಶಕಗಳಷ್ಟು ಹಿಂದೆಯೇ ಸರ್ಕಾರಿಯಾ ಆಯೋಗ ವರದಿ ನೀಡಿತ್ತು. ಕೇಂದ್ರ ಹಣಕಾಸು ಆಯೋಗವು ಕೇಂದ್ರದಿಂದ ರಾಜ್ಯಗಳಿಗೆ ಬಿಡುಗಡೆಯಾಗಬೇಕಾದ ತೆರಿಗೆಯ ಪಾಲನ್ನು ನಿರ್ಧರಿಸುತ್ತಾ ಬರುತ್ತಿದೆ. ಫೆಡರಲ್ ತತ್ವಕ್ಕೆ ಅನುಗುಣವಾಗಿ ದೇಶವು ಕಾರ್ಯ ನಿರ್ವಹಿಸುತ್ತಿದೆ. ಕೇಂದ್ರ ಸರ್ಕಾರದಿಂದ ಎಲ್ಲಾ ರಾಜ್ಯಗಳಿಗೆ ನೀಡಬೇಕಾದ ಅನುದಾನವನ್ನು ಹಾಗೂ ತೆರಿಗೆ ಹಂಚಿಕೆಯ ವಿಧಾನವನ್ನು ಸಹ ಸ್ಪಷ್ಟವಾಗಿ ವಿಷದಪಡಿಸಲಾಗಿದೆ. ದುರದೃಷ್ಟವಶಾತ್ ಈ ವಿಚಾರವು ಹಾದಿಬೀದಿ ರಂಪವಾಗಿ ಮಾರ್ಪಟ್ಟಿದ್ದು, ಕೇಂದ್ರ ಸರ್ಕಾರಕ್ಕೆ ಮುಜುಗರ ಉಂಟುಮಾಡಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕೇಂದ್ರ ಮತ್ತು ರಾಜ್ಯಗಳ ನಡುವೆ ಸೌಹಾರ್ದ ಸಂಬಂಧ ಇರುವುದು ಅಪೇಕ್ಷಣೀಯ. ಇಂತಹ ಸೂಕ್ಷ್ಮ ವಿಚಾರಗಳನ್ನು ಪರಸ್ಪರ ಚರ್ಚೆ ಮತ್ತು ಮಾತುಕತೆಯ ಮೂಲಕ ಇತ್ಯರ್ಥಪಡಿಸಿಕೊಳ್ಳುವುದು ಒಳ್ಳೆಯದು.

ಕೆ.ವಿ.ವಾಸು, ಮೈಸೂರು

ನಿಮ್ಮ ಭಾಷೆಗೆ ನೀವೇ ಹೊಣೆ

ರಾಜಕಾರಣಿಗಳು, ಜವಾಬ್ದಾರಿಯುತ ಸ್ಥಾನದಲ್ಲಿರುವ ಸಚಿವರು ಇತ್ತೀಚಿನ ದಿನಗಳಲ್ಲಿ ಪರಸ್ಪರ ಆರೋಪ, ಪ್ರತ್ಯಾರೋಪ ಮಾಡುವಾಗ ಅಸಭ್ಯವಾಗಿ, ಏಕವಚನದಲ್ಲಿ ಸಂಬೋಧಿಸಿ ನಿಂದನೆ ಮಾಡುವ ಪ್ರವೃತ್ತಿ ಹೆಚ್ಚುತ್ತಿದೆ. ಇವರ ಇಂತಹ ನಡವಳಿಕೆ ಬಗ್ಗೆ ಆಕ್ಷೇಪಗಳು ಹೆಚ್ಚಾದಾಗ, ತಾವು ಹಳ್ಳಿಯಿಂದ ಬಂದವರು, ಅಲ್ಲೆಲ್ಲಾ ಹೀಗೇ ಮಾತನಾಡುವುದು ಎಂದು ಅವರು ಸಬೂಬು ಹೇಳುತ್ತಿದ್ದಾರೆ. ಸ್ವಾಮಿ, ನಾನೂ ಹಳ್ಳಿಯಿಂದಲೇ ಬಂದವನು. ಹಿರಿಯರು, ಕಿರಿಯರ ಜೊತೆಯಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ನಮ್ಮ ಹಿರಿಯರು, ಶಾಲೆಯಲ್ಲಿ ಗುರುಗಳು ನಮಗೆ ಕಲಿಸಿದ್ದಾರೆ. ನಿಮ್ಮ ಸ್ವಾರ್ಥ ಸಾಧನೆಗಾಗಿ, ಬಾಯಿ ಚಪಲಕ್ಕಾಗಿ ನಮ್ಮ ಹಳ್ಳಿ ಮಂದಿಯ ಮಾನ– ಮರ್ಯಾದೆ ಹರಾಜು ಹಾಕುವುದನ್ನು ಬಿಟ್ಟು, ನಿಮ್ಮ ಜೀವನದಲ್ಲಿ ಸ್ವಲ್ಪಮಟ್ಟಿಗಾದರೂ ಸಂಸ್ಕಾರ ಅಳವಡಿಸಿಕೊಳ್ಳಿ. ಅದು ನಿಮಗೆ ಶ್ರೇಯಸ್ಸು ತರುತ್ತದೆ.

ಮಾತು ಆಡಿದರೆ ಹೋಯಿತು ಮುತ್ತು ಒಡೆದರೆ ಹೋಯಿತು ಎಂಬ ಗಾದೆ ಮಾತು ನೂರಕ್ಕೆ ನೂರರಷ್ಟು ಸತ್ಯ. ವಿದೇಶಗಳಲ್ಲಿ ಆ ರಾಷ್ಟ್ರದ ಅಧ್ಯಕ್ಷ ಅಥವಾ ಪ್ರಧಾನಿಯು ಶಾಲಾ ಮಕ್ಕಳನ್ನು ಸಹ ಮಿಸ್ಟರ್, ಮಿಸ್ ಎಂದೇ ಗೌರವಯುತವಾಗಿ ಸಂಬೋಧನೆ ಮಾಡುತ್ತಾರೆ. ಇದನ್ನೆಲ್ಲಾ ಗಮನದಲ್ಲಿಟ್ಟು, ಸಮಾಜಕ್ಕೆ ಒಳ್ಳೆಯ ಸಂಸ್ಕಾರ ಕೊಟ್ಟು ಪ್ರಾತಃಸ್ಮರಣೀಯರು ಎನಿಸಿಕೊಳ್ಳಿ.

ಸಿಹಿಮೊಗೆ ರಮೇಶ್, ಮೈಸೂರು

ಅನ್ನಭಾಗ್ಯ ಮತ್ತು ಭಾರತ್ ಅಕ್ಕಿ

ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರವು ಅಸ್ತಿತ್ವಕ್ಕೆ ಬಂದ ಆರಂಭದಲ್ಲಿ, ಅನ್ನಭಾಗ್ಯ ಯೋಜನೆ ಜಾರಿಗಾಗಿ ಅಕ್ಕಿ ನೀಡುವಂತೆ ಭಾರತೀಯ ಆಹಾರ ನಿಗಮಕ್ಕೆ ಪತ್ರಮುಖೇನ ವಿನಂತಿ ಮಾಡಿ, ಕೆ.ಜಿ.ಗೆ ₹ 34 ನೀಡುವುದಾಗಿ ಒಪ್ಪಿಗೆ ಸೂಚಿಸಿತ್ತು. ನಿಗಮ ಮೊದಲು ಒಪ್ಪಿದ್ದರೂ ಬಳಿಕ ಕೇಂದ್ರ ಸರ್ಕಾರದ ಮಧ್ಯಪ್ರವೇಶದಿಂದ ಅಕ್ಕಿ ನೀಡಲು ನಿರಾಕರಿಸಿತು. ನಿಗಮದಿಂದ ಖರೀದಿಸಿದ್ದರೆ ರಾಜ್ಯ ಸರ್ಕಾರಕ್ಕೆ ಪ್ರತಿ ಕೆ.ಜಿ.ಗೆ ಸಾಗಾಟ ವೆಚ್ಚ ಸೇರಿ ₹ 36.60 ಖರ್ಚಾಗುತ್ತಿತ್ತು. ಬಳಿಕ ರಾಜ್ಯವು ನೇರವಾಗಿ ಫಲಾನುಭವಿಗಳಿಗೆ ಪ್ರತಿ ಕೆ.ಜಿ.ಗೆ ₹ 34ರಂತೆ ಹಣ ವರ್ಗಾವಣೆ ಮಾಡಿ, ಸಾಗಾಟ ವೆಚ್ಚವನ್ನು ರಾಜ್ಯದ ಬೊಕ್ಕಸಕ್ಕೆ ಉಳಿತಾಯ ಮಾಡಿತು.

ಈಗ ಕೇಂದ್ರವು ಅಕ್ಕಿಯನ್ನು ಬರೀ ₹ 29ಕ್ಕೆ 'ಭಾರತ್ ಅಕ್ಕಿ' ಎಂಬ ನಾಮಧೇಯದೊಂದಿಗೆ ನಾಫೆಡ್ (ನ್ಯಾಷನಲ್ ಅಗ್ರಿಕಲ್ಚರಲ್ ಕೋಆಪರೇಟಿವ್ ಮಾರ್ಕೆಟಿಂಗ್ ಫೆಡರೇಷನ್ ಆಫ್ ಇಂಡಿಯಾ ಲಿಮಿಟೆಡ್) ಮೂಲಕ ಮಾರಾಟ ಮಾಡಲು ಮುಂದಾಗಿದೆ. ಆಗ ಇದೇ ಅಕ್ಕಿಯನ್ನು ಭಾರತೀಯ ಆಹಾರ ನಿಗಮದ ಮೂಲಕ ರಾಜ್ಯ ಸರ್ಕಾರಕ್ಕೆ ನೀಡಿದ್ದರೆ ಕೇಂದ್ರಕ್ಕೆ ಪ್ರತಿ ಕೆ.ಜಿ.ಗೆ ₹ 5 ಹೆಚ್ಚು ದೊರಕುತ್ತಿತ್ತು. ಚುನಾವಣೆಯಲ್ಲಿ ಸೋಲುಣಿಸಿದ ಪ್ರತೀಕಾರಕ್ಕಾಗಿ ರಾಜ್ಯ ಸರ್ಕಾರಗಳಿಗೆ ಕೇಂದ್ರ ಸರ್ಕಾರವು ಆತುರದಲ್ಲಿ ಮೂಗುದಾರ ಹಾಕಲು ಹೋದಾಗ ಈ ರೀತಿಯ ಅಚಾತುರ್ಯಗಳು ನಡೆಯುತ್ತವೆ. ಇದರಿಂದ ಆರ್ಥಿಕ ನಷ್ಟವೂ ಆಗುತ್ತದೆ.

ಗಣಪತಿ ನಾಯ್ಕ್, ಕಾನಗೋಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ನರೇಗಾ ವಿಸ್ತರಿಸದ ಕೇಂದ್ರ ಸರ್ಕಾರ

ರಾಜ್ಯದ 223 ತಾಲ್ಲೂಕುಗಳಲ್ಲಿ ತೀವ್ರ ಬರ ಇದೆ ಎಂದು ರಾಜ್ಯ ಸರ್ಕಾರ ಘೋಷಿಸಿ ತಿಂಗಳುಗಳೇ ಕಳೆದಿವೆ. ಬರ ತೀವ್ರವಾಗಿರುವ ಈ ತಾಲ್ಲೂಕುಗಳಲ್ಲಿ ಜನರಿಗೆ ನರೇಗಾದ ಮೂಲಕ ಆರ್ಥಿಕ ಭದ್ರತೆಯನ್ನು ಒದಗಿಸಲೇಬೇಕು. ತೀವ್ರ ಬರದ ಸಂದರ್ಭದಲ್ಲಿ ಕುಟುಂಬವೊಂದಕ್ಕೆ 150 ದಿನಗಳವರೆಗೆ ಉದ್ಯೋಗ ಖಾತರಿಯನ್ನು ವಿಸ್ತರಿಸಬೇಕು ಎನ್ನುತ್ತದೆ ನಿಯಮ. ಆದರೆ ಈ ನಿರ್ಧಾರವನ್ನು ತೆಗೆದುಕೊಳ್ಳಬೇಕಿರುವುದು ಕೇಂದ್ರ ಸರ್ಕಾರ. ನರೇಗಾವನ್ನು ವಿಸ್ತರಿಸಿ ಎಂದು ರಾಜ್ಯ ಸರ್ಕಾರವು ಹಲವು ಬಾರಿ ಮನವಿ ಮಾಡಿದ್ದರೂ ಕೇಂದ್ರ ಆ ಯೋಜನೆಯನ್ನು ವಿಸ್ತರಿಸಿಲ್ಲ...

13 ಕೋಟಿ ಮಾನವ ದಿನಗಳು — 2023–24ರಲ್ಲಿ ಕರ್ನಾಟಕಕ್ಕೆ ಮಂಜೂರಾಗಿದ್ದ ನರೇಗಾ ಉದ್ಯೋಗಗಳು

5 ಕೋಟಿ ಮಾನವ ದಿನಗಳು — ತೀವ್ರ ಬರದ ಕಾರಣ ಕರ್ನಾಟಕ ಸರ್ಕಾರವು ಕೇಳುತ್ತಿರುವ ಹೆಚ್ಚುವರಿ ನರೇಗಾ ಉದ್ಯೋಗಗಳು

18 ಕೋಟಿ ಮಾನವ ದಿನಗಳು — ರಾಜ್ಯ ಸರ್ಕಾರದ ಮನವಿಯಂತೆ ಈ ಆರ್ಥಿಕ ವರ್ಷದಲ್ಲಿ ರಾಜ್ಯಕ್ಕೆ ಅಗತ್ಯವಿರುವ ನರೇಗಾ ಉದ್ಯೋಗಗಳು



ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕಿನ ಜಿಡಗಾ ಗ್ರಾಮದ ಬಳಿ ಗುಳೆ ಹೋದ ಜನ ಪ್ರಜಾವಾಣಿ ಚಿತ್ರಗಳು: ತಾಜುದ್ದೀನ ಆಜಾದ್

ಪ್ರಜಾವಾಣಿ ವಾರ್ತೆ

ಗ್ರಾಮೀಣ ಪ್ರದೇಶದಲ್ಲಿ ಈಗಲೂ ಅತ್ಯಂತ ಪ್ರಮುಖ ಕೆಲಸ ಕೃಷಿಯೇ ಆಗಿದೆ. ಸಣ್ಣ ಹಿಡುವಳಿದಾರರು, ಭೂರಹಿತ ಕೃಷಿ ಕಾರ್ಮಿಕರ ಪ್ರಮುಖ ಜೀವನೋಪಾಯ ಕೃಷಿಯನ್ನೇ ಅವಲಂಬಿಸಿದೆ. ಕೃಷಿ ಇಲ್ಲದೇ ಇರುವ ದಿನಗಳಲ್ಲೂ ಆ ಜನರಿಗೆ ಉದ್ಯೋಗವನ್ನು ಒದಗಿಸಬೇಕು ಎಂದು ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ–ನರೇಗಾ ಯೋಜನೆಯನ್ನು ಜಾರಿಗೆ ತರಲಾಗಿತ್ತು. ಈ ಯೋಜನೆ ಪ್ರಕಾರ ಕುಟುಂಬವೊಂದಕ್ಕೆ ವರ್ಷ-ವೊಂದರಲ್ಲಿ 100 ದಿನಗಳ ಉದ್ಯೋಗವನ್ನು ಒದಗಿಸಬೇಕು. ನರೇಗಾ ಯೋಜನೆಯನ್ನು ರೂಪಿಸುವ ಸಂದರ್ಭದಲ್ಲೇ, ನೆರೆ ಅಥವಾ ಬರದಂತಹ ಪ್ರಾಕೃತಿಕ ವಿಕೋಪಗಳ ಸಂದರ್ಭದಲ್ಲಿ ಉದ್ಯೋಗವನ್ನು 150 ದಿನಗಳವರೆಗೆ ವಿಸ್ತರಿಸಬೇಕು ಎಂಬ ಅಂಶವನ್ನು ಸೇರಿಸಲಾಗಿತ್ತು. ನಿರ್ವಹಣಾ ಕೈಪಿಡಿಯಲ್ಲೂ ಈ ಅಂಶವನ್ನು ಸೇರಿಸಿಕೊಳ್ಳಲಾಗಿತ್ತು. ಆದರೆ ಈಗಿನ ಕೇಂದ್ರ ಸರ್ಕಾರವು ತನ್ನದೇ ನಿಯಮದಂತೆಯೂ ನಡೆದುಕೊಳ್ಳುತ್ತಿಲ್ಲ, ನರೇಗಾವನ್ನು ವಿಸ್ತರಿಸುತ್ತಿಲ್ಲ.

ಮುಂಗಾರು ಮಳೆ ಅಥವಾ ಹಿಂಗಾರು ಮಳೆ ಕೊರತೆಯಾದುದು ಗೊತ್ತಾದ ಬೆನ್ನಲ್ಲೇ ರಾಜ್ಯ ಸರ್ಕಾರಗಳು ಗ್ರಾಮೀಣ ಭಾಗದಲ್ಲಿ ಉದ್ಯೋಗವನ್ನು ಒದಗಿಸಬೇಕು ಎನ್ನುತ್ತದೆ ಕೇಂದ್ರ ಸರ್ಕಾರದ ನಿಯಮ. ಬರ ಮತ್ತು ತೀವ್ರ ಬರದ ಸಂದರ್ಭದಲ್ಲಿ ನೇರ ಹೊಡೆತ ಬೀಳುವುದು ಕೃಷಿ ಕಾರ್ಮಿಕರಿಗೆ. ಅವರು ಉದ್ಯೋಗ ಅರಸಿಕೊಂಡು ಬೇರೆಡೆಗೆ ಗುಳೆ ಹೋಗುವುದನ್ನು ತಡೆಯಬೇಕು ಮತ್ತು ಇದಕ್ಕೆ ಅಗತ್ಯವಿರುವ ಹಣಕಾಸು ನೆರವನ್ನು ಪಡೆಯಲು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಬೇಕು ಎಂದೂ ಈ ನಿಯಮ ಹೇಳುತ್ತದೆ. ಆದರೆ ಕರ್ನಾಟಕ ಸರ್ಕಾರವು ಹೀಗೆ ಸೆಪ್ಟೆಂಬರ್‌ನಲ್ಲಿ ಸಲ್ಲಿಸಿದ್ದ ಮನವಿಗೆ ಕೇಂದ್ರ ಸರ್ಕಾರ ಈವರೆಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಅನುಮತಿ ಒಟ್ಟಿಗೆ, ಅನುದಾನವನ್ನೂ ನೀಡಬೇಕು

ಯುಪಿಎ ಸರ್ಕಾರವು ಈ ಯೋಜನೆಯನ್ನು ರೂಪಿಸಿದಾಗ, ಅದರ ಸಂಪೂರ್ಣ ಅನುದಾನವನ್ನು ಕೇಂದ್ರ ಸರ್ಕಾರವೇ ಭರಿಸಬೇಕು ಎಂದು ನಿಯಮ ಹೇಳುತ್ತದೆ. ರಾಜ್ಯಗಳಿಂದ ಸಂಗ್ರಹಿಸುವ ನೇರ ತೆರಿಗೆ ಮತ್ತು ಪರೋಕ್ಷ ತೆರಿಗೆಗಳಲ್ಲೇ ನರೇಗಾ ಯೋಜನೆಗೆಂದು ಕೇಂದ್ರ ಸರ್ಕಾರವು ಅನುದಾನವನ್ನು ತೆಗೆದಿರಿಸುತ್ತದೆ. ರಾಜ್ಯಗಳಲ್ಲಿ ಈ ಯೋಜನೆ ಅಡಿ ಬೇಡಿಕೆ ಇರುವಷ್ಟು ಉದ್ಯೋಗಕ್ಕೆ ಬೇಕಿರುವ ಅನುದಾನವನ್ನು ಹಂಚಿಕೆ ಮಾಡುತ್ತದೆ. ತೀವ್ರ ಬರದ ಸಂದರ್ಭದಲ್ಲಿ ನರೇಗಾವನ್ನು ವಿಸ್ತರಿಸಿದಾಗಲೂ ಇದೇ ನಿಯಮ ಅನ್ವಯವಾಗುತ್ತದೆ.

ನರೇಗಾವನ್ನು ವಿಸ್ತರಿಸಿ ಎಂದು ರಾಜ್ಯ ಸರ್ಕಾರವು ಮನವಿ ಮಾಡಿಕೊಂಡರೂ, ಕೇಂದ್ರ ಸರ್ಕಾರವೇ ಅದನ್ನು ಅನುಮತಿಸಬೇಕು. ಏಕೆಂದರೆ ಈ ಯೋಜನೆ ಅಡಿ ಹೆಚ್ಚುವರಿ ಅನುದಾನವನ್ನು ಕೊಡಬೇಕಿರುವುದೂ ಕೇಂದ್ರ ಸರ್ಕಾರವೇ. ಕರ್ನಾಟಕ ಸರ್ಕಾರದ ಮನವಿಯಂತೆ ಕೇಂದ್ರ ಸರ್ಕಾರವು ನರೇಗಾ ಅಡಿ ಹೆಚ್ಚುವರಿ 50 ದಿನಗಳ ಉದ್ಯೋಗವನ್ನು ವಿಸ್ತರಿಸಿದರೆ, ಅದರ ವೆಚ್ಚವನ್ನು ಕೇಂದ್ರವೇ ಭರಿಸಬೇಕಾಗುತ್ತದೆ. ಹೆಚ್ಚುವರಿ 50 ದಿನಗಳ ಕೆಲಸಕ್ಕೆ ಅನುಮತಿ ಕೊಟ್ಟರೆ, 5 ಕೋಟಿಯಷ್ಟು ಮಾನವ ದಿನಗಳ ಉದ್ಯೋಗ ಸೃಷ್ಟಿಯಾಗುತ್ತದೆ. ರಾಜ್ಯದಲ್ಲಿ ನರೇಗಾ ಅಡಿ ದಿನವೊಂದಕ್ಕೆ ₹316 ಕೂಲಿ ನೀಡಲಾಗುತ್ತಿದೆ. ಅದರಂತೆ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ₹1,580 ಕೋಟಿಯಷ್ಟು ಕೂಲಿ ಮೊತ್ತವನ್ನು ನೀಡಬೇಕಾಗುತ್ತದೆ. ಮತ್ತು ನರೇಗಾ ಅಡಿ ಕೈಗೊಂಡ ಕಾಮಗಾರಿಯ ಸಾಮಗ್ರಿಗಳ ವೆಚ್ಚವನ್ನೂ ನೀಡಬೇಕಾಗುತ್ತದೆ.




ರಾಜ್ಯದಲ್ಲಿ ತೀವ್ರ ಬರದ ಸ್ಥಿತಿ ಎದುರಾದ ಸಂದರ್ಭದಲ್ಲೇ ರಾಜ್ಯ ಸರ್ಕಾರವು ನರೇಗಾ ಅಡಿಯ ಕಾಮಗಾರಿಗಳಿಗೆ ಒತ್ತು ನೀಡಿತ್ತು. ಸೆಪ್ಟೆಂಬರ್‌ನಲ್ಲಿ ತೀವ್ರ ಬರ ಇದೆ ಎಂದು ಘೋಷಿಸಿದ ನಂತರ, ಪರಿಹಾರಕ್ಕಾಗಿ ಕೇಂದ್ರಕ್ಕೆ ಮನವಿ ಸಲ್ಲಿಸಿತ್ತು. 'ತೀವ್ರ ಬರದ ಕಾರಣ ರಾಜ್ಯದಲ್ಲಿ ನರೇಗಾ ಅಡಿ ಉದ್ಯೋಗಕ್ಕೆ ಬೇಡಿಕೆ ಹೆಚ್ಚುತ್ತಿದೆ. ಹೀಗಾಗಿ ಪ್ರತಿ ಕುಟುಂಬಕ್ಕೆ ನೀಡಲಾಗುವ 100 ದಿನಗಳ ಉದ್ಯೋಗವನ್ನು 150 ದಿನಗಳಿಗೆ ವಿಸ್ತರಿಸಬೇಕು' ಎಂದು ಕೋರಿತ್ತು. ಈ ಬೇಡಿಕೆಯನ್ನು ಕೇಂದ್ರ ಸರ್ಕಾರವೇ ರೂಪಿಸಿದ್ದ 'ಬರ ನಿರ್ವಹಣಾ ಕೈಪಿಡಿ'ಯ ನಿಯಮಗಳ ಅನ್ವಯವೇ ಸಲ್ಲಿಸಲಾಗಿತ್ತು.

ನಿಯಮದ ಪ್ರಕಾರ, ರಾಜ್ಯ ಸರ್ಕಾರವು ವೈಜ್ಞಾನಿಕ ವಿಧಾನಗಳ ಮೂಲಕ ಅಧ್ಯಯನ ನಡೆಸಿ ತೀವ್ರ ಬರ ಇದೆ ಎಂಬುದನ್ನು ಘೋಷಿಸಬೇಕು. ಹಾಗೆ ಘೋಷಿಸಿದ ಒಂದು ವಾರದ ಒಳಗೆ ಅಗತ್ಯವಿರುವ ಪರಿಹಾರಗಳಿ-ಗಾಗಿ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಬೇಕು. ನರೇಗಾ ಅಡಿ ನೋಂದಣಿ ಮಾಡಿಕೊಂಡಿರುವ ಕುಟುಂಬಗಳ ಸಂಖ್ಯೆ, ಜಾಬ್ ಕಾರ್ಡ್ ಹೊಂದಿರುವವರ ಸಂಖ್ಯೆ, ಉದ್ಯೋಗಕ್ಕೆ ಇರುವ ಬೇಡಿಕೆ ಮೊದಲಾದ ವಿವರಗಳನ್ನು ತಾಲ್ಲೂಕುವಾರು ಪಟ್ಟಿಯ ರೂಪದಲ್ಲಿ ಒದಗಿಸಬೇಕು. ರಾಜ್ಯ ಸರ್ಕಾರವು ಸಲ್ಲಿಸಿರುವ ಮನವಿಯಲ್ಲಿ ಈ ವಿವರಗಳೆಲ್ಲವೂ ಇದೆ.

ಈ ವರ್ಷದ್ದೇ ನೂರಾರು ಕೋಟಿ ಬಾಕಿ

2023–24ನೇ ಆರ್ಥಿಕ ವರ್ಷದಲ್ಲಿ ಕರ್ನಾಟಕದಲ್ಲಿ ನರೇಗಾ ಅಡಿ ಕೈಗೊಳ್ಳಲಾದ ಕಾಮಗಾರಿಗಳ ಕೂಲಿ ಮತ್ತು ಸಾಮಗ್ರಿ ವೆಚ್ಚದಲ್ಲಿ ಕೇಂದ್ರ ಸರ್ಕಾರವು ₹950 ಕೋಟಿಗಿಂತಲೂ ಹೆಚ್ಚು ಬಾಕಿ ಉಳಿಸಿಕೊಂಡಿದೆ. ಇದೇ ಬುಧವಾರ (ಫೆಬ್ರುವರಿ 7) ಹಣಕಾಸು ಸಚಿವಾಲಯವು ರಾಜ್ಯಸಭೆಗೆ ನೀಡಿದ ಲಿಖಿತ ಉತ್ತರದಲ್ಲಿ ಈ ಮಾಹಿತಿ ಇದೆ.





2023–24ನೇ ಸಾಲಿನಲ್ಲಿ ಕರ್ನಾಟಕಕ್ಕೆ ನರೇಗಾ ಯೋಜನೆ ಅಡಿ ಒಟ್ಟು 13 ಕೋಟಿ ಮಾನವ ದಿನಗಳಷ್ಟು (ಎಂಟು ಗಂಟೆಗಳ ಒಂದು ಕೆಲಸವನ್ನು ಒಂದು ಮಾನವ ದಿನ ಎಂದು ಪರಿಗಣಿಸಲಾಗುತ್ತದೆ. 100 ಮಂದಿ ಒಂದೇ ದಿನದಲ್ಲಿ ಎಂಟು ತಾಸು ಕೆಲಸ ಮಾಡಿದರೆ, ಅದನ್ನು 100 ಮಾನವ ದಿನಗಳು ಎಂದು ಪರಿಗಣಿಸಲಾಗುತ್ತದೆ) ಉದ್ಯೋಗವನ್ನು ಕೇಂದ್ರ ಸರ್ಕಾರವು ಹಂಚಿಕೆ ಮಾಡಿತ್ತು. ತೀವ್ರ ಬರದ ಸ್ಥಿತಿ ಇರುವ ಕಾರಣದಿಂದ ರಾಜ್ಯ ಸರ್ಕಾರವು ಈಗಾಗಲೇ 12.40 ಕೋಟಿ ಮಾನವ ದಿನಗಳಷ್ಟು ಉದ್ಯೋಗವನ್ನು ಒದಗಿಸಿದೆ. ಈ ಆರ್ಥಿಕ ವರ್ಷದ ಅಂತ್ಯದವರೆಗೆ ರಾಜ್ಯದ ಜನರಿಗೆ ಉದ್ಯೋಗ ಖಾತರಿಯನ್ನು ಒದಗಿಸಲು ಇನ್ನೂ ಹೆಚ್ಚುವರಿಯಾಗಿ 5 ಕೋಟಿ ಮಾನವ ದಿನಗಳಷ್ಟು ಕೆಲಸ ಒದಗಿಸಬೇಕು ಎಂದು ಮನವಿ ಮಾಡಿತ್ತು.

ಈ ಬಗ್ಗೆ ಮನವಿ ಸಲ್ಲಿಸಿದ ನಂತರ ಕೇಂದ್ರ ತಂಡವು ರಾಜ್ಯಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಆನಂತರದ ಏಳು ದಿನಗಳಲ್ಲಿ ಆ ತಂಡವು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕು. ನಂತರದ ಒಂದು ತಿಂಗಳೊಳಗೆ ಕೇಂದ್ರ ಸರ್ಕಾರವು ಪರಿಹಾರವನ್ನು ಒದಗಿಸಬೇಕು. ನರೇಗಾ ಅಡಿ ಉದ್ಯೋಗದ ದಿನಗಳನ್ನು ವಿಸ್ತರಿಸಲೂ ಇದೇ ನಿಯಮಗಳು ಮತ್ತು ಕಾಲಮಿತಿ ಅನ್ವಯವಾಗುತ್ತದೆ. ನರೇಗಾವನ್ನು ವಿಸ್ತರಿಸಿ ಎಂದು 2023ರ ಸೆಪ್ಟೆಂಬರ್‌ನಲ್ಲೇ ರಾಜ್ಯ ಸರ್ಕಾರ ಮನವಿ ಸಲ್ಲಿಸಿದೆ. ಆನಂತರ ಹಲವು ಬಾರಿ ಮತ್ತೆ ಮನವಿ ಮಾಡಿಕೊಂಡಿದೆ. ಆದರೆ ಕೇಂದ್ರ ಸರ್ಕಾರ ನರೇಗಾವನ್ನು ವಿಸ್ತರಿಸಲು, ಕರ್ನಾಟಕದ ಜನರಿಗೆ ಉದ್ಯೋಗ ಭದ್ರತೆಯನ್ನು ವಿಸ್ತರಿಸಲು ಈವರೆಗೆ ಅನುಮತಿ ನೀಡಿಲ್ಲ.

ಆಗ ನೀಡಿದ್ದು, ಈಗೇಕೆ ನೀಡುತ್ತಿಲ್ಲ?

2018–19ನೇ ಸಾಲಿನಲ್ಲಿ ರಾಜ್ಯದ 156 ತಾಲ್ಲೂಕುಗಳಲ್ಲಿ ಬರ ಇದೆ ಎಂದು ಆಗಿನ ಜೆಡಿಎಸ್‌-ಕಾಂಗ್ರೆಸ್ ನೇತೃತ್ವದ ರಾಜ್ಯದ ಮೈತ್ರಿ ಸರ್ಕಾರ ಘೋಷಿಸಿತ್ತು. 31 ತಾಲ್ಲೂಕುಗಳಲ್ಲಿ ನರೇಗಾ ಯೋಜನೆಯನ್ನು 150 ದಿನಗಳವರೆಗೆ ವಿಸ್ತರಿಸುವಂತೆ 2019ರ ಜನವರಿ 28ರಂದು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿತ್ತು. ಕೇಂದ್ರ ಸರ್ಕಾರವು 15 ದಿನಗಳಲ್ಲಿ ಆ ಮನವಿಗೆ ಸ್ಪಂದಿಸಿ ಫೆಬ್ರುವರಿ 13ರಂದು ನರೇಗಾ ವಿಸ್ತರಣೆಗೆ ಅನುಮತಿ ನೀಡಿತ್ತು. ಅದಕ್ಕೂ ಮುನ್ನ ಮುಂಗಾರು ಅವಧಿಯಲ್ಲಿ ತೀವ್ರ ಬರ ಎದುರಿಸಿದ್ದ 125 ತಾಲ್ಲೂಕುಗಳಲ್ಲೂ ನರೇಗಾವನ್ನು 150 ದಿನಗಳಿಗೆ ವಿಸ್ತರಿಸಲಾಗಿತ್ತು.

2023ರ ಸೆಪ್ಟೆಂಬರ್‌ನಲ್ಲಿ ಸಲ್ಲಿಸಿದ್ದ ಮನವಿಯ ಪ್ರಕಾರ ರಾಜ್ಯದ 195 ತಾಲ್ಲೂಕುಗಳಲ್ಲಿ 42.3 ಲಕ್ಷ ಜನರು ನರೇಗಾ ಅಡಿ ಉದ್ಯೋಗಕ್ಕೆ ಅರ್ಜಿ ಸಲ್ಲಿಸಿದ್ದರು. ಅಷ್ಟು ಜನರಿಗೆ ಒಟ್ಟು 7.32 ಕೋಟಿ ಮಾನವ ದಿನಗಳಷ್ಟು ಉದ್ಯೋಗವನ್ನು ನೀಡಬೇಕು ಎಂದು ರಾಜ್ಯ ಸರ್ಕಾರ ವಿವರವನ್ನು ನೀಡಿತ್ತು. ಆ ಮನವಿ ಸಲ್ಲಿಸಿ ಐದು ತಿಂಗಳು ಕಳೆದಿವೆ. ಆದರೆ ಕೇಂದ್ರ ಸರ್ಕಾರ ಈವರೆಗೆ ನರೇಗಾವನ್ನು ವಿಸ್ತರಿಸಿಲ್ಲ.



ಆಧಾರ: ಬರ ನಿರ್ವಹಣೆ ಕೈಪಿಡಿ–2010, ಬರ ನಿರ್ವಹಣೆ ಕೈಪಿಡಿ ಮಾರ್ಗಸೂಚಿಗಳು 2016 ಮತ್ತು 2020, 2023ರ ಬರ: ರಾಷ್ಟ್ರೀಯ ವಿಪತ್ತು ನಿರ್ವಹಣಾ ಕಾರ್ಯಯೋಜನೆ, ಬರ ನಿರ್ವಹಣಾ ಅಂತರ ಸಚಿವಾಲಯ ತಂಡಕ್ಕೆ ಮಾರ್ಗಸೂಚಿಗಳು–2023, ಕರ್ನಾಟಕ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ ಮನವಿಗಳು, ಹಣಕಾಸು ಸಚಿವಾಲಯವು ರಾಜ್ಯಸಭೆಗೆ ನೀಡಿದ ಲಿಖಿತ ಉತ್ತರಗಳು

ಇಂದು ಏಳು ಸಿನಿಮಾ ತೆರೆಗೆ



ವಿನಯ್ ರಾಜ್‌ಕುಮಾರ್

ಮತ್ತೊಮ್ಮೆ ಪ್ರೇಮಕಥೆ ಹೆಣೆದ ಸುನಿ: 'ಸಿಂಪಲ್ಲಾಗ್ ಒಂದ್ ಲವ್‌ಸ್ಟೋರಿ' ಮೂಲಕ ಪ್ರೇಕ್ಷಕರನ್ನು ಸೆಳೆದಿದ್ದ ನಿರ್ದೇಶಕ ಸಿಂಪಲ್ ಸುನಿ ಇದೀಗ ಮತ್ತೊಂದು ಸರಳವಾದ ಪ್ರೇಮಕಥೆ ಹಿಡಿದು ಬಂದಿದ್ದಾರೆ. ವಿನಯ್ ರಾಜ್‌ಕುಮಾರ್ ನಟನೆಯ 'ಒಂದು ಸರಳ ಪ್ರೇಮಕಥೆ' ತೆರೆಕಂಡಿದೆ. ಮ್ಯೂಸಿಕಲ್ ಲವ್‌ಸ್ಟೋರಿ ಸಬ್ಜೆಕ್ಟ್ ಒಳಗೊಂಡ ಈ ಚಿತ್ರದ ಮೂಲಕ ತಮಿಳಿನ ಹಿಟ್ ಸಿನಿಮಾ 'ವಿಕ್ರಮ್'ನಲ್ಲಿ ನಟಿಸಿದ್ದ ಸ್ವತಿಷ್ಠ ಕೃಷ್ಣನ್ ಚಂದನವನ ಪ್ರವೇಶಿಸುತ್ತಿದ್ದಾರೆ. 'ರಾಧಾ ಕೃಷ್ಣ' ಧಾರಾವಾಹಿ ಖ್ಯಾತಿಯ ಮಲ್ಲಿಕಾ ಸಿಂಗ್ ಕೂಡಾ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಚಿತ್ರಕ್ಕೆ ಪ್ರಸನ್ನ ಕಥೆ ಬರೆದಿದ್ದು, ಚಿತ್ರಕಥೆ, ಸಂಭಾಷಣೆ ಬರೆದು ಸುನಿ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ನಟ ರಾಘವೇಂದ್ರ ರಾಜ್‌ಕುಮಾರ್ ಅವರು ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ಮಾಯೆ ಅಂಡ್ ಕಂಪನಿ: ಸಾಮಾಜಿಕ ಮಾಧ್ಯಮಗಳು ತಂದೊಡ್ಡುವ ಅನಾಹುತಗಳು, ಸೈಬರ್ ಅಪರಾಧಗಳ ಕುರಿತು ಈ ಸಿನಿಮಾದಲ್ಲಿ ಕಥೆ ಹೇಳಿದ್ದಾರೆ ನಿರ್ದೇಶಕ ಸಂದೀಪ್ ಕುಮಾರ್. ಎಂ.ಎನ್. ರವೀಂದ್ರರಾವ್ ತಮ್ಮ ಮಾತೃಶ್ರೀ ವಿಷನ್ ಸಂಸ್ಥೆಯ ಮೂಲಕ ಈ ಸಿನಿಮಾ ನಿರ್ಮಿಸಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಒಂದು ಪೋಸ್ಟ್ ಹಾಕುವುದರಿಂದ ಏನೇನೆಲ್ಲ ಅನಾಹುತ ಆಗುತ್ತದೆ ಎಂಬ ವಿಷಯವನ್ನು ಇಟ್ಟುಕೊಂಡು ಚಿತ್ರದ ಕಥೆ ಹೆಣೆಯಲಾಗಿದೆ. ಅನುಷಾ ನಾಯಕಿಯಾಗಿ ನಟಿಸಿದ್ದಾರೆ. ತಾರಾಗಣದಲ್ಲಿ ಅರ್ಜುನ್ ಕಿಶೋರ್‌ಚಂದ್ರ, ಯಶಶ್ರೀ, ಯಾಸೀನ್ ಮುಂತಾದವರು ನಟಿಸಿದ್ದಾರೆ.

ಜೂನಿ: ಪೃಥ್ವಿ ಅಂಬಾರ್ ಹಾಗೂ ರಿಷಿಕಾ ನಟಿಸಿರುವ 'ಜೂನಿ' ವಿಭಿನ್ನ ಕಥಾಹಂದರದಿಂದಲೇ ವೀಕ್ಷಕರ ಗಮನಸೆಳೆದಿದೆ. ಚಿತ್ರಕ್ಕೆ ವೈಭವ್ ಮಹಾದೇವ್ ಆ್ಯಕ್ಷನ್ ಕಟ್ ಹೇಳಿದ್ದು, ಡಿಸೋಸಿಯೇಟಿವ್ ಐಡೆಂಟಿಟಿ ಕಾಯಿಲೆಯಿಂದ ಬಳಲುತ್ತಿರುವ ನಾಯಕಿ ಸುತ್ತ ಚಿತ್ರದ ಕಥೆಯಿದೆ.

ನಗುವಿನ ಹೂಗಳ ಮೇಲೆ: 'ಕೆಂಪಿರ್ವೆ' ಸಿನಿಮಾ ಖ್ಯಾತಿಯ ವೆಂಕಟ್ ಭಾರದ್ವಾಜ್ ನಿರ್ದೇಶನದ ಹಾಗೂ ಅಭಿದಾಸ್ ಮತ್ತು ಶರಣ್ಯ ಶೆಟ್ಟಿ ಜೋಡಿಯಾಗಿ ನಟಿಸಿರುವ ಸಿನಿಮಾ ಇದು. ಶ್ರೀ ಸತ್ಯಸಾಯಿ ಆರ್ಟ್ಸ್ ಲಾಂಛನದಲ್ಲಿ ಕೆ.ಕೆ ರಾಧಾಮೋಹನ್ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ. ವೆಂಕಟ್ ಭಾರದ್ವಾಜ್ ಅವರೇ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದಿದ್ದಾರೆ.

ಇ-ಮೇಲ್: ಈ ಮಹಿಳಾ ಪ್ರಧಾನ ಚಿತ್ರದಲ್ಲಿ ನಾಯಕಿಯಾಗಿ ರಾಗಿಣಿ ದ್ವಿವೇದಿ ನಟಿಸಿದ್ದಾರೆ. ಎಸ್. ಆರ್. ಫಿಲಂ ಫ್ಯಾಕ್ಟರಿ ಬ್ಯಾನರ್ ಅಡಿಯಲ್ಲಿ ನಿರ್ಮಾಣಗೊಂಡಿರುವ ಈ ಚಿತ್ರ ತಮಿಳು ಹಾಗೂ ಕನ್ನಡ ಭಾಷೆಗಳಲ್ಲಿ ನಿರ್ಮಾಣವಾಗಿದೆ. ಆನ್‌ಲೈನ್ ಆಟಗಳಿಂದಾಗಿ ಆಗುವ ಪರಿಣಾಮಗಳನ್ನು ನಿರ್ದೇಶಕರು ಈ ಚಿತ್ರದಲ್ಲಿ ತೋರಿಸಿದ್ದಾರೆ. ಮುರುಗ ಅಶೋಕ್ ನಾಯಕನಾಗಿ ಬಣ್ಣಹಚ್ಚಿದ್ದಾರೆ.

ಜಸ್ಟ್ ಪಾಸ್

ಈ ಹಿಂದೆ 'ದೊಡ್ಡಹಟ್ಟಿ ಬೋರೇಗೌಡ' ಎಂಬ ಚಿತ್ರವನ್ನು ನಿರ್ದೇಶಿಸಿದ್ದ ಕೆ.ಎಂ. ರಘು ನಿರ್ದೇಶನದ ಸಿನಿಮಾ ಇದು. ಜಸ್ಟ್ ಪಾಸ್ ಆದ ವಿದ್ಯಾರ್ಥಿಗಳಿಗೆಂದೇ ತೆರೆದಿರುವ ಕಾಲೇಜೊಂದರ ಸುತ್ತ ಚಿತ್ರದ ಕಥೆಯಿದೆ. ನಟ ರಂಗಾಯಣ ರಘು ಚಿತ್ರದಲ್ಲಿ ಪ್ರಾಂಶುಪಾಲರ ಪಾತ್ರಕ್ಕೆ ಬಣ್ಣಹಚ್ಚಿದ್ದಾರೆ. ಶ್ರೀ ಈ ಚಿತ್ರದ ನಾಯಕ. ಪ್ರಣತಿ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ.

ರಾಜವರ್ಧನ್‌ನ 'ಪ್ರಣಯಂ'

'ಬಿಚ್ಚುಗತ್ತಿ' ಖ್ಯಾತಿಯ ರಾಜವರ್ಧನ್, ನೈನಾ ಗಂಗೂಲಿ ನಟಿಸಿರುವ ಈ ಸಿನಿಮಾ ಮಾಸ್ ಪ್ರೇಮಕಥೆ ಜಾನರ್‌ನಲ್ಲಿದೆ. ಪರಮೇಶ್ ಅವರ ಬ್ಯಾನರ್‌ನಲ್ಲಿ ಮೂಡಿಬಂದಿರುವ ಮತ್ತೊಂದು ಪ್ರೇಮಕಥೆ ಇದಾಗಿದೆ. ಪರಮೇಶ್ ಅವರೇ ಕಥೆ ಬರೆದು ನಿರ್ಮಿಸಿರುವ ಈ ಚಿತ್ರಕ್ಕೆ ಎಸ್. ದತ್ತಾತ್ರೇಯ ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದಾರೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಶುಕ್ರವಾರ ಫೆಬ್ರುವರಿ 9, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪುಷ್ಯ ಕೃಷ್ಣ ಚತುರ್ದಶಿ ಗಂ. 08-03 ನಂತರ ಅಮಾವಾಸ್ಯೆ ಗಂ. 28-29 **ನಕ್ಷತ್ರ:** ಶ್ರವಣ ಗಂ. 23-29 **ಯೋಗ:** ವ್ಯಾತೀಪತ ಗಂ. 19-07 **ಕರಣ:** ಶಕುನಿ ಗಂ. 08-03, ಮಕರ ಮಾಸದ 26 ನೇ ದಿನ, **ಮಳೆನಕ್ಷತ್ರ:** ಧನಿಷ್ಠಾ 1, **ರಾಹುಕಾಲ:** ಬೆಳಿಗ್ಗೆ 10-30 – 12-00
ಸೂರ್ಯೋದಯ: 06-59 **ಸೂರ್ಯಾಸ್ತ:** 06-30
ಮುಸ್ಲಿಂ ದಿನಾಂಕ: 28 ರಜಬ್
ಅದೃಷ್ಟ ಸಂಖ್ಯೆ: 11, 6

ಮೇಷ: ವೃತ್ತಿಗೆ ಸಂಬಂಧಿಸಿದಂತೆ ಕೆಲವೊಂದು ಉಪಯುಕ್ತ ಮಾಹಿತಿಗಳು ಲಭಿಸುವವು. ಕೋರ್ಟ್ ವ್ಯವಹಾರದಲ್ಲಿ ದೇವರ ಕೃಪೆಯಿಂದ ನಿಮ್ಮ ನಿರೀಕ್ಷೆಗೂ ಮೀರಿದ ಜಯ ಸಿಗುವುದು. ದಂತ ಬೇನೆ ಕಾಣಬಹುದು.

ವೃಷಭ: ಸಂಕಷ್ಟಕ್ಕೆ ಸಿಲುಕಿರುವ ನಿಮಗೆ ಅಪರಿಚಿತರಿಂದ ಸಹಾಯ ಹಸ್ತಗಳು ಪ್ರಾಪ್ತಿಯಾಗುವುದು. ಸಂಶೋಧನಾ ವೃತ್ತಿಯಲ್ಲಿರುವವರಿಗೆ ಈ ದಿನ ಅಧ್ಯಯನಕ್ಕೆ ಸುಸಮಯ. ವಾಹನ ಚಾಲನೆ ವೇಳೆ ಜಾಗ್ರತರಾಗಿರಿ.

ಮಿಥುನ: ಯಾವುದೇ ಸಂಕೋಚವಿಲ್ಲದೆ ನೂತನ ಕಾರ್ಯಭಾರವನ್ನು ಒಪ್ಪಿಕೊಳ್ಳಿ. ಏಕೆಂದರೆ ನಿಮ್ಮ ಮೇಲಿರುವ ನಂಬುಗೆ ಮತ್ತು ವಿಶ್ವಾಸದಿಂದಾಗಿ ಈ ಅವಕಾಶಗಳು ನಿಮ್ಮದಾಗಲಿವೆ. ವಿಲಾಸಿ ಜೀವನದ ಸುಖ ಅನುಭವಿಸಬಹುದು.

ಕರ್ಕಾಟಕ: ಹೊಸ ಜೀವನ ಪ್ರಾರಂಭವಾಗುವುದರಿಂದ ದೇವತಾ ಕಾರ್ಯಗಳನ್ನು ಜರುಗಿಸುವ ಬಗ್ಗೆ ಯೋಚಿಸಿ. ನಿಮ್ಮ ಆರೋಗ್ಯದಲ್ಲಿ ಸ್ವಲ್ಪ ಮಟ್ಟಿಗೆ ಏರುಪೇರಾದರೂ ಆತಂಕ ಬೇಡ. ಕ್ರೀಡೆಗಳಲ್ಲಿ ಹೆಚ್ಚಿನ ಸಮಯ ಕಳೆಯುವಿರಿ.

ಸಿಂಹ: ನಿಮ್ಮ ತಂದೆಯ ಕನಸಾದ ಒಂದು ಹೊಸ ಯೋಜನೆಯನ್ನು ನೀವು ಪ್ರಾರಂಭಿಸುವಿರಿ. ಸಂಸ್ಥೆಯೊಂದರ ಸಲಹೆಗಾರರಾಗಿ ನೇಮಕಗೊಂಡಿರುವ ನಿಮ್ಮಿಂದ ಈ ದಿನ ಸಂಸ್ಥೆಗೆ ನಷ್ಟ ಸಂಭವಿಸುವಂತಾಗಬಹುದು ಜಾಗ್ರತರಾಗಿರಿ.

ಕನ್ಯಾ: ಕೆಲಸ ಕಾರ್ಯದಲ್ಲಿ ಸಮಾನ ಮನಸ್ಕರು ಸಿಗುವುದರಿಂದ ವ್ಯವಸ್ಥಿತವಾಗಿ ಮಾತುಕತೆ ನಡೆದು ಕಾರ್ಯಭಾರವು ಸುಗಮವಾಗುತ್ತದೆ. ನಿಮ್ಮ ಪರೋಪಕಾರ ಮನೋಭಾವದಿಂದಾಗಿ ಯಶಸ್ಸು ಲಭಿಸಲಿದೆ.

ತುಲಾ: ಆಲಸ್ಯಕರ ದೇಹ ಸ್ಥಿತಿಯಿಂದ ಕೆಲಸ ಕಾರ್ಯ ವಿಳಂಬಗತಿಯಲ್ಲಿ ಸಾಗಲಿದೆ. ಆದಾಯ ಸ್ಥಿರವಾಗಿ ಇರುವುದು. ಮನಸ್ಸಿನಲ್ಲಿ ಏಕಾಗ್ರತೆಯಿಂದ ಶಿವನ ನಾಮ ಸ್ಮರಣೆ ಅಥವಾ ಧ್ಯಾನ ಮಾಡುವುದು ಒಳ್ಳೆಯದು.

ವೃಶ್ಚಿಕ: ಅಪರೂಪದ ಮತ್ತು ಸಂತೋಷಮಯವಾದ ಔತಣ ಕೂಟವೊಂದರಲ್ಲಿ ಭಾಗವಹಿಸುವ ಸಲುವಾಗಿ ಆಮಂತ್ರಣ ಬರಲಿದೆ. ಕಾರ್ಮಿಕ ಜನರಿಗೆ ಆಡಳಿತ ವರ್ಗದವರಿಂದ ಅನೇಕ ಅನುಕೂಲಗಳು ಉಂಟಾಗಲಿವೆ.

ಧನು: ದಾಖಲೆ ಪತ್ರಗಳನ್ನು ಬರೆಸುವ ಸಂದರ್ಭವಿದ್ದಲ್ಲಿ, ಸಂಖ್ಯೆಗಳಲ್ಲಿ ಅಥವಾ ವಾಕ್ಯಗಳಲ್ಲಿ ಹೆಚ್ಚಿನ ಗಮನವಹಿಸಿ ಮತ್ತು ಪರಿಣತರ ಅನುಭವವನ್ನು ಕೇಳಿ ಮುನ್ನುಗ್ಗಿ. ವಾದವಿವಾದಗಳಿಗೆ ತೆರೆ ಎಳೆಯುವ ಪ್ರಯತ್ನ ಮಾಡಿ.

ಮಕರ: ನಿಮ್ಮ ಪರೋಪಕಾರದಂಥ ಒಳ್ಳೆಯ ನಿರ್ಧಾರಗಳಿಂದ ಸಹೋ-ದ್ಯೋಗಿಗಳಿಗೆ ಸಂತಸವಾಗುವುದು. ಹೂಡಿಕೆ ವಿಚಾರದಲ್ಲಿ ಎಚ್ಚರಿಕೆಯಿಂದ ತೀರ್ಮಾನ ಕೈಗೊಳ್ಳಿ. ಭವಿಷ್ಯದ ಕುರಿತು ಗಂಭೀರ ಚರ್ಚೆ ನಡೆಸುವಿರಿ.

ಕುಂಭ: ಬಹಳ ದಿನದ ನಂತರ ಸಹೋದರಿ ಆಗಮನ ಮತ್ತು ಭೇಟಿಯು ಮನೆಯ ಸಂತೋಷಕ್ಕೆ ಕಾರಣವಾಗುತ್ತದೆ. ಉದ್ಯೋಗಕ್ಕೆ ಸಂಬಂಧಿಸಿದಂತೆ ಬಾಕಿ ಇರುವ ಕೆಲಸಗಳನ್ನು ಈ ದಿನದಲ್ಲಿ ಪೂರ್ತಿಗೊಳಿಸುವ ಪ್ರಯತ್ನ ಮಾಡಿ.

ಮೀನ: ಸಮಾಜದಲ್ಲಿ ಅದರಲ್ಲೂ ವಿಶೇಷವಾಗಿ ಹೆಂಡತಿಯ ಬಳಗದಲ್ಲಿ ಆದಷ್ಟು ಮೌನವಾಗಿರಲು ನಿಶ್ಚಯಿಸಿ. ನೂತನ ವಾಹನ ಕೊಳ್ಳುವುದನ್ನು ಸ್ವಲ್ಪ ದಿನಗಳ ಮಟ್ಟಿಗೆ ಮುಂದೂಡುವುದು ಎಲ್ಲಾ ರೀತಿಯಲ್ಲೂ ಉತ್ತಮ.

ಕವಿ ಮತ್ತು ಪ್ರಭುತ್ವ



ನುಡಿ ಬೆಳಗು



ಪ್ರೊ.ಎಂ. ಕೃಷ್ಣೇಗೌಡ

ಸಾವಿರದ ಒಂಬೈನೂರ ಎಪ್ಪತ್ತನೆಯ ದಶಕ. ಆಗ ದೇವರಾಜ ಅರಸು ಅವರು ರಾಜ್ಯದ ಮುಖ್ಯಮಂತ್ರಿ ಆಗಿದ್ದರು.

ಒಮ್ಮೆ ಮುಖ್ಯಮಂತ್ರಿಯವರು ಧಾರವಾಡಕ್ಕೆ ಹೋಗಿದ್ದರು. ಧಾರವಾಡಕ್ಕೆ ಬಂದಮೇಲೆ ಸಾಧನಕೇರಿಗೆ ಹೋಗಿ ವರಕವಿ ದ. ರಾ. ಬೇಂದ್ರೆ ಅವರನ್ನು ಭೇಟಿಯಾಗಿ ಬರಬೇಕೆನ್ನಿಸಿತು ಅವರಿಗೆ. ಕವಿಗಳು ಮನೆಯಲ್ಲೇ ಇದ್ದಾರೆಂಬುದನ್ನು ಖಚಿತಪ-ಡಿಸಿಕೊಂಡು ಮುಖ್ಯಮಂತ್ರಿಯವರು ಅವರ ಮನೆಗೆ ಹೋದರು. ಇದ್ದಕ್ಕಿದ್ದಂತೆ ಮುಖ್ಯಮಂತ್ರಿಯವರು ಮನೆಬಾಗಿಲಿಗೆ ಬಂದದ್ದನ್ನು ಕಂಡು ಬೇಂದ್ರೆಯವರಿಗೆ ಅತೀವ ಆನಂದವಾಯಿತು. ಮುಖ್ಯಮಂತ್ರಿ ಅವರನ್ನು ಸ್ವಾಗತಿಸಿ ಪ್ರೀತಿಯಿಂದ ಕೈಹಿಡಿದು ಮನೆಯೊಳಗೆ ಕರೆದುಕೊಂಡು ಹೋದರು. ಆದರೋಪಚಾರ-ಗಳೆಲ್ಲಾ ಆದವು. ಆಮೇಲೆ ಮುಖ್ಯಮಂತ್ರಿ ಮತ್ತು ವರಕವಿ ಇಬ್ಬರೂ ಸುಮಾರು ಹೊತ್ತು ಕೂತು ಅದೂ ಇದೂ ಮಾತಾಡಿದರು. ಹರಟಿದರು. ಇಬ್ಬರಿಗೂ ಸಂತೋಷವಾಯಿತು. ಆಮೇಲೆ 'ನಾನಿನ್ನು ಬರಲೇ?' ಎಂದು ಮುಖ್ಯಮಂತ್ರಿ ಅರಸು ಅವರು ಎದ್ದು ನಿಂತು ನಮಸ್ಕರಿಸಿದರು.

ಬೇಂದ್ರೆಯವರು ಅವರನ್ನು ಅದೊಂದು ವಾತ್ಸಲ್ಯ ಭಾವದಿಂದ ಮುಟ್ಟಿ ಮೈದಡವಿ ಬಾಗಿಲಿಂದಾಚೆಯ-ವರೆಗೂ ಕಳುಹಿಸಲು ಬಂದರು. ಆಗ ಅರಸು ಅವರು ಒಂದು ಕ್ಷಣ ನಿಂತು 'ಕವಿಗಳೆ, ಮುಖ್ಯಮಂತ್ರಿಯಾಗಿ ನಾನು ಇಂದು ನಿಮ್ಮ ಮನೆಗೆ ಬಂದಿದ್ದೇನೆ. ಬಂದ ಹಾಗೇ ಮರಳಿ ಹೋಗಲು ನನಗೆ ಇಷ್ಟವಿಲ್ಲ. ನನಗೆ ಈಗ ಅಧಿಕಾರವಿದೆ. ಅಧಿಕಾರವಿದ್ದಾಗ ಏನಾದರೂ ಮಾಡಬೇಕು. ನಾನೇನು ಮಾಡಬೇಕು ನಿಮಗೆ ಹೇಳಿ. ಮಾಡುತ್ತೇನೆ'.

ಮುಖ್ಯಮಂತ್ರಿಯವರು ಹಾಗೆ ಅಂದಾಗ ಬೇಂದ್ರೆಯವರು ಒಮ್ಮೆ ಗೊಳ್ಳನೆ ನಕ್ಕರು. ಅವರು ನಕ್ಕು ನಿಂತ ಮೇಲೆ ಬಂದ ಉತ್ತರ ಮಾತ್ರ ಅಲ್ಲಿದ್ದವ-ರಿಗೆಲ್ಲಾ ಅನಿರೀಕ್ಷಿತವಾಗಿತ್ತು.

'ಹೌದಪಾ, ನೀ ಮುಖ್ಯಮಂತ್ರಿನss ಖರೆ. ಇರಬೌದು, ಆದರ ಕವೀಗೇನ್ ಮಾಡಂಗದೀ ನೀ? ಕವೀ ಅವನ ಪಾಡಿಗ ಅವನು ಬರಕೋಂತ ಇರಲಿ ಬಿಡು.... ನೀ ಏನರ ಮಾಡಬೇಕಂದರ ಮಂದೀಗ ಮಾಡು. ಈಗ ಹೋಗಿ ಬಾ, ಒಳ್ಳೇದಾಗಲಿ'.

ಮುಖ್ಯಮಂತ್ರಿಯವರು ಶಿರಬಾಗಿ ನಮಸ್ಕರಿಸಿ ಕಾರು ಹತ್ತಿದರು.

ಇದನ್ನು ಬೇಂದ್ರೆಯವರ ಸ್ವಾಭಿಮಾನ ಎಂದಷ್ಟೇ ಹೇಳಿಬಿಟ್ಟರೆ ಸಾಲದು. ಕವಿ ಮತ್ತು ಪ್ರಭುತ್ವದ ಸಂಬಂಧ ಹೇಗಿರಬೇಕೆಂಬುದಕ್ಕೆ ಇದು ವರಕವಿ ಬೇಂದ್ರೆ ಮಾಡಿದ ವ್ಯಾಖ್ಯಾನ ಅನ್ನಬಹುದೇನೋ.

ಪದಬಂಧ 5586


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಹಣಕ್ಕಾಗಿ ನಡೆದ ಉಗ್ರವಾದ ಹೊಡೆದಾಟ (4)
3.ಅಂಗೈಯಿಂದ ಕೆನ್ನೆಗೆ ಕೊಡುವ ಏಟು (4)
5. ನಂಜಿನಿಂದ ಕೂಡಿದ ಸಂಗತಿ (3)
6.ಮೃತರಾದವರಿಗಾಗಿ ಮಾಡುವ ಅಪರಕ್ರಿಯೆ (4)
7.ನದಿ ಸಮುದ್ರಕ್ಕೆ ಸೇರುವೆಡೆಯ ಮೆಕ್ಕಲು ಭೂಮಿ (7)
10.ವಾರದ ಕೊನೆಗೆ ಬಂದಿರುವ ಗ್ರಾಮರಕ್ಷಕ (4)
11.ಅವನಿರುವ ಭೂಮಿ! (3)
13.ರಹಸ್ಯ ದಾರಿಯಿದು (4)
14.ಮರಮುಟ್ಟು ಇತ್ಯಾದಿಗಳನ್ನೆಲ್ಲಾ ನಾಶಮಾಡುವ ಕೀಟ (4)
15. ಒಂದಕ್ಕೊಂದು ಹೊಂದಿರುವುದು (4)

ಮೇಲಿಂದ ಕೆಳಕ್ಕೆ

1.ಹತ್ತಿರದಲ್ಲಿರುವ ಅರಳೆ (2)
2.ಹರ್ಷವಿಲ್ಲಿ ವಿರಳವಾಗಿ ಬಂದಿದೆ (3)
4.ಕುಟೀಲನು ವಾಸವಾಗಿರುವ ಗುಡಿಸಲು (3)
5.ರೀತಿಯು ಈ ವಿಧವಾಗಿ ಬಂದಿದೆ (3)
6.ಧಾನ್ಯ ಸಂಗ್ರಹಿಸುವ ಸ್ಥಳ (3)
8.ಪುಷ್ಕರಿಣಿ ಬಳಿ ಹೂಡಿದ ಸಂಪು (3)
9.ಸುಮ್ಮನಿರುವವನ ಬಂಗಾರ! (3)
10.ತರಗುಟ್ಟುತ್ತಾ ಹಿಡಿದಿರುವ ಒಣಗಿದ ವಸ್ತು (3)
12.ವನದಲ್ಲಿರುವ ಉಡುಗೆ (3)
13.ಉದ್ದೇಶ ಅಥವಾ ಗುರಿ (2)



5585ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪರಾಜಿತ 3.ವಿದ್ಯಾಲಯ
5.ಕವಿ 7.ಕೆರಿಸಿ
8.ನಳ 10.ಜಾತ್ರೆ
11.ಸಂಭ್ರಮ 13.ಕರ
15.ತತ್ವಜ್ಞಾನ 16.ಕರಂಡಕ

ಮೇಲಿಂದ ಕೆಳಕ್ಕೆ:
1.ಪದಕ 2.ತಡಿಕೆ
3.ವಿಲಾಸಿ 4.ಯಮಳ
6.ವಿಜಯಯಾತ್ರೆ 8.ನಯವಂಚಕ
10.ಜಾಗೃತ 11.ಸಂಧಾನ
12.ಮರುಕ 14.ರಸಿಕ

ಸುಡೊಕು 5971

2		6					5	
	4	7	5		6	3		2
3				2			6	
	2					9		4
			2	4	7			6
	7					5		
7		9			8		4	
4				3			8	1
	6		4		2	7		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5970 ಸುಡೊಕು

3	9	1	8	7	5	6	4	2
7	6	5	2	4	9	3	8	1
2	8	4	3	1	6	7	9	5
1	5	9	7	2	4	8	6	3
4	2	7	6	8	3	5	1	9
8	3	6	5	9	1	2	7	4
6	1	2	4	5	8	9	3	7
9	7	8	1	3	2	4	5	6
5	4	3	9	6	7	1	2	8

ಕಾರ್ಮಿಕರ ಕಾರ್ಡ್: ಹಾವೇರಿ ಜಿಲ್ಲೆಯಲ್ಲಿ 21,396 ಆಕ್ಷೇಪಣಾ ಅರ್ಜಿಗಳು ಸಲ್ಲಿಕೆ

ಎರಡು ಲಕ್ಷ ನಕಲಿ ಕಾರ್ಡ್ ರದ್ದತಿಗೆ ಕ್ರಮ

• ಸಿದ್ದು ಆರ್.ಜಿ.ಹಳ್ಳಿ

ಹಾವೇರಿ: ಜಿಲ್ಲೆಯಲ್ಲಿ ಕಟ್ಟಡ ಕಾರ್ಮಿಕರಿಗೆ ಸಂಬಂಧಿಸಿದ 2.23 ಲಕ್ಷ ನಕಲಿ ಕಾರ್ಡ್‌ಗಳು ತನಿಖೆಯಲ್ಲಿ ಪತ್ತೆಯಾಗಿದ್ದವು. ಇವುಗಳಲ್ಲಿ ಬರೋಬ್ಬರಿ 2 ಲಕ್ಷ ಅನರ್ಹ ಕಾರ್ಡ್‌ಗಳ ರದ್ದತಿಗೆ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಚಿಂತನೆ ನಡೆಸಿದೆ.

ಜಿಲ್ಲೆಯಲ್ಲಿ ಒಟ್ಟು 2.94 ಲಕ್ಷ ಕಾರ್ಮಿಕರ ಕಾರ್ಡ್‌ಗಳಿದ್ದು, ಶೇ 83ರಷ್ಟು ಅನರ್ಹರು ಕಾರ್ಮಿಕರ ಕಾರ್ಡ್ ಪಡೆದು ಸೌಲಭ್ಯ ಪಡೆಯುತ್ತಿದ್ದರು ಎಂಬುದು ತನಿಖೆಯಲ್ಲಿ ಗೊತ್ತಾಗಿತ್ತು. ಶಿಕ್ಷಕರು, ಪೊಲೀಸರು, ಖಾಸಗಿ ಕಂಪನಿ ನೌಕರರು, ವಾಹನ ಚಾಲಕರು, ಟೈಲರ್‌ಗಳು, ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು ಸೇರಿ ಸಾವಿರಾರು ಮಂದಿ ಸುಳ್ಳು ದಾಖಲೆ ಸೃಷ್ಟಿಸಿ, ಕಟ್ಟಡ ಕಾರ್ಮಿಕರ ಕಾರ್ಡ್‌ಗಳನ್ನು ಪಡೆದಿದ್ದಾರೆ ಎಂಬುದು ಬಹಿರಂಗವಾಗಿತ್ತು.



ಹಾವೇರಿ ಜಿಲ್ಲೆಯ ಸವಣೂರು ಕಾರ್ಮಿಕ ನಿರೀಕ್ಷಕರ ಕಚೇರಿಯಲ್ಲಿ ಗುರುವಾರ ಆಕ್ಷೇಪಣಾ ಅರ್ಜಿ ಸಲ್ಲಿಸಲು ಮುಗಿಬಿದ್ದಿದ್ದ ಕಾರ್ಮಿಕರು – ಪ್ರಜಾವಾಣಿ ಚಿತ್ರ

ನೈಜ ಕಟ್ಟಡ ಕಾರ್ಮಿಕರಲ್ಲದ ವ್ಯಕ್ತಿಗಳ ನೋಂದಣಿಯನ್ನು ರದ್ದುಪಡಿಸುವ ಸಂಬಂಧ ಹಾವೇರಿ ಜಿಲ್ಲೆಯ ಕಾರ್ಮಿಕ ನಿರೀಕ್ಷಕರ ಕಚೇರಿಗಳ ಸೂಚನಾ ಫಲಕ ಮತ್ತು ವೆಬ್‌ಸೈಟಿನಲ್ಲಿ ಮಾಹಿತಿ ಪ್ರಕಟಿಸಲಾಗಿತ್ತು. ಈ ಬಗ್ಗೆ ಆಕ್ಷೇಪಣೆ ಸಲ್ಲಿಸಲು ಫೆಬ್ರುವರಿ 1ರಿಂದ 8ರವರೆಗೆ ಅವಕಾಶ ಕಲ್ಪಿಸಲಾಗಿತ್ತು.

21 ಸಾವಿರ ಆಕ್ಷೇಪಣೆ ಅರ್ಜಿ: 2.23 ಲಕ್ಷ ನಕಲಿ ಕಾರ್ಡ್‌ಗಳ ರದ್ದತಿಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಬರೋಬ್ಬರಿ 21,396 ಆಕ್ಷೇಪಣಾ ಅರ್ಜಿಗಳು ಸಲ್ಲಿಕೆಯಾಗಿವೆ. ಕೊನೆಯ ದಿನವಾದ ಗುರುವಾರ ಕಾರ್ಮಿಕ ನಿರೀಕ್ಷಕರ ಕಚೇರಿಗಳ ಮುಂಭಾಗ ಅರ್ಜಿ ಸಲ್ಲಿಸಲು ಕಾರ್ಮಿಕರು ಮುಗಿಬಿದ್ದಿದ್ದರು. ಒಂದೇ ದಿನ 10,847 ಅರ್ಜಿಗಳು ಸಲ್ಲಿಕೆಯಾಗಿವೆ.

‘ಆಕ್ಷೇಪಣಾ ಅರ್ಜಿಗಳ ಜತೆ ಉದ್ಯೋಗದಾತರ ಮಾಹಿತಿ ಮತ್ತು ಕಾಮಗಾರಿ ವಿಳಾಸದ ಬಗ್ಗೆ ಸ್ಪಷ್ಟ ಮಾಹಿತಿ ನೀಡಲು ತಿಳಿಸಿದ್ದೆವು. 21,396 ಆಕ್ಷೇಪಣಾ ಅರ್ಜಿಗಳ ಮಾಹಿತಿಯನ್ನು ಕಂಪ್ಯೂಟರ್‌ನಲ್ಲಿ ದಾಖಲಿಸಿ, ಪರಿಶೀಲಿಸುತ್ತೇವೆ. ಅರ್ಹ ಮತ್ತು ಅನರ್ಹ ಕಾರ್ಡ್‌ಗಳನ್ನು ಪತ್ತೆ ಮಾಡಿ, ಷರಾ ಬರೆಯಬೇಕಿದೆ. ನಂತರ ಕಾರ್ಮಿಕ ಕಲ್ಯಾಣ ಮಂಡಳಿ ಸೂಚನೆ ಮೇರೆಗೆ ಮುಂದಿನ ಕ್ರಮ ಜರುಗಿಸುತ್ತೇವೆ’ ಎಂದು ಜಿಲ್ಲಾ ಕಾರ್ಮಿಕ ಅಧಿಕಾರಿ ಮಹೇಶ ಕುಳಲಿ ತಿಳಿಸಿದ್ದಾರೆ.

ಹಾವೇರಿ ಜಿಲ್ಲೆಯಲ್ಲಿ ಸ್ವೀಕೃತಿಯಾದ ಆಕ್ಷೇಪಣೆ ಅರ್ಜಿಗಳು

ತಾಲ್ಲೂಕು	ಅರ್ಜಿಗಳು
ಶಿಗ್ಗಾವಿ	7,105
ರಾಣೆಬೆನ್ನೂರು	3,416
ರಟ್ಟೀಹಳ್ಳಿ	140
ಹಿರೇಕೆರೂರು	651
ಹಾವೇರಿ	3,536
ಸವಣೂರು	1,074
ಬ್ಯಾಡಗಿ	1,105
ಹಾನಗಲ್	4,369
ಒಟ್ಟು	21,396

ತಪ್ಪಿತಸ್ಥ ಅಧಿಕಾರಿಗಳ ಮೇಲೂ ಕ್ರಮ ಕೈಗೊಳ್ಳಿ: ಕಾರ್ಮಿಕ ಸಂಘ

‘ಕಾರ್ಮಿಕರ ನಕಲಿ ಕಾರ್ಡ್‌ಗಳನ್ನು ರದ್ದು ಮಾಡುವ ಜತೆಗೆ, ನಕಲಿ ಕಾರ್ಡ್‌ಗಳಿಗೆ ಮಂಜೂರಾತಿ ನೀಡಿದ ತಪ್ಪಿತಸ್ಥ ಅಧಿಕಾರಿ ಮತ್ತು ಸಿಬ್ಬಂದಿ ವಿರುದ್ಧವೂ ಕ್ರಮ ಕೈಗೊಳ್ಳಬೇಕು’ ಎಂದು ಕಾರ್ಮಿಕ ಸಂಘಟನೆಗಳ ಮುಖಂಡರಾದ ಎಂ.ಎಂ. ಕಾಲೇಭಾಗ, ಕೆ.ಎಲ್.ಮಕಾನ್‌ದಾರ್ ಒತ್ತಾಯಿಸಿದ್ದಾರೆ.

‘ಆಕ್ಷೇಪಣೆಗೆ ಅರ್ಜಿ ಸಲ್ಲಿಸಲು ಒಂದು ವಾರ ಮಾತ್ರ ಅವಕಾಶ ಕೊಟ್ಟಿದ್ದು ಸರಿಯಲ್ಲ. ಕೆಲ ಕಾರ್ಮಿಕರು ಅನಕ್ಷರಸ್ಥರಾದರೆ, ಇನ್ನೂ ಕೆಲವರು ದುಡಿಮೆಗೆಂದು ವಲಸೆ ಹೋಗಿದ್ದಾರೆ. ಹೀಗಾಗಿ ಕನಿಷ್ಠ ಒಂದು ತಿಂಗಳು ಕಾಲಾವಕಾಶ ಕೊಡಬೇಕು’ ಎಂದು ಅವರು ಆಗ್ರಹಿಸಿದ್ದಾರೆ.

21,396 ಆಕ್ಷೇಪಣಾ ಅರ್ಜಿಗಳು ಬಂದಿದ್ದು ಪರಿಶೀಲಿಸುತ್ತೇವೆ. ಉಳಿದ ನಕಲಿ ಕಾರ್ಡ್‌ಗಳನ್ನು ಕೂಡಲೇ ರದ್ದು ಮಾಡುತ್ತೇವೆ

ಡಿ. ಭಾರತಿ, ಸಿಇಒ, ಕಾರ್ಮಿಕ ಕಲ್ಯಾಣ ಮಂಡಳಿ

ಸಂಘ ಪರಿವಾರದಿಂದ ಮಂಡ್ಯ ಬಂದ್ ಇಂದು: ಬಿಜೆಪಿ ದೂರ

ಪ್ರಜಾವಾಣಿ ವಾರ್ತೆ

ಮಂಡ್ಯ: ತಾಲ್ಲೂಕಿನ ಕೆರಗೋಡು ಗ್ರಾಮದಲ್ಲಿ ಹನುಮ ಧ್ವಜ ತೆರವು ಖಂಡಿಸಿ ಸಂಘ ಪರಿವಾರದ ಸದಸ್ಯರು ಗುರುವಾರ ಕೆರಗೋಡು ಗ್ರಾಮ ಹಾಗೂ ಮಂಡ್ಯ ನಗರ ಬಂದ್ ಆಚರಿಸಲಿದ್ದಾರೆ. ಬಿಜೆಪಿ ಹಾಗೂ ಜೆಡಿಎಸ್ ಕಾರ್ಯಕರ್ತರು ಬಂದ್‌ನಿಂದ ದೂರ ಸರಿದಿದ್ದಾರೆ.

ಗ್ರಾಮದ ರಂಗಮಂದಿರದ ಮುಂದೆ ಸ್ಥಾಪಿಸಿರುವ 108 ಅಡಿ ಧ್ವಜಸ್ತಂಭದಲ್ಲಿಯೇ ಹನುಮ ಧ್ವಜ ಹಾರಿಸಬೇಕು ಎಂದು ಒತ್ತಾಯಿಸಿ ವಿಎಚ್‌ಪಿ, ಭಜರಂಗದಳ, ಭಜರಂಗ ಸೇನೆ, ಶ್ರೀರಾಮಸೇನೆ ಕಾರ್ಯಕರ್ತರು ಬಂದ್‌ಗೆ ಕರೆ ಕೊಟ್ಟಿದ್ದಾರೆ.

ಕಾರ್ಯಕರ್ತರು ಗುರುವಾರ ವರ್ತಕರು, ಆಟೊ ಚಾಲಕರನ್ನು ಭೇಟಿಯಾಗಿ ಬಂದ್‌ಗೆ ಬೆಂಬಲ ನೀಡುವಂತೆ ಕೋರಿದರು. ‘ಬಂದ್ ಬಗ್ಗೆ ತಟಸ್ಥವಾಗಿ ಉಳಿಯಲು ನಿರ್ಧರಿಸಿದ್ದೇವೆ’ ಎಂದು ವರ್ತಕರ ಸಂಘ ಜಿಲ್ಲಾ ಘಟಕದ ಅಧ್ಯಕ್ಷ ಕೆ.ಪ್ರಭಾಕರ್ ತಿಳಿಸಿದರು.

‘ಕೆರಗೋಡು ಗ್ರಾಮದ ಆಂಜನೇಯ ದೇವಾಲಯದಲ್ಲಿ ಪೂಜೆ ಸಲ್ಲಿಸಿ ಬೈಕ್ ರ‍್ಯಾಲಿ ಮೂಲಕ ಕಾರ್ಯಕರ್ತರು ನಗರಕ್ಕೆ ಬರಲಿದ್ದಾರೆ. ನಗರದ ವೀರಾಂಜನೇಯ ದೇವಾಲಯದ ಬಳಿಯಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಮೌನ ಮೆರವಣಿಗೆ ನಡೆಸಲಾಗುವುದು’ ಎಂದು ಸಂಘ ಪರಿವಾರದ ಮುಖಂಡರು ತಿಳಿಸಿದ್ದಾರೆ.

ಬಿಜೆಪಿ, ಜೆಡಿಎಸ್ ಬೆಂಬಲ ಇಲ್ಲ: ಬಂದ್ ಆಚರಣೆಯಿಂದ ಬಿಜೆಪಿ, ಜೆಡಿಎಸ್ ಮುಖಂಡರು ಕಾರ್ಯಕರ್ತರು ಹಿಂದೆ ಸರಿದಿದ್ದಾರೆ. ‘ಜನರಿಗೆ ತೊಂದರೆಯಾಗಬಾರದು ಎಂಬ ಕಾರಣಕ್ಕೆ ಹಿಂದೆ ಸರಿದಿದ್ದೇವೆ’ ಎಂದು ಬಿಜೆಪಿ ಮುಖಂಡರು ತಿಳಿಸಿದರು. ‘ಪಕ್ಷದ ವರಿಷ್ಠರಿಂದ ಸೂಚನೆ ಬಾರದಿರುವುದರಿಂದ ಬಂದ್‌ನಲ್ಲಿ ಪಾಲ್ಗೊಳ್ಳುತ್ತಿಲ್ಲ’ ಎಂದು ಜೆಡಿಎಸ್ ಮುಖಂಡರು ತಿಳಿಸಿದರು.

‘ಬಂದ್ ಅಂಗವಾಗಿ ಬಲವಂತದಿಂದ ಅಂಗಡಿ ಮುಂಗಟ್ಟು ಮುಚ್ಚಿಸಬಾರದು ಎಂದು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಕೆರಗೋಡು ಗ್ರಾಮದಲ್ಲಿ ನಿಷೇಧಾಜ್ಞೆ ಮುಂದುವರಿದಿದೆ, ಮಂಡ್ಯದಲ್ಲೂ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗುವುದು’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ಅವರು ತಿಳಿಸಿದರು.

ಪರಶುರಾಮ ಥೀಂ ಪಾರ್ಕ್ ಕಾಮಗಾರಿ ಸಿಐಡಿ ತನಿಖೆಗೆ

ಪ್ರಜಾವಾಣಿ ವಾರ್ತೆ

ಉಡುಪಿ: ಪರಶುರಾಮ ಥೀಂ ಪಾರ್ಕ್ ನಿರ್ಮಾಣ ಕಾಮಗಾರಿಯಲ್ಲಿಯ ಅವ್ಯವಹಾರ ಆರೋಪದ ಬಗ್ಗೆ ಸಿಐಡಿಯಿಂದ ತನಿಖೆ ನಡೆಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶಿಸಿದ್ದಾರೆ.

ಪರಶುರಾಮನ ಪ್ರತಿಮೆ ನಕಲಿಯಾಗಿದ್ದು, ಕಾಮಗಾರಿ ಕಳಪೆಯಾಗಿದೆ. ಪ್ರತಿಮೆ ನಿರ್ಮಾಣದ ವಿಚಾರದಲ್ಲಿ ಹಿಂದೂಗಳ ಭಾವನೆಗೆ ಧಕ್ಕೆ ತರಲಾಗಿದ್ದು ಸೂಕ್ತ ತನಿಖೆ ನಡೆಸುವಂತೆ ಈಚೆಗೆ ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಆರ್. ಹೆಬ್ಬಾಳಕರ ಅವರಿಗೆ ಹಲವರು ದೂರು ಸಲ್ಲಿಸಿದ್ದರು.

ಈ ಸಂಬಂಧ ಉನ್ನತ ಮಟ್ಟದ ತನಿಖೆ ಕೋರಿ ಫೆ.2ರಂದು ಸಚಿವೆ ಮುಖ್ಯಮಂತ್ರಿಗೆ ಪತ್ರ ಬರೆದಿದ್ದರು. ಈ ಪತ್ರ ಆಧರಿಸಿ ಸಿಎಂ ತನಿಖೆಗೆ ಗುರುವಾರ ಸೂಚನೆ ನೀಡಿದ್ದಾರೆ.

ಏನಿದು ವಿವಾದ: ಕಾರ್ಕಳ ಕ್ಷೇತ್ರದ ಶಾಸಕರೂ ಆಗಿರುವ ವಿ.ಸುನೀಲ್‌ಕುಮಾರ್ ಅವರು ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿದ್ದಾಗ ಕಾರ್ಕಳ ತಾಲ್ಲೂಕಿನ ಯರ್ಲಪಾಡಿಯ ಉಮ್ಮಿಕಲ್ ಬೆಟ್ಟದ ಮೇಲೆ ₹14.50 ಕೋಟಿ ವೆಚ್ಚದಲ್ಲಿ ಪರಶುರಾಮ ಥಿಂ ಪಾರ್ಕ್ ನಿರ್ಮಾಣ ಕಾಮಗಾರಿಗೆ ಚಾಲನೆ ದೊರೆತಿತ್ತು.



ಪರಶುರಾಮನ ಪ್ರತಿಮೆ ತೆರವುಗೊಳಿಸಿದ ನಂತರದ ಚಿತ್ರ

₹ 2 ಕೋಟಿ ವೆಚ್ಚದಲ್ಲಿ 33 ಅಡಿ ಯ ಕಂಚಿನ ಪ್ರತಿಮೆಯನ್ನು ಜ.27 ರಂದು ಅಂದಿನ ಮುಖ್ಯಮಂತ್ರಿ ಬೊಮ್ಮಾಯಿ ಲೋಕಾರ್ಪಣೆಗೊಳಿಸಿದ್ದರು.

ವಿಧಾನಸಭಾ ಚುನಾವಣೆಯ ಸಂದರ್ಭ ತರಾತುರಿಯಲ್ಲಿ ಥೀಂ ಪಾರ್ಕ್ ಉದ್ಘಾಟಿಸಲಾಗಿದೆ ಎಂಬ ಟೀಕೆಗಳು ವ್ಯಕ್ತವಾಗಿದ್ದವು. ಪರಶುರಾಮನ ಪ್ರತಿಮೆ ಕಂಚಿನದ್ದಲ್ಲ ಎಂಬ ಆರೋಪಗಳು ಕೇಳಿಬಂದಿದ್ದವು. ಇದರ ನಡುವೆಯೇ ಥೀಂ ಪಾರ್ಕ್ ನಿರ್ಮಾಣ ಕಾಮಗಾರಿಯ ಹೊಣೆಹೊತ್ತಿರುವ ನಿರ್ಮಿತಿ ಕೇಂದ್ರದ ಅಧಿಕಾರಿಗಳು ಪರಶುರಾಮನ ಪ್ರತಿಮೆಯ ಕೆಲವು ಭಾಗಗಳನ್ನು ತುರ್ತು ಬದಲಾವಣೆ ಮಾಡಬೇಕು ಎಂದು ಅಕ್ಟೋಬರ್‌ನಲ್ಲಿ ಪ್ರತಿಮೆಯ ಅರ್ಧ ಭಾಗವನ್ನು ತೆರವುಗೊಳಿಸಿದ್ದರು.

ಈ ಸಂದರ್ಭ ಪರಶುರಾಮ ಥೀಂ ಪಾರ್ಕ್ ಕಾಮಗಾರಿಯಲ್ಲಿ ಅವ್ಯವಹಾರ ನಡೆದಿದೆ ಎಂದು ಆರೋಪಿಸಿ ಕಾಂಗ್ರೆಸ್ ಮುಖಂಡರು ಹಾಗೂ ಸಾಮಾಜಿಕ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದರು. ಇದು ಕಾಂಗ್ರೆಸ್ಸಿಗರು ಮತ್ತು ಶಾಸಕ ಸುನೀಲ್ ಕುಮಾರ್ ಮಧ್ಯೆ ಜಟಾಪಟಿಗೂ ಕಾರಣವಾಗಿತ್ತು.

‘ಥೀಂ ಪಾರ್ಕ್ ನಿರ್ಮಾಣ ಜಾಗ ಗೋಮಾಳಕ್ಕೆ ಸೇರಿದೆ. ಅನ್ಯ ಉದ್ದೇಶಗಳಿಗೆ ಗೋಮಾಳ ಜಾಗ ನೀಡಲು ಸಾಧ್ಯವಿಲ್ಲ ಎಂದು ಬಿಜೆಪಿ ಸರ್ಕಾರವೇ ಸ್ಪಷ್ಟ ಆದೇಶ ಹೊರಡಿದ್ದರೂ ವಿಧಾನಸಭಾ ಚುನಾವಣೆಯ ಲಾಭ ಪಡೆಯಲು ಅಧಿಕಾರಿಗಳ ಮೇಲೆ ಒತ್ತಡ ಹಾಕಿ ತರಾತುರಿಯಲ್ಲಿ ಪರಶುರಾಮನ ಪ್ರತಿಮೆ ಲೋಕಾರ್ಪಣೆಗೊಳಿಲಾಗಿದೆ’ ಎಂಬ ಆರೋಪಗಳು ಕೇಳಿಬಂದಿದ್ದವು.

7 ಜನರಿಗೆ ಮಂಗನ ಕಾಯಿಲೆ ದೃಢ

ಚಿಕ್ಕಮಗಳೂರು: ಜಿಲ್ಲೆಯಲ್ಲಿ ಒಂದು ವಾರದಲ್ಲಿ ಏಳು ಜನರಿಗೆ ಮಂಗನ ಕಾಯಿಲೆ ಇರುವುದು ದೃಢಪಟ್ಟಿದ್ದು, ಕಾಡಂಚಿನ ಗ್ರಾಮಗಳಲ್ಲಿ ಆರೋಗ್ಯ ಇಲಾಖೆ ನಿಗಾ ಇಟ್ಟಿದೆ.

ಶೃಂಗೇರಿ ತಾಲ್ಲೂಕಿನ 76 ವರ್ಷ ವಯಸ್ಸಿನ ವ್ಯಕ್ತಿಗೆ ಮಂಗನ ಕಾಯಿಲೆ ದೃಢಪಟ್ಟಿತ್ತು. ಬಳಿಕ ಬಹು ಅಂಗಾಂಗ ವೈಫಲ್ಯದಿಂದ ಅವರು ಕೆಲ ದಿನಗಳ ಹಿಂದೆ ಮೃತಪಟ್ಟರು.

ಇನ್ನೊಂದೆಡೆ ಕೊಪ್ಪ ತಾಲ್ಲೂಕಿನ ಬೇರುಕೂಡಿಗೆ ಗ್ರಾಮದ ಬಳಿಯ ಒಂದೇ ಕಾಫಿ ತೋಟದಲ್ಲಿ ಕೆಲಸ ಮಾಡಿದ ಆರು ಜನರಿಗೆ ಮಂಗನ ಕಾಯಿಲೆ ದೃಢಪಟ್ಟಿದೆ. ತೋಟದಲ್ಲಿ ಮರಗಳ ರೆಂಬೆ ಕಡಿಯಲಾಗಿತ್ತು. ಈ ಕೆಲಸಕ್ಕೆ ತೆರಳಿದ್ದವರಲ್ಲಿ ಆರು ಜನರಿಗೆ ಸೋಂಕು ಪತ್ತೆಯಾಗಿದೆ. ಇಬ್ಬರು ಇನ್ನೂ ಆಸ್ಪತ್ರೆಯಲ್ಲಿದ್ದು, ಉಳಿದವರು ಚಿಕಿತ್ಸೆ ಪಡೆದು ಮನೆಗೆ ಮರಳಿದ್ದಾರೆ. ಕಾಯಿಲೆ ದೃಢಪಟ್ಟಿರುವ ಊರು ಮತ್ತು ಸುತ್ತಮುತ್ತಲ ಗ್ರಾಮಗಳಿಗೆ ಆರೋಗ್ಯ ಇಲಾಖೆ ಸಿಬ್ಬಂದಿ ಭೇಟಿ ನೀಡಿ ಜಾಗೃತಿ ಮೂಡಿಸುತ್ತಿದ್ದಾರೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಅಶ್ವತ್ಥಬಾಬು ‘ಪ್ರಜಾವಾಣಿ’ಗೆ ತಿಳಿಸಿದರು.

ವಿಜೃಂಭಣೆಯ ಸುತ್ತೂರು ರಥೋತ್ಸವ

ಜಾನಪದ ಕಲಾತಂಡಗಳ ಮೆರುಗು • ದೇವಳದ ಸುತ್ತ ಭಕ್ತರ ಜಯಘೋಷ

ಪ್ರಜಾವಾಣಿ ವಾರ್ತೆ

ಸುತ್ತೂರು (ಮೈಸೂರು ಜಿಲ್ಲೆ): ಅಪಾರ ಭಕ್ತರ ಮುಗಿಲು ಮುಟ್ಟಿದ ಜಯಘೋಷಗಳೊಂದಿಗೆ ಶಿವರಾತ್ರೀಶ್ವರ ಶಿವಯೋಗಿಗಳ ರಥೋತ್ಸವ ಗುರುವಾರ ಬೆಳಿಗ್ಗೆ ಅದ್ದೂರಿಯಾಗಿ ನೆರವೇರಿತು.

ಜಾತ್ರಾ ಮಹೋತ್ಸವ ಪ್ರಯುಕ್ತ ನಾಡಿನ ವಿವಿಧೆಡೆಯಿಂದ ಬಂದಿದ್ದ ಭಕ್ತರು, ಗ್ರಾಮದ ಕರ್ತೃ ಗದ್ದುಗೆ ಆವರಣದಲ್ಲಿ ಬೃಹತ್ ಗಾತ್ರದ ರಥದ ಮಿಣಿಯನ್ನು ಎಳೆದು ಹರಕೆ ತೀರಿಸಿದರು. ರಥಕ್ಕೆ ಹಣ್ಣು-ಜವನ ಎಸೆದು ನಮಿಸಿದರು.

ಬೆಳಿಗ್ಗೆ 4ಕ್ಕೆ ಕರ್ತೃ ಗದ್ದುಗೆಯನ್ನು ಅಲಂಕರಿಸಿ ಪೂಜೆ ಸಲ್ಲಿಸಲಾಯಿತು. 6 ಗಂಟೆಗೆ ಮಠದ ಗುರು ಪರಂಪರೆಯ ಸಂಸ್ಮರಣೋತ್ಸವ ಹಾಗೂ ಗದ್ದುಗೆಗೆ ರುದ್ರಾಭಿಷೇಕ ನಡೆಯಿತು. 9ಕ್ಕೆ ಉತ್ಸವ ಮೂರ್ತಿಗೆ ರಾಜೋಪಚಾರ ನಡೆಯಿತು. 10.30 ಕ್ಕೆ ಉತ್ಸವಮೂರ್ತಿಯನ್ನು ರಥದಲ್ಲಿ ಪ್ರತಿಷ್ಠಾಪಿಸಿದ ಅರ್ಚಕರು ಪೂಜೆ ಪೂರೈಸಿದರು.

ಬೆಳಿಗ್ಗೆ 10.55ಕ್ಕೆ ಗೋವಾ ರಾಜ್ಯಪಾಲ ಶ್ರೀಧರ್ ಪಿಳ್ಳೈ, ಸಚಿವ ಮಂಕಾಳ ಎಸ್. ವೈದ್ಯ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಬಿಜೆಪಿ ಮುಖಂಡರಾದ ಮುರುಗೇಶ್ ನಿರಾಣಿ, ಜೆ.ಸಿ.ಮಾಧುಸ್ವಾಮಿ ಅವರು ನಂದಿ ಧ್ವಜಕ್ಕೆ ಪೂಜೆ ಸಲ್ಲಿಸಿ, ರಥದ ಮಿಣಿ ಎಳೆದು ರಥೋತ್ಸವಕ್ಕೆ ಚಾಲನೆ ನೀಡುತ್ತಿದ್ದಂತೆ 21 ಕುಶಾಲತೋಪುಗಳು ಸಿಡಿದವು. ಭಕ್ತರ ಜಯಘೋಷ ಮುಗಿಲುಮುಟ್ಟಿತು.

ಭಕ್ತರು ಮಠದ ಗುರು ಪರಂಪರೆಗೆ ಜಯಕಾರ ಹಾಕುತ್ತಾ ರಥಎಳೆಯುತ್ತಿದ್ದರೆ ಪುಷ್ಪಾಲಂಕೃತ ರಥವು ರಾಜಬೀದಿಯಲ್ಲಿ ಸಾಗಿತು. ಜಾನಪದ ಕಲಾತಂಡಗಳು ಆಕರ್ಷಿಸಿ ದವು. ತಮಟೆ, ನಗಾರಿ ವಾದ್ಯಗಳ ನಾದವು ಮುಗಿಲುಮುಟ್ಟಿತು. ಮುಂದೆ ಸಾಗುತ್ತಿದ್ದ ಚಿಕ್ಕತೇರಿಗೂ ಭಕ್ತವೃಂದ ಕೈ ಮುಗಿಯಿತು. ಸುತ್ತೂರು ಮೂಲಮಠದವರೆಗೂ ಭಕ್ತರು ರಥದೊಂದಿಗೆ ಹೆಜ್ಜೆ ಹಾಕಿದರು. ದೊಡ್ಡಮ್ಮತಾಯಿ ದೇವಸ್ಥಾನದ ವೃತ್ತ ಬಳಸಿ ಕರ್ತೃ ಗದ್ದುಗೆಗೆ ಮರಳಿತು.



ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ಸುತ್ತೂರಿನಲ್ಲಿ ಜಾತ್ರಾ ಮಹೋತ್ಸವ ಪ್ರಯುಕ್ತ ಗುರುವಾರ ನಡೆದ ಶಿವರಾತ್ರೀಶ್ವರ ಶಿವಯೋಗಿಗಳ ರಥೋತ್ಸವದಲ್ಲಿ ಅಪಾರ ಸಂಖ್ಯೆಯಲ್ಲಿ ಸೇರಿದ್ದ ಭಕ್ತರು

ಅಮಿತ್ ಶಾ ಸಭೆ ರದ್ದು: ಸುತ್ತೂರಿಗಷ್ಟೇ ಭೇಟಿ

ಬೆಂಗಳೂರು: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಕರ್ನಾಟಕ ಭೇಟಿ ಕಾರ್ಯಕ್ರಮದಲ್ಲಿ ಕೊಂಚ ಬದಲಾವಣೆ ಆಗಿದ್ದು, ಇದೇ 11 ರಂದು ಬೆಳಿಗ್ಗೆ ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿ, ಸಂಜೆ ಸುತ್ತೂರು ಜಾತ್ರೆಯಲ್ಲಿ ಭಾಗವಹಿಸಲಿದ್ದಾರೆ.

ಲೋಕಸಭಾ ಚುನಾವಣೆ ತಯಾರಿ ಕುರಿತು ಬೆಂಗಳೂರಿನಲ್ಲಿ ಸಭೆ ನಡೆಸುವುದಾಗಿ ಈ ಹಿಂದೆ ಪಕ್ಷದ ಮೂಲಗಳು ಹೇಳಿದ್ದವು. ಕಾರ್ಯಕ್ರಮ ಬದಲಾಗಿರುವುದರಿಂದ ಬೆಂಗಳೂರಿನಲ್ಲಿ ಸಭೆ ನಡೆಯುವುದಿಲ್ಲ.

‘ಶಾ ಅವರು ಇದೇ 10 ರ ರಾತ್ರಿ ಬೆಂಗಳೂರಿಗೆ ಬಂದು ನೇರವಾಗಿ ಮೈಸೂರಿಗೆ ಹೋಗಿ ಅಲ್ಲೇ ವಾಸ್ತವ್ಯ ಹೂಡಲಿದ್ದಾರೆ. 11 ರಂದು ಬೆಳಿಗ್ಗೆ ಚಾಮುಂಡಿ ಬೆಟ್ಟ ಭೇಟಿಯ ಬಳಿಕ ಮೈಸೂರಿನಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ. ಪಕ್ಷದ ಕಾರ್ಯಕರ್ತರ ಸಭೆಯಲ್ಲೂ ಭಾಗವಹಿಸಲಿದ್ದಾರೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

‘ಮಾಂಸ ತಿಂದು ಸುತ್ತೂರು ಮಠಕ್ಕೆ ಹೋಗಿದ್ದು ಸರಿಯಲ್ಲ’

ಮೈಸೂರು: ‘ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ನಾಯಕರು ಮಾಂಸ ಸೇವಿಸಿ ಸುತ್ತೂರು ಮಠಕ್ಕೆ ಭೇಟಿ ನೀಡಿದ್ದು ಸರಿಯಲ್ಲ’ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಹೇಳಿದರು.

ಇಲ್ಲಿ ಸುದ್ದಿಗಾರರ ಪ್ರಶ್ನೆಗೆ ಗುರುವಾರ ಪ್ರತಿಕ್ರಿಯಿಸಿದ ಅವರು, ‘ಆ ವಿಷಯದಲ್ಲಿ ಹೆಚ್ಚು ಮಾತನಾಡಲು ಇಷ್ಟ ಪಡುವುದಿಲ್ಲ. ಅದು ಅವರವರಿಗೆ ಸಂಬಂಧಿಸಿದ್ದು’ ಎಂದರು. ಬಿಜೆಪಿ ಶಾಸಕ ಟಿ.ಎಸ್. ಶ್ರೀವತ್ಸ ಮಾತನಾಡಿ, ‘ಸಿದ್ದರಾಮಯ್ಯ ಅವರು ಈ ರೀತಿ ಆಗಾಗ ನಡೆದುಕೊಳ್ಳುತ್ತಾರೆ. ಧರ್ಮಸ್ಥಳದ ಮಂಜುನಾಥನ ದರ್ಶನಕ್ಕೆ ಹೋಗಿದ್ದಾಗಲೂ ಅಪಚಾರ ಮಾಡಿದ್ದರು. ಆಗ ಮಾಂಸ ತಿಂದು ದೇವರ ದರ್ಶನ ಮಾಡಬಾರದಾ ಎಂದು ಕೇಳಿದ್ದರು’ ಎಂದು ಟೀಕಿಸಿದರು.

‘ಸುತ್ತೂರು ಶ್ರೀಕ್ಷೇತ್ರದ ಗದ್ದುಗೆ ಬಹಳ ಪವಿತ್ರ ಸ್ಥಳ. ಅಲ್ಲಿಗೆ ಮಾಂಸ ಸೇವಿಸಿ ಹೋಗಿದ್ದು ದೊಡ್ಡ ಅಪಚಾರ. ಮಾಂಸ ತಿಂದು ಗದ್ದುಗೆ ಪೂಜೆ ಮಾಡಿರುವುದು ಖಂಡನೀಯ. ಯಾವ ಕಾರ್ಯಕ್ರಮಕ್ಕೆ ಹೋಗುತ್ತಿದ್ದೇನೆ ಎಂಬ ಅರಿವು ಮುಖ್ಯಮಂತ್ರಿಗೆ ಇರಬೇಕಾಗುತ್ತದೆ. ಆದರೆ, ಸಿದ್ದರಾಮಯ್ಯ ಅವರು ಉಡಾಫೆಯಿಂದ ಮಾತನಾಡುತ್ತಾರೆ’ ಎಂದರು.

ರೇಣುಕಾಚಾರ್ಯರ 36 ಅಡಿ ಮೂರ್ತಿ

ಪ್ರಜಾವಾಣಿ ವಾರ್ತೆ

ಶಿರಾಳಕೊಪ್ಪ (ಶಿವಮೊಗ್ಗ): ಸಮೀಪದ ಕಡೇನಂದಿಹಳ್ಳಿ ಗ್ರಾಮದಲ್ಲಿ ರೇಣುಕಾಚಾರ್ಯರ 36 ಅಡಿ ಎತ್ತರದ ಮೂರ್ತಿ ತಲೆ ಎತ್ತಿದ್ದು, ಎಲ್ಲರ ಗಮನ ಸೆಳೆಯುತ್ತಿದೆ.

ಕಡೇನಂದಿಹಳ್ಳಿ ಮಠದ ರೇವಣಸಿದ್ದೇಶ್ವರ ಸ್ವಾಮೀಜಿ ಅವರ ವಿಶೇಷ ಆಸಕ್ತಿಯಿಂದ ರಾಜ್ಯದಲ್ಲಿ ಇದೇ ಮೊದಲ ಬಾರಿಗೆ ಇಷ್ಟು ಎತ್ತರದ ಮೂರ್ತಿ ನಿರ್ಮಿಸಲಾಗಿದ್ದು, ಫೆಬ್ರುವರಿ 12 ಮತ್ತು 13 ರಂದು ಇದರ ಲೋಕಾರ್ಪಣೆ ಕಾರ್ಯಕ್ರಮ ನಿಗದಿಯಾಗಿದೆ.

ಈ ಮೂರ್ತಿಯನ್ನು ವೀರಶೈವ ಸಿದ್ಧಾಂತದ 36 ತತ್ವಗಳ ಪ್ರತೀಕವಾಗಿ ನಿರ್ಮಿಸಲಾಗಿದೆ. ಧ್ಯಾನಕ್ಕಾಗಿ ನೆಲಮಾಳಿಗೆ ಇದ್ದು, ಅದರ ಮೇಲೆ 24 ಕಂಬಗಳ ಶಿಲಾಮಂಟಪ ಕಟ್ಟಲಾಗಿದೆ. ಅದರ ಮೇಲ್ಭಾಗದಲ್ಲಿ ರೇಣುಕಾಚಾರ್ಯರ ಮೂರ್ತಿ ತಲೆ ಎತ್ತಿದೆ. ಲಿಂಗದ ಒಳಗೆ ಗರ್ಭಗುಡಿ ನಿರ್ಮಿಸಲಾಗಿದ್ದು, ಬಸವಣ್ಣ ಅವರ ಮೂರ್ತಿಯೂ ಇದೆ.

ಇದನ್ನು ರೇಣುಕಾಚಾರ್ಯರ ಉದ್ಭವ ಸ್ಥಳ ತೆಲಂಗಾಣದ ಕೊಲಂಪಾಕದ ಸೋಮೇಶ್ವರ ಲಿಂಗದ ಮಾದರಿಯಲ್ಲಿ ನಿರ್ಮಿಸಲಾಗಿದೆ. ದೊಡ್ಡಬಳ್ಳಾಪುರ ಭಾಗದ ಶಿಲೆಗಳನ್ನು ಬಳಸಿಕೊಳ್ಳಲಾಗಿದೆ. ಅಂದಾಜು ₹ 2 ಕೋಟಿಗೂ ಹೆಚ್ಚು ವೆಚ್ಚ ಮಾಡಲಾಗಿದೆ.

ಶಿಲಾಮಂಟಪ ಹಾಗೂ ಮೂರ್ತಿ ನಿರ್ಮಾಣಕ್ಕೆ 2 ವರ್ಷ ತಗುಲಿದೆ. ಶಿವಮೊಗ್ಗದ ಜೀವನ ಕಲಾ ತಂಡದವರು ಮೂರ್ತಿ ನಿರ್ಮಿಸಿದ್ದಾರೆ. ಶಿಲಾಮಂಟಪವನ್ನು ಮುರುಡೇಶ್ವರದ ಲಕ್ಷ್ಮಣ ಅವರು ಪ್ರಾರಂಭಿಸಿದರು. ನಂತರ ಕಾರ್ಕಳದ ಕೃಷ್ಣಾಚಾರ್ಯ ಪೂರ್ಣಗೊಳಿಸಿದ್ದಾರೆ.



ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನ ಕಡೇನಂದಿಹಳ್ಳಿಯಲ್ಲಿ ಲೋಕಾರ್ಪಣೆಗೆ ಸಿದ್ಧಗೊಂಡಿರುವ ರೇಣುಕಾಚಾರ್ಯರ ಮೂರ್ತಿ ಹಾಗೂ ಶಿಲಾಮಂಟಪ

ಜ್ವರದ ಹಾವಳಿಗೆ ಬೆಚ್ಚಿಬಿದ್ದ ಗ್ರಾಮಸ್ಥರು

ಕುಷ್ಟಗಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ನೆರಬೆಂಚಿ ಗ್ರಾಮದ ಜನರಲ್ಲಿ ಅನೇಕ ದಿನಗಳಿಂದ ಅನಾರೋಗ್ಯ ಕಾಡುತ್ತಿದ್ದು, ಅಲ್ಲಿನ ಬಹುತೇಕ ಜನ ಜ್ವರದಿಂದ ಬಳಲುತ್ತಿದ್ದಾರೆ. ಅವರಲ್ಲಿ ಒಬ್ಬರಿಗೆ ಚಿಕೂನ್‌ಗುನ್ಯಾ ದೃಢಪಟ್ಟಿದೆ.

ಗ್ರಾಮದಲ್ಲಿ ಇಲ್ಲಿಯವರೆಗೆ 111 ಜ್ವರ ಬಾಧೆ ಪ್ರಕರಣಗಳು ವರದಿಯಾಗಿದ್ದು ಜ್ವರ, ಮೈ, ಕೈ, ಕೀಲು ನೋವು ಸಮಸ್ಯೆಗಳು ಕಾಣಿಸಿಕೊಂಡಿವೆ.

ಗ್ರಾಮದಲ್ಲಿ ಕುಡಿಯುವ ನೀರು ಅಶುದ್ಧವಾಗಿರುವುದು, ನೈರ್ಮಲ್ಯ ಕೊರತೆ, ಮಾಲಿನ್ಯ ಸಮಸ್ಯೆ ಬಗ್ಗೆ ಜನ ದೂರುತ್ತಿದ್ದಾರೆ. ಸೊಳ್ಳೆಯಿಂದ ಸೋಂಕು ಹರಡುತ್ತಿದ್ದು, ಮನೆಗಳಲ್ಲಿ ಬಹುದಿನಗಳಿಂದ ಸಂಗ್ರಹಿಸಿಟ್ಟುಕೊಂಡಿರುವ ಶುದ್ಧ ನೀರಿನಲ್ಲಿ ಇಂಥ ಸೊಳ್ಳೆಗಳ ಲಾರ್ವಾಗಳು ಇರುತ್ತವೆ. ಆದರೆ, ಆರೋಗ್ಯ ಇಲಾಖೆ ಸಿಬ್ಬಂದಿ ಮನೆಯೊಳಗೆ ಬರುವುದಕ್ಕೆ ಗ್ರಾಮಸ್ಥರು ಅವಕಾಶ ನೀಡುತ್ತಿಲ್ಲ ಎಂದು ತಿಳಿದುಬಂದಿದೆ. ಕೊಪ್ಪಳ ಡಿಎಚ್‌ಒ ಡಾ.ಲಿಂಗರಾಜು ಗುರುವಾರ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

‘ಪೋಷಕರ ದುರ್ಭಾವನೆ ಮಹಾಪಾಪ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೌಟುಂಬಿಕ ವ್ಯಾಜ್ಯಗಳಲ್ಲಿ ಪತಿ–ಪತ್ನಿ, ಹತ್ತಿರದ ಪೋಷಕರು ಕಾನೂನು ಪರಿಹಾರ ಪಡೆಯುವ ಭರದಲ್ಲಿ ಮತ್ತು ಎದುರಾಳಿಯನ್ನು ಸಂಕಟಕ್ಕೀಡು ಮಾಡುವ ಉಮೇದಿನಲ್ಲಿ ಮಕ್ಕಳನ್ನೂ ವ್ಯಾಜ್ಯದ ಭಾಗವಾಗಿಸುತ್ತಿರುವ ಬೆಳವಣಿಗೆ ಹೆಚ್ಚುತ್ತಿದೆ’ ಎಂದು ಕಳವಳ ವ್ಯಕ್ತಪಡಿಸಿರುವ ಹೈಕೋರ್ಟ್, ‘ಪೋಷಕರ ಇಂತಹ ದುರ್ಭಾವನಾ ರೋಗ ಮಹಾಪಾಪ’ ಎಂದು ಬಣ್ಣಿಸಿದೆ.

ಪತಿ–ಪತ್ನಿ ಮಧ್ಯದ ವ್ಯಾಜ್ಯವೊಂದರಲ್ಲಿ ಪುತ್ರಿಯ ಮೇಲಿನ ಲೈಂಗಿಕ ದೌರ್ಜನ್ಯದ ಸುಳ್ಳು ಪ್ರಕರಣವನ್ನು ರದ್ದುಪಡಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದೆ.



‘ಜಗಳಗಳನ್ನು ಮುಂದುವರಿಸಲು ಮತ್ತು ಪರಸ್ಪರ ಸೇಡು, ದ್ವೇಷ ತೀರಿಸಿಕೊಳ್ಳುವ ಜಿದ್ದಿಗೆ ಬಿದ್ದ ಪೋಷಕರು ತಮ್ಮ ಸ್ವಂತ ಮಕ್ಕಳನ್ನೇ ಲೈಂಗಿಕ ಅಕ್ರಮಣದ ಆರೋಪಗಳಿಗೆ ಈಡು ಮಾಡುವುದು ನಿಜಕ್ಕೂ ಆಘಾತಕಾರಿ’ ಎಂದು ನ್ಯಾಯಪೀಠ ಹೇಳಿದೆ.

‘ಇಂತಹ ಆರೋಪಗಳಿಂದ ಮಗುವಿನ ಮನಸ್ಸಿನ ಮೇಲೆ ಎಂತಹ ನಕಾರಾತ್ಮಕ ಪರಿಣಾಮ ಉಂಟಾಗುತ್ತದೆ ಎಂಬುದನ್ನು ಊಹಿಸಲೂ ಆಗದು. ಹೀಗಾಗಿ, ಇಂತಹ ಆರೋಪಗಳನ್ನು ಮಾಡುವ ಮುನ್ನ ಪೋಷಕರು ಆತ್ಮಾವಲೋಕನ ಮಾಡಿಕೊಳ್ಳಬೇಕು. ಆಪಾದನೆ ನಿಜವೇ ಆಗಿದ್ದಲ್ಲಿ ಕಾನೂನು, ತನ್ನ ಪಾತ್ರ ಏನಿದೆಯೋ ಅದನ್ನು ನಿರ್ವಹಿಸಿಯೇ ತೀರುತ್ತದೆ. ಆದರೆ, ಅದನ್ನು ಮಗುವಿನ ಪಾಲನೆಯ ಉದ್ದೇಶಕ್ಕಾಗಿ ಸುಳ್ಳಾಗಿ ಬಳಸಿದರೆ ಪೋಷಕರು ಇದಕ್ಕಿಂತಲೂ ಮಾಡಬಹುದಾದ ದೊಡ್ಡ ಪಾಪ ಮತ್ತೊಂದಿಲ್ಲ’ ಎಂದು ವೇದನೆ ವ್ಯಕ್ತಪಡಿಸಿದೆ.

ಪ್ರಕರಣವೇನು?: ಪ್ರಕರಣದಲ್ಲಿನ ಪತಿ–ಪತ್ನಿ 2007ರ ಏಪ್ರಿಲ್ 26ರಂದು ಮದುವೆಯಾದರು. 2008ರಲ್ಲಿ ಹೆಣ್ಣು ಮಗು ಜನಿಸಿತ್ತು. 2017ರಲ್ಲಿ ದಾಂಪತ್ಯದಲ್ಲಿ ಬಿರುಕು ಮೂಡಿದ ಪರಿಣಾಮ ಕೌಟುಂಬಿಕ ವ್ಯಾಜ್ಯ ಆರಂಭವಾಗಿತ್ತು. ಹೆಣ್ಣು ಮಗುವಿನ ಸುಪರ್ದಿಗೆ ಸಂಬಂಧಿಸಿದಂತೆ ಉದ್ಭವಿಸಿದ ಕಾನೂನು ಸಂಘರ್ಷದಲ್ಲಿ ಬಾಲಕಿಯ ತಾಯಿಯ ಮೂರನೇ ಮತ್ತು ಸದ್ಯ ಪತಿಯಾಗಿರುವವರ ವಿರುದ್ಧ ಪೋಕ್ಸೊ ಮತ್ತು ಐಪಿಸಿಯ ವಿವಿಧ ಕಲಂಗಳಡಿ ಪ್ರಕರಣ ದಾಖಲಿಸಲಾಗಿತ್ತು. 38 ವರ್ಷದ ಅರ್ಜಿದಾರ ತಮ್ಮ ವಿರುದ್ಧದ ಕ್ರಿಮಿನಲ್ ಮೊಕದ್ದಮೆಗಳ ಕಾನೂನು ಬದ್ಧತೆಯನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಜೈನ ನಿಗಮ ಸ್ಥಾಪನೆಗೆ ಆಚಾರ್ಯ ಗುಣಧರನಂದಿ ಮಹಾರಾಜ ಒತ್ತಾಯ

‘ಸಲ್ಲೇಖಿನ ವ್ರತ, ಪ್ರಾಣತ್ಯಾಗಕ್ಕೂ ಸಿದ್ಧ’

ಪ್ರಜಾವಾಣಿ ವಾರ್ತೆ

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): ‘ರಾಜ್ಯದ ಜೈನ ಸಮುದಾಯದ ಏಳ್ಗೆಗಾಗಿ ಜೈನ ಅಭಿವೃದ್ಧಿ ನಿಗಮ ಸ್ಥಾಪಿಸಬೇಕು. ಇದಕ್ಕಾಗಿ ನಾನು ಸಲ್ಲೇಖನ ವ್ರತ ಕೈಗೊಂಡು ಪ್ರಾಣತ್ಯಾಗಕ್ಕೂ ಸಿದ್ಧ’ ಎಂದು ಆಚಾರ್ಯ ಗುಣಧರನಂದಿ ಮಹಾರಾಜ ಹೇಳಿದರು.


ತಾಲ್ಲೂಕಿನ ಶಮನೇವಾಡಿಯಲ್ಲಿ ತಮ್ಮ 33ನೇ ದೀಕ್ಷಾ ಜಯಂತಿ ಪ್ರಯುಕ್ತ ಗುರುವಾರ ನಡೆದ ಜೈನ ಸಮ್ಮೇಳನದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ‘ಜೈನರ ಸಮಸ್ಯೆಗಳ ನಿವಾರಣೆಗೆ ಮುಂದಾಗುವ ನಾಯಕರಿಗೆ ನಿಮ್ಮ ಮತ ನೀಡಿ. ಇನ್ನುಳಿದ ಧರ್ಮಗಳ ಮೇಲೆ ಗೌರವ ಇರಲಿ. ಜೈನ ಧರ್ಮದ ಮೇಲೆ ಅಭಿಮಾನವಿರಲಿ’ ಎಂದರು.

‘ಜೈನ ಧರ್ಮೀಯರಿಗಾಗಿ ನಿಗಮ ಮಂಡಳಿ, ವಸತಿ ನಿಲಯ ಸ್ಥಾಪನೆ ಸೇರಿ ವಿವಿಧ ಸೌಲಭ್ಯಗಳಿಗಾಗಿ ಬೆಳಗಾವಿಯ ಸುವರ್ಣ ವಿಧಾನಸೌಧದ ಎದುರು ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ ಮಾಡಲೂ ಸಿದ್ಧ’ ಎಂದರು.

ಮಾಜಿ ಸಚಿವ ವೀರಕುಮಾರ ಪಾಟೀಲ ಮಾತನಾಡಿ,‘ಚಿಕ್ಕೋಡಿ ಲೋಕಸಭಾ ಕ್ಷೇತ್ರದಲ್ಲಿ 2.80 ಲಕ್ಷ ಜೈನ ಮತದಾರರು ಇದ್ದಾರೆ. ಸರ್ಕಾರ ಇದನ್ನು ಗಮನಿಸಿ ಜೈನ ಅಭಿವೃದ್ಧಿ ನಿಗಮ ಸೇರಿ ಎಲ್ಲ ಬೇಡಿಕೆಗಳನ್ನು ಈಡೇರಿಸಬೇಕು’ ಎಂದರು.

‘ಜೈನರು ರಾವಣ, ಕೌರವರಂಥವರ ಅಹಂಕಾರ ಅಡಗಿಸಿರುವಾಗ, ಇನ್ನು ಸರ್ಕಾರಕ್ಕೆ ಮಣ್ಣು ಮುಕ್ಕಿಸುವುದು ಯಾವ ಲೆಕ್ಕ?’ ಎಂದು ಪ್ರಜ್ಞಾವತಿ ಮಾತಾಜಿ ಹೇಳಿದರು.

ನಾಂದಣಿಯ ಜಿನಸೇನ ಭಟ್ಟಾರಕ ಪಟ್ಟಾಚಾರ್ಯ, ಕೊಲ್ಹಾಪುರದ ಲಕ್ಷ್ಮೀಸೇನ ಭಟ್ಟಾರಕ ಪಟ್ಟಾಚಾರ್ಯ, ವರೂರಿನ ಧರ್ಮಸೇನ ಭಟ್ಟಾರಕ ಪಟ್ಟಾಚಾರ್ಯ ಸ್ವಾಮೀಜಿ, ಸಮಾಜದ ಮುಖಂಡರಾದ ಅಣ್ಣಾಸಾಹೇಬ ಹವಲೆ, ಡಾ.ಎನ್.ಎ. ಮಗದುಮ್, ಉತ್ತಮ್ ಪಾಟೀಲ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



ಚಿಕ್ಕೋಡಿ ತಾಲ್ಲೂಕಿನ ಶಮನೇವಾಡಿಯಲ್ಲಿ ಗುರುವಾರ ನಡೆದ 33ನೇ ದೀಕ್ಷಾ ಜಯಂತಿ ಕಾರ್ಯಕ್ರಮದಲ್ಲಿ ರಾಷ್ಟ್ರಸಂತ, ಆಚಾರ್ಯ ಗುಣಧರನಂದಿ ಮಹಾರಾಜ ಮಾತನಾಡಿದರು –ಪ್ರಜಾವಾಣಿ ಚಿತ್ರ

ಜೈನ ಯುವತಿಯರು ಮದುವೆಗೂ ಮೊದಲು ಫೋಟೊ–ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹಾಕುವುದನ್ನು ನಿಲ್ಲಿಸಬೇಕು

ಆಚಾರ್ಯ ಗುಣಧರನಂದಿ ಮಹಾರಾಜ, ವರೂರಿನ ನವಗ್ರಹ ತೀರ್ಥಕ್ಷೇತ್ರ, ಹುಬ್ಬಳ್ಳಿ

ನಿರ್ಣಯಗಳು

- ಜೈನ ನಿಗಮ ಮಂಡಳಿ ಸ್ಥಾಪನೆ
- ಜೈನ ಸಾಧುಗಳಿಗೆ ರಕ್ಷಣೆ
- ಜೈನ ಬಡ ವಿದ್ಯಾರ್ಥಿಗಳಿಗೆ ಉಚಿತ ವಸತಿ ನಿಲಯ ಸ್ಥಾಪನೆ
- ಪ್ರತಿ ಜಿಲ್ಲೆಯಲ್ಲಿ ಆಸ್ಪತ್ರೆ ಸ್ಥಾಪಿಸಿ, ಬಡವರಿಗೆ ಉಚಿತ ಚಿಕಿತ್ಸೆ ಸಿಗಲಿ
- ಪ್ರತಿ ಗ್ರಾಮದಲ್ಲಿ ಮುನಿ ನಿವಾಸ, ಮಂಗಲ ಭವನ ನಿರ್ಮಾಣ

ಪರಿಭಾವಿತ ಅರಣ್ಯ ಸಮಸ್ಯೆ ಪರಿಹಾರಕ್ಕೆ ‘ಸುಪ್ರೀಂ’ಗೆ ಐಎ – ಈಶ್ವರ ಖಂಡ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪರಿಭಾವಿತ ಅರಣ್ಯ (ಡೀಮ್ಡ್ ಫಾರೆಸ್ಟ್) ಭೂಮಿ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಉದ್ದೇಶದಿಂದ ಸುಪ್ರೀಂ ಕೋರ್ಟ್‌ಗೆ ಮಧ್ಯಂತರ ಅರ್ಜಿ (ಐಎ) ಸಲ್ಲಿಸಲಾಗುವುದು’ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

‘9.94 ಲಕ್ಷ ಹೆಕ್ಟೇರ್‌ನಷ್ಟಿದ್ದ ಪರಿಭಾವಿತ ಅರಣ್ಯವನ್ನು 3.33 ಲಕ್ಷ ಹೆಕ್ಟೇರ್‌ಗೆ ಇಳಿಸಿರುವ ಕುರಿತು ಸರ್ಕಾರವು ಸುಪ್ರೀಂ ಕೋರ್ಟ್‌ಗೆ 2022ರಲ್ಲಿ ಪ್ರಮಾಣಪತ್ರ ಸಲ್ಲಿಸಿದೆ. ಕೆಲವು ಜಿಲ್ಲೆಗಳಲ್ಲಿ ಈ ಪ್ರದೇಶದಲ್ಲಿ ಮನೆ, ರೈತರ ಪಟ್ಟಾ ಜಮೀನು, ಆಸ್ಪತ್ರೆ, ಅಂಗನವಾಡಿಗಳಿವೆ. ಅದಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಜಂಟಿ ಸಮೀಕ್ಷೆ ನಡೆಸಿ, ಪರ್ಯಾಯ ಭೂಮಿ ನೀಡುವುದಾಗಿ ಸುಪ್ರೀಂ ಕೋರ್ಟ್‌ಗೆ ಮಧ್ಯಂತರ ಅರ್ಜಿ ಸಲ್ಲಿಸಿದ ನಂತರ ಕೇಂದ್ರ ಸರ್ಕಾರದ ಅನುಮತಿ ಪಡೆದು ಪರಿಹಾರ ಕಂಡುಕೊಳ್ಳಬಹುದು’ ಎಂದು ಖಂಡ್ರೆ ಅಭಿಪ್ರಾಯಪಟ್ಟರು.

ಯಾದಗಿರಿ ಜಿಲ್ಲೆ ಸುರಪುರ ತಾಲ್ಲೂಕಿನ ಏವೂರು ಗ್ರಾಮದ ಸರ್ವೆ ನಂ. 115ರಲ್ಲಿ ರೈತರಿಗೆ ಮಂಜೂರಾಗಿರುವ 48 ಎಕರೆ ಜಮೀನು ಪರಿಭಾವಿತ ಅರಣ್ಯ ವ್ಯಾಪ್ತಿಯಲ್ಲಿದೆ. ಅಲ್ಲಿ ಎದುರಾಗಿರುವ ಸಮಸ್ಯೆ ಕುರಿತಂತೆ ಸಾರ್ವಜನಿಕ ಉದ್ದಿಮೆಗಳ ಸಚಿವ ಶರಣಬಸಪ್ಪ ದರ್ಶನಾಪುರ ಅವರ ಸಹ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಖಂಡ್ರೆ, ‘ಈ ಸರ್ವೆ ನಂಬರ್‌ನಲ್ಲಿ ಭೂಮಿ ಮಂಜೂರಾಗಿರುವ ರೈತರ ಕುಂದುಕೊರತೆ ಆಲಿಸಿ, ಆದಷ್ಟು ಶೀಘ್ರ ಮುಖ್ಯಮಂತ್ರಿ ಜೊತೆ ಚರ್ಚಿಸಲಾಗುವುದು. ಬಳಿಕ ಕಾನೂನು ತಜ್ಞರ ಅಭಿಪ್ರಾಯ ಪಡೆದು ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸುವ ಬಗ್ಗೆಯೂ ಪರಿಶೀಲಿಸಲಾಗುವುದು’ ಎಂದರು.

‘ಅರಣ್ಯ ಇಲಾಖೆ ರೈತರ ಮೇಲೆ ದಾಖಲಿಸಿರುವ ಪ್ರಕರಣಗಳನ್ನು ಕೈಬಿಡಬೇಕು’ ಎಂದು ದರ್ಶನಾಪೂರ ಮನವಿ ಮಾಡಿದಾಗ, ಕಾನೂನು ಕೋಶದ ಅಭಿಪ್ರಾಯ ಪಡೆದು ಮುಂದಿನ ಕ್ರಮ ಕೈಗೊಳ್ಳುವುದಾಗಿ ಖಂಡ್ರೆ ಭರವಸೆ ನೀಡಿದರು.



ರಾಮನಿಗೆ ಸುವರ್ಣ ಅಟ್ಟೆ ಪ್ರಭಾವಳಿ

ಉಡುಪಿ: ಅಯೋಧ್ಯೆಯ ಶ್ರೀರಾಮನಿಗೆ ಅರ್ಪಿಸಲು ಕೋಟದ ಕಾಶಿಮಠ ಸಂಸ್ಥಾನವು ಸುವರ್ಣ ಅಟ್ಟೆ ಪ್ರಭಾವಳಿ ಸಿದ್ಧಪಡಿಸಿದೆ.

ಸ್ವರ್ಣಮಯ ಅಟ್ಟೆಯ ಪ್ರಭಾವಳಿಯನ್ನು 1 ಕೆ.ಜಿ ಚಿನ್ನ, 3 ಕೆ.ಜಿ ಬೆಳ್ಳಿಯಿಂದ ₹70 ಲಕ್ಷ ವೆಚ್ಚದಲ್ಲಿ ಸ್ವರ್ಣ ಜುವೆಲ್ಲರ್ಸ್‌ನಿಂದ ತಯಾರಿಸಲಾಗಿದ್ದು, ಅಯೋಧ್ಯೆಗೆ ಕೊಂಡೊಯ್ದು ಸಮರ್ಪಿಸಲಾಗುವುದು.

ಕೇಂದ್ರದ ತಾರತಮ್ಯ ನೀತಿ ವಿರೋಧಿಸಿ ದೆಹಲಿಯ ಜಂತರ್ ಮಂತರ್‌ನಲ್ಲಿ ಹೋರಾಟ

ಕೇಂದ್ರದ ವಿರುದ್ಧ ಎಡಪಕ್ಷಗಳ ಪ್ರತಿಭಟನೆ



ಕೇಂದ್ರ ಸರ್ಕಾರದ ತಾರತಮ್ಯ ನೀತಿಯನ್ನು ವಿರೋಧಿಸಿ ದೆಹಲಿಯ ಜಂತರ್ ಮಂತರ್ ಬಳಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸಿಪಿಐ (ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ, ಕೇರಳ ಸಿ.ಎಂ ಪಿಣರಾಯಿ ವಿಜಯನ್, ಪಂಜಾಬ್ ಸಿ.ಎಂ ಭಗವಂತ್ ಮಾನ್, ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ. ರಾಜಾ, ನ್ಯಾಷನಲ್ ಕಾನ್ಫರೆನ್ಸ್ ನಾಯಕ ಫಾರೂಕ್ ಅಬ್ದುಲ್ಲಾ ಸೇರಿದಂತೆ ನಾಯಕರು ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ರಾಜ್ಯಗಳಿಗೆ ತೆರಿಗೆ ಪಾಲನ್ನು ಸರಿಯಾಗಿ ನೀಡುತ್ತಿಲ್ಲ ಎಂದು ಆರೋಪಿಸಿ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ನೇತೃತ್ವದಲ್ಲಿ ಎಲ್‌ಡಿಎಫ್ ಹಾಗೂ ಇತರ ಕೆಲ ಪಕ್ಷಗಳ ನಾಯಕರು ಗುರುವಾರ ದೆಹಲಿಯ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸಿದರು.

ವಿರೋಧ ಪಕ್ಷಗಳ ಆಡಳಿತವಿರುವ ರಾಜ್ಯಗಳಲ್ಲಿ ಕೇಂದ್ರ ಸರ್ಕಾರವು ರಾಜ್ಯಪಾಲರನ್ನು ಬಳಸಿಕೊಂಡು, ಪ್ರಚೋದನಾ ಕಾರ್ಯಗಳಿಗೆ ಅಡ್ಡಿಪಡಿಸುತ್ತಿದೆ ಎಂದು ಪ್ರತಿಭಟನಕಾರರು ದೂರಿದರು.

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್, ನ್ಯಾಷನಲ್ ಕಾನ್ಫರೆನ್ಸ್ ನಾಯಕ ಫಾರೂಕ್ ಅಬ್ದುಲ್ಲಾ, ಡಿಎಂಕೆ ಮುಖಂಡರಾದ ತಿರುಚ್ಚಿ ಶಿವ, ಪಳನಿವೇಲ್ ತ್ಯಾಗರಾಜನ್, ಸಿಪಿಐ (ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ, ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ. ರಾಜಾ, ಎಲ್‌ಡಿಎಫ್ ಸಂಸದರು, ಶಾಸಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಈ ವೇಳೆ ಮಾತನಾಡಿದ ಪಿಣರಾಯಿ ವಿಜಯನ್, 'ಪ್ರತಿಭಟನೆಯು ಉತ್ತರ ಮತ್ತು ದಕ್ಷಿಣ ಪ್ರತ್ಯೇಕತೆಯನ್ನು ಉತ್ತೇಜಿಸುವುದಿಲ್ಲ. ಒಕ್ಕೂಟ ವ್ಯವಸ್ಥೆಯ ವಿರುದ್ಧವೂ ಅಲ್ಲ. ಬದಲಿಗೆ ಇದು ರಾಜ್ಯದ ಜನರ ಹಿತಾಸಕ್ತಿಗಳನ್ನು ಖಚಿತಪಡಿಸಿಕೊಳ್ಳಲು ನಡೆಸುತ್ತಿರುವ ಪ್ರತಿಭಟನೆಯಾಗಿದೆ. ಇದು ಕೇಂದ್ರದ ತಾರತಮ್ಯ ನೀತಿಯನ್ನು ವಿರೋಧಿಸುವ ಪ್ರಜಾಸತ್ತಾತ್ಮಕ ಮಾದರಿಯ ಪ್ರತಿಭಟನೆ ಆಗಿದೆ' ಎಂದರು.

'ಭಾರತದ ಒಕ್ಕೂಟ ವ್ಯವಸ್ಥೆಯನ್ನು ಸಂರಕ್ಷಿಸಲು ನಾವೆಲ್ಲರೂ ಇಲ್ಲಿ ಒಗ್ಗೂಡಿದ್ದೇವೆ. ರಾಜ್ಯಗಳಿಗೆ ನ್ಯಾಯಯುತವಾಗಿ ದೊರೆಯಬೇಕಾದುದನ್ನು ಖಾತರಿ ಪಡಿಸುವ ನಿಟ್ಟಿನಲ್ಲಿ ಹೊಸ ಹೋರಾಟವನ್ನು ಆರಂಭಿಸಿದ್ದೇವೆ' ಎಂದು ಅವರು ಹೇಳಿದರು.

ಕೇಂದ್ರದಿಂದ ಅತಿಕ್ರಮಣ: 'ಕಾನೂನು ಮತ್ತು ಸುವ್ಯವಸ್ಥೆ ಸೇರಿದಂತೆ ಹಲವಾರು ಕ್ಷೇತ್ರಗಳಲ್ಲಿ ಕೇಂದ್ರ ಸರ್ಕಾರವು ರಾಜ್ಯಗಳ ಅಧಿಕಾರ ಮತ್ತು ಕರ್ತವ್ಯಗಳನ್ನು ಅತಿಕ್ರಮಿಸಿದೆ' ಎಂದು ಅವರು ದೂರಿದರು.

'ವಿರೋಧ ಪಕ್ಷಗಳ ಆಡಳಿತ ಇರುವ ರಾಜ್ಯಗಳಲ್ಲಿ ರಾಜ್ಯಪಾಲರು ಕೇಂದ್ರದ ಅಣತಿಯಂತೆ ನಡೆದುಕೊಳ್ಳುತ್ತಿದ್ದಾರೆ. ಈ ಮೂಲಕ ಅವರು ರಾಜ್ಯ ಸರ್ಕಾರದ ಕೆಲಸಗಳಿಗೆ ಅಡ್ಡಿಪಡಿಸುತ್ತಿದ್ದಾರೆ' ಎಂದು ವಿಜಯನ್ ಆರೋಪಿಸಿದರು.

'ಪ್ರತಿಪಕ್ಷಗಳ ಆಡಳಿತವಿರುವ ರಾಜ್ಯಗಳಲ್ಲಿ ರಾಜ್ಯಪಾಲರು ಹೇಗೆ ನಡೆದುಕೊಳ್ಳುತ್ತಿದ್ದಾರೆ ಎಂಬುದೇ ಕೇಂದ್ರ ಸರ್ಕಾರದ ಧೋರಣೆಯನ್ನು ಪ್ರತಿಬಿಂಬಿಸುತ್ತದೆ. ಸಾಂವಿಧಾನಿಕವಾಗಿ ರಾಜ್ಯಪಾಲರು ಆಯಾ ರಾಜ್ಯಗಳ ಸಚಿವ ಸಂಪುಟಗಳ ಸಲಹೆಯಂತೆ ಕರ್ತವ್ಯಗಳನ್ನು ನಿರ್ವಹಿಸಬೇಕು. ಆದರೆ ಪ್ರತಿಪಕ್ಷಗಳ ಆಡಳಿತವಿರುವ ರಾಜ್ಯಗಳಲ್ಲಿ ರಾಜ್ಯಪಾಲರು ಕೇಂದ್ರ ಸರ್ಕಾರದ ಅಣತಿಯಂತೆ ಕಾರ್ಯ ನಿರ್ವಹಿಸುತ್ತಿದ್ದಾರೆ' ಎಂದು ಅವರು ದೂರಿದರು.

'ಪಂಜಾಬ್, ಪಶ್ಚಿಮ ಬಂಗಾಳ, ಒಡಿಶಾ, ತೆಲಂಗಾಣ, ತಮಿಳುನಾಡು ಹೀಗೆ ಹಲವು ರಾಜ್ಯಗಳಲ್ಲಿ ರಾಜ್ಯಪಾಲರು ಹೇಗೆ ಅಧಿಕಾರ ನಡೆಸುತ್ತಿದ್ದಾರೆ ಎಂಬುದನ್ನು ನಾವೆಲ್ಲ ನೋಡಿದ್ದೇವೆ. ಕೇರಳ ಸೇರಿದಂತೆ ಕೆಲ ರಾಜ್ಯಗಳಲ್ಲಿ ರಾಜ್ಯಪಾಲರು ಶಾಸಕಾಂಗದ ಸ್ವಾಯತ್ತತೆಯಲ್ಲಿ ಮಧ್ಯ ಪ್ರವೇಶಿಸಿರುವುದನ್ನೂ ಗಮನಿಸಿದ್ದೇವೆ' ಎಂದ ಅವರು, 'ದೇಶದಲ್ಲಿ ಒಕ್ಕೂಟ ವ್ಯವಸ್ಥೆಯನ್ನು ಉಳಿಸುವುದು ನಮ್ಮ ಪ್ರತಿಭಟನೆಯ ಉದ್ದೇಶವಾಗಿದೆ' ಎಂದು ಹೇಳಿದರು.

ಕೇಂದ್ರ ಯುದ್ಧ ಸಾರಿದೆ: ಕೇಜ್ರಿವಾಲ್

ವಿರೋಧ ಪಕ್ಷಗಳ ಆಡಳಿತ ಇರುವ ರಾಜ್ಯಗಳ ವಿರುದ್ಧ ಕೇಂದ್ರ ಸರ್ಕಾರ ಯುದ್ಧ ನಡೆಸುತ್ತಿದೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ವಾಗ್ದಾಳಿ ನಡೆಸಿದರು.

ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಅವರು, 'ವಿರೋಧ ಪಕ್ಷಗಳ ನೇತೃತ್ವದ ಸರ್ಕಾರಗಳು ದೇಶದ 70 ಕೋಟಿ ಜನರನ್ನು ಪ್ರತಿನಿಧಿಸುತ್ತಿವೆ. ಆದರೆ ಬಿಜೆಪಿಯು ಈ ರಾಜ್ಯಗಳ ವಿರುದ್ಧ ಸಮರ ಸಾರಿದೆ. ಸ್ವಾತಂತ್ರ್ಯದ ಬಳಿಕ ಭಾರತ-ಪಾಕಿಸ್ತಾನದ ಪರಿಸ್ಥಿತಿಯನ್ನು ಸೃಷ್ಟಿಸಿದೆ' ಎಂದು ದೂರಿದರು.

ಕೇಂದ್ರ ಸರ್ಕಾರವು ರಾಜ್ಯಗಳಿಗೆ ಅನುದಾನ ನೀಡುತ್ತಿಲ್ಲ, ಬದಲಿಗೆ ರಾಜ್ಯಪಾಲರು, ಲೆಫ್ಟಿನೆಂಟ್ ಗವರ್ನರ್‌ಗಳನ್ನು ಬಳಸಿಕೊಂಡು ರಾಜ್ಯ ಸರ್ಕಾರಗಳ ಕಾರ್ಯಚಟುವಟಿಕೆಗಳಿಗೆ ಅಡ್ಡಿಪಡಿಸುತ್ತಿದೆ. ಅಲ್ಲದೆ ಕೇಂದ್ರೀಯ ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಅವರು ಆರೋಪಿಸಿದರು.

'ದೆಹಲಿಯ ಜನರು ₹ 2 ಲಕ್ಷ ಕೋಟಿಯಷ್ಟು ಆದಾಯ ತೆರಿಗೆಯಾಗಿ ಪಾವತಿಸುತ್ತಾರೆ. ಆದರೆ ಬದಲಿಯಾಗಿ ಕೇಂದ್ರ ಸರ್ಕಾರ ದೆಹಲಿಗೆ ಕೇವಲ ₹325 ಕೋಟಿ ನೀಡಿದೆ. ಬ್ರಿಟಿಷರು ಸಹ 100 ವರ್ಷಗಳಲ್ಲಿ ಇಷ್ಟು ಲೂಟಿ ಮಾಡಿರಲಿಲ್ಲ' ಎಂದು ಅವರು ದೂರಿದರು.

ಕಪ್ಪು ಬಟ್ಟೆ ಧರಿಸಿ ಕಲಾಪದಲ್ಲಿ ಭಾಗಿ

ಮಧ್ಯಂತರ ಬಜೆಟ್‌ನಲ್ಲಿ ತಮಿಳುನಾಡಿನ ಅಗತ್ಯ ಅನುದಾನ ಮಂಜೂರು ಮಾಡಿಲ್ಲ ಎಂದು ಆರೋಪಿಸಿ ಡಿಎಂಕೆ ಸದಸ್ಯರು ಗುರುವಾರ ಕಪ್ಪು ಬಟ್ಟೆ ಧರಿಸಿ ಲೋಕಸಭಾ ಕಲಾಪದಲ್ಲಿ ಪಾಲ್ಗೊಂಡರು. ಕೆಲ ದಿನಗಳಿಂದ ಈ ವಿಷಯವನ್ನು ಡಿಎಂಕೆ ನಾಯಕರು ಸಂಸತ್ತಿನ ಒಳಗೆ ಮತ್ತು ಹೊರಗೆ ಪ್ರಸ್ತಾಪಿಸುತ್ತಿದ್ದಾರೆ.

ಸಂಕಷ್ಟಕ್ಕೆ ಕೇರಳ ಸರ್ಕಾರದ ಪಾಲೂ ಇದೆ

ತಿರುವನಂತಪುರ (ಪಿಟಿಐ): ಕೇರಳದ ಆರ್ಥಿಕ ಸಂಕಷ್ಟಕ್ಕೆ ಕೇಂದ್ರ ಸರ್ಕಾರವನ್ನಷ್ಟೇ ದೂರುವುದು ಸರಿಯಲ್ಲ. ಕೇರಳ ಸರ್ಕಾರದ ದುರಾಡಳಿತ, ದುಂದುವೆಚ್ಚ ಮತ್ತು ಭ್ರಷ್ಟಾಚಾರವು ರಾಜ್ಯವನ್ನು ಆರ್ಥಿಕ ತೊಂದರೆಗೆ ಸಿಲುಕುವಂತೆ ಮಾಡಿದೆ. ಹೀಗಾಗಿ ದೆಹಲಿಯಲ್ಲಿ ಎಲ್‌ಡಿಎಫ್ ನಡೆಸಿದ ಪ್ರತಿಭಟನೆಯಲ್ಲಿ ನಾವು ಭಾಗಿಯಾಗಿಲ್ಲ ಎಂದು ಕಾಂಗ್ರೆಸ್ ನೇತೃತ್ವದ ಯುಡಿಎಫ್ ತಿಳಿಸಿದೆ.

'ಉತ್ತರಪ್ರದೇಶ 'ಬಿಮಾರು' ರಾಜ್ಯವಲ್ಲ'

ಪ್ರಜಾವಾಣಿ ವಾರ್ತೆ

ಲಖನೌ: ರಾಜಕೀಯ ಕಾರಣಗಳಿಂದ ಉತ್ತರಪ್ರದೇಶವನ್ನು 'ಬಿಮಾರು' ರಾಜ್ಯವೆಂದು ಬಿಂಬಿಸಲಾಗುತ್ತಿತ್ತು. ರಾಜ್ಯವು ಈಗ ಈ ಶ್ರೇಣಿಯನ್ನು ಮೀರಿ ಬೆಳೆದಿದೆ ಎಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಗುರುವಾರ ಹೇಳಿದರು.

ರಾಜ್ಯವು ಈಗ ದೇಶದಲ್ಲಿ ಎರಡನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗಿ ಬೆಳೆದಿದೆ ಎಂದು ಪ್ರತಿಪಾದಿಸಿದರು.

'ಬಿಮಾರು' (BIMARU) ಸಂಕ್ಷಿಪ್ತ ಪದವನ್ನು ಬಿಹಾರ, ಮಧ್ಯಪ್ರದೇಶ, ರಾಜಸ್ಥಾನ ಮತ್ತು ಉತ್ತರಪ್ರದೇಶ ರಾಜ್ಯಗಳನ್ನು ಉಲ್ಲೇಖಿಸಲು ಬಳಸಲಾಗುತ್ತಿದೆ. ಈ ರಾಜ್ಯಗಳು ಆರ್ಥಿಕ ಬೆಳವಣಿಗೆ, ಆರೋಗ್ಯ, ಶಿಕ್ಷಣ ಮತ್ತು ಇತರ ಕ್ಷೇತ್ರಗಳಲ್ಲಿ ಹಿಂದುಳಿದಿವೆ ಎಂಬುದನ್ನು ಇದು ಸೂಚಿಸುತ್ತದೆ.



ಯೋಗಿ ಆದಿತ್ಯನಾಥ

ಜತೆಯಲ್ಲೇ ಮೊಳಗಿದ ರಾಜ್ಯಗೀತೆ, ರಾಷ್ಟ್ರಗೀತೆ

ಕೋಲ್ಕತ್ತ (ಪಿಟಿಐ): ಒಂದೆಡೆ ರಾಜ್ಯಗೀತೆ ಮೊಳಗುತ್ತಿದ್ದರೆ, ಇನ್ನೊಂದೆಡೆ ಬಿಜೆಪಿ ಶಾಸಕರು ರಾಷ್ಟ್ರಗೀತೆ ಹಾಡಿದರು.

ಈ ಗೊಂದಲದ ನಡುವೆಯೇ ಪಶ್ಚಿಮ ಬಂಗಾಳದ ವಿಧಾನಸಭೆಯ ಬಜೆಟ್ ಅಧಿವೇಶನ ಗುರುವಾರ ಆರಂಭವಾಯಿತು.

ಅಧಿವೇಶನ ಆರಂಭಕ್ಕೂ ಮುನ್ನ ಸ್ಪೀಕರ್ ಬಿಮನ್ ಬ್ಯಾನರ್ಜಿ ಅವರು, ರಾಜ್ಯಗೀತೆಯಾದ 'ಬಂಗ್ಲಾರ್ ಮಾಟಿ ಬಂಗ್ಲಾರ್ ಜಲ್' ಅನ್ನು 'ಪ್ಲೇ' ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಿದರು. ರಾಜ್ಯಗೀತೆ ಆರಂಭವಾಗುತ್ತಿದ್ದಂತೆಯೇ ಎದ್ದು ನಿಂತ ಬಿಜೆಪಿ ಶಾಸಕರು ರಾಷ್ಟ್ರ ಗೀತೆ ಹಾಡಿದರು.

'ರಾಜ್ಯ ಗೀತೆಯನ್ನು ಕೊನೆಯಲ್ಲಿ ಹಾಡಲಾಗುತ್ತದೆ. ಆದರೆ ರಾಜ್ಯಗೀತೆ ನುಡಿಸುವಾಗ ಬಿಜೆಪಿಯವರು ರಾಷ್ಟ್ರ ಗೀತೆ ಹಾಡಿದ್ದಾರೆ. ಈ ಮೂಲಕ ಅವರು ರಾಷ್ಟ್ರ ಗೀತೆಗೆ ಅವಮಾನ ಮಾಡಿದ್ದಾರೆ' ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಖಂಡಿಸಿದರು.

'ಇದಕ್ಕೆ ಪ್ರತಿಕ್ರಿಯಿಸಿದ ಬಿಜೆಪಿ ಶಾಸಕ ಅಗ್ನಿಮಿತ್ರ ಪೌಲ್ ಅವರು, 'ಸರ್ಕಾರಿ ಕಾರ್ಯಕ್ರಮ ಅಥವಾ ಬಜೆಟ್ ಅಧಿವೇಶನದ ಆರಂಭ ಮತ್ತು ಅಂತ್ಯದಲ್ಲಿ ಯಾವಾಗಲೂ ರಾಷ್ಟ್ರಗೀತೆಯನ್ನು ಹಾಡಲಾಗುತ್ತದೆ' ಎಂದರು.

ಬಂಗಾಳಿ ಹೊಸ ವರ್ಷದ ಮೊದಲ ದಿನವಾದ ಪೊಯಿಲಾ ಬೋಯಿಶಾಖ ಅನ್ನು ರಾಜ್ಯ ದಿನವನ್ನಾಗಿ ಹಾಗೂ ನೊಬೆಲ್ ಪ್ರಶಸ್ತಿ ವಿಜೇತ ರವೀಂದ್ರನಾಥ ಟ್ಯಾಗೋರ್ ಬರೆದ 'ಬಂಗ್ಲಾರ್ ಮಾಟಿ ಬಂಗ್ಲಾರ್ ಜಲ್' ಹಾಡನ್ನು ರಾಜ್ಯ ಗೀತೆ ಎಂದು ಪಶ್ಚಿಮ ಬಂಗಾಳ ಸರ್ಕಾರ ಕಳೆದ ತಿಂಗಳು ಅಧಿಸೂಚನೆ ಹೊರಡಿಸಿದೆ.

'ಚುನಾವಣೆ ಗೆಲ್ಲುವ ಸುಸ್ಥಿತಿಯಲ್ಲಿ ಎನ್‌ಡಿಎ'

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭೆಗೆ ತಕ್ಷಣವೇ ಚುನಾವಣೆ ನಡೆದರೂ ಎನ್‌ಡಿಎ ಮೈತ್ರಿಕೂಟವು 335 ಸೀಟುಗಳನ್ನು ಗೆಲ್ಲಲಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಜನಪ್ರಿಯತೆ 2015ರ ನಂತರ ಹೋಲಿಸಿದರೆ ನಾಲ್ಕನೇ ಬಾರಿಗೆ ಶೇ 70ರ ಗಡಿಯನ್ನು ದಾಟಿದೆ.

'ಇಂಡಿಯಾ ಟುಡೆ ಮತ್ತು ಸಿ-ವೋಟರ್ ಮೂಡ್ ಆಫ್ ದ ನೇಷನ್' ಸಮೀಕ್ಷೆಯಲ್ಲಿ ಈ ಅಂಶವು ವ್ಯಕ್ತವಾಗಿದೆ.

ಸಮೀಕ್ಷೆಯ ಅಂದಾಜಿನಂತೆ 'ಇಂಡಿಯಾ' ಮೈತ್ರಿಕೂಟ 166 ಸೀಟು ಗೆಲ್ಲಲಿದೆ. 2024ರ ಲೋಕಸಭೆ ಚುನಾವಣೆಯು ಹತ್ತಿರವಾಗುತ್ತಿರುವಂತೆಯೇ ದೇಶದ ಪ್ರಸ್ತುತ ರಾಜಕೀಯ ಚಿತ್ರಣ ಕುರಿತ ವಸ್ತುಸ್ಥಿತಿ ಅರಿಯುವ ಯತ್ನವನ್ನು ಸಮೀಕ್ಷೆ ಮಾಡಿದೆ.

ಬಿಜೆಪಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟ (ಎನ್‌ಡಿಎ) ಮೂರನೇ ಬಾರಿಗೆ ಅಧಿಕಾರದ ಗದ್ದುಗೆಗೆ ಏರುವ ಸುಸ್ಥಿತಿಯಲ್ಲಿದೆ. ಆದರೆ, ಎನ್‌ಡಿಎಯ ಈಗಿನ ಘೋಷವಾಕ್ಯದಂತೆ 400 ಸೀಟು ಗೆಲ್ಲುವ ಗುರಿ ದಾಟುವ ಸಾಧ್ಯತೆಗಳು ಕಡಿಮೆ.

ಸಮೀಕ್ಷೆಯ ಪ್ರಕಾರ, ಸದ್ಯದಲ್ಲೇ ಲೋಕಸಭೆಗೆ ಚುನಾವಣೆ ನಡೆದರೂ ಎನ್‌ಡಿಎ ಮೈತ್ರಿಕೂಟವು 335 ಸೀಟು ಗೆಲ್ಲಲಿದೆ.

'ಮೂಡ್ ಆಫ್ ದ ನೇಷನ್' ಅನ್ನು ಫೆಬ್ರುವರಿ 2024ರ ಸಮೀಕ್ಷೆಗೆ, ಲೋಕಸಭೆಯ ಎಲ್ಲ ಕ್ಷೇತ್ರಗಳಿಂದ ಒಟ್ಟು 35,801 ಜನರು ಪ್ರತಿಕ್ರಿಯಿಸಿದ್ದಾರೆ. ಈ ಸಮೀಕ್ಷೆಯನ್ನು 2023ರ ಡಿಸೆಂಬರ್ 15 ಮತ್ತು 2024ರ ಜನವರಿ 28ರ ನಡುವೆ ನಡೆಸಲಾಗಿದೆ. ಕಾಂಗ್ರೆಸ್ ಪಕ್ಷ ಒಳಗೊಂಡ ಪ್ರತಿಪಕ್ಷಗಳ 'ಇಂಡಿಯಾ' ಮೈತ್ರಿಕೂಟವು 166 ಸೀಟು ಗೆಲ್ಲುವ ಸಾಧ್ಯತೆಗಳಿವೆ. ಪಕ್ಷವಾರು ಸಾಧನೆಗಳನ್ನು ಗಮನಿಸುವುದಾದರೆ ಬಿಜೆಪಿಯು ಒಟ್ಟು 543 ಸೀಟುಗಳ ಪೈಕಿ 304 ಸೀಟು ಗೆಲ್ಲುವ ಸಾಧಯತೆಗಳಿವೆ. ಈ ಮೂಲಕ ಬಿಜೆಪಿಯೇ ಸ್ವತಂತ್ರವಾಗಿ ಸರಳ ಬಹುಮತಕ್ಕೆ ಬೇಕಾದ ಸ್ಥಾನಗಳನ್ನು ಗೆಲ್ಲುವ ಸ್ಥಿತಿಯಲ್ಲಿದೆ.

'ಕರ್ನಾಟಕದಲ್ಲಿ ಎನ್‌ಡಿಎಗೆ 24 ಸ್ಥಾನ'

ಲೋಕಸಭೆಗೆ ಈಗ ಚುನಾವಣೆ ನಡೆದರೆ ಕರ್ನಾಟಕದಲ್ಲಿ ಒಟ್ಟು 28 ಕ್ಷೇತ್ರಗಳ ಪೈಕಿ ಎನ್‌ಡಿಎ 24ರಲ್ಲಿ ಗೆಲ್ಲುವ ಸಾಧ್ಯತೆಗಳಿವೆ. ಪ್ರತಿಪಕ್ಷಗಳ ಮೈತ್ರಿಕೂಟ 4 ಸೀಟು ಗೆಲ್ಲುವುದಕ್ಕೆ ಸೀಮಿತಗೊಳ್ಳಲಿದೆ ಎಂದು ಸಮೀಕ್ಷೆ ತಿಳಿಸಿದೆ.

'ಇಳಿ ವಯಸ್ಸಿನಲ್ಲಿ ದೇವೇಗೌಡರಿಗೆ ಏನಾಯ್ತು?'

ನವದೆಹಲಿ (ಪಿಟಿಐ): 'ಎಚ್‌.ಡಿ. ದೇವೇಗೌಡರು ಇಡೀ ಬದುಕನ್ನು ಜಾತ್ಯತೀತತೆ, ಸಮಾಜವಾದಕ್ಕಾಗಿ ಮತ್ತು ರೈತರ ಹಿತಾಸಕ್ತಿ ರಕ್ಷಿಸಲು ಕಳೆದರು. ಈ ಇಳಿ ವಯಸ್ಸಿನಲ್ಲಿ ಏಕಾಏಕಿ ಅವರಿಗೆ ಏನಾಯಿತೋ ತಿಳಿಯದು..'

ರಾಜ್ಯಸಭೆಯ ಅವಧಿಯನ್ನು ಪೂರೈಸುತ್ತಿರುವ 68 ಸದಸ್ಯರಿಗೆ ಗುರುವಾರ ಸದನದಲ್ಲಿ ಬೀಳ್ಕೊಡುಗೆ ಭಾಷಣ ಮಾಡಿದ ವಿರೋಧಪಕ್ಷ ನಾಯಕ, ಕಾಂಗ್ರೆಸ್‌ನ ಮಲ್ಲಿಕಾರ್ಜುನ ಖರ್ಗೆ ಈ ಮಾತು ಹೇಳಿದರು.

ತಮ್ಮ ಭಾಷಣದಲ್ಲಿ ಖರ್ಗೆ ಅವರು ಗೌಡರ ಜೊತೆಗಿನ ಸುದೀರ್ಘ ಅವಧಿಯ ಬಾಂಧವ್ಯವನ್ನು ಮೆಲುಕು ಹಾಕಿದರು. ಖರ್ಗೆ ಅವರ ಮಾತುಗಳು ಒಂದು ಹಂತದಲ್ಲಿ ಸದಸ್ಯರಲ್ಲಿ ನಗು ಮೂಡಿಸಿತು.

'ಗೌಡರು ಇತ್ತೀಚೆಗೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಅತಿಯಾಗಿ ಹೊಗಳುತ್ತಿದ್ದಾರೆ. ಅಪ್ಪಿಕೊಳ್ಳುತ್ತಿದ್ದಾರೆ. ಗೌಡರಿಗೆ ಯಾರನ್ನು ಹೊಗಳುವ ಹವ್ಯಾಸವೇ ಇಲ್ಲ. ಅಂತಹವರಿಗೆ ಈ ಇಳಿವಯಸ್ಸಿನಲ್ಲಿ ಏನಾಯಿತೊ? ಅವರ ಹವ್ಯಾಸ ಬದಲಾಗಲು ಕಾರಣವಾದುದಾದರೂ ಏನು' ಎಂದೂ ಖರ್ಗೆ ಪ್ರಶ್ನಿಸಿದರು.

ಈ ಮಾತಿಗೆ ಪಕ್ಷಭೇದವಿಲ್ಲದೆ ಸದಸ್ಯರು ನಕ್ಕರು. ಸದನದಲ್ಲಿದ್ದ ಪ್ರಧಾನಿ ಮೋದಿ ಅವರೂ ಈ ನಗುವಿನಲ್ಲಿ ಭಾಗಿಯಾದರು.

ಸದ್ಯ, ಅವಧಿಯನ್ನು ಪೂರೈಸುತ್ತಿರುವ ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರ 10 ವರ್ಷಗಳ ಆಡಳಿತಾವಧಿಯ ಸಾಧನೆಗಳನ್ನು ಖರ್ಗೆ ಅವರು ಇದೇ ಸಂದರ್ಭದಲ್ಲಿ ಪ್ರಮುಖವಾಗಿ ಉಲ್ಲೇಖಿಸಿದರು.

ಕೆಲ ಸದಸ್ಯರ ಆರ್ಥಿಕ ಸ್ಥಿತಿ ಕುರಿತು ಗಮನಸೆಳೆದ ಖರ್ಗೆ ಅವರು, ನಿವೃತ್ತಿಯ ಬಳಿಕ ಬದುಕು ಸಾಗಿಸಲು ಕೆಲವರಿಗೆ ಹಣದ ಸಮಸ್ಯೆ ಇರುತ್ತದೆ. ಸರ್ಕಾರ ಅಂತಹವರಿಗಾಗಿ ಏನಾದರೂ ಮಾಡಬೇಕು ಎಂದರು.

'ಖರ್ಗೆ ಪ್ರಧಾನಿಯಾಗುವುದನ್ನು ಕಾಂಗ್ರೆಸ್ ಒಪ್ಪುತ್ತದೆಯೇ?'

ಕಾಂಗ್ರೆಸ್‌ನ ಹೈಕಮಾಂಡ್ ಸಂಸ್ಕೃತಿಯ ಕುರಿತು ವಾಗ್ದಾಳಿ ನಡೆಸಿರುವ ಜೆಡಿಎಸ್ ವರಿಷ್ಠ ಹಾಗೂ ರಾಜ್ಯಸಭಾ ಸದಸ್ಯ ಎಚ್‌.ಡಿ.ದೇವೇಗೌಡ, 'ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ದೇಶದ ಪ್ರಧಾನಿಯಾದರೆ ಕಾಂಗ್ರೆಸ್ ಪಕ್ಷವು ಸಹಿಸಿಕೊಳ್ಳುತ್ತದೆಯೇ' ಎಂದು ಪ್ರಶ್ನಿಸಿದರು.

ರಾಜ್ಯಸಭೆಯಲ್ಲಿ ನಿವೃತ್ತಿಯಾಗುತ್ತಿರುವ ಸದಸ್ಯರ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದ ಅವರು, ತಮ್ಮ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ಬಾಂಧವ್ಯದ ಬಗ್ಗೆ ವ್ಯಂಗ್ಯವಾಡಿದ ಖರ್ಗೆ ಅವರಿಗೆ ತಿರುಗೇಟು ಕೊಟ್ಟರು. 'ಖರ್ಗೆ ಅವರೇ.. ನೀವು ಪ್ರಧಾನಮಂತ್ರಿಯಾದರೆ, ನೀವು ಅಧ್ಯಕ್ಷರಾಗಿರುವ ಕಾಂಗ್ರೆಸ್ ಪಕ್ಷ ಮುಕ್ತವಾಗಿ ಬೆಂಬಲ ಕೊಡುತ್ತದೆಯೇ? ಆ ಬಗ್ಗೆ ಹೇಳಿ' ಎಂದರು.

'ಖರ್ಗೆ ಅವರು ಪ್ರಾಮಾಣಿಕ ವ್ಯಕ್ತಿ. ಡಾ.ಮನಮೋಹನ್ ಸಿಂಗ್ ಅವರು ಅಪ್ಪಟ ಪ್ರಾಮಾಣಿಕ ವ್ಯಕ್ತಿ. ಆದರೆ, ಕಾಂಗ್ರೆಸ್ ತನ್ನನ್ನು ತಾನೇ ದುರ್ಬಲಗೊಳಿಸಿಕೊಳ್ಳುತ್ತಿದೆ. ಖರ್ಗೆ ಅವರು ಮುಖ್ಯಮಂತ್ರಿ ಆಗಬೇಕು ಎಂಬುದು ನನ್ನ ಅಪೇಕ್ಷೆ ಆಗಿತ್ತು. ಅವರೇನೂ ನನ್ನ ಸ್ವಂತದವರು ಅಲ್ಲ, ನನ್ನ ಸ್ವಂತ ಮಗನೂ ಅಲ್ಲ. ಆದರೆ, ಅವರಿಗೆ ಅರ್ಹತೆ ಇದೆ. ಅವರು ಉನ್ನತ ಸ್ಥಾನಕ್ಕೆ ಬಂದರೆ ಕಾಂಗ್ರೆಸ್ ನಾಯಕರು ಸಹಿಸಿಕೊಳ್ಳುತ್ತಾರೆಯೇ?' ಎಂದು ಅವರು ಕೇಳಿದರು.

ಹಿಂದೆ ರಾಜ್ಯಸಭೆ ಚುನಾವಣೆಯ ಸಂದರ್ಭದ ಪ್ರಸಂಗವನ್ನು ನೆನಪಿಸಿಕೊಂಡ ಮಾಜಿ ಪ್ರಧಾನಿಗಳು, 'ಕಾಂಗ್ರೆಸ್ ಎರಡನೇ ಅಭ್ಯರ್ಥಿ ಹಾಕುವ ಪ್ರಯತ್ನ ಮಾಡಿತ್ತು. ಆದರೆ, ಖರ್ಗೆ ಅವರು ದೇವೇಗೌಡರು ಸೋಲಬಾರದು. ಒಂದು ವೇಳೆ ಹಾಗೆ ಆಗುವುದೇ ಆಗಿದ್ದರೆ ನಾನು ಚುನಾವಣೆ ಕಣದಲ್ಲಿಯೇ ಇರುವುದಿಲ್ಲ ಎಂದು ಕಡ್ಡಿತುಂಡು ಮಾಡಿದಂತೆ ಹೇಳಿದ್ದರು. ಅದಕ್ಕಾಗಿ ನಾನು ಖರ್ಗೆ ಅವರಿಗೆ ಆಭಾರಿ ಆಗಿದ್ದೇನೆ' ಎಂದು ನೆನಪಿಸಿಕೊಂಡರು.

'ನಾನೆಂದೂ ಪಕ್ಷದಿಂದ ಪಕ್ಷವನ್ನು ಬದಲಿಸಿಲ್ಲ. ರಾಜಕೀಯ ನೈತಿಕತೆ ಕಳೆದುಕೊಂಡಿಲ್ಲ. ಆದರೆ, ಕಾಂಗ್ರೆಸ್‌ನ ಕೆಲವು ನಾಯಕರು ನನ್ನ ಪಕ್ಷವನ್ನು ಅಸ್ಥಿರಗೊಳಿಸಲು ಪ್ರಯತ್ನ ಮಾಡಿದ್ದಾಗ ಕೆಲ ನಿರ್ಧಾರಗಳನ್ನು ತೆಗೆದುಕೊಂಡಿದ್ದೇನೆ. ಬಿಜೆಪಿಗೆ ಬೆಂಬಲ ನೀಡಿದ್ದೇನೆ. ಆ ವ್ಯಕ್ತಿಗಳ ಹೆಸರುಗಳನ್ನು ನಾನು ಇಲ್ಲಿ ಪ್ರಸ್ತಾಪ ಮಾಡುವುದಿಲ್ಲ' ಎಂದೂ ಹೇಳಿದರು.

ಸಿಂಗ್ ಕುರಿತು ಮೋದಿ ಶ್ಲಾಘನೆ

ನವದೆಹಲಿ (ಪಿಟಿಐ): ರಾಜ್ಯಸಭೆಯಿಂದ ನಿವೃತ್ತರಾಗುತ್ತಿರುವ ಸದಸ್ಯರನ್ನು ಉದ್ದೇಶಿಸಿ ವಿದಾಯದ ಮಾತುಗಳನ್ನು ಆಡಿದ ಪ್ರಧಾನಿ ನರೇಂದ್ರ ಮೋದಿ ಅವರು, ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರು ದೇಶಕ್ಕೆ ಮತ್ತು ರಾಜ್ಯಸಭೆಗೆ ನೀಡಿರುವ ಕೊಡುಗೆಯ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು. ದೇಶದಲ್ಲಿ ಪ್ರಜಾತಂತ್ರದ ಬಗ್ಗೆ ಚರ್ಚೆ ಆದಾಗಲೆಲ್ಲ ಸಿಂಗ್ ಅವರು ನೆನಪಾಗುತ್ತಿರುತ್ತಾರೆ ಎಂದರು.

ಪ್ರಜಾತಂತ್ರವನ್ನು ಬಲಪಡಿಸಲೆಂದು ಸಿಂಗ್ ಅವರು ಗಾಲಿಕುರ್ಚಿಯ ಮೇಲೆ ಕುಳಿತು ರಾಜ್ಯಸಭೆಗೆ ಮತ ಚಲಾಯಿಸಲು ಬಂದಿದ್ದರು ಎಂದು ಮೋದಿ ಸ್ಮರಿಸಿದರು.

'ಸಿಂಗ್ ಅವರು ಆರು ಬಾರಿ ಈ ಸದನದ ಸದಸ್ಯರಾಗಿದ್ದರು. ತಮ್ಮ ಮೌಲಿಕ ಆಲೋಚನೆಗಳಿಂದ ಸದನಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ' ಎಂದು ಹೇಳಿದರು.

ಕೆಟ್ಟ ಕೆಲಸ ಮರೆಮಾಚಲು ಕಪ್ಪುಪತ್ರ: ಬಿಜೆಪಿ

ನವದೆಹಲಿ (ಪಿಟಿಐ): ಕಾಂಗ್ರೆಸ್ ಬಿಡುಗಡೆ ಮಾಡಿರುವ 'ಕಪ್ಪು ಪತ್ರ'ಕ್ಕೆ ಬಿಜೆಪಿ ತಿರುಗೇಟು ನೀಡಿದೆ. ಕಾಂಗ್ರೆಸ್ ಪಕ್ಷವು ತನ್ನ ಕೆಟ್ಟ ಕೆಲಸಗಳನ್ನು ಮರೆಮಾಚಲು ಇದನ್ನು ಹೊರತಂದಿದೆ ಎಂದು ಬಿಜೆಪಿ ದೂರಿದೆ. ಅಲ್ಲದೆ, ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ಕ್ರಮ ಕೈಗೊಳ್ಳುವುದು ನಿಲ್ಲಲಿ ಎಂಬ ಬಯಕೆ ಕಾಂಗ್ರೆಸ್ಸಿಗೆ ಇದೆ ಎಂದು ಆರೋಪಿಸಿದೆ.

'ಭ್ರಷ್ಟಾಚಾರದ ವಿಚಾರದಲ್ಲಿ ರಾಜಿ ಇಲ್ಲ ಎಂಬುದನ್ನು ಪ್ರಧಾನಿ ಮೋದಿ ಸ್ಪಷ್ಟಪಡಿಸಿದ್ದಾರೆ. ಸಾರ್ವಜನಿಕರ ಹಣವನ್ನು ಲೂಟಿ ಮಾಡಿದವರಿಗೆ ಸ್ಥಾನ ಇಲ್ಲ ಎಂದು ಬಿಜೆಪಿ ನಾಯಕ ರವಿಶಂಕರ್ ಪ್ರಸಾದ್ ಅವರು ಹೇಳಿದ್ದಾರೆ.

'ಹೇಮಂತ್ ಬಂಧನ– ರಾಜಭವನ ಪಾತ್ರವಿಲ್ಲ'

ರಾಂಚಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾರ್ಖಂಡ್‌ನ ಮಾಜಿ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರನ್ನು ಇ.ಡಿ ಬಂಧಿಸುವುದರ ಹಿಂದೆ ರಾಜಭವನದ ಕೈವಾಡ ಇದೆ ಎಂಬ ಆರೋಪವನ್ನು ಜಾರ್ಖಂಡ್ ರಾಜ್ಯಪಾಲ ಸಿ.ಪಿ. ರಾಧಾಕೃಷ್ಣನ್ ಅಲ್ಲಗಳೆದಿದ್ದಾರೆ.

'ನಾವು ಪ್ರಜಾಸತ್ತಾತ್ಮಕ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತೇವೆ. ರಾಜಭವನದ ದುರ್ಬಳಕೆಯ ಪ್ರಶ್ನೆಯೇ ಬರುವುದಿಲ್ಲ' ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

7 ಗಂಟೆ ವಿಚಾರಣೆ ಬಳಿಕ ಹೇಮಂತ್ ಅವರನ್ನು ಇ.ಡಿ ಬಂಧಿಸಿತ್ತು. ಬಂಧನಕ್ಕೂ ಮುನ್ನ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

'ಹೇಮಂತ್ ಅವರಿಗೆ ರಾಜೀನಾಮೆ ನೀಡುವಂತೆ ರಾಜಭವನ ಕೇಳಿರಲಿಲ್ಲ. ಅವರು ರಾಜೀನಾಮೆ ನೀಡುತ್ತಾರೆ ಎಂದು ಮುಖ್ಯಮಂತ್ರಿ ಕಚೇರಿಯೇ ತಿಳಿಸಿತ್ತು' ಎಂದು ತಿಳಿಸಿದರು. 'ಬಂಧನದ ಹಿಂದೆ ರಾಜಭವನದ ಸಂಚು ಇದೆ' ಎಂದು ಹೇಮಂತ್ ಫೆ. 5ರಂದು ಆರೋಪಿಸಿದ್ದರು.

ಚಂಪೈ ಸೊರೇನ್ ಅವರಿಗೆ ಸರ್ಕಾರ ರಚಿಸಲು ತಡವಾಗಿ ಆಹ್ವಾನ ನೀಡಿದ ಕುರಿತ ಪ್ರಶ್ನೆಗೆ ರಾಜ್ಯಪಾಲರು, 'ಕಾನೂನು ಸಲಹೆ ಪಡೆಯಬೇಕಿದ್ದರಿಂದ ವಿಳಂಬವಾಗಿದೆ. 26 ಗಂಟೆಗಳಲ್ಲಿ ಅವರನ್ನು ಆಹ್ವಾನಿಸಿದ್ದೇವೆ' ಎಂದರು.

ಸಂಸದ ಸಾಹುಗೆ ಸಮನ್ಸ್: ಈ ಮಧ್ಯೆ, ಇದೇ ಪ್ರಕರಣದ ಸಂಬಂಧ ಜಾರ್ಖಂಡ್‌ನ ಕಾಂಗ್ರೆಸ್ ಮುಖಂಡ, ರಾಜ್ಯಸಭಾ ಸದಸ್ಯ ಧೀರಜ್ ಪ್ರಸಾದ್ ಸಾಹು ಅವರಿಗೆ ಇಡಿ ಸಮನ್ಸ್ ಜಾರಿ ಮಾಡಿದೆ. ಇದೇ 10ರಂದು ವಿಚಾರಣೆಗೆ ಬರುವಂತೆ ತಿಳಿಸಲಾಗಿದೆ ಎನ್ನಲಾಗಿದೆ.

'ಬೇಕಾದವರಿಗಷ್ಟೇ ಮೀಸಲಾತಿ ಸಲ್ಲ'

ನವದೆಹಲಿ (ಪಿಟಿಐ): ಒಳಮೀಸಲು ಕಲ್ಪಿಸುವ ಉದ್ದೇಶದಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಪಟ್ಟಿಯಲ್ಲಿ ಉಪ ವರ್ಗೀಕರಣ ತರುವ ಅಧಿಕಾರವು ರಾಜ್ಯಗಳಿಗೆ ಇದೆಯೇ ಎಂಬ ಬಗ್ಗೆ ಪರಿಶೀಲನೆ ನಡೆಸುತ್ತಿರುವ ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠವು, 'ಹಿಂದುಳಿದ ಜಾತಿಗಳಿಗೆ ಮೀಸಲಾತಿಯನ್ನು ಕಲ್ಪಿಸುವಾಗ ರಾಜ್ಯ ಸರ್ಕಾರಗಳು ತಮಗೆ ಬೇಕಾದ ಜಾತಿಗಳಿಗೆ ಮಾತ್ರ ಅದನ್ನು ನೀಡುವಂತಿಲ್ಲ' ಎಂದು ಹೇಳಿದೆ.

ಈ ರೀತಿ ಮಾಡಲು ಅವಕಾಶ ನೀಡಿದರೆ, ಓಲೈಕೆಯ ಅಪಾಯಕಾರಿ ಪ್ರವೃತ್ತಿಗೆ ದಾರಿ ಮಾಡಿಕೊಟ್ಟಂತಾಗುತ್ತದೆ ಎಂದು ಪೀಠವು ಆತಂಕ ವ್ಯಕ್ತಪಡಿಸಿದೆ. ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ನೇತೃತ್ವದ ಏಳು ನ್ಯಾಯಮೂರ್ತಿಗಳ ಪೀಠವು ಈ ಆತಂಕ ವ್ಯಕ್ತಪಡಿಸಿದೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮತ್ತು ಇತರರ ವಾದವನ್ನು ಆಲಿಸಿದ ಪೀಠವು ತೀರ್ಪನ್ನು ಕಾಯ್ದಿರಿಸಿದೆ. ಮೀಸಲಾತಿಯನ್ನು ಕಲ್ಪಿಸಿ ಸಾಮಾಜಿಕ ಹಿಂದುಳಿದಿರುವಿಕೆಯನ್ನು ನಿವಾರಿಸುವುದು ರಾಜ್ಯದ ಹೊಣೆ. ಈ ಹೊಣೆಯನ್ನು ನಿಭಾಯಿಸುವಾಗ ನಿರ್ದಿಷ್ಟ ವರ್ಗವೊಂದು ಅನುಭವಿಸುತ್ತಿರುವ ಅಸಮಾನತೆಯನ್ನು ನಿವಾರಿಸಲು ಸರ್ಕಾರ ಬಯಸಿದರೆ ಆ ಕೆಲಸ ಮಾಡಲು ಅಡ್ಡಿಯಿಲ್ಲ ಎಂದು ಪೀಠವು ಹೇಳಿದೆ.


ಉಪ ವರ್ಗೀಕರಣದಿಂದಾಗಿ ಜಾತಿ ಒಳಗಿನ ಒಂದು ಗುಂಪಿಗೆ ಮೇಲೆ ಬರಲು ಸಾಧ್ಯವಾಗುತ್ತದೆ. ಇದಿಲ್ಲದಿದ್ದರೆ ಒಂದು ವರ್ಗ ಮಾತ್ರ ಪ್ರಯೋಜನ ಪಡೆಯುತ್ತ ಇರುತ್ತದೆ ಎಂದು ಕೋರ್ಟ್ ಹೇಳಿದೆ.

ಇಸ್ರೇಲ್ ದಾಳಿ: 13 ಸಾವು

ರಫಾ (ಗಾಜಾ) (ಎಪಿ): ಯುದ್ಧ ವಿರಾಮಕ್ಕೆ ಹಮಾಸ್ ಬಂಡುಕೋರರು ಸಲ್ಲಿಸಿದ್ದ ಪ್ರಸ್ತಾವವನ್ನು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ತಿರಸ್ಕರಿಸಿದ ನಂತರದಲ್ಲಿ ಇಸ್ರೇಲ್ ಮಿಲಿಟರಿಯು ನಡೆಸಿದ ದಾಳಿಯಲ್ಲಿ 13 ಮಂದಿ ಮೃತಪಟ್ಟಿದ್ದಾರೆ.

ಮೃತರಲ್ಲಿ ಇಬ್ಬರು ಮಹಿಳೆಯರು, ಐದು ಮಂದಿ ಮಕ್ಕಳು ಇದ್ದಾರೆ ಎಂದು ಆ ಮೃತದೇಹಗಳನ್ನು ಸ್ವೀಕರಿಸಿರುವ ಆಸ್ಪತ್ರೆಯೊಂದು ತಿಳಿಸಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	21,930
ಇಂದಿನ ಅಂತ್ಯ	21,717
▼	212
ದಿನದ ಕನಿಷ್ಠ	21,665

ವಿನಿಮಯ ದರ

$ ಡಾಲರ್	82.96
£ ಪೌಂಡ್	104.75
€ ಯುರೊ	89.41
¥ ಯೆನ್ (100ಕ್ಕೆ)	56

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹585
12 ಕ್ಕೆ	₹78
ಮೈಸೂರು	
100ಕ್ಕೆ	₹587

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1480 (1480)
ಸೋಯಾ (ರಿಫೈನ್ಡ್)	₹897 (890)
ಸೂರ್ಯಕಾಂತಿ (ರಿಫೈನ್ಡ್)	₹910 (910)
ಪಾಮೋಲಿನ್	₹858 (852)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹180-452
ದ್ವಿತಳಿ (ಬಿ.ವಿ)	₹263-560

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹161
ಆರ್‌ಎಸ್‌ಎಸ್-5	₹156
ಗುಡ್ ಲಾಟ್	₹139

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ತಿಪಟೂರು	₹8500-10500
ತುಮಕೂರು	₹8600-10500

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹14400
ಎಸಿ	₹7900
ಆರ್‌ಪಿ	₹13100
ಆರ್‌ಸಿ	₹7450

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ

ಬಂಟ್ವಾಳ	
ಕೋಕ	18000-28500
ಹೊಸತು	28500-35000
ಹಳತು	42000-44000
ಕಾರ್ಕಳ	
ಹೊಸತು	25000-35000
ಹಳತು	30000-44500
ಕುಮಟ	
ಚಿಪ್ಪು	23001-32669
ಕೋಕ	14299-32069
ಹಳೆಚಾಲಿ	36249-37639
ಹೊಸಚಾಲಿ	31679-34446
ಸಾಗರ	
ಬಿಳಿಗೋಟು	12800-26590
ಚಾಲಿ	27119-37169
ಕೋಕ	10290-26899
ಕೆಂಪುಗೋಟು	28989-35299
ರಾಶಿ	35089-48199
ಸಿಪ್ಪೆಗೋಟು	8200-19101
ಶಿವಮೊಗ್ಗ	
ಬೆಟ್ಟೆ	44000-54719
ಗೊರಬಲು	15009-36500
ರಾಶಿ	30019-48519
ಸರಕು	46699-83096
ಸಿದ್ದಾಪುರ	
ಬಿಳಿಗೋಟು	29099-34899
ಚಾಲಿ	35269-37099
ಕೋಕ	26889-28000
ಹೊಸಚಾಲಿ	30888-33055
ಕೆಂಪುಗೋಟು	31019-36699
ರಾಶಿ	43469-47689
ತಟ್ಟಿಬೆಟ್ಟೆ	39459-46669
ಶಿರಸಿ	
ಬೆಟ್ಟೆ	38109-44899
ಬಿಳಿಗೋಟು	23399-33301
ಚಾಲಿ	36108-39099
ಕೆಂಪುಗೋಟು	30618-36099
ರಾಶಿ	43018-47789
ಯಲ್ಲಾಪುರ	
ಅಪಿ	54279-70379
ಬಿಳಿಗೋಟು	24899-33690
ಚಾಲಿ	33800-38739
ಕೋಕ	17600-29899
ಕೆಂಪುಗೋಟು	27089-36969
ರಾಶಿ	46019-53819
ತಟ್ಟಿಬೆಟ್ಟೆ	37380-45899

ಹಣದುಬ್ಬರದ ಸ್ಥಿರತೆಗಾಗಿ ಯಥಾಸ್ಥಿತಿಗೆ ನಿರ್ಧಾರ: ಶಕ್ತಿಕಾಂತ ದಾಸ್

ರೆಪೊ ದರ ಬದಲಿಸದ ಆರ್‌ಬಿಐ


ಮುಂಬೈ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆಯು ರೆಪೊ ದರದಲ್ಲಿ ಯಾವುದೇ ಬದಲಾವಣೆ ಮಾಡದೆ, ಸತತ ಆರನೇ ಬಾರಿಗೆ ಯಥಾಸ್ಥಿತಿ ಕಾಯ್ದುಕೊಂಡಿದೆ.


ಜಾಗತಿಕ ಆರ್ಥಿಕ ಬೆಳವಣಿಗೆ ಕುರಿತು ಎದುರಾಗಿರುವ ಅನಿಶ್ಚಿತ ಪರಿಸ್ಥಿತಿ ಹಾಗೂ ಚಿಲ್ಲರೆ ಹಣದುಬ್ಬರವನ್ನು ಶೇ 4ರ ಮಿತಿಯಲ್ಲಿಯೇ ಕಾಯ್ದುಕೊಂಡು ಬೆಲೆಯಲ್ಲಿ ಸ್ಥಿರತೆ ಕಾಪಾಡುವ ದೃಷ್ಟಿಯಿಂದ ಗವರ್ನರ್ ಶಕ್ತಿಕಾಂತ ದಾಸ್ ಅವರ ಅಧ್ಯಕ್ಷತೆಯ ಸಮಿತಿಯು ಗುರುವಾರ ಈ ನಿರ್ಧಾರ ಕೈಗೊಂಡಿದೆ.

ರೆಪೊ ದರವನ್ನು ಶೇ6.5ರಲ್ಲಿಯೇ ಉಳಿಸಿಕೊಳ್ಳಲು ಸಮಿತಿಯು ಒಪ್ಪಿಗೆ ನೀಡಿದೆ. ಹಣದುಬ್ಬರವನ್ನು ನಿಯಂತ್ರಿಸುವ ನಿಟ್ಟಿನಲ್ಲಿ 2023ರ ಫೆಬ್ರುವರಿಯಲ್ಲಿ ನಡೆದ ಎಂಪಿಸಿ ಸಭೆಯಲ್ಲಿ ಶೇ 6.25ರಿಂದ ಶೇ 6.5ಕ್ಕೆ ಹೆಚ್ಚಿಸಲಾಗಿತ್ತು. ರೆಪೊ ದರ ಇಳಿಕೆಯಾದರೆ ಗೃಹ ಸಾಲದ ಬಡ್ಡಿದರ ಕಡಿಮೆಯಾಗಲಿದ್ದು ಇಎಂಐ ಹೊರೆಯು ಇಳಿಕೆಯಾಗಲಿದೆ ಎಂಬ ನಿರೀಕ್ಷೆಯಲ್ಲಿದ್ದ ಗೃಹ ಸಾಲಗಾರರು ಮತ್ತೆ ನಿರಾಸೆ ಅನುಭವಿಸುವಂತಾಗಿದೆ.

ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಶಕ್ತಿಕಾಂತ ದಾಸ್, 'ಆರ್‌ಬಿಐ ಅಂದಾಜಿಸಿರುವ ಮಿತಿಯೊಳಗೆ ಹಣದುಬ್ಬರವು ನಿಯಂತ್ರಣಕ್ಕೆ ಬರುವವರೆಗೂ ಬಡ್ಡಿದರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲು ಸಮಿತಿಯು ನಿರ್ಧರಿಸಿದೆ' ಎಂದು ಸ್ಪಷ್ಟಪಡಿಸಿದರು.

ಮುಂದಿನ ಸಭೆಯು ಏಪ್ರಿಲ್ 3ರಿಂದ 5ರ ವರೆಗೆ ನಡೆಯಲಿದೆ.





ಹಣದುಬ್ಬರ ಶೇ 4.5ಕ್ಕೆ ಇಳಿಕೆ ನಿರೀಕ್ಷೆ



ದೇಶದಲ್ಲಿ 2023–24ನೇ ಹಣಕಾಸು ವರ್ಷದಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 5.4ರಷ್ಟು ಇರಲಿದ್ದು, 2024–25ನೇ ಹಣಕಾಸು ವರ್ಷದಲ್ಲಿ ಶೇ 4.5ಕ್ಕೆ ಇಳಿಕೆಯಾಗಲಿದೆ ಎಂದು ಹಣಕಾಸು ನೀತಿ ಸಮಿತಿ ಅಂದಾಜಿಸಿದೆ.

'ಆಹಾರ ವಸ್ತುಗಳ ಬೆಲೆ ಏರಿಕೆಯೇ ಹಣದುಬ್ಬರ ಹೆಚ್ಚಳಕ್ಕೆ ಕಾರಣವಾಗಿದೆ. ಜಾಗತಿಕ ಮಟ್ಟದಲ್ಲಿನ ಸಂಘರ್ಷಗಳು ಪೂರೈಕೆ ಸರಪಳಿ ಮೇಲೆ ಪರಿಣಾಮ ಬೀರುತ್ತವೆ. ಜಾಗತಿಕ ಹಣಕಾಸು ಮಾರುಕಟ್ಟೆಯಲ್ಲಿನ ಅಸ್ಥಿರತೆಯೂ ಹಣದುಬ್ಬರದ ಏರಿಕೆಗೆ ಕಾರಣವಾಗಲಿದೆ. ಈ ವಿದ್ಯಮಾನದ ಮೇಲೆ ಸಮಿತಿಯು ನಿಗಾವಹಿಸಿದೆ' ಎಂದು ಶಕ್ತಿಕಾಂತ ದಾಸ್ ತಿಳಿಸಿದ್ದಾರೆ.

'ದೇಶದಲ್ಲಿ ರಾಬಿ ಅವಧಿಯ ಬಿತ್ತನೆ ಚೇತರಿಕೆ ಕಂಡಿದೆ. ಇದು ಹಣದುಬ್ಬರದ ನಿಯಂತ್ರಣಕ್ಕೆ ನೆರವಾಗಬಹುದು' ಎಂದಿದ್ದಾರೆ.

2023ರ ಅಕ್ಟೋಬರ್‌ನಲ್ಲಿ ಶೇ 4.9ರಷ್ಟು ಕನಿಷ್ಠ ಮಟ್ಟದಲ್ಲಿ ದಾಖಲಾಗಿದ್ದ ಚಿಲ್ಲರೆ ಹಣದುಬ್ಬರವು, ಡಿಸೆಂಬರ್‌ನಲ್ಲಿ ಶೇ 5.7ರಷ್ಟು ಏರಿಕೆಯಾಗಿತ್ತು. ಆಹಾರ ಪದಾರ್ಥ ಮತ್ತು ತರಕಾರಿ ಬೆಲೆ ಹೆಚ್ಚಳವು ಇದಕ್ಕೆ ಕಾರಣವಾಗಿತ್ತು.

ಜಿಡಿಪಿ ಶೇ 7ರಷ್ಟು ಬೆಳವಣಿಗೆ ಅಂದಾಜು

2024–25ನೇ ಹಣಕಾಸು ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ದರವು ಶೇ 7ರಷ್ಟು ಪ್ರಗತಿ ಕಾಣಲಿದೆ ಎಂದು ಸಮಿತಿಯು ಅಂದಾಜಿಸಿದೆ.

2023–24ನೇ ಹಣಕಾಸು ವರ್ಷದಲ್ಲಿ ದೇಶದ ಆರ್ಥಿಕತೆ ಬೆಳವಣಿಗೆಯು ಶೇ 7.3ರಷ್ಟು ಇರಲಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಅಂದಾಜಿಸಿದೆ.

'ದೇಶೀಯ ಮಟ್ಟದಲ್ಲಿ ಆರ್ಥಿಕ ಚಟುವಟಿಕೆಯು ಸದೃಢವಾಗಿದೆ. ಹೂಡಿಕೆ ವಲಯದ ಚಟುವಟಿಕೆಗಳು ಚೇತರಿಕೆ ಪಡೆದಿವೆ. ಹಾಗಾಗಿ, ಸಾಂಖ್ಯಿಕ ಕಚೇರಿಯು ಈ ಅಂದಾಜು ಮಾಡಿದೆ' ಎಂದು ಶಕ್ತಿಕಾಂತ ದಾಸ್ ತಿಳಿಸಿದ್ದಾರೆ.

ತಯಾರಿಕಾ ಮತ್ತು ಉತ್ಪಾದನಾ ವಲಯದಲ್ಲಿನ ಚಟುವಟಿಕೆಗಳು ಕ್ಷಿಪ್ರಗತಿಯಲ್ಲಿವೆ. ಹಾಗಾಗಿ, 2023–24ನೇ ಹಣಕಾಸು ವರ್ಷದಲ್ಲಿ ಇಲ್ಲಿಯವರೆಗೆ ಒಟ್ಟು ಆಂತರಿಕ ಉತ್ಪನ್ನದಲ್ಲಿನ ಒಟ್ಟು ಮೌಲ್ಯ ವರ್ಧನೆಯು (ಜಿವಿಎ) ಶೇ 6.9ರಷ್ಟು ಏರಿಕೆಯಾಗಿದೆ ಎಂದು ವಿವರಿಸಿದ್ದಾರೆ.

'ಪೇಟಿಎಂ ಬ್ಯಾಂಕ್ ವಿರುದ್ಧ ಏಕಾಏಕಿ ಕ್ರಮ ಕೈಗೊಂಡಿಲ್ಲ'

ನವದೆಹಲಿ/ ಮುಂಬೈ (ಪಿಟಿಐ): 'ಪೇಟಿಎಂ ಪೇಮೆಂಟ್ ಬ್ಯಾಂಕ್ ವಿರುದ್ಧ ಏಕಾಏಕಿ ಕ್ರಮ ಕೈಗೊಂಡಿಲ್ಲ. ನಿಯಮಾವಳಿಗಳ ಪಾಲನೆಯಲ್ಲಿ ಎಸಗಿರುವ ಲೋಪ ಸರಿಪಡಿಸಿಕೊಳ್ಳಲು ಸಾಕಷ್ಟು ಕಾಲಾವಕಾಶ ನೀಡಲಾಗಿತ್ತು. ನಿರ್ಲಕ್ಷ್ಯವಹಿಸಿದ್ದರಿಂದ ನಿರ್ಬಂಧ ಹೇರಲಾಗಿದೆ. ಪೇಟಿಎಂ ಆ್ಯಪ್‌ಗೆ ಈ ನಿಯಮ ಅನ್ವಯಿಸಲ್ಲ' ಎಂದು ಆರ್‌ಬಿಐ ಡೆಪ್ಯುಟಿ ಗವರ್ನರ್ ಸ್ವಾಮಿನಾಥನ್ ಜೆ. ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಗ್ರಾಹಕರ ರಕ್ಷಣೆಯ ದೃಷ್ಟಿಯಿಂದ ಇಂತಹ ಕ್ರಮ ಅನಿವಾರ್ಯ' ಎಂದರು.

ಗವರ್ನರ್ ಶಕ್ತಿಕಾಂತ ದಾಸ್ ಮಾತನಾಡಿ, 'ಪೇಟಿಎಂ ಪೇಮೆಂಟ್ ಬ್ಯಾಂಕ್ ಮೇಲಷ್ಟೇ ನಿರ್ಬಂಧ ಹೇರಲಾಗಿದೆ. ಈ ಬಗ್ಗೆ ನಾಗರಿಕರಿಂದ ಸಾಕಷ್ಟು ಪ್ರಶ್ನೆಗಳನ್ನು ಸ್ವೀಕರಿಸಿದ್ದೇವೆ. ಮುಂದಿನ ವಾರ ಗ್ರಾಹಕರ ಸಾಮಾನ್ಯ ಪ್ರಶ್ನೆಗಳಿಗೆ ಉತ್ತರ ನೀಡಲಾಗುವುದು' ಎಂದು ತಿಳಿಸಿದರು.

ಡಿಜಿಟಲ್ ರೂಪಾಯಿ: ಶೀಘ್ರವೇ, ಆಫ್‌ಲೈನ್‌ನಲ್ಲಿಯೂ ಡಿಜಿಟಲ್ ರೂಪಾಯಿಯ ಪ್ರಾಯೋಗಿಕ ಬಳಕೆಗೆ ಚಾಲನೆ ನೀಡಲಾಗುವುದು ಎಂದು ದಾಸ್ ತಿಳಿಸಿದರು. 2022ರ ಡಿಸೆಂಬರ್‌ನಲ್ಲಿ ಚಿಲ್ಲರೆ ವಹಿವಾಟುಗಳಿಗೆ ಸಂಬಂಧಿಸಿದಂತೆ ಡಿಜಿಟಲ್ ರೂಪಾಯಿಯ ಪ್ರಾಯೋಗಿಕ ಬಳಕೆಗೆ ಆರ್‌ಬಿಐ ಚಾಲನೆ ನೀಡಿದೆ.

ಷೇರು ಸೂಚ್ಯಂಕಗಳು ಕುಸಿತ: ಆರ್‌ಬಿಐ ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿರುವುದರಿಂದ ಷೇರು ಪೇಟೆ ಸೂಚ್ಯಂಕಗಳು ಗುರುವಾರ ಕುಸಿತ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 723 ಅಂಶ ಕುಸಿದು 71,428ರಲ್ಲಿ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 212 ಅಂಶ ಇಳಿಕೆಯಾಗಿ 21,717ರಲ್ಲಿ ವಹಿವಾಟನ್ನು ಮುಕ್ತಾಯಗೊಳಿಸಿತು.

ಬ್ಯಾಂಕಿಂಗ್ ಮತ್ತು ಹಣಕಾಸು ಸೇವೆ, ಆಟೊ, ರಿಯಾಲ್ಟಿ ಮತ್ತು ಸರಕು ಷೇರುಗಳು ಇಳಿಕೆ ಕಂಡಿದ್ದರೆ, ಇಂಧನ ಮತ್ತು ಐಟಿ ಷೇರುಗಳು ಗಳಿಕೆ ಕಂಡಿವೆ.

ಐಟಿಸಿ, ಕೋಟಕ್ ಮಹೀಂದ್ರ ಬ್ಯಾಂಕ್, ಐಸಿಐಸಿಐ ಬ್ಯಾಂಕ್, ನೆಸ್ಲೆ, ಆಕ್ಸಿಸ್ ಬ್ಯಾಂಕ್, ಇಂಡಸ್‌ಇಂಡ್ ಬ್ಯಾಂಕ್, ಅಲ್ಟ್ರಾಟೆಕ್ ಸಿಮೆಂಟ್, ಬಜಾಜ್ ಫೈನಾನ್ಸ್, ಮಾರುತಿ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್ ಷೇರುಗಳು ಇಳಿಕೆ ಕಂಡಿವೆ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಪವರ್‌ಗ್ರಿಡ್, ಟಿಸಿಎಸ್, ಎಚ್‌ಸಿಎಲ್ ಟೆಕ್ನಾಲಜೀಸ್ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಗಳಿಕೆ ಕಂಡಿವೆ.

ಪೇಟಿಎಂ ಷೇರು ಇಳಿಕೆ: ಎರಡು ದಿನಗಳಿಂದ ಚೇತರಿಕೆ ಕಂಡಿದ್ದ ಪೇಟಿಎಂನ ಮಾತೃಸಂಸ್ಥೆಯಾದ ಒನ್97 ಕಮ್ಯುನಿಕೇಷನ್ ಲಿಮಿಟೆಡ್‌ನ ಷೇರುಗಳ ಮೌಲ್ಯ ಶೇ10ರಷ್ಟು ಇಳಿಕೆ ಕಂಡಿವೆ.

ಸೆಪ್ಟೆಂಬರ್‌ನಲ್ಲಿ ರಾಷ್ಟ್ರೀಯ ಜಾನುವಾರು ಗಣತಿಗೆ ಸಿದ್ಧತೆ

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷದ ಸೆಪ್ಟೆಂಬರ್‌ನಿಂದ ಡಿಸೆಂಬರ್ ನಡುವೆ 21ನೇ ರಾಷ್ಟ್ರೀಯ ಜಾನುವಾರು ಗಣತಿ ನಡೆಸಲು ಸಿದ್ಧತೆ ಕೈಗೊಳ್ಳಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಕೇಂದ್ರ ಪಶುಪಾಲನಾ ಮತ್ತು ಹೈನುಗಾರಿಕೆ ಸಚಿವಾಲಯವು ಈ ಗಣತಿ ನಡೆಸಲಿದೆ. ಮೊಬೈಲ್ ಬಳಸಿಕೊಂಡು ದತ್ತಾಂಶ ಸಂಗ್ರಹಿಸಲಾಗುತ್ತದೆ. ಇದರಿಂದ ಆನ್‌ಲೈನ್‌ಗೆ ದತ್ತಾಂಶವನ್ನು ಸುಲಭವಾಗಿ ರವಾನಿಸಲು ಅನುಕೂಲವಾಗಲಿದೆ ಎಂದು ತಿಳಿಸಿದೆ.

ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ಗಣತಿ ನಡೆಯಲಿದೆ. ಹಸು, ಎಮ್ಮೆ, ಕುರಿ, ಮೇಕೆ, ಹಂದಿ, ಕುದುರೆ, ಹೇಸರಗತ್ತೆ, ಕತ್ತೆ, ಒಂಟೆ, ನಾಯಿ, ಮೊಲ, ಸಾಕಾನೆಗಳ ಎಣಿಕೆ ನಡೆಯಲಿದೆ. ಕೋಳಿ, ಬಾತುಕೋಳಿ ಸೇರಿದಂತೆ ಕುಕ್ಕುಟ ವಿಭಾಗದಲ್ಲಿರುವ ಪಕ್ಷಿಗಳ ಎಣಿಕೆ ನಡೆಯಲಿದೆ. ಜಾನುವಾರು ಮತ್ತು ಪಕ್ಷಿಗಳ ತಳಿ, ಲಿಂಗ ಮತ್ತು ವಯಸ್ಸನ್ನು ದಾಖಲಿಸಲಾಗುತ್ತದೆ.

ಸಚಿವಾಲಯದ ಕಾರ್ಯದರ್ಶಿ ಅಲ್ಕಾ ಉಪಾಧ್ಯಾಯ ಅವರ ಅಧ್ಯಕ್ಷತೆಯಲ್ಲಿ ಗಣತಿಯ ಸಿದ್ಧತೆ ಕುರಿತು ಗುರುವಾರ ಸಭೆ ನಡೆಯಿತು. ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶದ ಹಿರಿಯ ಅಧಿಕಾರಿಗಳು ಮತ್ತು ತಾಂತ್ರಿಕ ಸಮಿತಿಯ ಸದಸ್ಯರು ಪಾಲ್ಗೊಂಡಿದ್ದರು.

75 ಸಾವಿರ ಮಹಿಳೆಯರಿಗೆ ಕೌಶಲ ತರಬೇತಿಗೆ ನಿರ್ಧಾರ

ಬೆಂಗಳೂರು (ಪಿಟಿಐ): 'ಪ್ರಸಕ್ತ ವರ್ಷ ಭಾರತದಲ್ಲಿ 75 ಸಾವಿರ ಮಹಿಳೆಯರಿಗೆ ಮಾಹಿತಿ ತಂತ್ರಜ್ಞಾನ ಕುರಿತ ಕೌಶಲ ತರಬೇತಿ ನೀಡುವ ಗುರಿ ಹೊಂದಲಾಗಿದೆ' ಎಂದು ಮೈಕ್ರೊಸಾಫ್ಟ್ ಸಿಇಒ ಸತ್ಯ ನಾದೆಲ್ಲಾ ಹೇಳಿದ್ದಾರೆ.

ಕೃತಕ ಬುದ್ಧಿಮತ್ತೆ ಮತ್ತು ಡಿಜಿಟಲ್ ತಂತ್ರಜ್ಞಾನ ವಲಯದಲ್ಲಿ ಲಿಂಗ ಅಸಮಾನತೆ ನಿರ್ಮೂಲನೆಗಾಗಿ ಮೈಕ್ರೊಸಾಫ್ಟ್ ಕಂಪನಿಯು 'ಕೋಡ್; ವಿಥೌಟ್ ಬ್ಯಾರಿಯರ್' ಕಾರ್ಯಕ್ರಮ ರೂಪಿಸಿದೆ.

ನಗರದಲ್ಲಿ ಗುರುವಾರ ಮೈಕ್ರೊಸಾಫ್ಟ್ ತಂತ್ರಜ್ಞರನ್ನು ಉದ್ದೇಶಿಸಿ ಮಾತನಾಡಿದ ನಾದೆಲ್ಲಾ ಅವರು, ಭಾರತದಲ್ಲಿಯೂ ಈ ಕಾರ್ಯಕ್ರಮವನ್ನು ವಿಸ್ತರಿಸಲಾಗುವುದು. ಮಹಿಳೆಯರಿಗೆ ತಂತ್ರಜ್ಞಾನದ ಬಗ್ಗೆ ಕೌಶಲ ಬೆಳೆಸಲು ಇದರಿಂದ ಸಹಕಾರಿಯಾಗಲಿದೆ' ಎಂದರು.

ಮಾವೋ ಸಂಪರ್ಕ ಶಂಕೆ: ಎನ್‌ಐಎ ದಾಳಿ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಮಾವೋವಾದಿಗಳ ಜತೆ ಸಂಪರ್ಕ ಹೊಂದಿದ್ದಾರೆ ಎಂಬ ಶಂಕೆಯ ಮೇರೆಗೆ ಹಿರಿಯ ಪತ್ರಕರ್ತ ಎನ್. ವೇಣುಗೋಪಾಲ್ ಮತ್ತು ಮಾನವ ಹಕ್ಕುಗಳ ಕಾರ್ಯಕರ್ತ ರವಿ ಶರ್ಮಾ ಅವರ ಮನೆಗಳ ಮೇಲೆ ರಾಷ್ಟ್ರೀಯ ತನಿಖಾ ಏಜೆನ್ಸಿ (ಎನ್‌ಐಎ) ತಂಡಗಳು ಗುರುವಾರ ದಾಳಿ ನಡೆಸಿವೆ.

ವೇಣುಗೋಪಾಲ್ ಅವರು 'ವೀಕ್ಷಣಂ' ಎಂಬ ಭಾಷಾ ಪತ್ರಿಕೆಯನ್ನು ನಡೆಸುತ್ತಿದ್ದು, ಕೆಲ ಪುಸ್ತಕಗಳನ್ನೂ ಬರೆದಿದ್ದಾರೆ. ಅವರು ಕವಿ ವರವರ ರಾವ್ ಅವರ ಸಂಬಂಧಿ. ವರವರ ರಾವ್ ಅವರು ಭೀಮಾ–ಕೋರೆಗಾಂವ್ ಹಿಂಸಾಚಾರ ಪ್ರಕರಣದ ಆರೋಪಿ. ಮುಂಜಾನೆ 5 ಗಂಟೆಗೆ ಆರಂಭವಾದ ದಾಳಿಗಳು ಬೆಳಿಗ್ಗೆ 11 ಗಂಟೆಯವರೆಗೂ ನಡೆಯಿತು. ನಿಷೇಧಿತ ಮಾವೋವಾದಿ ಸಂಘಟನೆಯ ಮುಖಂಡ ಸಂಜೋಯ್ ದೀಪಕ್ ರಾವ್ ಜತೆಗೆ ವೇಣುಗೋಪಾಲ್ ಸಂಪರ್ಕ ಹೊಂದಿದ್ದಾರೆ ಎಂಬ ಶಂಕೆ ಮೇರೆಗೆ ಈ ದಾಳಿ ನಡೆದಿದೆ.

ಖರೀದಿ ಕೇಂದ್ರದಲ್ಲಿ ನೆಟ್‌ವರ್ಕ್ ಸಮಸ್ಯೆ

ಹೆಸರು ನೋಂದಣಿಗೆ ಮುಗಿಬಿದ್ದ ರೈತರು: ಬೆರಳಚ್ಚು ಪ್ರಕ್ರಿಯೆಯಲ್ಲಿ ವಿಳಂಬ

ಪ್ರಜಾವಾಣಿ ವಾರ್ತೆ

ಮೈಸೂರು: ಮೈಸೂರು ಭಾಗದ ಜಿಲ್ಲೆಗಳಲ್ಲಿ ಕೊಬ್ಬರಿ ಖರೀದಿ ಕೇಂದ್ರಗಳಿಗೆ ಹೆಸರು ನೋಂದಾಯಿಸಲು ರೈತರು ಮುಗಿಬಿದ್ದಿದ್ದಾರೆ. ಕೆಲವೆಡೆ ನೆಟ್‌ವರ್ಕ್ ಸಮಸ್ಯೆ ಹಾಗೂ ಬೆರಳಚ್ಚು ಪಡೆಯುವ ಪ್ರಕ್ರಿಯೆಯಲ್ಲಿ ವಿಳಂಬದಿಂದಾಗಿ ತೊಂದರೆ ಅನುಭವಿಸುತ್ತಿದ್ದಾರೆ.

ಕೇಂದ್ರ ಸರ್ಕಾರವು ಕೊಬ್ಬರಿಗೆ ₹12 ಸಾವಿರ ಬೆಂಬಲ ಬೆಲೆ ನಿಗದಿಪಡಿಸಿದೆ. ರಾಜ್ಯ ಸರ್ಕಾರ ₹1,500 ಪ್ರೋತ್ಸಾಹ ಧನ ನೀಡುತ್ತಿದ್ದು, ಒಂದು ಕ್ವಿಂಟಲ್‌ಗೆ ₹13,500 ಸಿಗುತ್ತಿದೆ. ಹೀಗಾಗಿ, ದರ ಕುಸಿತದಿಂದ ಕಂಗಾಲಾಗಿದ್ದ ರೈತರು ಕೇಂದ್ರಗಳತ್ತ ಮುಖ ಮಾಡಿದ್ದಾರೆ.

ಖರೀದಿ ಕೇಂದ್ರಗಳಲ್ಲಿ ಮೊದಲ ಬಾರಿಗೆ ಬಯೊಮೆಟ್ರಿಕ್ ವ್ಯವಸ್ಥೆ ಅಳವಡಿಸಿದ್ದು, ನೋಂದಣಿ ಸಮಯದಲ್ಲಿ ಬೆಳೆಗಾರರ ಬೆರಳಚ್ಚು ಪಡೆಯಲಾಗುತ್ತಿದೆ. ಆದರೆ, ಅದಕ್ಕೆ ತಕ್ಕಂತೆ ಕೇಂದ್ರಗಳಿಗೆ ವೇಗದ ಇಂಟರ್‌ನೆಟ್ ಸೌಲಭ್ಯ ಒದಗಿಸಿಲ್ಲ. ಹೀಗಾಗಿ, ಕೆಲವೆಡೆ ನೆಟ್‌ವರ್ಕ್ ಸಮಸ್ಯೆಯಿಂದ ಬೆರಳಚ್ಚು ಪಡೆಯುವ ಪ್ರಕ್ರಿಯೆ ವಿಳಂಬವಾಗುತ್ತಿದೆ.

ಪ್ರತಿದಿನ 150 ಮಂದಿ ನೋಂದಣಿ: ಹಾಸನ ಜಿಲ್ಲೆಯ ಪ್ರತಿ ಕೇಂದ್ರದಲ್ಲಿ ನಿತ್ಯ ಸರಾಸರಿ 100ರಿಂದ 150 ರೈತರ ನೋಂದಣಿಯಾಗುತ್ತಿದೆ. ಜಿಲ್ಲೆಯಲ್ಲಿ 68 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ತೆಂಗು ಬೆಳೆಯಲಾಗಿದ್ದು, ಈ ವರ್ಷ ರೈತರ ಬಳಿ 20 ಸಾವಿರ ಕ್ವಿಂಟಲ್ ದಾಸ್ತಾನು ಇರಬಹುದೆಂದು ಅಂದಾಜಿಸಲಾಗಿದೆ.

'ಆರಂಭದ 2–3 ದಿನ ನೋಂದಣಿಗೆ ಸ್ವಲ್ಪ ಸಮಸ್ಯೆಯಾಗಿತ್ತು. ಇದೀಗ ಟೋಕನ್ ನೀಡಿ, ಅದಕ್ಕೆ ಅನುಗುಣವಾಗಿ ನೋಂದಣಿ ನಡೆಯುತ್ತಿದೆ. ರೈತರೂ ಸರದಿಯಲ್ಲಿ ನಿಲ್ಲುವುದು ತಪ್ಪಿದೆ' ಎಂದು ನೋಂದಣಿ ಕೇಂದ್ರ ಸಿಬ್ಬಂದಿ ಹೇಳುತ್ತಾರೆ.

83,900 ಕ್ವಿಂಟಲ್ ದಾಸ್ತಾನು: ಮಂಡ್ಯ ಜಿಲ್ಲೆಯ ಆರು ಕೇಂದ್ರಗಳಲ್ಲಿ ಬುಧವಾರದಿಂದ ನೋಂದಣಿ ಆರಂಭಗೊಂಡಿದ್ದು, ನಾಗಮಂಗಲ ಕೇಂದ್ರದಲ್ಲಿ ಮೊದಲ ದಿನವೇ ಸರ್ವರ್ ಸಮಸ್ಯೆಯಿಂದ ರೈತರನ್ನು ವಾಪಸ್ ಕಳುಹಿಸಲಾಗಿದೆ. ಜಿಲ್ಲೆಯ ತೆಂಗು ಬೆಳೆಗಾರರ ಬಳಿ 83,900 ಕ್ವಿಂಟಲ್ ಕೊಬ್ಬರಿ ಸಂಗ್ರಹವಿದೆ.

ಸರ್ವರ್ ಸಮಸ್ಯೆಯಿಲ್ಲ: ಚಾಮರಾಜನಗರ ಜಿಲ್ಲೆಯಲ್ಲಿ ಮೊದಲ ಬಾರಿಗೆ ಕೊಬ್ಬರಿ ಖರೀದಿಸಲಾಗುತ್ತಿದೆ. ಎರಡು ಕೇಂದ್ರಗಳಲ್ಲಿ ನೋಂದಣಿ ನಡೆದಿದೆ. ಬೆರಳೆಣಿಕೆಯ ರೈತರಷ್ಟೇ ನೋಂದಾಯಿಸಿಕೊಂಡಿದ್ದಾರೆ. 'ಸದ್ಯಕ್ಕೆ ಸರ್ವರ್ ಸಮಸ್ಯೆ ಇಲ್ಲ' ಎಂದು ಅಧಿಕಾರಿಗಳು ಹೇಳುತ್ತಾರೆ.

ಸರದಿಯಲ್ಲಿ ನಿಂತು ಹೈರಾಣು: ಚಿತ್ರದುರ್ಗ ಜಿಲ್ಲೆಯಲ್ಲಿ ನೋಂದಣಿ ಪ್ರಕ್ರಿಯೆಗೆ ಸರ್ವರ್ ಸಮಸ್ಯೆ ಎದುರಾಗಿದೆ. ಬಿಸಿಲಲ್ಲಿ ಸರದಿಯಲ್ಲಿ ನಿಂತು ರೈತರು ಹೈರಾಣಾಗಿದ್ದಾರೆ.

ಜಿಲ್ಲೆಯ ಹೊಸದುರ್ಗದ ಎಪಿಎಂಸಿಯಲ್ಲಿ 2, ಹಿರಿಯೂರು ಮತ್ತು ಚಿತ್ರದುರ್ಗದಲ್ಲಿ ತಲಾ 1 ಕೇಂದ್ರ ತೆರೆಯಲಾಗಿದೆ. ನಾಲ್ಕು ದಿನಗಳಲ್ಲಿ 2,499 ರೈತರು ಬಯೊಮೆಟ್ರಿಕ್ ಮೂಲಕ 37,653 ಕ್ವಿಂಟಲ್ ಕೊಬ್ಬರಿ ಮಾರಾಟಕ್ಕೆ ಹೆಸರು ನೋಂದಾಯಿಸಿದ್ದಾರೆ.

'ಚಿತ್ರದುರ್ಗ ಹಾಗೂ ಹಿರಿಯೂರಿನಲ್ಲಿ ರೈತರ ಸಂಖ್ಯೆ ಕಡಿಮೆ ಇರುವ ಕಾರಣಕ್ಕೆ ಸ್ಥಳೀಯವಾಗಿ ಸರ್ವರ್ ಸಮಸ್ಯೆ ಆಗುತ್ತಿಲ್ಲ. ಆದರೆ, ಹೊಸದುರ್ಗ ದಲ್ಲಿ ಹೆಚ್ಚು ರೈತರು ಇರುವುದರಿಂದ ಬಯೊಮೆಟ್ರಿಕ್ ಪ್ರಕ್ರಿಯೆ ಸಮಸ್ಯೆ ಆಗುತ್ತಿದೆ. ಇನ್ನೂ ಎರಡು ದಿನದಲ್ಲಿ ಪ್ರಕ್ರಿಯೆ ಪೂರ್ಣಗೊಳ್ಳಲಿದೆ' ಎಂದು ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಜಿಲ್ಲಾ ಶಾಖಾ ವ್ಯವಸ್ಥಾಪಕ ಬಸವೇಶ ಎಸ್. ನಾಡಿಗರ್ 'ಪ್ರಜಾವಾಣಿ'ಗೆ ತಿಳಿಸಿದರು.

> ರಾತ್ರಿಯೇ ಖರೀದಿ ಕೇಂದ್ರದ ಬಳಿ ಬಂದು ಹೆಸರು ನೋಂದಣಿಗೆ ಕಾಯುತ್ತಿದ್ದೇನೆ. ಬಯೊಮೆಟ್ರಿಕ್ ಪ್ರಕ್ರಿಯೆ ವೇಳೆ ಎದುರಾಗುವ ಸಮಸ್ಯೆಯಿಂದ ವಿಳಂಬವಾಗುತ್ತಿದೆ
> **ರಂಗಪ್ಪ,** ಅತ್ತಿಗಟ್ಟೆ, ಹೊಸದುರ್ಗ ತಾಲ್ಲೂಕು

ರೈತರ ಹೆಸರಲ್ಲಿ ವರ್ತಕರ ನೋಂದಣಿ

ಹಾಸನ ಜಿಲ್ಲೆಯ ಖಾಸಗಿ ಮಾರುಕಟ್ಟೆಯಲ್ಲಿ ಈಗಾಗಲೇ ಕ್ವಿಂಟಲ್‌ಗೆ ₹10 ಸಾವಿರದಂತೆ ಕೊಬ್ಬರಿ ಖರೀದಿಸಿ ದಾಸ್ತಾನು ಮಾಡಿರುವ ವರ್ತಕರೇ, ನಾಫೆಡ್ ಮೂಲಕ ಕೊಬ್ಬರಿ ಮಾರಾಟಕ್ಕೆ ಮುಂದಾಗಿದ್ದಾರೆ ಎಂದು ರೈತರು ಆರೋಪಿಸಿದ್ದಾರೆ. ಬೆಳೆಗಾರರಲ್ಲದ ರೈತರನ್ನು ಕರೆತಂದು ನೋಂದಣಿ ಮಾಡಿಸುತ್ತಿದ್ದು, ಅವರ ಮೂಲಕ ತಮ್ಮ ಕೊಬ್ಬರಿ ಮಾರಾಟಕ್ಕೆ ಯತ್ನಿಸುತ್ತಿದ್ದಾರೆ ಎಂದು ದೂರಿದ್ದಾರೆ.



ಹೊಸದುರ್ಗ ಪಟ್ಟಣದ ಎಪಿಎಂಸಿ ಆವರಣದಲ್ಲಿ ತೆರೆದಿರುವ ಕೊಬ್ಬರಿ ಖರೀದಿ ಕೇಂದ್ರದಲ್ಲಿ ಹೆಸರು ನೋಂದಣಿಗೆ ಸರದಿ ಸಾಲಿನಲ್ಲಿ ಬೆಳೆಗಾರರು ಕಾದಿದ್ದರು

ರಾಗಿ, ಕೊಬ್ಬರಿ ಖರೀದಿಗೆ ಒಂದೇ ಸರ್ವರ್

ತುಮಕೂರು: ಖರೀದಿ ಕೇಂದ್ರಗಳಲ್ಲಿ ರೈತರು ಹೆಸರು ನೋಂದಣಿ ಮಾಡಿಕೊಳ್ಳಲು ಮತ್ತೆ ಸರ್ವರ್ ಸಮಸ್ಯೆ ಕಾಡುತ್ತಿದ್ದು, ಗುರುವಾರ ಒಂದು ಗಂಟೆ ತಡವಾಗಿ ಪ್ರಕ್ರಿಯೆ ಆರಂಭವಾಯಿತು.

ಸಮಸ್ಯೆ ಸರಿಪಡಿಸಿದ ನಂತರ ಬೆಳಿಗ್ಗೆ 10.30ಕ್ಕೆ ನೋಂದಣಿ ಪ್ರಾರಂಭವಾಯಿತು. ಈ ಪ್ರಕ್ರಿಯೆ ಆರಂಭವಾದ ಫೆ. 5ರಿಂದಲೂ ಸಮಸ್ಯೆ ಕಾಡುತ್ತಲೇ ಇದ್ದು, ನೋಂದಣಿ ಮಾಡುವುದು ನಿಧಾನವಾಗುತ್ತಿದೆ. ನೆಟ್‌ವರ್ಕ್ ಇಲ್ಲದ ಹೋಬಳಿ ಕೇಂದ್ರಗಳಲ್ಲಿ ನೋಂದಣಿ ಸ್ಥಗಿತಗೊಳಿಸಿ, ತಾಲ್ಲೂಕು ಕೇಂದ್ರಗಳಿಗೆ ಸ್ಥಳಾಂತರಿಸುವ ಕೆಲಸ ಮುಂದುವರಿದಿದೆ.

ಬೆಂಬಲ ಬೆಲೆಯಲ್ಲಿ ರಾಗಿ ಖರೀದಿ ಪ್ರಕ್ರಿಯೆ ಆರಂಭವಾಗಿದ್ದು, ಇದೇ ಸರ್ವರ್ ಬಳಸಿ ಕೊಬ್ಬರಿ ಬೆಳೆಗಾರರ ನೋಂದಣಿ ಮಾಡಲಾಗುತ್ತಿದೆ. ಇದರಿಂದ ಒತ್ತಡ ಹೆಚ್ಚಾಗಿ, ಪ್ರಕ್ರಿಯೆ ನಿಧಾನವಾಗುತ್ತಿದೆ. ಹೆಚ್ಚಿನ ಸಂಖ್ಯೆಯ ರೈತರನ್ನು ನೋಂದಣಿ ಮಾಡಿಸಲು ಈವರೆಗೆ ಇದ್ದ 23 ಕೇಂದ್ರಗಳನ್ನು 40ಕ್ಕೆ ಹೆಚ್ಚಿಸಲಾಗಿದೆ ಎಂದು ಮಾರಾಟ ಮಹಾಮಂಡಳದ ಮೂಲಗಳು ತಿಳಿಸಿವೆ.

ಜಿಲ್ಲೆಯಲ್ಲಿ ರೈತರ ಬಳಿ ಸುಮಾರು 8 ಲಕ್ಷ ಕ್ವಿಂಟಲ್ ಕೊಬ್ಬರಿ ದಾಸ್ತಾನು ಇದೆ ಎಂದು ತೋಟಗಾರಿಕೆ ಇಲಾಖೆ ಅಂದಾಜು ಮಾಡಿದೆ. ಇದರಲ್ಲಿ ಹೆಚ್ಚೆಂದರೆ ನಾಫೆಡ್ 1.50 ಲಕ್ಷ ಕ್ವಿಂಟಲ್ ಖರೀದಿಸುವ ಸಾಧ್ಯತೆ ಇದೆ. ಉಳಿದ ಕೊಬ್ಬರಿಯನ್ನು ವರ್ತಕರಿಗೆ ಮಾರಾಟ ಮಾಡಬೇಕಾಗುತ್ತದೆ.

ಒಂದೇ ಕಂಪ್ಯೂಟರ್: ಬೆಳೆಗಾರರ ಅಳಲು

ಚಿಕ್ಕಮಗಳೂರು: ಜಿಲ್ಲೆಯ ಕಡೂರಿನಲ್ಲಿ ಖರೀದಿ ಕೇಂದ್ರ ತೆರೆಯಲಾಗಿದ್ದು, ಒಂದೇ ಕಂಪ್ಯೂಟರ್‌ನಲ್ಲಿ ನೋಂದಣಿ ಮಾಡಲಾಗುತ್ತಿದೆ. ಜತೆಗೆ ಸರ್ವರ್ ಸಮಸ್ಯೆಯಿಂದ ನೋಂದಣಿ ವಿಳಂಬವಾಗುತ್ತಿದೆ.

ರೈತರ ಹೆಸರಲ್ಲಿ ವರ್ತಕರು ಬೆಂಬಲ ಬೆಲೆಯ ಪ್ರಯೋಜನ ಪಡೆಯುವುದನ್ನು ತಡೆಯಲು ಈ ಬಾರಿ ರೈತರೇ ಬೆರಳಚ್ಚು ನೀಡುವುದನ್ನು ಕಡ್ಡಾಯಗೊಳಿಸಲಾಗಿದೆ. ಬಹುತೇಕ ರೈತರ ಜಮೀನಿನ ಖಾತೆ ಕುಟುಂಬದ ಹಿರಿಯರ ಹೆಸರಿನಲ್ಲೇ ಇದ್ದು, ಅವರೇ ಖುದ್ದು ಖರೀದಿ ಕೇಂದ್ರಕ್ಕೆ ಬರಬೇಕಿದೆ. ಇದರಿಂದಾಗಿ ಕೇಂದ್ರದ ಮುಂದೆ ವಯಸ್ಸಾದ ರೈತರು, ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಚಿಕ್ಕಮಗಳೂರು, ಬೀರೂರು, ತರೀಕೆರೆ ಸೇರಿದಂತೆ ದೂರದ ಊರುಗಳಿಂದಲೂ ರೈತರು ನೋಂದಣಿಗೆ ಬರುತ್ತಿದ್ದಾರೆ. ಎಲ್ಲ ಹೋಬಳಿ ಕೇಂದ್ರಗಳಲ್ಲಿ ನೋಂದಣಿ ಕೇಂದ್ರ ತೆರೆದರೆ ಅನುಕೂಲ ಆಗಲಿದೆ ಎಂದು ರೈತರು ಹೇಳುತ್ತಾರೆ.

ಎಲ್‌ಐಸಿಗೆ ₹9,444 ಕೋಟಿ ನಿವ್ವಳ ಲಾಭ

ನವದೆಹಲಿ (ಪಿಟಿಐ): ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) 2023–24ನೇ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ₹9,444 ಕೋಟಿ ನಿವ್ವಳ ಲಾಭ ಗಳಿಸಿದೆ.

2022–23ರ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹6,334 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದಲ್ಲಿ ಶೇ 49ರಷ್ಟು ಏರಿಕೆ ಆಗಿದೆ ಎಂದು ಕಂಪನಿಯು ಷೇರುಪೇಟೆಗೆ ತಿಳಿಸಿದೆ.

ನಿವ್ವಳ ಪ್ರೀಮಿಯಂ ವರಮಾನವು ₹1,11,788 ಕೋಟಿಯಿಂದ ₹1,17,017 ಕೋಟಿಗೆ ಏರಿಕೆಯಾಗಿದೆ. ಒಟ್ಟು ವರಮಾನವು ₹1,96,891 ಕೋಟಿಯಿಂದ ₹2,12,447 ಕೋಟಿಗೆ ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಎಲ್‌ಐಸಿ ಷೇರು ಏರಿಕೆ: ಎಲ್‌ಐಸಿಯ ಷೇರುಗಳು ಶೇ 6ರಷ್ಟು ಏರಿಕೆಯಾಗಿವೆ. ಇದರಿಂದ ಕಂಪನಿಯ ಮಾರುಕಟ್ಟೆ ಮೌಲ್ಯಕ್ಕೆ ಒಂದೇ ದಿನ ₹38,740 ಕೋಟಿ ಸೇರ್ಪಡೆಯಾಗಿದೆ. ಒಟ್ಟು ಮಾರುಕಟ್ಟೆ ಮೌಲ್ಯವು ₹6.99 ಲಕ್ಷ ಕೋಟಿಗೆ ತಲುಪಿದೆ.

ಬಿಎಸ್‌ಇಯಲ್ಲಿ ಷೇರಿನ ಮೌಲ್ಯ ಶೇ5.86ರಷ್ಟು ಏರಿಕೆಯಾಗಿದ್ದು, ಪ್ರತಿ ಷೇರಿನ ಬೆಲೆ ₹1,106.25ಕ್ಕೆ ತಲುಪಿದೆ. ಎನ್‌ಎಸ್‌ಇಯಲ್ಲಿ ಷೇರಿನ ಮೌಲ್ಯ ಶೇ 6.46ರಷ್ಟು ಏರಿಕೆಯಾಗಿದ್ದು, ಪ್ರತಿ ಷೇರಿನ ಬೆಲೆ ₹1,112 ಮುಟ್ಟಿದೆ.

ಮುಂಬೈ ಧಾರಣೆ

ಶೇಂಗಾ

08-02-2024

ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1490 (1490)
ಒಂದು ವಾರದ ಡೆಲಿವರಿ	1485 (1485)
ಸೋಯಾ ಕಚ್ಚಾ	855 (850)
ಪಾಮ್ ವಾರದ ಡೆಲಿವರಿ	856 (850)
ಸೂರ್ಯಕಾಂತಿ ಎಣ್ಣೆ ಕಚ್ಚಾ	855 (855)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹62,300 (62,450)
ಬೆಳ್ಳಿ ಕೆ.ಜಿ ₹69,900 (69,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸುಧಾ, ಮಯೂರ ಓದಿ

ಅಗ್ರಸ್ಥಾನದತ್ತ ಮಯಂಕ್ ಪಡೆ ಚಿತ್ತ

ರಣಜಿ: ಚೆನ್ನೈನಲ್ಲಿ ಕರ್ನಾಟಕ – ತಮಿಳುನಾಡು ಹಣಾಹಣಿ ಇಂದಿನಿಂದ

ಪ್ರಜಾವಾಣಿ ವಾರ್ತೆ



ಮಯಂಕ್ ಅಗರವಾಲ್ ಮವತ್ತು ಮನೀಷ್ ಪಾಂಡೆ

ಚೆನ್ನೈ: ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಸಿ ಗುಂಪಿನ ಅಗ್ರಸ್ಥಾನದ ಮೇಲೆ ಕಣ್ಣಿಟ್ಟಿರುವ ಕರ್ನಾಟಕ ತಂಡವು ಶುಕ್ರವಾರ ಆರಂಭವಾಗಲಿರುವ ಪಂದ್ಯದಲ್ಲಿ ತಮಿಳುನಾಡು ವಿರುದ್ಧ ಕಣಕ್ಕಿಳಿಯಲಿದೆ.

ಸದ್ಯ ತಮಿಳುನಾಡು ಪ್ರಥಮ ಹಾಗೂ ಕರ್ನಾಟಕ ಎರಡನೇ ಸ್ಥಾನದಲ್ಲಿವೆ. ಉಭಯ ತಂಡಗಳ ಖಾತೆಯಲ್ಲಿಯೂ ತಲಾ 21 ಅಂಕಗಳು ಇವೆ.

ಆದರೆ ನೆಟ್ ರನ್‌ರೇಟ್ ಆಧಾರದಲ್ಲಿ ತಮಿಳುನಾಡು ಸ್ವಲ್ಪ ಮುಂದಿದೆ. ಈ ಪಂದ್ಯದಲ್ಲಿ ಕರ್ನಾಟಕ ತಂಡವು ಗೆದ್ದರೆ ಅಗ್ರಸ್ಥಾನಕ್ಕೇರುತ್ತದೆ. ಆದರೆ ಸೋತರೆ ಮತ್ತು ಇನ್ನೊಂದು ಪಂದ್ಯದಲ್ಲಿ ತ್ರಿಪುರಾ ತಂಡವು ಚಂಡೀಗಡದ ವಿರುದ್ಧ ಗೆದ್ದರೆ ಕರ್ನಾಟಕಕ್ಕೆ ತುಸು ಹಿನ್ನಡೆಯಾಗುವ ಸಾಧ್ಯತೆ ಇದೆ.

ಮುಂದಿನ ವಾರ ಹುಬ್ಬಳ್ಳಿಯಲ್ಲಿ ನಡೆಯುವ ಕೊನೆಯ ಪಂದ್ಯದಲ್ಲಿ ಚಂಡೀಗಡದ ವಿರುದ್ಧ ಜಯಿಸಲೇಬೇಕಾದ ಒತ್ತಡಕ್ಕೂ ತಂಡ ಒಳಗಾಗಬಹುದು. ಆದ್ದರಿಂದ ತಮಿಳುನಾಡು ವಿರುದ್ಧ ಕನಿಷ್ಠ ಪಕ್ಷ ಇನಿಂಗ್ಸ್ ಮುನ್ನಡೆ ಪಡೆದು ಡ್ರಾ ಸಾಧಿಸುವತ್ತ ಪ್ರಯತ್ನಿಸಬೇಕಿದೆ.

ಇದರಿಂದಾಗಿ ಈ ಪಂದ್ಯವು ಸಮಬಲದ ಹೋರಾಟಕ್ಕೆ ವೇದಿಕೆಯಾಗುವ ನಿರೀಕ್ಷೆ ಇದೆ. ಆದ್ದರಿಂದಲೇ ಈ ಹಣಾಹಣಿಯು 'ದಕ್ಷಿಣ ಡರ್ಬಿ' ಎಂದೇ ಕುತೂಹಲ ಕೆರಳಿಸಿದೆ. ಉಭಯ ತಂಡಗಳೂ ಆಡಿರುವ ಐದು ಪಂದ್ಯಗಳಲ್ಲಿ ತಲಾ ಮೂರು ಗೆದ್ದಿವೆ. ಒಂದು ಸೋಲು ಮತ್ತು ಒಂದರಲ್ಲಿ ಡ್ರಾ ಸಾಧಿಸಿವೆ.

ಬ್ಯಾಟಿಂಗ್ ಬಲ: ಅಗರ್ತಲಾ ದಲ್ಲಿ ತ್ರಿಪುರ ವಿರುದ್ಧದ ಪಂದ್ಯದ ನಂತರ ಸೂರತ್ ಗೆ ಪ್ರಯಾಣಿಸುವ ವಿಮಾನದಲ್ಲಿ ನೀರು ಎಂದು ಭಾವಿಸಿ ದ್ರಾವಣವೊಂದನ್ನು ಸೇವಿಸಿ ಅಸ್ವಸ್ಥರಾಗಿದ್ದ ಮಯಂಕ್ ಅಗರವಾಲ್ ಈಗ ಸಂಪೂರ್ಣ ಚೇತರಿಸಿಕೊಂಡು ತಂಡಕ್ಕೆ ಮರಳಿದ್ದಾರೆ. ಈ ಪಂದ್ಯದಲ್ಲಿ ಕರ್ನಾಟಕ ತಂಡವನ್ನು ಮುನ್ನಡೆಸಲಿದ್ದಾರೆ.

ಭಾರತ ಎ ತಂಡದಲ್ಲಿ ಆಡಿ ಬಂದಿರುವ ದೇವದತ್ತ ಪಡಿಕ್ಕಲ್ ಕೂಡ ಕರ್ನಾಟಕದ ಬ್ಯಾಟಿಂಗ್ ಬಲವನ್ನು ಹೆಚ್ಚಿಸಿದ್ದಾರೆ. ಈ ರಣಜಿ ಟೂರ್ನಿಯ ಮೊದಲ ಮೂರು ಪಂದ್ಯಗಳಲ್ಲಿ ಅವರು ಆಡಿದ್ದರು. ಒಂದು ಶತಕ ಕೂಡ ಗಳಿಸಿದ್ದರು.

ಸೂರತ್‌ನಲ್ಲಿ ರೈಲ್ವೇಸ್ ಎದುರಿನ ಪಂದ್ಯದಲ್ಲಿ ಮಯಂಕ್ ಗೈರು ಹಾಜರಿಯಲ್ಲಿ ನಿಕಿನ್ ಜೋಸ್ ತಂಡವನ್ನು ಮುನ್ನಡೆಸಿದ್ದರು. ಆದರೆ ಅವರು ಬ್ಯಾಟಿಂಗ್‌ನಲ್ಲಿ ವಿಫಲರಾಗಿದ್ದರು. ಆ ಪಂದ್ಯದಲ್ಲಿ ಕಠಿಣ ಗುರಿಯನ್ನು ಬೆನ್ನಟ್ಟಿದ್ದ ಕರ್ನಾಟಕ ತಂಡವನ್ನು ಅನುಭವಿ ಮನೀಷ್ ಪಾಂಡೆ ತಮ್ಮ ಛಲದ ಬ್ಯಾಟಿಂಗ್ ಮೂಲಕ ಗೆಲ್ಲಿಸಿದ್ದರು. ಅವರು ಮತ್ತು ವೈಶಾಖ ವಿಜಯಕುಮಾರ್ ಅವರ ಆಲ್‌ರೌಂಡ್ ಆಟವು ಗಮನಾರ್ಹವಾಗಿತ್ತು. ಆದರೆ ಆರ್. ಸಮರ್ಥ್ ಇದುವರೆಗೆ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಡಿಲ್ಲ.

ನವಪ್ರತಿಭೆ ಕಿಶನ್ ಬೆದರೆ ಭರವಸೆ ಮೂಡಿಸಿದ್ದಾರೆ. ಶರತ್ ಶ್ರೀನಿವಾಸ್, ಆಲ್‌ರೌಂಡರ್ ಹಾರ್ದಿಕ್ ರಾಜ್ ಅವರಿಗೆ ತಮ್ಮ ಸಾಮರ್ಥ್ಯ ತೋರಲು ಮತ್ತೊಂದು ಅವಕಾಶ ಸಿಗುವ ನಿರೀಕ್ಷೆ ಇದೆ. ಬೌಲಿಂಗ್‌ನಲ್ಲಿ ವಿದ್ವತ್ ಕಾವೇರಪ್ಪ, ವಿ. ಕೌಶಿಕ್ ಮತ್ತು ವೈಶಾಖ ಅಮೋಘ ಲಯದಲ್ಲಿದ್ದಾರೆ. ಸ್ಪಿನ್ ವಿಭಾಗದಲ್ಲಿ ಹೊಸಬರು ಇರುವುದರಿಂದ ಅನುಭವದ ಕೊರತೆ ಇದೆ.

ಆರ್. ಸಾಯಿಕಿಶೋರ್ ನಾಯಕತ್ವದ ಆತಿಥೇಯ ತಂಡವೂ ಎಲ್ಲ ವಿಭಾಗಗಳಲ್ಲಿ ಬಲಿಷ್ಠವಾಗಿದೆ. ಚಂಡೀಗಡ ಎದುರಿನ ಪಂದ್ಯದಲ್ಲಿ ಎನ್. ಜಗದೀಶನ್ ಅವರು ತ್ರಿಶತಕ ಗಳಿಸಿದ್ದರು. ಅದೇ ಪಂದ್ಯದಲ್ಲಿ ಸಾಯಿಕಿಶೋರ್ ಐದು ವಿಕೆಟ್ ಗೊಂಚಲು ಗಳಿಸಿದ್ದರು. ಪ್ರದೋಷ್ ಪಾಲ್, ಬಾಬಾ ಇಂದ್ರಜೀತ್, ಆಲ್‌ರೌಂಡರ್ ವಿಜಯಶಂಕರ್ ಕೂಡ ಉತ್ತಮ ಲಯದಲ್ಲಿದ್ದಾರೆ. ಅಜಿತ್ ರಾಮ್ ಅವರಂತಹ ಪ್ರತಿಭಾನ್ವಿತ ಸ್ಪಿನ್ನರ್ ಇರುವ ಬೌಲಿಂಗ್ ಪಡೆಯು ಕರ್ನಾಟಕದ ಬ್ಯಾಟರ್‌ಗಳಿಗೆ ಕಠಿಣ ಸವಾಲೊಡ್ಡುವ ಸಾಧ್ಯತೆಗಳಿವೆ.

ಮುಖ್ಯಾಂಶಗಳು

- ಉಭಯ ತಂಡಗಳ ಸಮಬಲದ ಹೋರಾಟದ ನಿರೀಕ್ಷೆ
- ಉತ್ತಮಲಯದಲ್ಲಿರುವ ವಿದ್ವತ್, ಕೌಶಿಕ್, ವೈಶಾಖ

ಭಾರತ– ಅಮೆರಿಕ ಪೈಪೋಟಿ ಇಂದು

ಭುವನೇಶ್ವರ (ಪಿಟಿಐ): ಹ್ಯಾಟ್ರಿಕ್ ಸೋಲುಗಳಿಂದ ಕಂಗೆಟ್ಟಿರುವ ಭಾರತದ ಮಹಿಳಾ ಹಾಕಿ ತಂಡ ಈಗ ಆದರಿಂದ ಹೊ ಬರುವ ತವಕದಲ್ಲಿದೆ.

ಆತಿಥೇಯ ತಂಡ ಶುಕ್ರವಾರ ಇಲ್ಲಿ ನಡೆಯುವ ಎಫ್‌ಐಎಚ್ ಪ್ರೊ ಲೀಗ್ ಪಂದ್ಯದಲ್ಲಿ ಅಮೆರಿಕ ತಂಡವನ್ನು ಎದುರಿಸಲಿದೆ.

ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಲು ವಿಫಲವಾದ ಸವಿತಾ ಪೂನಿಯಾ ಬಳಗದ ಪ್ರದರ್ಶನ ಇತ್ತೀಚಿನ ದಿನಗಳಲ್ಲಿ ಸಾಧಾರಣ ಮಟ್ಟದಿಂದ ಅಧೋಗತಿಯತ್ತ ಸಾಗಿದೆ.

ಚೀನಾಕ್ಕೆ 1–2 ಗೋಲುಗಳಿಂದ ಮಣಿದಿದ್ದ ಭಾರತ ನಂತರ ಪ್ರಬಲ ನೆದರ್ಲೆಂಡ್ಸ್ ತಂಡದೆದುರು 1– 3ರಿಂದ ಸೋಲನುಭವಿಸಿತ್ತು. ಬುಧವಾರ ಬಲಿಷ್ಠ ಆಸ್ಟ್ರೇಲಿಯಾಕ್ಕೆ 0–3 ಗೋಲುಗಳಿಂದ ಶರಣಾಗಿತ್ತು.

'ನಮಗೆ ಆರಂಭಿಕ ಪಂದ್ಯಗಳು ಪ್ರಬಲ ಸವಾಲನ್ನು ಒಡ್ಡಿದವು. ಆದರೆ ನಮ್ಮದು ಪುಟಿದೇಳಬಲ್ಲ ತಂಡ' ಎಂದು ನಾಯಕಿ ಸವಿತಾ ಹೇಳಿದರು.

ಪ್ರಜ್ವಲ್ ದೇವ್‌ಗೆ ವೈಲ್ಡ್ ಕಾರ್ಡ್



ಪ್ರಜ್ವಲ್ ದೇವ್

ಬೆಂಗಳೂರು: ಪಾಕಿಸ್ತಾನ ವಿರುದ್ಧ ಆಡಿದ್ದ ಡೇವಿಸ್ ಕಪ್ ತಂಡಕ್ಕೆ ಮೀಸಲು ಆಟಗಾರನಾಗಿ ಆಯ್ಕೆಯಾಗಿದ್ದ ಮೈಸೂರಿನ ಪ್ರಜ್ವಲ್ ದೇವ್ ಅವರಿಗೆ ಇದೇ 12ರಂದು ಆರಂಭವಾಗುವ ಬೆಂಗಳೂರು ಓಪನ್ ಎಟಿಪಿ ಚಾಲೆಂಜರ್ ಟೂರ್ನಿಯ ಸಿಂಗಲ್ಸ್ ಪ್ರಧಾನ ಸುತ್ತಿಗೆ ವೈಲ್ಡ್ ಕಾರ್ಡ್ ನೀಡಲಾಗಿದೆ.

27 ವರ್ಷದ ದೇವ್, ಕಳೆದ ವರ್ಷವೂ ಬೆಂಗಳೂರು ಓಪನ್‌ನಲ್ಲಿ ಪಾಲ್ಗೊಂಡಿದ್ದರು. ಆದರೆ ಮೊದಲ ಸುತ್ತಿನಲ್ಲಿ ನಿರ್ಗಮಿಸಿದ್ದರು. ಆದರೆ ಇತ್ತೀಚೆಗೆ ಉತ್ತಮ ಲಯದಲ್ಲಿದ್ದಾರೆ. ಥಾಯ್ಲೆಂಡ್‌ನಲ್ಲಿ ಐಟಿಎಫ್ ಟೂರ್ನಿಯಲ್ಲಿ ರನ್ನರ್ ಅಪ್ ಆಗಿದ್ದ ಅವರು, ಇತರ ಮೂರು ಟೂರ್ನಿಗಳಲ್ಲಿ ಸೆಮಿಫೈನಲ್ ತಲುಪಿದ್ದರು.

'ವೈಲ್ಡ್ ಕಾರ್ಡ್ ಪ್ರವೇಶ ನೀಡಿದ್ದರಿಂದ ಸಂತಸವಾಗಿದೆ. ಚೆನ್ನೈನಲ್ಲಿ ಕಳೆದ ವಾರ ಉತ್ತಮ ಪ್ರದರ್ಶನ ನೀಡಿದ್ದೇನೆ. ಇಲ್ಲೂ ಅದನ್ನು ಮುಂದುವರಿಸುವ ವಿಶ್ವಾಸವಿದೆ' ಎಂದು ದೇವ್ ಹೇಳಿದರು. ಪ್ರಸ್ತುತ ವಿಶ್ವ ಕ್ರಮಾಂಕದಲ್ಲಿ ಅವರು 611ನೇ ಸ್ಥಾನದಲ್ಲಿದ್ದಾರೆ.

'ವಿಶ್ವದ ಅಗ್ರ 500ರೊಳಗೆ ಸ್ಥಾನ ಪಡೆಯುವ ಸಾಮರ್ಥ್ಯ ಅವರಿಗೆ ಇದೆ. ಅವರಿಗೆ ಹೆಚ್ಚಿನ ಅವಕಾಶಗಳನ್ನು ನೀಡಲು ಬಯಸಿದ್ದೇವೆ. ಅವರು ಪ್ರತಿಭಾನ್ವಿತ ಆಟಗಾರ. ಸ್ಥಳೀಯ ಆಟಗಾರರನ್ನು ಪ್ರೋತ್ಸಾಹಿಸುವುದು ನಮ್ಮ ಬದ್ಧತೆ' ಎಂದು ಟೂರ್ನಿಯ ನಿರ್ದೇಶಕ ಸುನೀಲ್ ಯಜಮಾನ್ ತಿಳಿಸಿದರು.

ಕ್ರಿಕೆಟ್: ಹತ್ತು ಮಂದಿ ವಿರುದ್ಧ ಎಫ್‌ಐಆರ್

ಅಗರ್ತಲಾ (ಪಿಟಿಐ): ಹಣ ದುರುಪಯೋಗ ಆರೋಪದ ಹಿನ್ನೆಲೆಯಲ್ಲಿ ತ್ರಿಪುರಾ ಕ್ರಿಕೆಟ್ ಸಂಸ್ಥೆಯ (ಟಿಸಿಎ) ಮಾಜಿ ಕಾರ್ಯದರ್ಶಿ ತಪಸ್ ಘೋಷ್ ಸೇರಿದಂತೆ ಹತ್ತು ಮಂದಿ ವಿರುದ್ಧ ಪ್ರಕರಣ ದಾಖಲು ಮಾಡಲಾಗಿದೆ ಎಂದು ಗುಪ್ತಚರ ಐಜಿ ಎಲ್.ಡಾರ್ಲಾಂಗ್ ಗುರುವಾರ ತಿಳಿಸಿದ್ದಾರೆ. ಟಿಸಿಎ ಮಾಜಿ ಉಪಾಧ್ಯಕ್ಷ ತಿಮಿರ್ ಚಂದಾ ಮತ್ತು ಮಾಜಿ ಖಜಾಂಚಿ ಜಯಲಾಲ್ ದಾಸ್ ಅವರನ್ನೂ ಎಫ್‌ಐಆರ್‌ನಲ್ಲಿ ಹೆಸರಿಸಲಾಗಿದೆ.

'ಹಣಕಾಸು ಅಕ್ರಮಗಳ ಬಗ್ಗೆ ಮೇಲ್ನೋಟಕ್ಕೆ ಪುರಾವೆಗಳು ದೊರೆತ ಕಾರಣ ಟಿಸಿಎ ಮಾಜಿ ಕಾರ್ಯದರ್ಶಿ ತಪನ್ ಘೋಷ್ ಸೇರಿದಂತೆ ಹತ್ತು ಜನರ ವಿರುದ್ಧ ವಿಶೇಷ ತನಿಖಾ ತಂಡ (ಎಸ್‌ಐಟಿ) ಎಫ್‌ಐಆರ್ ದಾಖಲಿಸಿದೆ. ಆರಂಭದಲ್ಲಿ ₹10 ಕೋಟಿ ಅಕ್ರಮ ನಡೆದಿರುವ ಬಗ್ಗೆ ಮಾಹಿತಿ ಇದೆ' ಎಂದು ಡಾರ್ಲಾಂಗ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

19 ವರ್ಷದೊಳಗಿನವರ ವಿಶ್ವಕಪ್: ಫೈನಲ್‌ನಲ್ಲಿ ಭಾರತಕ್ಕೆ ಕಾಂಗರೂ ಪಡೆ ಸವಾಲು

ಆಸ್ಟ್ರೇಲಿಯಾಗೆ ಜಯ; ಪಾಕ್‌ಗೆ ನಿರಾಶೆ



ಆಸ್ಟ್ರೇಲಿಯಾದ ಬೌಲರ್ ಟಾಮ್ ಸ್ಟ್ರೇಕರ್ ಅವರು ವಿಕೆಟ್ ಪಡೆದ ಬಳಿಕ ಸಂಭ್ರಮಿಸಿದರು. –ಟ್ವಿಟರ್ ಚಿತ್ರ

ಬೆನೊನಿ (ಪಿಟಿಐ): ಆಸ್ಟ್ರೇಲಿಯಾದ ಯುವಪಡೆಯು ಗುರುವಾರ ರಾತ್ರಿ ನಡೆದ 19 ವರ್ಷದೊಳಗಿನವರ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಪಾಕಿಸ್ತಾನ ವಿರುದ್ಧ ರೋಚಕ ಜಯ ಗಳಿಸಿತು. ಇದರೊಂದಿಗೆ ಫೈನಲ್ ಪ್ರವೇಶಿಸಿತು.

ಇದೇ 11ರಂದು ನಡೆಯಲಿರುವ ಫೈನಲ್‌ನಲ್ಲಿ ಭಾರತ ತಂಡವನ್ನು ಆಸ್ಟ್ರೇಲಿಯಾ ಎದುರಿಸಲಿದೆ. ವಿಲೊಮೂರ್ ಪಾರ್ಕ್‌ನಲ್ಲಿ ನಡೆದ ಪಂದ್ಯದಲ್ಲಿ ನಾಲ್ಕರ ಘಟ್ಟದ ಪಂದ್ಯದಲ್ಲಿ ಟಾಸ್ ಗೆದ್ದ ಆಸ್ಟ್ರೇಲಿಯಾ ತಂಡವು ಫೀಲ್ಡಿಂಗ್ ಮಾಡಿತು.

ತಂಡದ ಮಧ್ಯಮವೇಗಿ ಟಾಮ್ ಸ್ಟ್ರೇಕರ್ (9.5–1–24–6) ಅವರ ಅಮೋಘ ಬೌಲಿಂಗ್ ಮುಂದೆ ಪಾಕಿಸ್ತಾನ ತಂಡವು 48.5 ಓವರ್‌ಗಳಲ್ಲಿ 179 ರನ್‌ಗಳಿಗೆ ಕುಸಿಯಿತು. ಇದಕ್ಕುತ್ತರವಾಗಿ 49.1 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 181 ರನ್ ಗಳಿಸಿದ ಆಸ್ಟ್ರೇಲಿಯಾ ಜಯಿಸಿತು.

ಆದರೆ ಈ ಹಾದಿ ಸರಳವಾಗಿರಲಿಲ್ಲ.168 ರನ್‌ಗಳಿಗೆ 9 ವಿಕೆಟ್ ಕಳೆದುಕೊಂಡಿದ್ದ ತಂಡವನ್ನು ಕೆಳಕ್ರಮಾಂಕದ ಬ್ಯಾಟರ್‌ಗಳು ಗೆಲುವಿನ ದಡ ಸೇರಿಸಿದರು. ರಾಫ್ ಮ್ಯಾಕ್‌ಮಿಲನ್ (ಅಜೇಯ 19; 29ಎ, 4X2) ಮತ್ತು ಕ್ಯಾಲಂ ವಿಡ್ಲರ್ (ಅಜೇಯ 2) ಮುರಿಯದ ಹತ್ತನೇ ವಿಕೆಟ್ ಜೊತೆಯಾಟದಲ್ಲಿ 17 ರನ್ ಗಳಿಸಿದರು. ಕೊನೆಯ ಆರು ಎಸೆತಗಳಲ್ಲಿ 3 ರನ್‌ಗಳ ಅಗತ್ಯವಿತ್ತು.

ಮೊಹಮ್ಮದ್ ಜಿಶಾನ್ ಅವರು ಹಾಕಿದ ಕೊನೆಯ ಓವರ್‌ನ ಮೊದಲ ಎಸೆತದಲ್ಲಿಯೇ ಬೌಂಡರಿ ಹೊಡೆದ ರಾಫ್ ಸಂಭ್ರಮಿಸಿದರು. ಪಾಕ್ ಆಟಗಾರರು ನಿರಾಶೆಯಿಂದ ಕುಸಿದರು.

ಅಲಿ ರಝಾ (34ಕ್ಕೆ4) ಮತ್ತು ಅರಾಫತ್ ಮಿನ್ಹಾಸ್ (20ಕ್ಕೆ2) ಅವರ ದಾಳಿಯ ಮುಂದೆ ಆಸ್ಟ್ರೇಲಿಯಾ ತಂಡವು 59 ರನ್‌ಗಳಿಗೇ ನಾಲ್ಕು ವಿಕೆಟ್ ಕಳೆದುಕೊಂಡಿತ್ತು. ಇದರಿಂದಾಗಿ ಕೊನೆಯ ಓವರ್‌ನವರೆಗೂ ಪಾಕ್ ತಂಡವು ಗೆಲುವಿಗಾಗಿ ಪ್ರಯತ್ನಿಸಿತು. ಆಸ್ಟ್ರೇಲಿಯಾ ತಂಡದ ಆರಂಭಿಕ ಬ್ಯಾಟರ್ ಹ್ಯಾರಿ ಡಿಕ್ಸನ್ (50; 75ಎ) ಮತ್ತು ಒಲಿವರ್ ಪೀಕೆ 49 ರನ್ ಗಳಿಸಿ ತಂಡಕ್ಕೆ ಬಲ ತುಂಬಿದರು.

ಆದರೆ ಪಾಕಿಸ್ತಾನ ತಂಡದ ಬ್ಯಾಟಿಂಗ್ ವೈಫಲ್ಯವು ಸೋಲಿಗೆ ಪ್ರಮುಖ ಕಾರಣವಾಯಿತು. ತಂಡದ ಅಝಾನ್ ಅವೈಸ್ (52; 91ಎ) ಮತ್ತು ಏಳನೇ ಕ್ರಮಾಂಕದ ಬ್ಯಾಟರ್ ಅರಾಫತ್ ಮಿನ್ಹಾಸ್ (52; 61ಎ) ಅರ್ಧಶತಕಗಳನ್ನು ಗಳಿಸಿದರು.

ಆರಂಭಿಕ ಬ್ಯಾಟರ್ ಶಾಮಿಲ್ ಹುಸೇನ್ 17 ರನ್ ಗಳಿಸಿದರು. ಉಳಿದ ಬ್ಯಾಟರ್‌ಗಳು ಎರಡಂಕಿ ತಲುಪಲಿಲ್ಲ. ತಂಡಕ್ಕೆ 20 ಇತರೆ ರನ್‌ಗಳು ದೊರಕಿದವು.

ಸಂಕ್ಷಿಪ್ತ ಸ್ಕೋರು: ಪಾಕಿಸ್ತಾನ: 48.5 ಓವರ್‌ಗಳಲ್ಲಿ 179 (ಅಝಾನ್ ಅವೈಸ್ 52, ಅರಾಫತ್ ಮಿನಾಸ್ 52, ಟಾಮ್ ಸ್ಟ್ರೇಕರ್ 24ಕ್ಕೆ6) ಆಸ್ಟ್ರೇಲಿಯಾ: 49.1 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 181 (ಹ್ಯಾರಿ ಡಿಕ್ಸನ್ 50, ಒಲಿವರ್ ಪೀಕೆ 49, ಟಾಮ್ ಕ್ಯಾಂಪ್‌ಬೆಲ್ 25, ಅಲಿ ರಝಾ 34ಕ್ಕೆ4, ಅರಾಫತ್ ಮಿನಾಸ್ 20ಕ್ಕೆ2) ಫಲಿತಾಂಶ: ಆಸ್ಟ್ರೇಲಿಯಾ ತಂಡಕ್ಕೆ 1 ವಿಕೆಟ್ ಜಯ. ಪಂದ್ಯಶ್ರೇಷ್ಠ: ಟಾಮ್ ಸ್ಟ್ರೇಕರ್.

ಧಾರವಾಡದಲ್ಲಿ ಹೊನಲು ಬೆಳಕಿನ ಬ್ಯಾಸ್ಕೆಟ್‌ಬಾಲ್ ಟೂರ್ನಿ

ಬೀಗಲ್ಸ್ ತಂಡದ ಶುಭಾರಂಭ

ಪ್ರಜಾವಾಣಿ ವಾರ್ತೆ



ಧಾರವಾಡದ ರೋವರ್ಸ್ ಮೈದಾನದಲ್ಲಿ ಗುರುವಾರ ನಡೆದ ಪುರುಷರ ಲೀಗ್ ಹಂತದ ಪಂದ್ಯದಲ್ಲಿ ಮಂಡ್ಯದ ಆಟಗಾರ (ಬಿಳಿ ಉಡುಪು) ಚೆಂಡನ್ನು ಬಾಸ್ಕೆಟ್‌ಗೆ ಹಾಕುತ್ತಿರುವುದು ಪ್ರಜಾವಾಣಿ ಚಿತ್ರ/ಬಿ.ಎಂ.ಕೇದಾರನಾಥ

ಧಾರವಾಡ: ಬೆಂಗಳೂರಿನ ಬೀಗಲ್ಸ್ ತಂಡವು ಗುರುವಾರ ಇಲ್ಲಿ ಆರಂಭವಾದ ರಾಜ್ಯಮಟ್ಟದ ಹೊನಲು ಬೆಳಕಿನ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ರಾಜ್ಯ ಬಾಸ್ಕೆಟ್ ಬಾಲ್ ಸಂಸ್ಥೆ ಹಾಗೂ ಧಾರವಾಡ ಜಿಲ್ಲಾ ಘಟಕ, ರೋವರ್ಸ್ ಬಾಸ್ಕೆಟ್ ಬಾಲ್ ಕ್ಲಬ್ ಆಶ್ರಯದಲ್ಲಿ ಈ ಟೂರ್ನಿ ನಡೆಯುತ್ತಿದೆ. ರೋವರ್ಸ್ ಅಂಕಣದಲ್ಲಿ ನಡೆದ ಪಂದ್ಯದಲ್ಲಿ ಅಂಚಿತ್ಯಾ (33) ಅವರ ಅಮೋಘ ಆಟದ ಬಲದಿಂದ ಬೀಗಲ್ಸ್ ತಂಡವು 74–54ರಿಂದ ಚಿಕ್ಕಮಗಳೂರಿನ ಮರಿಯನ್ಸ್ ತಂಡವನ್ನು ಸೋಲಿಸಿತು. ಚಿಕ್ಕಮಗಳೂರು ತಂಡದ ರಾಜು 19 ಅಂಕ ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ ಬೆಂಗಳೂರಿನ ವ್ಯಾನ್‌ಗಾರ್ಡ್ಸ್ ತಂಡವು 63–51ರಿಂದ ಬೆಂಗಳೂರಿನ ಎಚ್‌ಬಿಆರ್ ತಂಡದ ವಿರುದ್ಧ ಗೆದ್ದಿತು. ವಿಜೇತ ಬಳಗದ ಅನೀಷ್ ಪಿ (19) ಮಿಂಚಿದರು. ಮಂಡ್ಯದ ವಿಬಿಸಿ ತಂಡವು 56–32ರಿಂದ ಬಾಗಲಕೋಟೆಯ ಡಿಬಿಎ ವಿರುದ್ಧ ಜಯಿಸಿತು. ಮಂಡ್ಯದ ಶಶಾಂಕ್ ಗೌಡ (18) ಮಿಂಚಿದರು.

ಮಲ್ಲಸಜ್ಜನ ವ್ಯಾಯಾಮ ಶಾಲೆಯ ಅಂಕಣದಲ್ಲಿ ನಡೆದ ಪಂದ್ಯಗಳಲ್ಲಿ ವಿಜಯಪುರ ತಂಡವು ಬಳ್ಳಾರಿ ವೈಸಿಬಿಸಿ ತಂಡವನ್ನು 46–34 ಪಾಯಿಂಟ್ಸ್‌ಗಳಿಂದ ಸೋಲಿಸಿತು. ವಿಜಯಪುರದ ಸಮೀರ್ (11) ತಂಡದ ಗೆಲುವಿಗೆ ಕಾಣಿಕೆ ನೀಡಿದರು.

ಬೆಂಗಳೂರಿನ ಕೆಎಸ್‌ಪಿ ತಂಡವು ರುದ್ರಪ್ಪ (21) ಅವರ ಆಟದ ನೆರವಿನಿಂದ ಕೋಲಾರದ ಕನಕ ತಂಡವನ್ನು 63–30 ಪಾಯಿಂಟ್ಸ್‌ಗಳಿಂದ ಸೋಲಿಸಿತು. ಇನ್ನೊಂದು ಪಂದ್ಯದಲ್ಲಿ ಚಂದನ್ 27 ಅಂಕ ಗಳಿಸಿದ್ದರಿಂದ ಮೈಸೂರು ತಂಡವು 75–56ರಿಂದ ಬೆಳಗಾವಿ ತಂಡವನ್ನು ಮಣಿಸಿತು.

ಮಹಿಳಾ ವಿಭಾಗದ ಪಂದ್ಯದಲ್ಲಿ ಮೈಸೂರಿನ ಡಿವೈಇಎಸ್ ತಂಡವು ಮೇಘನಾ (17) ಆಟದಿಂದ ಬೆಂಗಳೂರಿನ ವಿದ್ಯಾನಗರದ ಡಿವೈಇಎಸ್ ತಂಡವನ್ನು 49–23ರಿಂದ ಸೋಲಿಸಿತು. ಬೆಂಗಳೂರಿನ ಬೀಗಲ್ಸ್ ತಂಡವು ಮೈಸೂರು ತಂಡವನ್ನು 38–25 ಪಾಯಿಂಟ್ಸ್‌ಗಳಿಂದ ಸೋಲಿಸಿತು. ಬೀಗಲ್ ಕ್ಲಬ್ ಮೇಕಲಾ 13 ಅಂಕ ಗಳಿಸಿದರು.

ಕ್ರೀಡಾಂಗಣಕ್ಕೆ 'ನಿರಂಜನ್ ಶಾ' ಹೆಸರು


ರಾಜಕೋಟ್ (ಪಿಟಿಐ): ಸೌರಾಷ್ಟ್ರ ಕ್ರಿಕೆಟ್ ಅಸೋಸಿಯೇಷನ್ (ಎಸ್‌ಸಿಎ) ಕ್ರೀಡಾಂಗಣಕ್ಕೆ ಹಿರಿಯ ಆಡಳಿತಗಾರ ನಿರಂಜನ್ ಶಾ ಅವರ ಹೆಸರನ್ನು ಇಡಲು ನಿರ್ಧರಿಸಲಾಗಿದೆ.

ಫೆಬ್ರುವರಿ 15 ರಂದು ಇಲ್ಲಿನ ಖಂಡೇರಿಯಲ್ಲಿರುವ ಕ್ರೀಡಾಂಗಣದಲ್ಲಿ ಭಾರತ ಮತ್ತು ಇಂಗ್ಲೆಂಡ್ ನಡುವಿನ ಮೂರನೇ ಟೆಸ್ಟ್ ಪಂದ್ಯ ಆರಂಭವಾಗಲಿದೆ. ಪಂದ್ಯದ ಮುನ್ನಾದಿನ, ಕ್ರೀಡಾಂಗಣಕ್ಕೆ ನಿರಂಜನ್ ಶಾ ಕ್ರೀಡಾಂಗಣ ಎಂದು ನಾಮಕರಣ ಮಾಡಲಾಗುವುದು ಎಂದು ಎಸ್‌ಸಿಎ ಮಾಧ್ಯಮ ಪ್ರಕಟಣೆ ತಿಳಿಸಿದೆ. ಹೊಸ ಹೆಸರಿನ ಕ್ರೀಡಾಂಗಣವನ್ನು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಉದ್ಘಾಟಿಸಲಿದ್ದಾರೆ.

1960–1970ರ ದಶಕದಲ್ಲಿ ಸೌರಾಷ್ಟ್ರ ಪರ 12 ಪ್ರಥಮ ದರ್ಜೆ ಪಂದ್ಯಗಳನ್ನು ಆಡಿರುವ ಶಾ, ದೇಶದ ಹಿರಿಯ ಕ್ರಿಕೆಟ್ ಆಡಳಿತಗಾರರಲ್ಲಿ ಒಬ್ಬರಾಗಿದ್ದಾರೆ. ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಕಾರ್ಯದರ್ಶಿಯಾಗಿದ್ದರು.

ಅವರ ಪುತ್ರ ಹಾಗೂ ಮಾಜಿ ಪ್ರಥಮ ದರ್ಜೆ ಕ್ರಿಕೆಟಿಗ ಜಯದೇವ್ ಶಾ ಸೌರಾಷ್ಟ್ರ ತಂಡದ ನಾಯಕರಾಗಿದ್ದರು ಮತ್ತು ಐಪಿಎಲ್‌ನಲ್ಲಿ ಆಟವಾಡಿದ್ದರು. ಪ್ರಸ್ತುತ ಸೌರಾಷ್ಟ್ರ ಕ್ರಿಕೆಟ್ ಸಂಸ್ಥೆ ಅಧ್ಯಕ್ಷರಾಗಿದ್ದಾರೆ.

'ಬಿಜೆಪಿಯ ಸಾಗರೋತ್ತರ ಸ್ನೇಹಿತ'ರಿಂದ ನರೇಂದ್ರ ಮೋದಿ ಪರ ಪ್ರಚಾರಕ್ಕೆ ಸಿದ್ಧತೆ



ಅಡಪ ಪ್ರಸಾದ್

ವಾಷಿಂಗ್ಟನ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರನ್ನು ಮೂರನೇ ಬಾರಿಗೆ ಆಯ್ಕೆ ಮಾಡುವಂತೆ ಕೋರಿ ಭಾರತದಾದ್ಯಂತ 25 ಲಕ್ಷಕ್ಕೂ ಹೆಚ್ಚು ದೂರವಾಣಿ ಕರೆ ಮಾಡಲು ಅಮೆರಿಕದಲ್ಲಿರುವ 'ಬಿಜೆಪಿಯ ಸಾಗರೋತ್ತರ ಸ್ನೇಹಿತರು' (ಒಎಫ್‌ಬಿಜೆಪಿ) ಎಂಬ ಸಂಘಟನೆಯು ವಿಸ್ತೃತ ಯೋಜನೆಯನ್ನು ರೂಪಿಸಿದೆ.

'ಮೋದಿ ಅವರನ್ನು ಮರು ಆಯ್ಕೆ ಮಾಡಬೇಕು. ಅಲ್ಲದೇ, ಬಿಜೆಪಿ ನೇತೃತ್ವದ ಮೈತ್ರಿಕೂಟ 400ಕ್ಕೂ ಅಧಿಕ ಸ್ಥಾನಗಳಲ್ಲಿ ಗೆಲ್ಲುವಂತೆ ಮಾಡಬೇಕು ಎಂದು ಜನರಲ್ಲಿ ಮನವಿ ಮಾಡಿಕೊಳ್ಳಲಾಗುವುದು' ಎಂದು ಸಂಘಟನೆಯ ಅಧ್ಯಕ್ಷ ಅಡಪ ಪ್ರಸಾದ್ ಹೇಳಿದ್ದಾರೆ.

'ಸಂಘಟನೆಯ 3 ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳನ್ನು ಚುನಾವಣಾ ಪ್ರಚಾರಕ್ಕಾಗಿ ಭಾರತಕ್ಕೆ ಕಳುಹಿಸಲಾಗುವುದು. ಈ ಪ್ರತಿನಿಧಿಗಳು ವಿವಿಧ ಹುದ್ದೆ, ಜವಾಬ್ದಾರಿಗಳನ್ನು ನಿರ್ವಹಿಸಿ, ಪಕ್ಷ ಹಾಗೂ ಅಭ್ಯರ್ಥಿಗಳ ಪರ ಪ್ರಚಾರ ನಡೆಸುವರು' ಎಂದೂ ಅವರು ತಿಳಿಸಿದರು. 'ನಾವು ಡಿಸೆಂಬರ್‌ನಿಂದಲೇ ಯೋಜನೆಯ ಸಿದ್ಧತೆ ಪ್ರಾರಂಭಿಸಿದ್ದೇವೆ. ಈ ತಿಂಗಳು ಸಿದ್ಧತೆಗೆ ವೇಗ ನೀಡಿದ್ದು, ಅಮೆರಿಕದಾದ್ಯಂತ ಕಾರ್ಯಕ್ರಮ ಹಮ್ಮಿಕೊಳ್ಳಲಿದ್ದೇವೆ' ಎಂದು ತಿಳಿಸಿದರು.

ಪ್ರಾದೇಶಿಕ ಭಾಷೆಗಳಲ್ಲೂ ಕಾಲ್‌ಸೆಂಟರ್: 'ಈ ಪ್ರಚಾರ ಕಾರ್ಯಕ್ಕಾಗಿ ಭಾರತದಲ್ಲಿ ಬಹುತೇಕ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಕಾಲ್ ಸೆಂಟರ್ ಸ್ಥಾಪಿಸಲಾಗುವುದು. ಆಯಾ ಪ್ರಾದೇಶಿಕ ಭಾಷೆಗಳಲ್ಲಿಯೇ ಜನರನ್ನು ಸಂಪರ್ಕಿಸಿ, ಮೋದಿ ಅವರನ್ನು ಮತ್ತೊಮ್ಮೆ ಯಾಕೆ ಆಯ್ಕೆ ಮಾಡಬೇಕು ಎಂಬ ಬಗ್ಗೆ ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡುತ್ತೇವೆ. ಈ ಕಾರ್ಯದಲ್ಲಿ ಕೈಜೋಡಿಸುವಂತೆ, ಇಲ್ಲಿರುವ ಭಾರತೀಯರನ್ನು ಸಹ ಒತ್ತಾಯಿಸುತ್ತೇವೆ' ಎಂದು ಹೇಳಿದ್ದಾರೆ.

ಮಾಲ್ದೀವ್ಸ್: ತಾಂತ್ರಿಕ ಸಿಬ್ಬಂದಿ ಕಳುಹಿಸಲು ನಿರ್ಧಾರ

ನವದೆಹಲಿ (ಪಿಟಿಐ): ಮಾಲ್ದೀವ್ಸ್‌ನಲ್ಲಿ ನಿಯೋಜಿಸಲಾಗಿರುವ ಭಾರತೀಯ ಸೇನಾ ಸಿಬ್ಬಂದಿಯ ಬದಲಿಗೆ, ನುರಿತ ತಾಂತ್ರಿಕ ಸಿಬ್ಬಂದಿ ಕಳುಹಿಸಲು ಭಾರತ ನಿರ್ಧರಿಸಿದೆ.

ಅಭಿವೃದ್ಧಿಗೆ ಸಂಬಂಧಿಸಿದಂತೆ ದ್ವೀಪರಾಷ್ಟ್ರ ಮಾಲ್ದೀವ್ಸ್ ತನ್ನ ಪಾಲುದಾರ ರಾಷ್ಟ್ರವಾಗಿದೆ ಎಂದೂ ಪ್ರತಿಪಾದಿಸಿದೆ.

ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಅವರು ಈ ವಿಷಯವನ್ನು ತಿಳಿಸಿದರು.

ಸೇನಾ ಸಿಬ್ಬಂದಿಗೆ ಸಂಬಂಧಿಸಿದ ವಿಷಯ ಚರ್ಚಿಸಲು ಉನ್ನತಾಧಿಕಾರ ಸಮಿತಿಯ ಎರಡನೇ ಸಭೆ ಇಲ್ಲಿ ನಡೆಯಿತು.

'ಭಾರತಿಯ ಸೇನೆಯ ಒಂದು ತಂಡವನ್ನು ಮಾರ್ಚ್ 10ರೊಳಗೆ, ಉಳಿದ ತಂಡವನ್ನು ಮೇ 10ರೊಳಗೆ ವಾಪಸು ಕಳುಹಿಸಲಾಗುವುದು' ಎಂದು ಮಾಲ್ದೀವ್ಸ್ ಅಧ್ಯಕ್ಷ ಮೊಹಮ್ಮದ್ ಮುಯಿಜು ಸೋಮವಾರ ತಿಳಿಸಿದ್ದರು.

ಕಳೆದ ವರ್ಷದ ಡಿಸೆಂಬರ್‌ನಲ್ಲಿ ದುಬೈನಲ್ಲಿ ನಡೆದಿದ್ದ ಶೃಂಗಸಭೆ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಮುಯಿಜು ನಡುವಿನ ಚರ್ಚೆಯ ವೇಳೆ ಉನ್ನತಾಧಿಕಾರ ಸಮಿತಿ ರಚಿಸಲು ತೀರ್ಮಾನಿಸಲಾಗಿತ್ತು.

ಗುಂಡಿನ ದಾಳಿ– 6 ಪೊಲೀಸರ ಸಾವು • ಹಲವೆಡೆ ಹಿಂಸಾಚಾರ • ಇಂಟರ್‌ನೆಟ್ ಸೇವೆ ಸ್ಥಗಿತ

ನವಾಜ್ ಷರೀಫ್‌ಗೆ ಮತ್ತೆ ಅಧಿಕಾರ ಚುಕ್ಕಾಣಿ ಸಾಧ್ಯತೆ



ಪಾಕಿಸ್ತಾನದಲ್ಲಿ ಸಾರ್ವತ್ರಿಕ ಚುನಾವಣೆ ಅಂಗವಾಗಿ ಗುರುವಾರ ಕ್ವೆಟ್ಟಾ ನಗರದ ಮತಗಟ್ಟೆಯೊಂದರಲ್ಲಿ ಮತ ಚಲಾಯಿಸಲು ಪುರುಷರು ಸರದಿಯಲ್ಲಿ ನಿಂತಿದ್ದರು – ಎಎಫ್‌ಪಿ ಚಿತ್ರ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದಲ್ಲಿ ಗುರುವಾರ ಮೊಬೈಲ್, ಇಂಟರ್‌ನೆಟ್ ಸಂಪರ್ಕ ಸ್ಥಗಿತ, ಕೆಲವು ಕಡೆ ಅಹಿತಕರ ಘಟನೆಗಳ ನಡುವೆ ರಾಷ್ಟ್ರೀಯ ಅಸೆಂಬ್ಲಿಗೆ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಜನರು ಮತ ಚಲಾಯಿಸಿದ್ದಾರೆ.

ನವಾಜ್ ಷರೀಫ್ ಅವರ ಪಾಕಿಸ್ತಾನ್ ಮುಸ್ಲಿಂ ಲೀಗ್-ನವಾಜ್ (ಪಿಎಂಎಲ್-ಎನ್) ಚುನಾವಣೆಯಲ್ಲಿ ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮುವ ಸಾಧ್ಯತೆಯಿದೆ.

ಬಿಗಿ ಭದ್ರತೆಯ ನಡುವೆ ಬೆಳಿಗ್ಗೆ 8 ಗಂಟೆಗೆ ಆರಂಭವಾದ ಮತದಾನ ಸಂಜೆ 5 ಗಂಟೆಯವರೆಗೆ ನಡೆಯಿತು. ಸುಮಾರು 12.85 ಕೋಟಿ ಮತದಾರರು ತಮ್ಮ ಹಕ್ಕು ಚಲಾಯಿಸಲು ದೇಶದಾದ್ಯಂತ ಸಾರ್ವಜನಿಕ ರಜಾದಿನ ಘೋಷಿಸಲಾಗಿತ್ತು. ಮತದಾನ ಮುಗಿದ ನಂತರ ಸಂಜೆಯೇ ಎಣಿಕೆ ಆರಂಭವಾಯಿತು. ಶುಕ್ರವಾರ ಬೆಳಿಗ್ಗೆಯೊಳಗೆ ಸಂಪೂರ್ಣ ಫಲಿತಾಂಶ ಪ್ರಕಟವಾಗುವ ನಿರೀಕ್ಷೆ ಇದೆ.

ತನ್ನ ಪ್ರತಿಸ್ಪರ್ಧಿ ಇಮ್ರಾನ್ ಖಾನ್ ಪಕ್ಷದ ವಿರುದ್ಧದ ದಮನ, ದೇಶದಲ್ಲಿ ನಡೆಯುತ್ತಿರುವ ಭಯೋತ್ಪಾದಕ ದಾಳಿಗಳ ನಡುವೆಯೂ ಮಾಜಿ ಪ್ರಧಾನಿ ನವಾಜ್ ಷರೀಫ್ ಸೇನೆಯ ಬೆಂಬಲದೊಂದಿಗೆ ದಾಖಲೆಯ 4ನೇ ಅವಧಿಗೆ ಅಧಿಕಾರ ಹಿಡಿಯುವ ವಿಶ್ವಾಸದಲ್ಲಿದ್ದಾರೆ.

265 ಸ್ಥಾನಗಳಿಗೆ ಚುನಾವಣೆ: ಪಾಕಿಸ್ತಾನ ಚುನಾವಣಾ ಆಯೋಗದ (ಇಸಿಪಿ) ಪ್ರಕಾರ, ರಾಷ್ಟ್ರೀಯ ಅಸೆಂಬ್ಲಿಯ 266 ಸ್ಥಾನಗಳ ಪೈಕಿ 265 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ 5,121 ಅಭ್ಯರ್ಥಿಗಳು ಮತ್ತು ನಾಲ್ಕು ಪ್ರಾಂತೀಯ ವಿಧಾನಸಭೆಗಳಿಗೆ ನಡೆದ ಚುನಾವಣೆಯಲ್ಲಿ 12,695 ಅಭ್ಯರ್ಥಿಗಳು ಕಣದಲ್ಲಿದ್ದಾರೆ.

ಪೊಲೀಸರ ಸಾವು: ಡೇರಾ ಇಸ್ಮಾಯಿಲ್ ಖಾನ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯಲ್ಲಿ ಆರು ಪೊಲೀಸರು ಮೃತಪಟ್ಟಿದ್ದು, ಏಳು ಮಂದಿ ಗಾಯಗೊಂಡಿದ್ದಾರೆ. ಖೈಬರ್ ಪಖ್ತುಂಖ್ವಾ ಪ್ರದೇಶದ ಟ್ಯಾಂಕ್ ಪ್ರದೇಶದಲ್ಲಿ ಸೈನಿಕರ ಮೇಲೆ ಬಂದೂಕುಧಾರಿಗಳು ಗುಂಡು ಹಾರಿಸಿದ್ದರಿಂದ ಭದ್ರತಾ ಅಧಿಕಾರಿಯೊಬ್ಬರು ಸಾವನ್ನಪ್ಪಿದ್ದಾರೆ.

ಖೈಬರ್-ಪಖ್ತುಂಖ್ವಾದ ಉತ್ತರ ವಜಿರಿಸ್ತಾನದ ಜಿಲ್ಲೆಯ ಮೀರ್ ಅಲಿ ಪ್ರದೇಶದಲ್ಲಿ ಭದ್ರತಾ ಪಡೆಗಳ ವಾಹನದ ಮೇಲೆ ಅಪರಿಚಿತ ವ್ಯಕ್ತಿಗಳು ರಾಕೆಟ್ ದಾಳಿ ನಡೆಸಿದ್ದಾರೆ.

ಮತದಾನದ ದಿನ ಮೊಬೈಲ್, ಇಂಟರ್‌ನೆಟ್ ಸ್ಥಗಿತಗೊಳಿಸಿರುವುದು ಕಳವಳಕಾರಿ. ಇದು ಪಾರದರ್ಶಕತೆ ಮೇಲೆ ಪರಿಣಾಮ ಬೀರಲಿದೆ

ಪಾಕಿಸ್ತಾನದ ಮಾನವ ಹಕ್ಕುಗಳ ಮಂಡಳಿ

ಪಿಟಿಐ ಮತಗಟ್ಟೆ ಪ್ರತಿನಿಧಿಗಳಿಲ್ಲದೆ ಪಾಕ್‌ನಲ್ಲಿ ಚುನಾವಣೆ

ಲಾಹೋರ್ (ಪಿಟಿಐ): ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಹಲವಾರು ಪ್ರದೇಶಗಳಲ್ಲಿ ತಮ್ಮ ಪಕ್ಷದಿಂದ ಬೂತ್ ಏಜೆಂಟ್‌ಗಳಿಗೆ ಅವಕಾಶ ನೀಡದೆ ಚುನಾವಣೆ ನಡೆಸಲಾಗುತ್ತಿದೆ ಎಂದು ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ಪಕ್ಷ ಪಿಟಿಐ (ಪಾಕಿಸ್ತಾನ್ ತೆಹ್ರಿಕ್- ಎ- ಇನ್ಸಾಫ್) ಗುರುವಾರ ಆರೋಪಿಸಿದೆ.


ಚುನಾವಣೆಯನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ನಡೆಸಲು ಪಿಟಿಐ ಪಕ್ಷದ ಕೆಲವು ಬೂತ್ ಏಜೆಂಟ್‌ಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಪಕ್ಷದ ಮತಗಟ್ಟೆಗಳ ಶಿಬಿರಗಳನ್ನು ತೆರವುಗೊಳಿಸಿದ್ದಾರೆ. ತಮ್ಮ ಅಭ್ಯರ್ಥಿಗಳನ್ನು ಚುನಾವಣೆಯಲ್ಲಿ ಸ್ಪರ್ಧಿಸುವುದನ್ನು ತಡೆಯಲು ಈ ತಂತ್ರಗಳನ್ನು ಬಳಸಲಾಗಿದೆ ಎಂದು ಪಿಟಿಐ ಆರೋಪಿಸಿದೆ.

ಪಿಟಿಐ ಪಕ್ಷದ ಚಿಹ್ನೆ ಕ್ರಿಕೆಟ್ ಬ್ಯಾಟ್ ಅನ್ನು ಚುನಾವಣಾ ಆಯೋಗ ಕಸಿದುಕೊಂಡ ಕ್ರಮವನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದ ನಂತರ ಪಕ್ಷದ ಅಭ್ಯರ್ಥಿಗಳು ಪಕ್ಷೇತರರಾಗಿ ಕಣಕ್ಕಿಳಿದಿದ್ದರು.

ಸದ್ಯ ಅಡಿಯಾಲ ಜೈಲಿನಲ್ಲಿರುವ ಇಮ್ರಾನ್ ಖಾನ್, ಜೈಲಿನಿಂದಲೇ ಅಂಚೆ ಮತಪತ್ರದ ಮೂಲಕ ಮತ ಚಲಾಯಿಸಿದರು. ಆದರೆ, ಖಾನ್ ಅವರ ಪತ್ನಿ ಬುಶ್ರಾ ಬೀಬಿ ಅವರಿಗೆ ಮತದಾನದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ. ಅವರನ್ನು ಅಪರಾಧಿ ಎಂದು ಘೋಷಿಸಿ, ಬಂಧಿಸುವಷ್ಟರಲ್ಲಿ ಅಂಚೆ ಮತದಾನ ಪ್ರಕ್ರಿಯೆ ಮುಗಿದಿತ್ತು.

ಗುಜರಾತ್ ಮುಖ್ಯಮಂತ್ರಿ ಆಗಿದ್ದಾಗ ತಮ್ಮ ಜಾತಿಯನ್ನು ಒಬಿಸಿಗೆ ಸೇರಿಸಿದ್ದ ಮೋದಿ

ಮೋದಿ ಒಬಿಸಿ ಕುಟುಂಬದಲ್ಲಿ ಜನಿಸಿಲ್ಲ: ರಾಹುಲ್



'ಭಾರತ್ ಜೋಡೊ ನ್ಯಾಯ ಯಾತ್ರೆ'ಯೊಂದಿಗೆ ಛತ್ತೀಸಗಢ ಪ್ರವೇಶಿಸಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಗುರುವಾರ ಬರಮಾಡಿಕೊಂಡ ಛತ್ತೀಸಗಢ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ದೀಪಕ್ ಬೈಜ್ ಮತ್ತು ಪಕ್ಷದ ಇತರ ನಾಯಕರು ಅವರನ್ನು ಸನ್ಮಾನಿಸಿದರು –ಪಿಟಿಐ ಚಿತ್ರ

ಜಾರ್ಸುಗುಡ (ಒಡಿಶಾ) (ಪಿಟಿಐ): 'ಇತರ ಹಿಂದುಳಿದ ವರ್ಗದ (ಒಬಿಸಿ) ಕುಟುಂಬದಲ್ಲಿ ಜನಿಸದ ಪ್ರಧಾನಿ ನರೇಂದ್ರ ಮೋದಿ ಅವರು, ತಮ್ಮನ್ನು ತಾವು ಒಬಿಸಿ ಎಂದು ಗುರುತಿಸಿಕೊಳ್ಳುವ ಮೂಲಕ ಜನರ ದಿಕ್ಕು ತಪ್ಪಿಸುತ್ತಿದ್ದಾರೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಗುರುವಾರ ಆರೋಪ ಮಾಡಿದರು.

ಒಡಿಶಾದಲ್ಲಿ 'ಭಾರತ್ ಜೋಡೊ ನ್ಯಾಯ ಯಾತ್ರೆ'ಯ ಮೂರನೇ ದಿನ ಮಾತನಾಡಿದ ಅವರು, 'ಮೋದಿ ಅವರು ಸಾಮಾನ್ಯ ವರ್ಗದ ಕುಟುಂಬದಲ್ಲಿ ಜನಿಸಿದ್ದಾರೆ' ಎಂದರು.

'ಮೋದಿ ಅವರು 'ಘಾಂಚಿ' ಜಾತಿಗೆ ಸೇರಿದವರು. ಗುಜರಾತ್‌ನಲ್ಲಿ 2000ದಲ್ಲಿ ಬಿಜೆಪಿ ಅಧಿಕಾರದಲ್ಲಿ ಇದ್ದಾಗ ಈ ಜಾತಿಯನ್ನು ಒಬಿಸಿ ಪಟ್ಟಿಗೆ ಸೇರಿಸಲಾಯಿತು. ಆಗ ಅಲ್ಲಿ ಸ್ವತಃ ಮೋದಿ ಅವರೇ ಮುಖ್ಯಮಂತ್ರಿ ಆಗಿದ್ದರು. ಅಂದರೆ, ಅವರೇ ತಮ್ಮ ಜಾತಿಯನ್ನು ಒಬಿಸಿಗೆ ಸೇರಿಸಿದ್ದಾರೆ. ಹೀಗಾಗಿ ಮೋದಿ ಅವರು ಹುಟ್ಟಿನಿಂದ ಒಬಿಸಿ ಅಲ್ಲ' ಎಂದು ರಾಹುಲ್ ಪ್ರತಿಪಾದಿಸಿದರು.

ರಾಹುಲ್ ಅವರು ಇದಕ್ಕೂ ಮೊದಲು ತಮ್ಮ ಭಾಷಣದಲ್ಲಿ ಮೋದಿ ಅವರು 'ತೇಲಿ' ಜಾತಿಗೆ ಸೇರಿದವರು ಎಂದಿದ್ದರು. ಆದರೆ ಕೆಲ ಹೊತ್ತಿನಲ್ಲಿಯೇ ಅವರು 'ಘಾಂಚಿ' ಜಾತಿಗೆ ಸೇರಿದವರು ಎಂದು ಸ್ಪಷ್ಟಪಡಿಸಿದರು.

ರಾಹುಲ್‌ರಿಂದ ಸುಳ್ಳು ಪ್ರಚಾರ: ಬಿಜೆಪಿ

ಗಾಂಧಿನಗರ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಜಾತಿಗೆ ಸಂಬಂಧಿಸಿದಂತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಜನರ ದಿಕ್ಕು ತಪ್ಪಿಸುತ್ತಿದ್ದಾರೆ ಎಂದು ದೂರಿರುವ ಗುಜರಾತ್‌ನ ಬಿಜೆಪಿ ಶಾಸಕ ಪೂರ್ಣೇಶ್ ಮೋದಿ ಅವರು, ತೇಲಿ (ಘಾಂಚಿ) ಸಮುದಾಯವನ್ನು ಒಬಿಸಿ ಪಟ್ಟಿಗೆ ಸೇರಿಸಿದ್ದು ಗುಜರಾತಿನಲ್ಲಿದ್ದ ಕಾಂಗ್ರೆಸ್ ಸರ್ಕಾರ ಎಂದು ಹೇಳಿದ್ದಾರೆ.

1994ರಲ್ಲಿ ಕಾಂಗ್ರೆಸ್‌ನ ಛಬಿಲ್ದಾಸ್ ಮೆಹ್ತಾ ಅವರು ಮುಖ್ಯಮಂತ್ರಿ ಆಗಿದ್ದಾಗ ತೇಲಿ ಸಮುದಾಯವನ್ನು ಒಬಿಸಿಗೆ ಸೇರಿಸಲಾಯಿತು. ಅದಾಗ್ಯೂ ಮೋದಿ ಅವರು 2000ದಲ್ಲಿ ಗುಜರಾತಿನ ಮುಖ್ಯಮಂತ್ರಿ ಆಗಿರಲಿಲ್ಲ ಎಂದಿದ್ದಾರೆ.

ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸೋಲಿನ ಬಗ್ಗೆ ತಿಳಿದು ರಾಹುಲ್ ಅವರು ಸುಳ್ಳುಗಳನ್ನು ಹೇಳುತ್ತಿದ್ದಾರೆ ಎಂದು ಅವರು ದೂರಿದ್ದಾರೆ.

ಮೋದಿ ಉಪನಾಮ ಕುರಿತು ರಾಹುಲ್ ಈ ಹಿಂದೆ ಮಾಡಿದ್ದ ಟೀಕೆಗೆ ಸಂಬಂಧಿಸಿದಂತೆ ಪೂರ್ಣೇಶ್ ಮೋದಿ ಅವರು ಕ್ರಿಮಿನಲ್ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದರು. ಈ ಪ್ರಕರಣದಲ್ಲಿ ಸೂರತ್ ನ್ಯಾಯಾಲಯವು ರಾಹುಲ್ ಅವರನ್ನು ತಪ್ಪಿತಸ್ಥ ಎಂದು ತೀರ್ಪು ನೀಡಿತ್ತು. ಇಂದರಿಂದಾಗಿ ರಾಹುಲ್ ಅವರ ಲೋಕಸಭಾ ಸದಸ್ಯತ್ವ ಅನರ್ಹಗೊಂಡಿತ್ತು. ಬಳಿಕ ಸುಪ್ರೀಂ ಕೋರ್ಟ್ ಇದಕ್ಕೆ ತಡೆ ನೀಡಿತ್ತು.

'ಪ್ರಧಾನಿ ಮೋದಿ ಜಾತಿಗಣತಿ ನಡೆಸಲ್ಲ'

'ಮೋದಿ ಅವರು ಎಂದಿಗೂ ದೇಶದಲ್ಲಿ ಜಾತಿಗಣತಿ ನಡೆಸುವುದಿಲ್ಲ. ಇದಿಲ್ಲದೆ ಸಾಮಾಜಿಕ ನ್ಯಾಯ ಸಾಧಿಸಲು ಆಗುವುದಿಲ್ಲ' ಎಂದು ರಾಹುಲ್ ಹೇಳಿದರು.

ಕಾಂಗ್ರೆಸ್ ಪಕ್ಷ ಮಾತ್ರ ದೇಶದಲ್ಲಿ ಜಾತಿಗಣತಿ ನಡೆಸುವ ಬದ್ಧತೆ ಹೊಂದಿದೆ ಮತ್ತು ಈ ಮೂಲಕ ಸಾಮಾಜಿಕ ನ್ಯಾಯವನ್ನು ಖಚಿತಪಡಿಸುತ್ತದೆ ಎಂದರು.

ಒಡಿಶಾದಲ್ಲಿ 200 ಕಿ.ಮೀ ಕ್ರಮಿಸಿದ ಯಾತ್ರೆಯು ಪಕ್ಕದ ಛತ್ತೀಸಗಢ ರಾಜ್ಯ ಪ್ರವೇಶಿಸಿತು.

ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್‌ವೇ

ಡಿಸೆಂಬರ್‌ಗೆ ಪೂರ್ಣ: ಗಡ್ಕರಿ

ಪ್ರಜಾವಾಣಿ ವಾರ್ತೆ



ನಿತಿನ್ ಗಡ್ಕರಿ

ನವದೆಹಲಿ: ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್‌ವೇ ಅಭಿವೃದ್ಧಿ ಕಾಮಗಾರಿಯು ಈ ವರ್ಷದ ಡಿಸೆಂಬರ್ ವೇಳೆಗೆ ಪೂರ್ಣಗೊಳ್ಳುವ ಸಂಭವವಿದೆ ಎಂದು ಕೇಂದ್ರ ಹೆದ್ದಾರಿ ಹಾಗೂ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಅವರು ಗುರುವಾರ ಲೋಕಸಭೆಯಲ್ಲಿ ತಿಳಿಸಿದರು.

'ಈ ಯೋಜನೆಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಕೇರಳ ಹಾಗೂ ತಮಿಳುನಾಡು ಸರ್ಕಾರಗಳ ಸಹಕಾರ ಅಗತ್ಯ. ಆಯಾ ರಾಜ್ಯಗಳ ವ್ಯಾಪ್ತಿಯಲ್ಲಿ ಯೋಜನೆಗೆ ನಿರ್ಮಾಣ ಸಾಮಗ್ರಿ ಒದಗಿಸಲು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಈ ಸರ್ಕಾರಗಳು ಸಹಾಯ ಮಾಡಬೇಕು' ಎಂದರು.

'ಕಾಮಗಾರಿಯು ಪೂರ್ಣಗೊಂಡ ಬಳಿಕ ಚೆನ್ನೈ– ಬೆಂಗಳೂರು ನಡುವೆ ಕೇವಲ 2 ಗಂಟೆಗಳಲ್ಲಿ ಕ್ರಮಿಸಬಹುದು. 'ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರ ಜೊತೆ ಮಾತನಾಡಿದ್ದೇನೆ. ರಾಜ್ಯದಲ್ಲಿ ಹೆದ್ದಾರಿಗಳ ನಿರ್ಮಾಣದಲ್ಲಿ ಪ್ರಾಧಿಕಾರ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ತಿಳಿಸಿದ್ದೇನೆ' ಎಂದರು.

'ಎಕ್ಸ್‌ಪ್ರೆಸ್ ವೇ ಕಾಮಗಾರಿಯನ್ನು ಡಿಸೆಂಬರ್‌ಗೆ ಪೂರ್ಣಗೊಳಿಸಲು ಆದಷ್ಟು ಯತ್ನಿಸುತ್ತೇವೆ. ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳಲು ಸಂಬಂಧಿಸಿದ ರಾಜ್ಯ ಸರ್ಕಾರಗಳು ಹಾಗೂ ಎನ್‌ಎಚ್‌ಎಐ ಅಧಿಕಾರಿಗಳ ಜೊತೆಗೆ ಚರ್ಚಿಸಲು ನಾನು ಸಿದ್ಧನಿದ್ದೇನೆ' ಎಂದು ಭರವಸೆ ನೀಡಿದರು. ಈ ವಿಷಯವನ್ನು ರಾಜಕೀಯಕರಣಗೊಳಿಸಲು ಬಯಸುವುದಿಲ್ಲ. ಸಂಬಂಧಿಸಿದ ಎಲ್ಲರೂ ಸಹಕಾರ ನೀಡದಿದ್ದರೆ ಕಾಮಗಾರಿ ಪೂರ್ಣಗೊಳ್ಳುವುದಾದರೂ ಹೇಗೆ ಎಂದು ಡಿಎಂಕೆ ಸದಸ್ಯ ದಯಾನಿಧಿ ಮಾರನ್ ಅವರ ಪ್ರಶ್ನೆಯನ್ನು ಉಲ್ಲೇಖಿಸಿ ಹೇಳಿದರು.

ಪ್ರೊ ಲೀಗ್‌ನಿಂದ ಹಿಂದೆಸರಿದ ವರುಣ್

‘ಪೋಕ್ಸೊ’ ಪ್ರಕರಣ: ತುರ್ತು ರಜೆ ಮಂಜೂರು ಮಾಡಿದ ಹಾಕಿ ಇಂಡಿಯಾ

ನವದೆಹಲಿ (ಪಿಟಿಐ): ಅತ್ಯಾಚಾರ ದೂರು ಹಿನ್ನೆಲೆಯಲ್ಲಿ ತಮ್ಮ ವಿರುದ್ಧ ದಾಖಲಾಗಿರುವ ‘ಪೋಕ್ಸೊ’ ಪ್ರಕರಣಕ್ಕೆ ಸಂಬಂಧಿಸಿ ಕಾನೂನಿನಡಿ ಇಡಬಹುದಾದ ಹೆಜ್ಜೆ ಪರಿಶೀಲಿಸಲು ಭಾರತ ಹಾಕಿ ತಂಡದ ಆಟಗಾರ ವರುಣ್ ಕುಮಾರ್ ಅವರು ಎಫ್‌ಐಎಚ್ ಪ್ರೊ ಲೀಗ್‌ನಲ್ಲಿ ಆಡುವ ತಂಡದಿಂದ ಹಿಂದೆ ಸರಿದಿದ್ದಾರೆ.

ಇದು ತಮ್ಮಿಂದ ಹಣದ ಸುಲಿಗೆ ಮಾಡಲು ನಡೆದಿರುವ ಪ್ರಯತ್ನ ಎಂದು ಅರ್ಜುನ ಪುರಸ್ಕೃತ ಆಟಗಾರ ದೂರಿದ್ದಾರೆ.

ಈ ಪ್ರಕರಣವು ತಮ್ಮ ದೈಹಿಕ ಮತ್ತು ಮಾನಸಿಕ ಸ್ವಾಸ್ಥ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ ಎಂದು 28 ವರ್ಷದ ಆಟಗಾರ ಹೇಳಿದ್ದು, ಹಾಕಿ ಇಂಡಿಯಾವು ಅವರಿಗೆ ರಾಷ್ಟ್ರೀಯ ಸೇವೆಯಿಂದ ‘ತುರ್ತು ರಜೆ’ ಮಂಜೂರು ಮಾಡಿದೆ.



ವರುಣ್ ಕುಮಾರ್

‘ನಾನು ಬಾಲಕಿಯಾಗಿದ್ದ ವೇಳೆ, ಮದುವೆಯಾಗುವುದಾಗಿ ಭರವಸೆ ನೀಡಿದ ವರುಣ್ ಹಲವು ಬಾರಿ ಅತ್ಯಾಚಾರ ಎಸಗಿದ್ದರು’ ಎಂದು ತೆಲಂಗಾಣದ 22 ವರ್ಷದ ಯುವತಿ ಸೋಮವಾರ ಬೆಂಗಳೂರಿನ ಜ್ಞಾನಭಾರತಿ ಠಾಣೆಗೆ ದೂರು ಸಲ್ಲಿಸಿದ್ದರು.

ಹಾಕಿ ಇಂಡಿಯಾ ಅಧ್ಯಕ್ಷ ದಿಲೀಪ್ ಟಿರ್ಕಿ ಅವರಿಗೆ ಪತ್ರ ಬರೆದಿರುವ ವರುಣ್, ತಮ್ಮ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದು ಅವರು ಹೇಳಿದ್ದಾರೆ.

‘ಈ ಹಿಂದೆ ಸಂಬಂಧ ಹೊಂದಿದ್ದ ಯುವತಿಯೊಬ್ಬರು ನನ್ನ ವಿರುದ್ಧ ಸುಳ್ಳು ಮತ್ತು ಕ್ಷುಲ್ಲಕ ದೂರು ಸಲ್ಲಿಸಿರುವುದು ಮಾಧ್ಯಮಗಳ ವರದಿಯಿಂದ ಗೊತ್ತಾಗಿದೆ. ದೂರಿನ ಆಧಾರದಲ್ಲಿ ಬೆಂಗಳೂರಿನ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಆದರೆ ಈ ಸಂಬಂಧ ಯಾವುದೇ ಪೊಲೀಸ್ ಅಧಿಕಾರಿ ನನ್ನನ್ನು ಸಂಪರ್ಕಿಸಿಲ್ಲ’ ಎಂದು ಬುಧವಾರ ಸಲ್ಲಿಸಿದ ಪತ್ರದಲ್ಲಿ ತಿಳಿಸಿದ್ದಾರೆ.

ಇದರ ವಿರುದ್ಧ ಕಾನೂನು ಹೋರಾಟ ನಡೆಸುವುದಾಗಿಯೂ ಹೇಳಿದ್ದಾರೆ.

‘ಕಾನೂನು ಪರಿಹಾರ ಪಡೆಯಲು ತಮಗೆ ಅಕಾಡೆಮಿಯಿಂದ ತುರ್ತು ರಜೆ ಬೇಕಾಗಿದೆ. ದುರದೃಷ್ಟವಶಾತ್ ನಾನು ಪ್ರೊ ಲೀಗ್‌ನಲ್ಲಿ ಆಡುವ ಪರಿಸ್ಥಿತಿಯಲ್ಲಿಲ್ಲ’ ಎಂದು ಭಾರತ ತಂಡದ ರಕ್ಷಣೆ ಆಟಗಾರ ಹೇಳಿದ್ದಾರೆ.

‘ಈ ಪ್ರಕರಣವು ನನ್ನಿಂದ ಸುಲಿಗೆ ಮಾಡಲು ನಡೆದಿರುವ ಯೋಜಿತ ತಂತ್ರ. ನನ್ನ ಹೆಸರಿಗೆ, ವರ್ಚಸ್ಸಿಗೆ ಕಳಂಕ ತರುವ ಯತ್ನ. ನಾನು ಭಾರತ ತಂಡದ ಆಟಗಾರನಾಗಿರುವುದರಿಂದ, ಅರ್ಜುನ ಪ್ರಶಸ್ತಿ ಪುರಸ್ಕೃತನಾಗಿರುವ ಕಾರಣ ಇಂಥ ಪ್ರಕರಣ ನನ್ನ ವೃತ್ತಿ ಜೀವನಕ್ಕೆ ಕಳಂಕ ತರಲಿದೆ ಎನ್ನುವುದು ಗೊತ್ತಿದ್ದೇ ದೂರು ದಾಖಲಿಸಿದ್ದಾರೆ’ ಎಂದು ಆರೋಪಿಸಿದ್ದಾರೆ.

ಪ್ರೊ ಲೀಗ್ ಪಂದ್ಯಗಳಿಗಾಗಿ ವರುಣ್ ಭಾರತ ಹಾಕಿ ತಂಡದ ಜೊತೆ ಭುವನೇಶ್ವರದಲ್ಲಿದ್ದರು.

ಹಾಕಿ ಇಂಡಿಯಾ ಮೂಲಗಳ ಪ್ರಕಾರ, ಸಂತ್ರಸ್ತ ಯುವತಿ ಬೆಂಗಳೂರಿನ ಸಾಯ್‌ನ ಶ್ರೇಷ್ಠತಾ ಕೇಂದ್ರದಲ್ಲಿ ವಾಲಿಬಾಲ್ ಆಟಗಾರ್ತಿ ಆಗಿದ್ದರು. ಆಗ ಪರಸ್ಪರ ಪರಿಚಯವಾಗಿದ್ದು, ಇದು ಪ್ರೇಮಕ್ಕೆ ತಿರುಗಿತ್ತು. ಈಗ ಯುವತಿ ಕ್ರೀಡಾಪಟುವಾಗಿ ಉಳಿದಿಲ್ಲ. ಈಗ ಗಗನಸಖಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಹಿಮಾಚಲ ಪ್ರದೇಶದವರಾದ ವರುಣ್ 2017ರಲ್ಲಿ ಭಾರತ ತಂಡಕ್ಕೆ ಪದಾರ್ಪಣೆ ಮಡಿದ್ದರು. ಪಂಜಾಬ್ ಪೊಲೀಸ್ ಇಲಾಖೆಯಲ್ಲಿ ಡಿಎಸ್‌ಪಿ ಆಗಿ ಬಡ್ತಿ ಪಡೆದಿರುವ ಅವರಿಗೆ 2021ರಲ್ಲಿ ಅರ್ಜುನ ಪ್ರಶಸ್ತಿ ನೀಡಲಾಗಿತ್ತು.

ಒಲಿಂಪಿಕ್ಸ್ ಪದಕದಲ್ಲಿ ಐಫೆಲ್ ಟವರ್‌ನ ಸ್ಮರಣಿಕೆ

ಪ್ಯಾರಿಸ್ (ಎಎಫ್‌ಪಿ): ಈ ವರ್ಷದ ಜುಲೈ-ಆಗಸ್ಟ್‌ನಲ್ಲಿ ನಡೆಯಲಿರುವ ಪ್ಯಾರಿಸ್ ಒಲಿಂಪಿಕ್ ಕ್ರೀಡೆಗಳ ವಿಜೇತರ ಕೊರಳನ್ನು ಅಲಂಕರಿಸಲಿರುವ ಪದಕಗಳಲ್ಲಿ ಇಲ್ಲಿನ ಮೂಲ ಐಫೆಲ್ ಟವರ್‌ನ ಕಬ್ಬಿಣದ ತುಂಡುಗಳ ಮರುಬಳಕೆ ಮಾಡಿ ರೂಪಿಸಿದ ಷಡ್ಭುಜಾಕೃತಿಯ ರಚನೆ ಇರಲಿದೆ. ಇದರ ವಿನ್ಯಾಸವನ್ನು ಸಂಘಟಕರು ಗುರುವಾರ ಇಲ್ಲಿ ಮೊದಲ ಬಾರಿ ಪ್ರದರ್ಶಿಸಿದರು.

ಚಿನ್ನ, ಬೆಳ್ಳಿ, ಕಂಚು ಸೇರಿ ಈ ಬಾರಿಯ ಬೇಸಿಗೆ ಒಲಿಂಪಿಕ್ಸ್‌ನಲ್ಲಿ ನೀಡಲಾಗುವ ಎಲ್ಲ 5,084 ಪದಕಗಳಲ್ಲಿ ಈ ವಿನ್ಯಾಸ ಇರಲಿದೆ. ಪದಕದ ಮಧ್ಯದಲ್ಲಿ ಈ 18 ಗ್ರಾಂ ತೂಕದ ಷಡ್ಭುಜಾಕೃತಿಯ ಕೆತ್ತನೆ ಇರಲಿದೆ. ಇದನ್ನು ಫ್ರಾನ್ಸ್‌ನ ಪ್ರಖ್ಯಾತ ಆಭರಣ ಉದ್ಯಮ ಸಂಸ್ಥೆ ಚೌಮಿ ವಿನ್ಯಾಸಗೊಳಿಸಿದೆ. ಇದರ ಮೇಲೆ ಐದು ಬಳೆಗಳ ಒಲಿಂಪಿಕ್ಸ್ ಲಾಂಛನದ ಜೊತೆ ಪ್ಯಾರಿಸ್ 2024 ಎಂಬ ಅಂಗ್ಲ ಭಾಷೆಯಲ್ಲಿ ಬರೆಯಲಾಗಿದೆ. ಪ್ಯಾರಿಸ್‌ಒಲಿಂಪಿಕ್ಸ್ ಜುಲೈ 26 ರಿಂದ ಆಗಸ್ಟ್ 11ರವರೆಗೆ ನಡೆಯಲಿದೆ.



ಪದಕಗಳು. ಎಎಫ್‌ಪಿ ಚಿತ್ರ

‘1889ರ ಮೂಲ ಐಫೆಲ್ ಟವರ್‌ನಲ್ಲಿ ಬಳಕೆಯಾಗಿದ್ದ ಸಣ್ಣ ತುಣುಕನ್ನು ಎಲ್ಲ ಪದಕ ವಿಜೇತರಿಗೆ ಸ್ಮರಣಿಕೆಯಾಗಿ ತಲುಪಿಸಬೇಕೆಂದು ಬಯಸಿದ್ದೆವು’ ಎಂದು ಸ್ಥಳೀಯ ಸಂಘಟನಾ ಸಮಿತಿಯ ಮುಖ್ಯಸ್ಥ ಟೋನಿ ಎಸ್ಟಾನ್‌ಗ್ಯು ಸಮಾರಂಭದಲ್ಲಿ ತಿಳಿಸಿದರು.

ಮಾರ್ಚ್ 4ರಿಂದ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್

ಬೆಂಗಳೂರು: ಕರ್ನಾಟಕ ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆಯ ಆಶ್ರಯದಲ್ಲಿ ಮಾರ್ಚ್ 4 ರಿಂದ 8ರವರೆಗೆ ಶ್ರೀಕಂಠೀರವ ಕ್ರೀಡಾಂಗಣ ದಲ್ಲಿ ಮಾತೃ ಕಪ್ ಮಹಿಳೆಯರ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ

ಪಟಿಯಾಲಾ: ವಯೋವರ್ಗ ಕುಸ್ತಿ ಫೆ. 28ರಿಂದ

ನವದೆಹಲಿ (ಪಿಟಿಐ): ಪಟಿಯಾಲಾದ ನೇತಾಜಿ ಸುಭಾಷ ಚಂದ್ರ ಬೋಸ್ ರಾಷ್ಟ್ರೀಯ ಕ್ರೀಡಾ ಸಂಸ್ಥೆಯಲ್ಲಿ (ಎನ್‌ಐಎಸ್) ಇದೇ 28 ರಿಂದ ಮಾರ್ಚ್ 5 ರವರೆಗೆ 15 ಮತ್ತು 20 ವರ್ಷದೊಳಗಿನವರ ರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಷಿಪ್ ನಡೆಸಲಾಗುವುದು ಎಂದು ಕುಸ್ತಿ ಅಡ್‌ಹಾಕ್ ಸಮಿತಿ ಗುರುವಾರ ಪ್ರಕಟಿಸಿದೆ.

ನಿಗದಿಯಂತೆ ಈ ಚಾಂಪಿಯನ್‌ಷಿಪ್ ಗ್ವಾಲಿಯರ್ ನಲ್ಲಿ ಫೆ. 11 ರಿಂದ ನಡೆಯಬೇಕಾಗಿದ್ದು, ಬುಧವಾರವಷ್ಟೇ ಮುಂದೂಡಲಾಗಿತ್ತು.

ಆದರೆ ಅಲ್ಪಾವಧಿಯಲ್ಲಿ ಭಾಗವಹಿಸಲು ಸಾಧ್ಯವಾಗದು ಎಂದು ಕೆಲವು ರಾಜ್ಯ ಸಂಸ್ಥೆಗಳು ಅಸಹಾಯಕತೆ ವ್ಯಕ್ತಪಡಿಸಿದ ಕಾರಣ ಮುಂದೂ ಡುವ ನಿರ್ಧಾರಕ್ಕೆ ಬರಲಾಗಿತ್ತು.

18 ರಿಂದ 20 ರಾಜ್ಯಗಳ ಸುಮಾರು 1200 ಮಂದಿ ಕುಸ್ತಿಪಟುಗಳು ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಲಿದ್ದಾರೆ ಎಂದು ಡಬ್ಲ್ಯುಎಫ್‌ಐನ ಅಡ್‌ಹಾಕ್ ಸಮಿತಿ ಅಧ್ಯಕ್ಷ ಭೂಪೆಂದರ್ ಸಿಂಗ್ ಬಾಜ್ವಾ ತಿಳಿಸಿದರು.

ಬಾಕ್ಸಿಂಗ್: ಸೆಮಿಗೆ ನಿಖತ್, ಅರುಂಧತಿ

ಸೋಫಿಯಾ (ಬಲ್ಗೇರಿಯಾ): ವಿಶ್ವ ಚಾಂಪಿಯನ್ ನಿಖತ್ ಝರೀನ್ ಮತ್ತು ಅರುಂಧತಿ ಚೌಧರಿ ಅವರು ಅರ್ಹ ಗೆಲುವಿನೊಡನೆ ಗುರುವಾರ 75ನೇ ಸ್ಟ್ರಾಂಡ್ಜ ಮೆಮೋರಿಯಲ್ ಬಾಕ್ಸಿಂಗ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದರು.

50 ಕೆ.ಜಿ. ವಿಭಾಗದಲ್ಲಿ ನಡೆದ ದಿನದ ಮೊದಲ ಕ್ವಾರ್ಟರ್‌ಫೈನಲ್‌ನಲ್ಲಿ ನಿಖತ್, ಫ್ರಾನ್ಸ್‌ನ ಲಾದಿರಿ ವಾಸ್ಸಿಲಾ ಅವರನ್ನು 5–0 ಸರ್ವಾನುಮತದ ತೀರ್ಪಿನಲ್ಲಿ ಸೋಲಿಸಿದರು. ಶನಿವಾರ ನಡೆಯುವ ಸೆಮಿಫೈನಲ್ ನಲ್ಲಿ ಅವರು ಸ್ಥಳೀಯ ಬಾಕ್ಸಿಂಗ್ ಪಟು ಝ್ಲಾಟಿಸ್ಲಾವಾ ಚುಕಾನೋವಾ ಅವರನ್ನು ಎದುರಿಸಲಿದ್ದಾರೆ.

ಅರುಂಧತಿ 66 ಕೆ.ಜಿ. ವಿಭಾಗದ ಎರಡನೇ ಸುತ್ತಿನಲ್ಲಿ ಉತ್ತಮ ರಕ್ಷಣಾ ತಂತ್ರಗಳನ್ನು ಅನುಸರಿಸಿ ಸರ್ಬಿಯಾದ ಮೆಟೊವಿಕ್ ಮಿಲೇನಾ ಅವರನ್ನು 5–0 ಅಂತರದಿಂದ ಸೋಲಿಸಿದರು.

ಅತ್ಯಾಧುನಿಕ ಶಿಕ್ಷಣಕ್ಕೆ ಬೋಸ್ಕೋಸ್ ಕಾಲೇಜು

ಮಂಗಳೂರು: ಬೋಧನೆಯಲ್ಲಿ ನಾಲ್ಕು ದಶಕಗಳ ಅನುಭವ ಹೊಂದಿರುವ ಪ್ರೊ.ಎಸ್.ಎಸ್.ಬೋಸ್ಕೋ ಅವರಿಂದ ಮಂಗಳೂರಿನಲ್ಲಿ ಸ್ಥಾಪನೆಗೊಂಡ ಬೋಸ್ಕೋಸ್ ಪದವಿಪೂರ್ವ ಕಾಲೇಜು, ವಿದ್ಯಾರ್ಥಿಗಳ ಉನ್ನತಿಗೆ ಪೂರಕವಾಗಿ ಶಿಕ್ಷಣ ನೀಡುತ್ತಿದೆ.

ಬೋಸ್ಕೋಸ್ ಪಬ್ಲಿಕೇಶನ್ ಪ್ರಕಾಶನದಡಿಯಲ್ಲಿ ಪಿಯು ಶೈಕ್ಷಣಿಕ ಪಠ್ಯಪುಸ್ತಕ, ರೆಫರೆನ್ಸ್ ಪುಸ್ತಕ, ಸ್ಪರ್ಧಾತ್ಮಕ (ಸಿಇಟಿ, ಜೆಇಇ, ನೀಟ್) ಪರೀಕ್ಷೆಗಳಿಗೆ ಪೂರಕವಾಗಿ ಪುಸ್ತಕಗಳನ್ನು ಹೊರತರುತ್ತಿದ್ದಾರೆ. ಬೋಸ್ಕೋಸ್ ಪಿಯು ಕಾಲೇಜು ತನ್ನ ಪ್ರಥಮ ಬ್ಯಾಚ್‌ನಲ್ಲೇ ಶೇ100 ಫಲಿತಾಂಶ ಹಾಗೂ ಸಿಇಟಿ, ಜೆಇಇ, ನೀಟ್ ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅತ್ಯುತ್ತಮ ಫಲಿತಾಂಶ ದಾಖಲಿಸಿರುವ ವಿದ್ಯಾರ್ಥಿಗಳು ದೇಶದ ಪ್ರತಿಷ್ಠಿತ ಇಂಜಿನಿಯರಿಂಗ್, ಮೆಡಿಕಲ್ ಕಾಲೇಜುಗಳಲ್ಲಿ ಪ್ರವೇಶ ಪಡೆದಿದ್ದಾರೆ.

ವಾಣಿಜ್ಯ ವಿಭಾಗದಲ್ಲೂ (ಇಎಸ್‌ಬಿಎ, ಎಂಎಸ್‌ಬಿಎ) ಅನುಭವಿ ಉಪನ್ಯಾಸಕರನ್ನು ಒಳಗೊಂಡ ಬೋಸ್ಕೋಸ್ ಕಾಲೇಜಿನಲ್ಲಿ ವಿದ್ಯಾರ್ಥಿಗಳನ್ನು ರಾಷ್ಟ್ರಮಟ್ಟದ ಸಿಎ ಫೌಂಡೇಶನ್, ಸಿಎಂಎ ಮುಂತಾದ ಪರೀಕ್ಷೆಗಳಿಗೆ ತರಬೇತಿ ನೀಡಲಾಗುತ್ತಿದೆ.

ಪ್ರೊ.ಎಸ್.ಎಸ್.ಬೋಸ್ಕೋಸ್ ಅವರ ಪತ್ನಿ ಎಜಿತಿನ್ ಬೋಸ್ಕೋ ಸಂಸ್ಥೆಯ ಅಧ್ಯಕ್ಷರಾಗಿದ್ದು, ಡಾ. ವಿಜಯಕುಮಾರಿ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಪ್ರಸ್ತುತ ರಾಜ್ಯದ ವಿವಿಧ ಜಿಲ್ಲೆ, ಹೊರಜಿಲ್ಲೆ ಎನ್‌ಆರ್‌ಐ ವಿದ್ಯಾರ್ಥಿಗಳಿಗೆ ಮನೆಯ ವಾತಾವರಣ ಹೋಲುವ ಬಾಲಕ/ಬಾಲಕಿಯರ ಪ್ರತ್ಯೇಕ ವಸತಿ ನಿಲಯ ಆರಂಭಿಸಲಾಗಿದೆ. ವಿದ್ಯಾರ್ಥಿನಿಲಯದ ಕ್ಷೇಮಪಾಲರು ಹಾಗೂ ಉಪನ್ಯಾಸಕರು ವಿದ್ಯಾರ್ಥಿಗಳ ಸಂಪೂರ್ಣ ಕಾಳಜಿ ವಹಿಸುತ್ತಿದ್ದಾರೆ.

ಬೋಸ್ಕೋಸ್ ಕಾಲೇಜು

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಕ್ಯಾಂಪಸ್: ಬ್ಲೂಬೆರಿ ಹಿಲ್ಸ್, ಎ.ಜೆ.ಆಸ್ಪತ್ರೆ ಹಿಂಭಾಗ, ಮಂಗಳೂರು – 8

ಸಂಪರ್ಕ ಸಂಖ್ಯೆ: 8494934383, 6360485655

ವೆಬ್‌ಸೈಟ್: www.boscoss.com

ಇ-ಮೇಲ್ boscos@rediffmail.com